ಬುಧವಾರ, ಜುಲೈ 5, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 185 | ಪುಟ 14

www.prajavani.net

prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ ಭಂದಸ್ಸಿನ ಅಧ್ಯಯನಕ್ಕೊಂದು ಹೊಸ ತಂತ್ರಾಂಶ



ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
65,479 ▲	19,389 ▲	₹60,160 (ಬೆಂಗಳೂರು)	₹71,600 (ಬೆಂಗಳೂರು)	82.01 ▼

ಉಭಯ ಸದನಗಳಲ್ಲಿ 'ಕೇಸರಿ' ಕಾದಾಟ ● ಕೊಬ್ಬರಿ ದರ ಕುಸಿತ – ಜೆಡಿಎಸ್ ಧರಣಿ

ಗದ್ದಲ: ಕಲಾಪಕ್ಕಿಲ್ಲ 'ಗ್ಯಾರಂಟಿ'

ವಿಧಾನಮಂಡಲ ಅಧಿವೇಶನದ ಮೊದಲ ದಿನವೇ ಕಾಂಗ್ರೆಸ್ ಸರ್ಕಾರದ ವಿರುದ್ಧ ಹೋರಾಟಕ್ಕೆ ಇಳಿದಿರುವ ಬಿಜೆಪಿ, ಸದನದ ಒಳಗೂ ಹೊರಗೂ ಪ್ರತಿಭಟನೆ ನಡೆಸಿತು. ಚುನಾವಣೆಯಲ್ಲಿ ಗೆದ್ದವರು ಸದನದೊಳಗೆ ಧರಣಿ ನಡೆಸಿದರೆ, ಬಿ.ಎಸ್. ಯಡಿಯೂರಪ್ಪ ನೇತೃತ್ವದಲ್ಲಿ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಯಿತು. ಕಾಂಗ್ರೆಸ್ 'ಗ್ಯಾರಂಟಿ' ಕುರಿತು ಬಿಜೆಪಿ ಪ್ರತಿಭಟನೆಗೆ ಇಳಿದಿದ್ದರಿಂದ ಉಭಯ ಸದನಗಳ ಕಲಾಪ ನಡೆಯಲಿಲ್ಲ

ಉಭಯ ಸದನಗಳ ಕಲಾಪಕ್ಕೆ ಅಡ್ಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಮಂಡಲ ಅಧಿವೇಶನದ ಮೊದಲ ದಿನವೇ ಕಾಂಗ್ರೆಸ್ ಸರ್ಕಾರದ 'ಗ್ಯಾರಂಟಿ'ಗಳ ಅನುಷ್ಠಾನದ ಮೇಲೆ ಚರ್ಚೆಗೆ ಪಟ್ಟುಹಿಡಿದ ಬಿಜೆಪಿ ಸದಸ್ಯರು ಎರಡೂ ಸದನಗಳಲ್ಲಿ ಧರಣಿ ನಡೆಸಿದರು.

ವಿಧಾನಸಭೆಯಲ್ಲಿ ಗದ್ದಲದ ಮಧ್ಯೆಯೇ ಅತ್ಯಲ್ಪ ಅವಧಿಯ ಕಲಾಪ ನಡೆದರೆ, ವಿಧಾನ ಪರಿಷತ್‌ನಲ್ಲಿ ಇಡೀ ದಿನ ಗದ್ದಲದಲ್ಲೇ ಕಳೆದುಹೋಯಿತು.

ವಿಧಾನಸಭೆಯಲ್ಲಿ ಬೆಳಿಗ್ಗೆ ಕಲಾಪ ಆರಂಭವಾಗುತ್ತಿದ್ದಂತೆಯೇ ಸಭಾಧ್ಯಕ್ಷ ಯು.ಟಿ. ಖಾದರ್ ಪ್ರಶ್ನೋತ್ತರ ಕಲಾಪ ಆರಂಭಿಸಿದರು. ಕಾಂಗ್ರೆಸ್‌ನ ಕೆ.ಎಂ. ಶಿವಲಿಂಗೇಗೌಡ ಅವರು ಗೃಹ ಸಚಿವ ಜಿ. ಪರಮೇಶ್ವರ ಅವರಿಗೆ ಮೊದಲ ಪ್ರಶ್ನೆ ಕೇಳಿದರು. ಸಚಿವರು ಉತ್ತರವನ್ನೂ ನೀಡಿದರು.

ತಕ್ಷಣ ಮಧ್ಯ ಪ್ರವೇಶಿಸಿದ ಬಿಜೆಪಿಯ ಬಸವರಾಜ ಬೊಮ್ಮಾಯಿ, ಆರ್. ಅಶೋಕ, ವಿ. ಸುನಿಲ್ ಕುಮಾರ್ ಮತ್ತಿತರರು, ' ಸುಳ್ಳು ಭರವಸೆಗಳನ್ನು ನೀಡಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಿದೆ. ಈಗ ಯಾವ ಗ್ಯಾರಂಟಿಯನ್ನೂ ಅನುಷ್ಠಾನಕ್ಕೆ ತರುತ್ತಿಲ್ಲ. ಈ ಮೋಸದ ಕುರಿತು ನಿಲುವಳಿ ಸೂಚನೆ ಮಂಡನೆಗೆ ಅವಕಾಶ ಕೋರಿ ನೋಟಿಸ್ ನೀಡಿದ್ದೇವೆ. ಪ್ರಶ್ನೋತ್ತರ ಕಲಾಪವನ್ನು ಬದಿಗೊತ್ತಿ ವಿಷಯ ಪ್ರಸ್ತಾಪಿಸಲು ಅವಕಾಶ ನೀಡಬೇಕು' ಎಂದು ಆಗ್ರಹಿಸಿದರು.

4ನೇ ಪುಟ ನೋಡಿ



ವಿಧಾನಸಭೆಯಲ್ಲಿ ಬಿಜೆಪಿ ಸದಸ್ಯರು ಸಭಾಧ್ಯಕ್ಷರ ಪೀಠದ ಮುಂದೆ ಧರಣಿ ನಡೆಸಿದರು

ಮೊಂಡಾಟಕ್ಕೆ ಹೆದರಲ್ಲ:ಸಿದ್ದರಾಮಯ್ಯ

'ಬಿಜೆಪಿಯವರೇ ನಿಮ್ಮ ಈ ಮೊಂಡಾಟವನ್ನು ಬಿಡಿ. ಅದರಿಂದ ಏನೂ ಸಾಧಿಸಲು ಆಗುವುದಿಲ್ಲ' ಎಂದು ಸಿದ್ದರಾಮಯ್ಯ ಹೇಳಿದರು.

'ಗ್ಯಾರಂಟಿ' ಕುರಿತ ಚರ್ಚೆಗೆ ಅವಕಾಶ ಕೊಡಿ ಎಂದು ಬಿಜೆಪಿ ಸದಸ್ಯರು ಪಟ್ಟು ಹಿಡಿದಾಗ, ಸಿದ್ದರಾಮಯ್ಯ ಹೀಗೆಂದರು. ಇದಕ್ಕೆ ಬಿಜೆಪಿ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದಾಗ, 'ಮೊಂಡಾಟ ಅಸಂವಿಧಾನಿಕ ಪದವಾ? ಯಾವುದೇ ಪ್ರಶ್ನೆಗಳಿಗೂ ಉತ್ತರ ನೀಡಲು ಸಿದ್ಧ. ನಿಮ್ಮ ಮಾತುಗಳಿಗೆ ಹೆದರಿಕೊಂಡು ಓಡಿ ಹೋಗುವುದಿಲ್ಲ' ಎಂದರು.

ಬಿಜೆಪಿ ಕಚೇರಿ ಮುಂದೆ 'ಕೈ' ಪ್ರತಿಭಟನೆ ಇಂದು

ಬಿಜೆಪಿ ನಡೆಸುತ್ತಿರುವ ಹೋರಾಟಕ್ಕೆ ತಿರುಗೇಟು ನೀಡಲು ಮುಂದಾಗಿರುವ ಕಾಂಗ್ರೆಸ್, ಮಲ್ಲೇಶ್ವರದಲ್ಲಿರುವ ಬಿಜೆಪಿ ಕಚೇರಿ ಮುಂದೆ ಬುಧವಾರ ಮಧ್ಯಾಹ್ನ 12ಕ್ಕೆ ಪ್ರತಿಭಟನೆ ಹಮ್ಮಿಕೊಂಡಿದೆ. 'ಅನ್ನ ಭಾಗ್ಯ'ಕ್ಕೆ ಅಕ್ಕಿ ಕೊಡಿಸಲು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರದ ಬಿಜೆಪಿ ಸಂಸದರು ಮತ್ತು ಕೇಂದ್ರ ಸರ್ಕಾರದ ವಿರುದ್ಧ ಈ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ' ಎಂದು ಯುವ ಕಾಂಗ್ರೆಸ್ ಅಧ್ಯಕ್ಷ ಮೊಹಮ್ಮದ್ ಹ್ಯಾರಿಸ್ ನಲಪಾಡ್ ಹೇಳಿದ್ದಾರೆ.

ಷರತ್ತಿಲ್ಲದೇ ಗ್ಯಾರಂಟಿ ಜಾರಿ ಮಾಡಿ: ಬಿಎಸ್‌ವೈ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರವು ಜನವಿರೋಧಿ ನಡೆ ಅನುಸರಿಸುತ್ತಿದೆ. 'ಗ್ಯಾರಂಟಿ'ಗೆ ಷರತ್ತು ವಿಧಿಸಿ ಮೋಸ ಮಾಡುತ್ತಿದೆ ಎಂದು ಆರೋಪಿಸಿ, ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ನೇತೃತ್ವದಲ್ಲಿ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಯಿತು.

'ಮಿಷನರಿಗಳು ಹಾಗೂ ಪಿಎಫ್‌ಐ ಸಂಘಟನೆಗಳ ಋಣ ತೀರಿಸಲು ಮತಾಂತರ ನಿಷೇಧ ಹಾಗೂ ಗೋಹತ್ಯೆ ನಿಷೇಧ ಕಾಯ್ದೆ ಹಿಂಪಡೆಯಲು ಸರ್ಕಾರವು ಮುಂದಾಗಿದೆ' ಎಂದು ಮುಖಂಡರು ಆಪಾದಿಸಿದರು.

ರಾಜ್ಯದಲ್ಲಿ ವಿದ್ಯುತ್ ದರ ಇಳಿಕೆ ಮಾಡಬೇಕು ಮತ್ತು 10 ಕೆ.ಜಿ. ಅಕ್ಕಿಯನ್ನೇ ವಿತರಿಸಬೇಕು ಎಂದು ಆಗ್ರಹಿಸಿದರು.

ಬಿ.ಎಸ್.ಯಡಿಯೂರಪ್ಪ, 'ಗ್ಯಾರಂಟಿಗಳ ಹೆಸರಲ್ಲಿ ಜನರಿಗೆ ಸುಳ್ಳು ಹೇಳಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಿದೆ. ಷರತ್ತು ರಹಿತವಾಗಿ ಗ್ಯಾರಂಟಿ ಜಾರಿ ಮಾಡಬೇಕು' ಎಂದು ಆಗ್ರಹಿಸಿದರು.

ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್, 'ರಾಜ್ಯದ ಆರ್ಥಿಕತೆಯನ್ನೇ ನಾಶಗೊಳಿಸಲು ಕಾಂಗ್ರೆಸ್ ಮುಂದಾಗಿದೆ. ದ್ವೇಷದ ರಾಜಕಾರಣ ನಡೆಸುತ್ತಿದೆ' ಎಂದರು.

4ನೇ ಪುಟ ನೋಡಿ



ಭಟ್ಕಳದ ರಂಗಿನಕಟ್ಟಾ ಬಳಿ ಜಲಾವೃತವಾಗಿದ್ದ ರಾಷ್ಟ್ರೀಯ ಹೆದ್ದಾರಿಯಲ್ಲಿ ಮಂಗಳವಾರ ವಾಹನಗಳು ಸಾಗಿದವು

ಮುಂಗಾರು ಚುರುಕು

ಹಿಡಕಲ್, ತುಂಗಭದ್ರಾ ಜಲಾಶಯದಲ್ಲಿ ಒಳಹರಿವು ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ, ಶಿವಮೊಗ್ಗ ಸೇರಿದಂತೆ ಇತರ ಜಿಲ್ಲೆಗಳಲ್ಲಿ ಮಂಗಳವಾರ ಮುಂಗಾರು ಚುರುಕು ಪಡೆದುಕೊಂಡಿದೆ.

ಮಂಗಳವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡ 24 ಗಂಟೆಗಳ ಅವಧಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ಫಜೀರು ಗ್ರಾಮದಲ್ಲಿ 17.25 ಸೆಂ.ಮೀ ಮಳೆಯಾಗಿದೆ. ಉತ್ತರ ಕನ್ನಡ ಜಿಲ್ಲೆಯ ಭಟ್ಕಳದಲ್ಲಿ 15 ಸೆಂ.ಮೀ ಹಾಗೂ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಆಗುಂಬೆಯಲ್ಲಿ 12.42 ಸೆಂ.ಮೀ ಮಳೆ ದಾಖಲಾಗಿದೆ.

ಒಳಹರಿವು ಏರಿಕೆ: ಮಹಾರಾಷ್ಟ್ರದ ಪಶ್ಚಿಮಘಟ್ಟ ಪ್ರದೇಶ ಮತ್ತು ಘಟಪ್ರಭಾ ನದಿಯ ಅಚ್ಚುಕಟ್ಟು ಪ್ರದೇಶದಲ್ಲಿ ಮಳೆಯಾಗುತ್ತಿರುವುದರಿಂದ ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಹಿಡಕಲ್ ಜಲಾಶಯಕ್ಕೆ ಸೋಮವಾರದಿಂದ ಒಳಹರಿವು ಆರಂಭವಾಗಿದೆ. 69 ಕ್ಯುಸೆಕ್ ಇದ್ದ ಒಳಹರಿವು ಮಂಗಳವಾರ 85 ಕ್ಯುಸೆಕ್‌ಗೆ ಏರಿಕೆಯಾಗಿದೆ.

ಹೊಸಪೇಟೆ ಸಮೀಪದ ತುಂಗಭದ್ರಾ ಜಲಾಶಯಕ್ಕೆ ಒಳಹರಿವು 190 ಕ್ಯುಸೆಕ್ ಇದ್ದು, ಮಂಗಳವಾರ 670 ಕ್ಯುಸೆಕ್‌ಗೆ ಏರಿಕೆಯಾಗಿದೆ. ಕೊಡಗು ಜಿಲ್ಲೆಯ ಬಲಮುರಿಯಲ್ಲಿ ಕಾವೇರಿ ನದಿ ನೀರಿನ ಮಟ್ಟ ಏರಿಕೆಯಾಗಿದೆ.

ಶಾಲೆಗಳಿಗೆ ರಜೆ: ಸೋಮವಾರ ಇಡೀ ದಿನ ಮಳೆಯಾಗಿದ್ದರಿಂದ ಮಂಗಳೂರು, ಮೂಲ್ಕಿ, ಉಳ್ಳಾಲ, ಮೂಡಬಿದಿರೆ ಹಾಗೂ ಬಂಟ್ವಾಳ ತಾಲ್ಲೂಕುಗಳ ಶಾಲಾ-ಕಾಲೇಜುಗಳಿಗೆ ಮಂಗಳವಾರ ರಜೆ ನೀಡಲಾಗಿತ್ತು. ಅಧಿಕ ಮಳೆ ಸಾಧ್ಯತೆ ಕಾರಣ, ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಮತ್ತು ಉತ್ತರ ಕನ್ನಡ ಜಿಲ್ಲೆಯ ಐದು ತಾಲ್ಲೂಕುಗಳ ಶಾಲಾ-ಕಾಲೇಜುಗಳಿಗೆ ಬುಧವಾರವೂ ರಜೆ ಘೋಷಿಸಲಾಗಿದೆ.

ಇನ್ನಷ್ಟು ಸುದ್ದಿಗಳು 5

ಟೋಲ್‌ಗಳಲ್ಲಿ ಶಾಸಕರಿಗೆ 'ವಿಐಪಿ ಮಾರ್ಗ': ಖಾದರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಸಕರು ಮತ್ತು ಮಾಜಿ ಶಾಸಕರನ್ನು ಟೋಲ್‌ಗಳಲ್ಲಿ ಅನಗತ್ಯವಾಗಿ ನಿಲ್ಲಿಸಿ ಗುರುತಿನ ಚೀಟಿ ಪರಿಶೀಲಿಸುವುದನ್ನು ತಡೆಯಲು ಪ್ರತ್ಯೇಕವಾಗಿ 'ವಿಐಪಿ ಮಾರ್ಗ' ರಚಿಸಲು ಸಂಬಂಧಪಟ್ಟವರಿಗೆ ಸೂಚನೆ ನೀಡಲಾಗುವುದು ಎಂದು ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಭರವಸೆ ನೀಡಿದರು.

ವಿಧಾನಸಭೆಯಲ್ಲಿ ಕಾಂಗ್ರೆಸ್‌ನ ಪಿ.ಎಂ.ನರೇಂದ್ರ ಸ್ವಾಮಿ ಅವರ ಗಮನ ಸೆಳೆಯುವ ಸೂಚನೆಗೆ ಅವರು ಪ್ರತಿಕ್ರಿಯಿಸಿದರು.

'ನಮ್ಮ ಬಳಿ ಪಾಸ್ ಇದ್ದರೂ ಟೋಲ್‌ಗಳಲ್ಲಿ ತಡೆದು ಐಡಿ ಕಾರ್ಡ್ ಕೇಳಿ ಪರಿಶೀಲನೆ ಮಾಡುತ್ತಾರೆ. ಇದು ಹಕ್ಕುಚ್ಯುತಿ ಆಗುತ್ತದೆ. ಇತ್ತೀಚೆಗೆ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ಹೆದ್ದಾರಿಯಲ್ಲಿ ಗಲಾಟೆ ಆಗಿತ್ತು' ಎಂದು ತಮಗಾದ ಅನುಭವವನ್ನು ತೋಡಿಕೊಂಡರು.

4ನೇ ಪುಟ ನೋಡಿ

ಟೀಕಾಪ್ರಹಾರಕ್ಕೆ ವೇದಿಕೆಯಾದ ಶಾಂಘೈ ಸಹಕಾರ ಸಂಘಟನೆ ಶೃಂಗಸಭೆ

ಭಯೋತ್ಪಾದನೆ: ಭಾರತ–ಪಾಕ್ ಜಟಾಪಟಿ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಹಾಗೂ ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಷರೀಫ್ ಪರಸ್ಪರ ಪರೋಕ್ಷವಾಗಿ ಟೀಕಾಪ್ರಹಾರ ಮಾಡಲು ಮಂಗಳವಾರ ವರ್ಚುವಲ್ ವಿಧಾನದ ಮೂಲಕ ನಡೆದ ಶಾಂಘೈ ಸಹಕಾರ ಸಂಘಟನೆ (ಎಸ್‌ಸಿಒ) ಶೃಂಗಸಭೆ ಸಾಕ್ಷಿಯಾಯಿತು.

ಶೃಂಗಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಮೋದಿ, 'ಕೆಲ ರಾಷ್ಟ್ರಗಳು ಭಯೋತ್ಪಾದನೆಯನ್ನೇ ತಮ್ಮ ನೀತಿಯಾಗಿಸಿಕೊಂಡಿವೆ. ಇಂಥ ನಡೆಯನ್ನು ಸಂಘಟನೆಯ ಸದಸ್ಯ ರಾಷ್ಟ್ರಗಳು ಖಂಡಿಸಬೇಕು' ಎಂದು ಹೇಳಿದರು.

'ಉಗ್ರವಾದವು ಪ್ರಾದೇಶಿಕ ಹಾಗೂ ಜಾಗತಿಕ ಶಾಂತಿಗೆ ಒಡ್ಡಿರುವ ದೊಡ್ಡ ಬೆದರಿಕೆ. ಹೀಗಾಗಿ ಭಯೋತ್ಪಾದಕ ಚಟುವಟಿಕೆಗಳ ವಿರುದ್ಧದ ಹೋರಾಟದಲ್ಲಿ ದ್ವಂದ್ವ ನಿಲುವುಗಳು ಇರಬಾರದು.



ಶೃಂಗಸಭೆಯನ್ನು ಉದ್ದೇಶಿಸಿ ಪ್ರಧಾನಿ ನರೇಂದ್ರ ಮೋದಿ ಮಾತನಾಡಿದರು. ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಶರೀಫ್ ಇದ್ದರು –ಪಿಟಿಐ ಚಿತ್ರ

ಭಯೋತ್ಪಾದನೆ ಯಾವುದೇ ಸ್ವರೂಪದ್ದಾಗಿದ್ದರೂ ಅದರ ವಿರುದ್ಧ ಒಟ್ಟಾಗಿ ಹೋರಾಡಬೇಕು' ಎನ್ನುವ ಮೂಲಕ ಪರೋಕ್ಷವಾಗಿ ಪಾಕಿಸ್ತಾನದ ವಿರುದ್ಧ ಚಾಟಿ ಬೀಸಿದರು.

'ಯುವಕರು ಮೂಲಭೂತವಾದದತ್ತ ಆಕರ್ಷಿತರಾಗುವುದನ್ನು ತಪ್ಪಿಸಲು ಎಲ್ಲ ಸದಸ್ಯ ರಾಷ್ಟ್ರಗಳು ಪರಿಣಾಮಕಾರಿ ಕ್ರಮಗಳನ್ನು ತೆಗೆದುಕೊಳ್ಳುವುದು ಅಗತ್ಯ' ಎಂದು ಮೋದಿ ಪ್ರತಿಪಾದಿಸಿದರು.

'ಸದಸ್ಯ ರಾಷ್ಟ್ರಗಳ ನಡುವೆ ಉತ್ತಮ ಸಂಪರ್ಕ ಅಗತ್ಯವಿದೆ. ಆದರೆ, ಪ್ರತಿಯೊಂದು ರಾಷ್ಟ್ರದ ಸಾರ್ವಭೌಮತೆಯನ್ನು ಗೌರವಿಸುವುದು ಅಷ್ಟೇ ಮುಖ್ಯ' ಎಂದೂ ಹೇಳಿದರು.

ಶೆಹಬಾಜ್ ಷರೀಫ್ ಮಾತನಾಡಿ, 'ರಾಜತಾಂತ್ರಿಕ ಲಾಭ ಪಡೆಯುವ ಸಲುವಾಗಿ ಭಯೋತ್ಪಾದನೆಯನ್ನು ಒಂದು ಅಸ್ತ್ರವನ್ನಾಗಿ ಬಳಸಿಕೊಳ್ಳುವುದನ್ನು ನಿಲ್ಲಿಸಬೇಕು' ಎಂದು ಹೇಳಿದರು.

'ತಮ್ಮ ಆಂತರಿಕ ರಾಜಕೀಯ ಕಾರ್ಯಸೂಚಿಯನ್ನು ಜಾರಿಗೊಳಿಸುವ ಸಲುವಾಗಿ ಧಾರ್ಮಿಕ ಅಲ್ಪಸಂಖ್ಯಾತರನ್ನು ಕ್ರೂರವಾಗಿ ನಡೆಸಿಕೊಳ್ಳಲಾಗುತ್ತಿದೆ. ಇದು ನಿಲ್ಲಬೇಕು' ಎಂದು ಪರೋಕ್ಷವಾಗಿ ಭಾರತದ ವಿರುದ್ಧ ಟೀಕೆ ಮಾಡಿದರು.

6ನೇ ಪುಟ ನೋಡಿ

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ಸಮಾಲೋಚನೆ


50 ಕಿ.ಮೀ ಸುರಂಗಕ್ಕೆ ₹22 ಸಾವಿರ ಕೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ವಾಹನ ದಟ್ಟಣೆಯನ್ನು ಕಡಿಮೆ ಮಾಡುವ ಉದ್ದೇಶದಿಂದ ಸುರಂಗ ರಸ್ತೆ ನಿರ್ಮಿಸಲು ಸರ್ಕಾರ ಚಿಂತನೆ ನಡೆಸಿದೆ. ಮೊದಲ ಹಂತದ ಯೋಜನೆಯಡಿ ಸುಮಾರು 50 ಕಿ.ಮೀ ರಸ್ತೆ ನಿರ್ಮಿಸಲು ಅಂದಾಜು ₹22 ಸಾವಿರ ಕೋಟಿ ವೆಚ್ಚವಾಗಲಿದೆ.

ಅತ್ಯಂತ ಹೆಚ್ಚಿನ ವಾಹನ ದಟ್ಟಣೆ ಉಂಟಾಗುತ್ತಿರುವ ಬಳ್ಳಾರಿ ರಸ್ತೆ, ಹೊಸೂರು ರಸ್ತೆ, ಹಳೇ ಮದ್ರಾಸ್ ರಸ್ತೆ, ತುಮಕೂರು ರಸ್ತೆಗಳ ಮೇಲಿನ ಒತ್ತಡವನ್ನು ಕಡಿಮೆ ಮಾಡಲು ಸುರಂಗ ಮಾರ್ಗವನ್ನು ಮೊದಲ ಹಂತದಲ್ಲಿ ನಿರ್ಮಿಸಲು ಆಲೋಚನೆ ನಡೆಸಲಾಗಿದೆ.

ಸುರಂಗ ರಸ್ತೆಗಳ ನಿರ್ಮಾಣಕ್ಕೆ ಸಂಬಂಧಿಸಿದಂತೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು 'ಸುರಂಗ ರಸ್ತೆ ನಿರ್ಮಾಣ ಸಲಹಾ ಸಂಸ್ಥೆ' ಅಧಿಕಾರಿಗಳ ಜತೆ ಮಂಗಳವಾರ ಸಮಾಲೋಚನೆ ನಡೆಸಿದರು. ಅಂತರ ರಾಷ್ಟ್ರೀಯ ಸಲಹಾ ಸಂಸ್ಥೆಯ ಪ್ರತಿನಿಧಿಗಳು ನಗರದಲ್ಲಿ ಸುರಂಗ ರಸ್ತೆ ನಿರ್ಮಿಸುವ ಸಾಧ್ಯತೆಗಳ ಬಗ್ಗೆ ಈ ಸಭೆಯಲ್ಲಿ ವಿವರ ನೀಡಿದರು.



ಎರಡು ಅಂತಸ್ತಿನ ಸುರಂಗ ರಸ್ತೆಯ ಮಾದರಿ

₹50 ಸಾವಿರ ಕೋಟಿ	100 ಕಿ.ಮೀ ಉದ್ದ	₹450 ಕೋಟಿ
ಯೋಜನೆಯ ಒಟ್ಟಾರೆ ಅಂದಾಜು ವೆಚ್ಚ	ಒಟ್ಟು ಸುರಂಗ ಮಾರ್ಗದ ಯೋಜನೆ	ಪ್ರತಿ ಕಿ.ಮೀಗೆ ಅಂದಾಜು ವೆಚ್ಚ

ನಗರದ ಹೃದಯಭಾಗ ಹಾಗೂ ಕೇಂದ್ರ ಭಾಗಗಳಲ್ಲಿ ಮೇಲ್ಸೇತುವೆಗಳನ್ನು ನಿರ್ಮಿಸಲು ಸಾಕಷ್ಟು ಸಮಯ ಬೇಕಾಗುತ್ತದೆ. ಭೂಸ್ವಾಧೀನಕ್ಕೆ ಹೆಚ್ಚು ಹಣ ವ್ಯಯವಾಗುತ್ತದೆ. ಇದಲ್ಲದೆ, ಕಾಮಗಾರಿ ಸಂದರ್ಭದಲ್ಲಿ ಸಂಚಾರವನ್ನು ನಿಲ್ಲಿಸಬೇಕಾಗುತ್ತದೆ. ಇದರಿಂದ ಹಲವು ಸಮಸ್ಯೆಗಳು ಉಂಟಾಗಲಿದ್ದು, ಇದಕ್ಕೆ ಪರಿಹಾರವಾಗಿ ಸುರಂಗ ರಸ್ತೆ ನಿರ್ಮಿಸುವುದು ಸೂಕ್ತ ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

ನಗರದ ಎಲ್ಲ ಹೊರವಲಯವನ್ನು ಸಂಪರ್ಕಿಸಲು ಸುಮಾರು 100 ಕಿ.ಮೀ ಸುರಂಗ ರಸ್ತೆ ನಿರ್ಮಿಸಬೇಕಾಗುತ್ತದೆ. ಮೊದಲ ಹಂತದಲ್ಲಿ ಸುಮಾರು 50 ಕಿ.ಮೀ ಮಾತ್ರ ನಿರ್ಮಿಸಲು ಆಲೋಚಿಸಲಾಗಿದ್ದು, ಮುಂದಿನ ಪ್ರಕ್ರಿಯೆಗಳನ್ನು ಆರಂಭಿಸಲು ನಿರ್ಧರಿಸಲಾಗಿದೆ. ಸಾರ್ವಜನಿಕ–ಖಾಸಗಿ ಸಹಭಾಗಿತ್ವದ (ಪಿಪಿಪಿ) ಆಯ್ಕೆಗಳನ್ನು ಪರಿಶೀಲಿಸಲಾಗುತ್ತಿದೆ. ನಿರ್ಮಾಣ, ನಿರ್ವಹಣೆ, ವರ್ಗಾವಣೆ (ಬಿಒಟಿ–ಟೋಲ್), ಬಿಒಟಿ–ಟೋಲ್‌ನೊಂದಿಗೆ ರಿಯಲ್ ಎಸ್ಟೇಟ್ ಅಭಿವೃದ್ಧಿ ಸೇರಿದಂತೆ ಹಲವು ಆಯ್ಕೆಗಳಿವೆ. ಬಿಒಟಿ– ಟೋಲ್ ಆಯ್ಕೆಯನ್ನೇ ಬಹುತೇಕ ಅಂತಿಮಗೊಳಿಸುವ ಸಾಧ್ಯತೆ ಇದ್ದು, ನಾಗರಿಕರು ಸುರಂಗ ರಸ್ತೆ ಬಳಸುವಾಗ ಶುಲ್ಕ ಪಾವತಿಸಬೇಕು.

2ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ



ಅಕ್ಷರ ದಾಸೋಹ ಅಧಿಕಾರಿ, ಮುಖ್ಯ ಶಿಕ್ಷಕ ಅಮಾನತು

ಪ್ರಜಾವಾಣಿ ವಾರ್ತೆ

ರಾಯಚೂರು: ತಾಲ್ಲೂಕಿನ ಅಪ್ಪನ ದೊಡ್ಡಿ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಹಲ್ಲಿ ಬಿದ್ದ ಬಿಸಿಯೂಟ ಸೇವಿಸಿ 49 ವಿದ್ಯಾರ್ಥಿಗಳು ಅಸ್ವಸ್ಥ ಗೊಂಡಿರುವ ಘಟನೆಗೆ ಸಂಬಂಧಿಸಿದಂತೆ ಅಕ್ಷರ ದಾಸೋಹ ಯೋಜನೆ ತಾಲ್ಲೂಕು ಸಹಾಯಕ ನಿರ್ದೇಶಕಿ ಹಾಗೂ ಶಾಲೆಯ ಮುಖ್ಯ ಶಿಕ್ಷಕರನ್ನು ಅಮಾನತು ಮಾಡಲಾಗಿದೆ.

ಜುಲೈ 1ರಂದು ಶಾಲೆಯಲ್ಲಿ ಮಧ್ಯಾಹ್ನದ ಬಿಸಿಯೂಟ ಸೇವಿಸಿ ವಿದ್ಯಾರ್ಥಿಗಳು ಅಸ್ವಸ್ಥಗೊಂಡಿದ್ದರು.

ಘಟನೆಯನ್ನು ಗಂಭೀರವಾಗಿ ಪರಿಗಣಿಸಿದ ಜಿಲ್ಲಾಡಳಿತ, ನಿರ್ಲಕ್ಷ್ಯ ತೋರಿದ ಅಕ್ಷರ ದಾಸೋಹ ಯೋಜನೆಯ ತಾಲ್ಲೂಕು ಸಹಾಯಕ ನಿರ್ದೇಶಕಿ ಮಂಜುಳಾ ಮತ್ತು ಮುಖ್ಯ ಶಿಕ್ಷಕ ಕನಕಪ್ಪ ಅವರನ್ನು ಅಮಾನತುಗೊಳಿಸಿದೆ.

ಮಧ್ಯ ಕರ್ನಾಟಕ ಜಿಲ್ಲೆಗಳಿಗೆ ನೀರುಣಿಸುವ ಭದ್ರಾ ಮೇಲ್ದಂಡೆ ಯೋಜನೆ

ರಾಷ್ಟ್ರೀಯ ಮಾನ್ಯತೆಗೆ ಕೇಂದ್ರ, ಮೀನಮೇಷ

ಪ್ರಜಾವಾಣಿ ವಾರ್ತೆ

ನವದೆಹಲಿ: ಹನಿ ನೀರಾವರಿ ಮೂಲಕ ಮಧ್ಯ ಕರ್ನಾಟಕ ಜಿಲ್ಲೆಗಳಿಗೆ ನೀರುಣಿಸುವ ಭದ್ರಾ ಮೇಲ್ದಂಡೆ ಯೋಜನೆಯನ್ನು 'ರಾಷ್ಟ್ರೀಯ ಯೋಜನೆ'ಯನ್ನಾಗಿ ಘೋಷಿಸಲು ಕೇಂದ್ರ ಸರ್ಕಾರ ಮೀನಮೇಷ ಎಣಿಸುತ್ತಿದೆ.

ಈ ಯೋಜನೆಯನ್ನು ರಾಷ್ಟ್ರೀಯ ಯೋಜನೆಯನ್ನಾಗಿ ಘೋಷಿಸುವಂತೆ ಒತ್ತಾಯಿಸಿ ಕರ್ನಾಟಕದ ಮುಖ್ಯಮಂತ್ರಿ ಹಾಗೂ ಜಲಸಂಪನ್ಮೂಲ ಸಚಿವರು ಕೇಂದ್ರ ಸರ್ಕಾರಕ್ಕೆ ಸುಮಾರು 10 ಸಲ ಮನವಿ ಸಲ್ಲಿಸಿದ್ದಾರೆ. ಕೇಂದ್ರ ಸಚಿವರನ್ನು ಭೇಟಿಯಾದ ಬಳಿಕ 'ಭದ್ರಾ ಮೇಲ್ದಂಡೆಗೆ ರಾಷ್ಟ್ರೀಯ ಮಾನ್ಯತೆ ಸಿಕ್ಕಿದೆ' ಎಂದೂ ಹೇಳಿಕೊಂಡಿದ್ದಾರೆ. ರಾಷ್ಟ್ರೀಯ ಮಾನ್ಯತೆ ಸಿಕ್ಕಿದ್ದರಿಂದ ಯೋಜನೆಯ ಕಾಮಗಾರಿ ತ್ವರಿತಗತಿಯಲ್ಲಿ ಪೂರ್ಣಗೊಳ್ಳಲಿದೆ ಎಂದೂ ಬಿಜೆಪಿಯ ರಾಷ್ಟ್ರೀಯ ಹಾಗೂ ರಾಜ್ಯದ ನಾಯಕರು ಹೇಳುತ್ತಾ ಬಂದಿದ್ದಾರೆ. ರಾಷ್ಟ್ರೀಯ ಮಾನ್ಯತೆ ಸಿಗಲು ಕೇಂದ್ರ ಸಚಿವ ಸಂಪುಟದ ಅಂಕಿತ ಬೇಕು. ಆದರೆ, ಸಚಿವ ಸಂಪುಟದಿಂದ ಇಲ್ಲಿಯ ವರೆಗೆ ಒಪ್ಪಿಗೆ ಸಿಕ್ಕಿಲ್ಲ.

ಕೇಂದ್ರ ಜಲಶಕ್ತಿ ಸಚಿವಾಲಯದ ಮಾರ್ಗಸೂಚಿಗಳ ಪ್ರಕಾರ, ಈ ಯೋಜನೆಯು ರಾಷ್ಟ್ರೀಯ ಯೋಜನೆಯಾಗಲು ಅರ್ಹತೆ ಪಡೆದಿದೆ. ಈ ಸಂಬಂಧ ಜಲಶಕ್ತಿ ಸಚಿವಾಲಯದ ಉನ್ನತಾಧಿಕಾರ ಸಮಿತಿ ಸಹ ಶಿಫಾರಸು ಮಾಡಿದೆ. ಇದನ್ನು ರಾಷ್ಟ್ರೀಯ ಯೋಜನೆ ಎಂದು ಪರಿಗಣಿಸಲು ಕೇಂದ್ರ ಹಣಕಾಸು ಸಚಿವಾಲಯದ ಸಾರ್ವಜನಿಕ ಹೂಡಿಕೆ ಮಂಡಳಿಯು 2022ರ ಅಕ್ಟೋಬರ್ 12ರಂದು ಒಪ್ಪಿಗೆ ನೀಡಿದೆ. ಇದಾಗಿ ಎಂಟು ತಿಂಗಳು ಕಳೆದರೂ ಮತ್ತೆ ಯಾವ ಪ್ರಕ್ರಿಯೆಯೂ ನಡೆದಿಲ್ಲ.

ಈ ಯೋಜನೆಯಲ್ಲಿ 29.90 ಟಿಎಂಸಿ ಅಡಿ ನೀರು (ತುಂಗಾ ನದಿಯಿಂದ 17.40 ಟಿಎಂಸಿ ಅಡಿ ಹಾಗೂ ಭದ್ರಾ ಜಲಾಶಯದಿಂದ 12.50 ಟಿಎಂಸಿ ಅಡಿ) ಬಳಕೆ ಮಾಡಲಾಗುತ್ತದೆ. ಈ ಯೋಜನೆ ಮೂಲಕ 367 ಕೆರೆಗಳನ್ನು ತುಂಬಿಸಲಾಗುತ್ತದೆ. 2.25 ಲಕ್ಷ ಹೆಕ್ಟೇರ್ ಭೂಮಿಗೆ ನೀರಾವರಿ ವ್ಯವಸ್ಥೆ ಆಗಲಿದೆ.

ಈ ಯೋಜನೆಗೆ ತಗಲುವ ಒಟ್ಟು ವೆಚ್ಚ ₹21,473 ಕೋಟಿ. ಯೋಜನೆಗೆ ₹5,300 ಕೋಟಿ ಹಣಕಾಸಿನ ನೆರವು ನೀಡಲಾಗುತ್ತದೆ ಎಂದು ಈ ಸಲದ ಕೇಂದ್ರದ ಬಜೆಟ್‌ನಲ್ಲಿ ಪ್ರಕಟಿಸಲಾಗಿದೆ. ಈ ಅನುದಾನದ ಕಂತು ಸಹ ಇಲ್ಲಿಯ ವರೆಗೆ ಬಿಡುಗಡೆ ಆಗಿಲ್ಲ.

ಈ ಯೋಜನೆಯ ₹13,507 ಕೋಟಿ ಮೊತ್ತದ ಕಾಮಗಾರಿಗಳನ್ನು ಗುತ್ತಿಗೆ ನೀಡಲಾಗಿದೆ. ಇಲ್ಲಿಯವರೆಗೆ ₹7 ಸಾವಿರ ಕೋಟಿಯ ಆರ್ಥಿಕ ಪ್ರಗತಿ ಸಾಧಿಸಲಾಗಿದೆ. ಕೇಂದ್ರದ ಅನುದಾನ ಬಿಡುಗಡೆಯಾದರೆ ಕಾಮಗಾರಿಗೆ ಇನ್ನಷ್ಟು ವೇಗ ಸಿಗಲಿದೆ ಎಂದು ಜಲಸಂಪನ್ಮೂಲ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ಹೇಳುತ್ತಾರೆ.

ಕೇಂದ್ರ ಸಚಿವರಿಗೆ ಮನವಿ

'ಈ ಯೋಜನೆಯನ್ನು ರಾಷ್ಟ್ರೀಯ ಯೋಜನೆ ಎಂದು ಘೋಷಿಸುವಂತೆ ಕೇಂದ್ರ ಜಲಶಕ್ತಿ ಸಚಿವರಿಗೆ ಮತ್ತೊಮ್ಮೆ ಮನವಿ ಸಲ್ಲಿಸಲಾಗಿದೆ. ಕೇಂದ್ರದ ಅನುದಾನ ಬಿಡುಗಡೆ ಮಾಡುವಂತೆಯೂ ಕೋರಲಾಗಿದೆ. ಕಾಮಗಾರಿಯನ್ನು ಆದಷ್ಟು ತ್ವರಿತಗತಿಯಲ್ಲಿ ಪೂರ್ಣಗೊಳಿಸಿ ಬರಪೀಡಿತ ಜಿಲ್ಲೆಗಳ ರೈತರಿಗೆ ನೀರು ಒದಗಿಸಲು ಉದ್ದೇಶಿಸಲಾಗಿದೆ' ಎಂದು ಕರ್ನಾಟಕದ ಜಲಸಂಪನ್ಮೂಲ ಸಚಿವ ಡಿ.ಕೆ. ಶಿವಕುಮಾರ್ ತಿಳಿಸಿದರು.

ಮುಖ್ಯಾಂಶಗಳು

- ಕೇಂದ್ರ ಸಚಿವ ಸಂಪುಟದಿಂದ ಸಿಗದ ಒಪ್ಪಿಗೆ
- ಬಿಡುಗಡೆಯಾಗದ ಅನುದಾನದ ಕಂತು

ಸುದ್ದಿ 2 ನಿಮಿಷ

ಯಂಗ್ ಪ್ರೊಫೆಷನಲ್ ಫೆಲೋಶಿಪ್‌ಗೆ ಆಯ್ಕೆ

ಬೆಂಗಳೂರು: ನೇಪಾಳದ ಕಠ್ಮಂಡುದಲ್ಲಿ ಜುಲೈ 27ರಿಂದ 31ರವರೆಗೆ ನಡೆಯುವ 'ಯಂಗ್ ಪ್ರೊಫೆಷನಲ್ ಫೆಲೋಶಿಪ್ ನೇಪಾಳ–2023'ಕ್ಕೆ ಬೆಂಗಳೂರಿನ ಕೃಪಾನಿಧಿ ಸ್ಕೂಲ್ ಆಫ್ ಮ್ಯಾನೇಜ್‌ಮಂಟ್‌ನ ಅಧ್ಯಾಪಕಿ ಪ್ರೊ. ಉರ್ಮಿ ಚಕ್ರವರ್ತಿ ಭಾರತವನ್ನು ಪ್ರತಿನಿಧಿಸಲಿದ್ದಾರೆ.



ಯಂಗ್ ಪ್ರೊಫೆಷನಲ್ ಫೆಲೋಶಿಪ್ ನೇಪಾಳವು ವಿವಿಧ ಸಂಸ್ಥೆಗಳ ಸಹಯೋಗದಲ್ಲಿ ರಾಜತಾಂತ್ರಿಕ ಕೌಶಲಗಳನ್ನು ಪ್ರದರ್ಶಿಸುವ ವೇದಿಕೆಯಾಗಿದೆ. ಈ ಫೆಲೋಶಿಪ್‌ನಲ್ಲಿ ಪ್ರೊ. ಉರ್ಮಿ ಚಕ್ರವರ್ತಿ ಅವರು ಅಭಿವೃದ್ಧಿಯಲ್ಲಿ ಯುವಕರು ಮತ್ತು ಮಹಿಳೆಯರ ಪಾತ್ರದ ಬಗ್ಗೆ ಮಾತನಾಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಸುಸ್ಥಿರ ಅಭಿವೃದ್ಧಿಯ ಗುರಿಗಳನ್ನು ಉತ್ತೇಜಿಸಲು ಮತ್ತು ಶಾಂತಿ ನೆಲೆಸಲು ವಿವಿಧ ದೇಶಗಳ ರಾಜತಾಂತ್ರಿಕರು, ಯುವಕರು ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ಅಜಿತ್ ರೈ ನೇಮಕಕ್ಕೆ ವಿರೋಧ

ಸಿರವಾರ: ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವ ಪ್ರಕರಣದಲ್ಲಿ ಬಂಧನವಾಗಿರುವ ಕೆ.ಆರ್.ಪುರ ತಾಲ್ಲೂಕಿನ ತಹಶೀಲ್ದಾರ್ ಆಗಿದ್ದ ಅಜಿತ್ ರೈ ಅವರನ್ನು ರಾಜ್ಯ ಸರ್ಕಾರ ಸಿರವಾರ ತಾಲ್ಲೂಕಿನ ಗ್ರೇಡ್ 2 ತಹಶೀಲ್ದಾರ್ ಆಗಿ ನೇಮಕ ಮಾಡಿ ಆದೇಶ ಹೊರಡಿಸಿರುವುದಕ್ಕೆ ಜಿಲ್ಲೆಯಲ್ಲಿ ವ್ಯಾಪಕ ವಿರೋಧ ವ್ಯಕ್ತವಾಗಿದೆ.

ಬಹುಕೋಟಿ ರೂಪಾಯಿ ಭ್ರಷ್ಟಾಚಾರದ ಆರೋಪ ಎದುರಿಸುತ್ತಿರುವ ಅಧಿಕಾರಿಯನ್ನು ಸೇವೆಯಿಂದ ವಜಾಗೊಳಿಸದೆ ಸಿರವಾರ ತಾಲ್ಲೂಕಿಗೆ ಹಿಂಬಡ್ತಿ ನೀಡಿ ವರ್ಗಾವಣೆ ಮಾಡಿರುವುದು ಖಂಡನೀಯ. ಸರ್ಕಾರದ ಈ ನಿರ್ಧಾರವು ಮತ್ತಷ್ಟು ಭ್ರಷ್ಟಾಚಾರ ಮಾಡಲು ಪರೋಕ್ಷವಾಗಿ ಕುಮ್ಮಕ್ಕು ನೀಡಿದಂತೆ ಆಗದಲಿದೆ ಎಂದು ತಾಲ್ಲೂಕಿನ ವಿವಿಧ ಸಂಘಟನೆಗಳು ಆಕ್ರೋಶ ವ್ಯಕ್ತಪಡಿಸಿವೆ.



ಪ್ರತಿಭಟನೆ

ಚಂದ್ರಶೇಖರ್ ಆಜಾದ್ ರಾವಣ್ ಅವರ ಮೇಲಿನ ದಾಳಿ ಹಾಗೂ ಕೋಲಾರದಲ್ಲಿನ ಮರ್ಯಾದೆಗೇಡು ಹತ್ಯೆ ಖಂಡಿಸಿ ತಮಟೆ–ಕರ್ನಾಟಕ, ಬಹುತ್ವ ಕರ್ನಾಟಕ, ಬಹುಜನ ದಲಿತ ಸಂಘರ್ಷ ಸಮಿತಿ ಹಾಗೂ ಮತ್ತಿತರ ಸಂಘಟನೆಗಳ ಸದಸ್ಯರು ನಗರದ ಸ್ವಾತಂತ್ರ್ಯ ಉದ್ಯಾನವನದಲ್ಲಿ ಮಂಗಳವಾರ ಸಂಜೆ ಮೇಣದಬತ್ತಿ ಹಿಡಿದು ಪ್ರತಿಭಟನೆ ಮಾಡಿದರು -ಪ್ರಜಾವಾಣಿ ಚಿತ್ರ

'ರಾಜ್ಯ ಶಿಕ್ಷಣ ನೀತಿ ಶೀಘ್ರ ನಿರ್ಧಾರ'

ಕೋಲಾರ: 'ರಾಜ್ಯದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯ ಬದಲು ರಾಜ್ಯ ಶಿಕ್ಷಣ ನೀತಿ ಜಾರಿಗೆ ತರಲಿದೆ. ಶಿಕ್ಷಣ ತಜ್ಞರೊಂದಿಗೆ ಸಾಧಕ ಬಾಧಕ ಕುರಿತು ಚರ್ಚಿಸಿ ಶೀಘ್ರ ನಿರ್ಧಾರ ಕೈಗೊಳ್ಳುತ್ತೇವೆ' ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ತಿಳಿಸಿದರು.

ಮಂಗಳವಾರ ಬೆಂಗಳೂರು ಉತ್ತರ ವಿಶ್ವವಿದ್ಯಾಲಯ ಘಟಿಕೋತ್ಸವ ನಂತರ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

ವಿಪಕ್ಷ ನಾಯಕ: ಅಭಿಪ್ರಾಯ ಸಂಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿರೋಧಪಕ್ಷ ನಾಯಕರ ಆಯ್ಕೆ ಮತ್ತು ರಾಜ್ಯ ಘಟಕದ ಅಧ್ಯಕ್ಷರ ನೇಮಕ ಸಂಬಂಧ ಕೇಂದ್ರ ಸಚಿವ ಮನ್ಸುಖ್ ಮಾಂಡವೀಯ ಮತ್ತು ಬಿಜೆಪಿ ನಾಯಕ ವಿನೋದ್ ತಾವಡೆ ಅವರು ಮಂಗಳವಾರ ಶಾಸಕರು ಮತ್ತು ಪಕ್ಷದ ಪದಾಧಿಕಾರಿಗಳಿಂದ ಅಭಿಪ್ರಾಯ ಸಂಗ್ರಹಿಸಿದರು.

ಇಬ್ಬರೂ ವೀಕ್ಷಕರು ಮಾಹಿತಿ ಸಂಗ್ರಹದ ಬಳಿಕ ದೆಹಲಿಗೆ ಮರಳಿದ್ದು, ಈ ಮಾಹಿತಿಯನ್ನು ವರಿಷ್ಠರಿಗೆ ಸಲ್ಲಿಸಲಿದ್ದಾರೆ. ಬುಧವಾರ ಸಂಜೆಯೊಳಗೆ ಹೆಸರು ಪ್ರಕಟವಾಗುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

ಬೆಳಿಗ್ಗೆಯೇ ಬೆಂಗಳೂರಿಗೆ ಬಂದ ವೀಕ್ಷಕರು ಪಕ್ಷದ ಕಚೇರಿಯಲ್ಲಿ ಬೀಡು ಬಿಟ್ಟು ಅಭಿಪ್ರಾಯ ಸಂಗ್ರಹಿಸುವ ಕಾರ್ಯ ನಡೆಸಿದರು.

'ವಿರೋಧ ಪಕ್ಷದ ನಾಯಕ ಮತ್ತು ರಾಜ್ಯಾಧ್ಯಕ್ಷರಾಗಿ ಯಾರನ್ನು ಆಯ್ಕೆ ಮಾಡಿದರೆ ಸೂಕ್ತ, ತಲಾ ಎರಡು ಹೆಸರುಗಳನ್ನು ಹೇಳಿ' ಎಂದು ಸೂಚಿಸಿದಾಗ, ಬಸವರಾಜ ಬೊಮ್ಮಾಯಿ, ಬಸನಗೌಡ ಪಾಟೀಲ ಯತ್ನಾಳ ಮತ್ತು ಸುನಿಲ್‌ಕುಮಾರ್ ಹೆಸರುಗಳನ್ನು ಶಾಸಕರು ಮತ್ತು ಪದಾಧಿಕಾರಿಗಳು ಹೇಳಿದರು ಎಂದು ಮೂಲಗಳು ತಿಳಿಸಿವೆ. ಅಭಿಪ್ರಾಯ ಸಂಗ್ರಹವಾದ ಬಳಿಕ ಬಿ.ಎಸ್.ಯಡಿಯೂರಪ್ಪ ಅವರನ್ನು ಭೇಟಿ ಮಾಡಿದರು.

ಈ ಕುರಿತು ಸುದ್ದಿಗಾರರ ಜತೆ ಮಾತನಾಡಿದ ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಎನ್.ರವಿಕುಮಾರ್, ಅಭಿಪ್ರಾಯ ಸಂಗ್ರಹಿಸಿದ ವೀಕ್ಷಕರು ಪಕ್ಷದ ರಾಷ್ಟ್ರೀಯ ಅಧ್ಯಕ್ಷರು ಮತ್ತು ಇತರ ನಾಯಕರ ಜತೆ ಚರ್ಚಿಸಲಿದ್ದಾರೆ. ಬಳಿಕ, ರಾಜ್ಯ ಘಟಕದ ಅಧ್ಯಕ್ಷರ ನೇಮಕವಾಗಲಿದೆ. ಎರಡೂ ಸದನಗಳ ವಿಪಕ್ಷ ನಾಯಕರನ್ನಾಗಿ ಯಾರನ್ನು ಆಯ್ಕೆ ಮಾಡಬೇಕು ಎಂಬ ಸೂಚನೆಯೂ ಬರುವ ನಿರೀಕ್ಷೆ ಇದೆ ಎಂದರು.


'ರೋಹಿಣಿ ನಿಲೇಕಣಿ ಸೆಂಟರ್ ಫಾರ್ ಬ್ರೈನ್ ಆ್ಯಂಡ್ ಮೈಂಡ್' ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನುಷ್ಯನ ನರಗಳ ಬೆಳವಣಿಗೆ, ಅಸ್ವಸ್ಥತೆ ಮತ್ತು ಮಾನಸಿಕ ಆರೋಗ್ಯಕ್ಕೆ ಸಂಬಂಧಿಸಿದ ಸಂಶೋಧನೆಗೆ 'ರೋಹಿಣಿ ನಿಲೇಕಣಿ ಸೆಂಟರ್ ಫಾರ್ ಬ್ರೈನ್ ಆ್ಯಂಡ್ ಮೈಂಡ್' ನಗರದಲ್ಲಿ ಆರಂಭವಾಗಿದೆ.

ನ್ಯಾಷನಲ್ ಸೆಂಟರ್ ಫಾರ್ ಬಯೋಲಾಜಿಕಲ್ ಸೈನ್ಸಸ್ (ಎನ್‌ಸಿಬಿಎಸ್) ಆವರಣದಲ್ಲಿ ಈ ಕೇಂದ್ರವನ್ನು 'ರೋಹಿಣಿ ನಿಲೇಕಣಿ ಲೋಕೋಪಕಾರಿ' ಸಂಸ್ಥೆ ಅಧ್ಯಕ್ಷೆ ರೋಹಿಣಿ ನಿಲೇಕಣಿ ಅವರು ಕೊಡಿಗೆಹಳ್ಳಿಯಲ್ಲಿ ಮಂಗಳವಾರ ಉದ್ಘಾಟಿಸಿದರು.

ಮನುಷ್ಯನ ಮೆದುಳಿನ ಬೆಳವಣಿಗೆಯ ಕುಂಠಿತದಿಂದ ಉಂಟಾಗುವ ಮಾನಸಿಕ ಕಾಯಿಲೆಗಳು ಹಾಗೂ ಅನುವಂಶಿಕವಾಗಿ ಮೆದುಳಿನ ಮೇಲೆ ಪರಿಣಾಮ ಬೀರುವ ಕಾಯಿಲೆಗಳ ಬಗ್ಗೆಯೂ ಸಂಶೋಧನೆ ನಡೆಸಲಿದೆ. ಮಾನಸಿಕ ಆರೋಗ್ಯ ಕ್ಷೇತ್ರದಲ್ಲಿ ಸಂಶೋಧನೆ ಮತ್ತು ಅಭ್ಯಾಸ ಎರಡಕ್ಕೂ ದೀರ್ಘಾವಧಿ ಸಂಶೋಧನೆ ಮತ್ತು ಸಾಮರ್ಥ್ಯ ನಿರ್ಮಿಸುವ ಕೇಂದ್ರವಾಗಿ ಕಾರ್ಯನಿರ್ವಹಿಸಲಿದೆ ಎಂದು ರೋಹಿಣಿ ನಿಲೇಕಣಿ ತಿಳಿಸಿದರು.



'ರೋಹಿಣಿ ನಿಲೇಕಣಿ ಸೆಂಟರ್ ಫಾರ್ ಬ್ರೈನ್ ಆ್ಯಂಡ್ ಮೈಂಡ್' ಅನ್ನು ರೋಹಿಣಿ ನಿಲೇಕಣಿ ಅವರು ಮಂಗಳವಾರ ಉದ್ಘಾಟಿಸಿದರು

ದೇಶದಲ್ಲಿ ಸುಮಾರು 193 ದಶಲಕ್ಷ ಜನರು ಮಾನಸಿಕ ಅಸ್ವಸ್ಥತೆ ಎದುರಿಸುತ್ತಿದ್ದಾರೆ. 1990ರಿಂದ ದೇಶದಲ್ಲಿ ದೈಹಿಕ ರೋಗಕ್ಕೆ ಸಮನಾಗಿ ಮಾನಸಿಕ ಅಸ್ವಸ್ಥತೆಯ ಪ್ರಕರಣಗಳು ಹೆಚ್ಚುತ್ತಿವೆ. ಈ ಸವಾಲನ್ನು ಎದುರಿಸಲು ಸಂಶೋಧನೆ ಅಗತ್ಯವಾಗಿದೆ. ಎನ್‌ಸಿಬಿಎಸ್ ಮತ್ತು ನಿಮ್ಹಾನ್ಸ್ ನಡುವಿನ ಈ ಸಹಯೋಗದಿಂದ ಸಂಶೋಧನೆ ನಡೆಯಲಿವೆ ಎಂದರು.

ಎನ್‌ಸಿಬಿಎಸ್‌ನ ನಿರ್ದೇಶಕ ಪ್ರೊ. ಎಲ್.ಎಸ್.ಶಶಿಧರ ಮಾತನಾಡಿ, 'ಜೀನೊಮಿಕ್ಸ್, ಸೆಲ್ ಬಯಾಲಜಿ ಮತ್ತು ಸ್ಟೆಮ್ ಸೆಲ್ ತಂತ್ರಜ್ಞಾನದಲ್ಲಿನ ಇತ್ತೀಚಿನ ಪ್ರಗತಿಗಳು ಮಾನವನ ಮಾನಸಿಕ ಅಸ್ವಸ್ಥತೆಯ ಸಮಸ್ಯೆಗಳಿಗೆ ಅನ್ವಯಿಸಬಹುದಾದ ಅನ್ವೇಷಣೆ ನಡೆಯಲಿದೆ' ಎಂದರು.

ನಿಮ್ಹಾನ್ಸ್ ನಿರ್ದೇಶಕಿ ಡಾ. ಪ್ರತಿಮಾ ಮೂರ್ತಿ ಮಾತನಾಡಿ, 'ಕ್ಯಾನ್ಸರ್‌ನಂತಹ ದೈಹಿಕ ಅಸ್ವಸ್ಥತೆಗಳಿಗೆ ಹೋಲಿಸಿದರೆ ಮಾನಸಿಕ ಆರೋಗ್ಯಕ್ಕೆ ಸಂಶೋಧನೆಗಳ ನೆರವನ್ನು ಪಡೆಯುವುದು ದೊಡ್ಡ ಸವಾಲಾಗಿದೆ. ನಿಮ್ಹಾನ್ಸ್, ಎನ್‌ಸಿಬಿಎಸ್ ಜೊತೆಗೂಡಿ ತೀವ್ರ ಮಾನಸಿಕ ಅಸ್ವಸ್ಥತೆಯಲ್ಲಿ ಹಂಚಿಕೆಯ ಮತ್ತು ವಿಶಿಷ್ಟ ಗುರುತುಗಳನ್ನು ನೋಡುವ ಸಂಶೋಧನೆಯನ್ನು ನಡೆಸುತ್ತಿದೆ' ಎಂದರು.

ಮಹಾರಾಷ್ಟ್ರದಿಂದ ಸಮವಸ್ತ್ರ: ಆಕ್ಷೇಪ

ಬೆಂಗಳೂರು: ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳಿಗೆ ಉಚಿತವಾಗಿ ನೀಡುವ ಸಮವಸ್ತ್ರವನ್ನು ಮಹಾರಾಷ್ಟ್ರದ ವಿಲಾಸಚಂದ್ ಜೈನ್ ಸಂಸ್ಥೆಯಿಂದ ಖರೀದಿಸುವ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ನಿರ್ಧಾರಕ್ಕೆ ಕನ್ನಡ ಗೆಳೆಯರ ಬಳಗ ಆಕ್ಷೇಪ ವ್ಯಕ್ತಪಡಿಸಿದೆ.

ಈ ಬಗ್ಗೆ ಇಲಾಖೆಯ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಬೇಕು ಎಂದು ಬಳಗದ ಸಂಚಾಲಕ ರಾ.ನಂ. ಚಂದ್ರಶೇಖರ ಆಗ್ರಹಿಸಿದ್ದಾರೆ.

50 ಕಿ.ಮೀ ಸುರಂಗಕ್ಕೆ ₹22 ಸಾವಿರ ಕೋಟಿ

ಒಂದನೇ ಪುಟದಿಂದ

ಬಿಟಿಟಿ– ಟೋಲ್ ಆಯ್ಕೆಯಲ್ಲಿ ಸರ್ಕಾರಕ್ಕೆ ಹೆಚ್ಚಿನ ಆರ್ಥಿಕ ಹೊರೆಯಾಗುವುದಿಲ್ಲ. ಖಾಸಗಿಯಿಂದ ನಿರ್ಮಾಣ, ನಿರ್ವಹಣೆಯಾಗಲಿದ್ದು, ಶುಲ್ಕ ಸಂಗ್ರಹಿಸಲಿದ್ದಾರೆ. ಈ ಯೋಜನೆಯಿಂದ ನಗರ ಸಂಚಾರ ದಟ್ಟಣೆ ನಿಯಂತ್ರಣಕ್ಕೆ ಬರಲಿದೆ ಎಂದು ಯೋಚಿಸಲಾಗಿದೆ.

ಸುರಂಗ ಮಾರ್ಗವನ್ನು ನಾಲ್ಕು ಅಥವಾ ಆರು ಪಥಗಳಲ್ಲಿ ನಿರ್ಮಿಸಲಾಗುತ್ತದೆ. ಹೆಚ್ಚಿನ ವಾಹನಗಳಿಗೆ ಅವಕಾಶ ಕಲ್ಪಿಸುವ ಹಾಗೂ ಸುರಕ್ಷಾ ಸಂಚಾರಕ್ಕಾಗಿ ಏಕಮುಖ ರಸ್ತೆಗಳನ್ನಾಗಿ ನಿರ್ಮಿಸಲು ಯೋಜಿಸಲಾಗಿದೆ. ಸುರಂಗ ಮಾರ್ಗ ಎರಡು ಅಂತಸ್ತಿನಲ್ಲಿರಲ್ಲಿದ್ದು, ಕೆಳಭಾಗದಲ್ಲಿ ಒಂದು ಕಡೆಗೆ, ಮೇಲ್ಭಾಗದಲ್ಲಿ ಮತ್ತೊಂದು ಕಡೆಯ ಸಂಚಾರ ಇರಲಿದೆ.

2013ರ ಅವಧಿಯಲ್ಲಿದ್ದ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದಲ್ಲಿ ಸಂಚಾರ ದಟ್ಟಣೆ ನಿಯಂತ್ರಿಸಲು ಮೇಲ್ಸೇತುವೆ ಕಾರಿಡಾರ್‌ಗಳನ್ನು ನಿರ್ಮಿಸಲು ನಿರ್ಧರಿಸಲಾಗಿತ್ತು. ಈಗ ಬಹುತೇಕ ಅದೇ ಕಾರಿಡಾರ್‌ಗಳನ್ನು ಸುರಂಗ ಮಾರ್ಗದ ಕಾರಿಡಾರ್‌ಗಳನ್ನಾಗಿಸಲು ಸರ್ಕಾರ ಯೋಜಿಸುತ್ತಿದೆ.

ಲೋಕೋಪಯೋಗಿ ಇಲಾಖೆ ಕೂಡ ಸುರಂಗ ಮಾರ್ಗ ನಿರ್ಮಾಣಕ್ಕೆ ಕೇಂದ್ರ ಸರ್ಕಾರಕ್ಕೆ ಇತ್ತೀಚೆಗೆ ಮನವಿ ಸಲ್ಲಿಸಿತ್ತು. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಆ ಯೋಜನೆಗೆ ಸುಮಾರು ₹50 ಸಾವಿರ ಕೋಟಿ ವೆಚ್ಚವಾಗುತ್ತದೆ ಎಂದು ಹೇಳಿತ್ತು. ಈಗ ಖಾಸಗಿ ಸಹಭಾಗಿತ್ವದಲ್ಲಿ ಸುರಂಗ ಮಾರ್ಗ ನಿರ್ಮಿಸುವ ಯೋಜನೆಯತ್ತ ಡಿಸಿಎಂ ಡಿ.ಕೆ. ಶಿವಕುಮಾರ್ ಆಸಕ್ತಿ ವಹಿಸಿದ್ದಾರೆ.



ಸುರಂಗ ರಸ್ತೆಗಳ ನಿರ್ಮಾಣಕ್ಕೆ ಸಂಬಂಧಿಸಿದಂತೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು 'ಸುರಂಗ ರಸ್ತೆ ನಿರ್ಮಾಣ ಸಲಹಾ ಸಂಸ್ಥೆ' ಅಧಿಕಾರಿಗಳ ಜತೆ ಮಂಗಳವಾರ ಸಮಾಲೋಚನೆ ನಡೆಸಿದರು. ಈ ಸಂದರ್ಭದಲ್ಲಿ ರಾಜ್ಯಸಭೆ ಮಾಜಿ ಸದಸ್ಯ ರಾಜೀವ್ ಗೌಡ, ನಾನಾ ಇಲಾಖೆಗಳ ಅಧಿಕಾರಿಗಳು, ನಿವೃತ್ತ ಮುಖ್ಯ ಎಂಜಿನಿಯರ್‌ಗಳು ಇದ್ದರು.

ಎಲ್ಲಿಂದ ಎಲ್ಲಿಗೆ ಸುರಂಗ ರಸ್ತೆ?

ಉತ್ತರದಿಂದ ದಕ್ಷಿಣ ಕಾರಿಡಾರ್	ಯಲಹಂಕದ ಮೇಕ್ರಿ ವೃತ್ತದಿಂದ ಕೇಂದ್ರೀಯ ರೇಷ್ಮೆ ಮಂಡಳಿ. (ಬಳ್ಳಾರಿ ರಸ್ತೆಯಿಂದ ಹೊಸೂರು ಕಡೆಗೆ)	27 ಕಿ.ಮೀ
ಪೂರ್ವದಿಂದ ಪಶ್ಚಿಮ ಕಾರಿಡಾರ್–1	ಕೆ.ಆರ್. ಪುರದಿಂದ ಗೊರಗುಂಟೆ ಪಾಳ್ಯ (ಹಳೇ ಮದ್ರಾಸ್ ರಸ್ತೆ–ತುಮಕೂರು ರಸ್ತೆ, ವರ್ತುಲ ರಸ್ತೆ ರಾಮಮೂರ್ತಿನಗರದಿಂದ ಐಟಿಪಿಎಲ್ ಕಡೆಗೆ)	29 ಕಿ.ಮೀ
ಪೂರ್ವದಿಂದ ಪಶ್ಚಿಮ ಕಾರಿಡಾರ್–2	ವರ್ತೂರು ಕೋಡಿಯಿಂದ ಜ್ಞಾನಭಾರತಿ (ಹಳೇ ವಿಮಾನ ರಸ್ತೆಯಿಂದ ಮೈಸೂರು ರಸ್ತೆ)	28.90 ಕಿ.ಮೀ
ಸಂಪರ್ಕ ಕಾರಿಡಾರ್–1	ಸೇಂಟ್ಸ್ ಜಾನ್ಸ್ ಆಸ್ಪತ್ರೆ ಜಂಕ್ಷನ್‌ನಿಂದ ಹೊರ ವರ್ತುಲ ರಸ್ತೆ ಮೂಲಕ ಅಗರ (ಪೂರ್ವದಿಂದ ಪಶ್ಚಿಮ–2ಕ್ಕೆ ಸಂಪರ್ಕ)	4.50 ಕಿ.ಮೀ
ಸಂಪರ್ಕ ಕಾರಿಡಾರ್–2	ಹಲಸೂರಿನಿಂದ ಡಿಸೋಜಾ ವೃತ್ತ (ಪೂರ್ವದಿಂದ ಪಶ್ಚಿಮ– ಕಾರಿಡಾರ್–1 ಮತ್ತು ಪೂರ್ವದಿಂದ ಪಶ್ಚಿಮ ಕಾರಿಡಾರ್–2ಕ್ಕೆ ಸಂಪರ್ಕ)	2.80 ಕಿ.ಮೀ
ಸಂಪರ್ಕ ಕಾರಿಡಾರ್–3	ವ್ಹೀಲರ್ಸ್ ರಸ್ತೆ ಜಂಕ್ಷನ್‌ನಿಂದ ಹೊರ ವರ್ತುಲ ರಸ್ತೆಯಲ್ಲಿ ಕಲ್ಯಾಣನಗರಕ್ಕೆ (ಪೂರ್ವದಿಂದ ಪಶ್ಚಿಮ ಕಾರಿಡಾರ್–1ಕ್ಕೆ ಸಂಪರ್ಕ)	6.45 ಕಿ.ಮೀ

'ಮೈಸೂರು ಸ್ಯಾಂಡಲ್ ಸೋಪ್: ಬ್ರ್ಯಾಂಡ್ ಮೌಲ್ಯಕ್ಕೆ ಸಲಹೆ ಕೊಡಿ'

ಬೆಂಗಳೂರು: 'ಮೈಸೂರು ಸ್ಯಾಂಡಲ್ ಸೋಪ್‌ನ ಬ್ರ್ಯಾಂಡ್ ಮೌಲ್ಯವನ್ನು ಮತ್ತಷ್ಟು ಹೆಚ್ಚಿಸುವ ಉದ್ದೇಶದಿಂದ ಉದ್ಯಮ ಪರಿಣತರು ಸಲಹೆ ನೀಡಬಹುದು' ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಎಂ.ಬಿ. ಪಾಟೀಲ ಹೇಳಿದ್ದಾರೆ.

'ಬ್ರ್ಯಾಂಡ್ ಮೌಲ್ಯ ಹೆಚ್ಚಿಸುವ ಬಗ್ಗೆ ಸಲಹೆ ನೀಡುವ ಆಸಕ್ತಿ ಇರುವವರು karnatakavision2030@gmail.comಗೆ ತಮ್ಮ ಸಲಹೆಗಳನ್ನು ಕಳಿಸಬಹುದು' ಎಂದವರು ತಿಳಿಸಿದ್ದಾರೆ.

ಈ ಬಗ್ಗೆ ಟ್ವೀಟ್ ಮಾಡಿರುವ ಅವರು, 'ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಮೈಸೂರು ಸ್ಯಾಂಡಲ್ ಸೋಪ್ ಉತ್ಪನ್ನ ಆರಂಭಿಸಿದ್ದರು. ಅದು ರಾಜ್ಯದ ಮಕುಟ ಮಣಿಯ ಅನರ್ಘ್ಯರತ್ನವಾಗಿದೆ. ಅವರ ಆಶಯಕ್ಕೆ ತಕ್ಕಂತೆ ಈ ಹೆಜ್ಜೆ ಇಡಲು ತೀರ್ಮಾನಿಸಲಾಗಿದೆ' ಎಂದಿದ್ದಾರೆ.

ಕ್ಲಾರಿಟ್ರೀ ಸಂಸ್ಥೆ ಆಯೋಜಿಸಿದ್ದ ಕಾರ್ಯಕ್ರಮ

ಆನ್‌ಲೈನ್ ಕೋಡಿಂಗ್ ಪ್ಲಾಟ್‌ಫಾರ್ಮ್ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ಗ್ರಾಮೀಣ ಭಾಗದ ಶಾಲಾ ಮಕ್ಕಳನ್ನು ಆನ್‌ಲೈನ್ ಕೋಡಿಂಗ್ ಪ್ಲಾಟ್‌ಫಾರ್ಮ್‌ನಲ್ಲಿ ತರಬೇಕೆನ್ನುವ ಉದ್ದೇಶದಿಂದ 'ರಸಪುರಿ ಎನ್ನುವ ಲೋ–ಕೋಡ್' ತಂತ್ರಜ್ಞಾನವನ್ನು ಪ್ರಾರಂಭಿಸಲಾಯಿತು. ಇದನ್ನು ಸಾಮಾನ್ಯವಾಗಿ ಡ್ರ್ಯಾಗ್ ಆ್ಯಂಡ್ ಡ್ರಾಪ್ ತಂತ್ರಜ್ಞಾನ ಎಂದು ಕರೆಯಲಾಗುತ್ತದೆ' ಎಂದು ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್‌ಸಿ) ಮುಖ್ಯ ಸಂಶೋಧನಾ ವಿಜ್ಞಾನಿ ಡಾ.ಎಸ್.ಎನ್. ಓಂಕಾರ ತಿಳಿಸಿದರು.

ಕ್ಲಾರಿಟ್ರೀ ಸಂಸ್ಥೆ ನಗರದಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 'ಮಕ್ಕಳಿಗಾಗಿ ಕನ್ನಡದ ಪ್ರಥಮ ಕೋಡಿಂಗ್' ವೇದಿಕೆ ತಂತ್ರಜ್ಞಾನವನ್ನು ಬಿಡುಗಡೆಗೊಳಿಸಿ ಅವರು ಮಾತನಾಡಿದರು.



ಕಾರ್ಯಕ್ರಮದಲ್ಲಿ ಸ್ವಾಮಿ ವಿವೇಕಾನಂದ ಯೂತ್‌ಮೂವ್‌ಮೆಂಟ್ ಡೆಪ್ಯೂಟಿ ಸಿಇಒ ಎಸ್. ಪ್ರವೀಣ ಕುಮಾರ್, ಮುಖ್ಯ ಸಂಶೋಧನಾ ವಿಜ್ಞಾನಿ ಡಾ.ಎಸ್.ಎನ್. ಓಂಕಾರ, ಪ್ರಾಜೆಕ್ಟ್ ಲೀಡ್‌ನ ಗುರುಪ್ರಸಾದ್ ಭಾಗವಹಿಸಿದ್ದರು

'ಕೃತಕ ಬುದ್ಧಿಮತ್ತೆ ಯುಗದಲ್ಲಿ ವಿಶೇಷವಾಗಿ ಶೈಕ್ಷಣಿಕ, ಉದ್ಯೋಗ ಮಾರುಕಟ್ಟೆಯು ಮುಂಬರುವ ದಿನಗಳಲ್ಲಿ ಬದಲಾಗುತ್ತದೆ. ಆದ್ದರಿಂದ ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಈ ತಂತ್ರಜ್ಞಾನದಿಂದ ವಂಚಿತರಾಗಬಾರದು, ಡಿಜಿಟಲ್ ಸಾಕ್ಷರತೆ ಅದರಲ್ಲೂ ಕೋಡಿಂಗ್ ತಂತ್ರಜ್ಞಾನ ಗ್ರಾಮೀಣ ಮಕ್ಕಳಿಗೆ ತಲುಪಬೇಕು. ಇಲ್ಲದಿದ್ದರೆ ಡಿಜಿಟಲ್ ಕಂದಕ ನಿರ್ಮಾಣವಾಗುತ್ತದೆ' ಎಂದು ಆತಂಕ ವ್ಯಕ್ತಪಡಿಸಿದರು.

ಮೈಸೂರಿನ ಸ್ವಾಮಿ ವಿವೇಕಾನಂದ ಯೂತ್‌ಮೂವ್‌ಮೆಂಟ್ ಡೆಪ್ಯೂಟಿ ಸಿಇಒ ಎಸ್. ಪ್ರವೀಣ ಕುಮಾರ್ ಎಸ್. 'ರಸಪುರಿ ಪ್ಲಾಟ್‌ಫಾರ್ಮ್‌ನಲ್ಲಿ ಸ್ಥಳೀಯ ಭಾಷೆಯಲ್ಲಿಯೇ ಕೋಡಿಂಗ್ ಮಾಡಲು ಪೂರ್ವಾಪೇಕ್ಷಿತವಾಗಿ ಕಂಪ್ಯೂಟೇಶನಲ್ ಥಿಂಕಿಂಗ್ ಮತ್ತು ಮೈಂಡ್ ಮ್ಯಾಪಿಂಗ್ ಅನ್ನು ಕಲಿಸುವ ಉದ್ದೇಶವಿದೆ. ಶಾಲಾ ಮಕ್ಕಳಿಗಾಗಿ ಬಹು-ಭಾಷಾ ಆನ್‌ಲೈನ್ ಕೋಡಿಂಗ್ ಪ್ಲಾಟ್‌ಫಾರ್ಮ್‌ನಲ್ಲಿ ಟರ್ಟಲ್ ಗ್ರಾಫಿಕ್ಸ್, ಬೇಸಿಕ್ ಕೋಡಿಂಗ್ ಮತ್ತು ಗ್ರಾಫಿಕ್ಸ್ ವಿಷಯಗಳನ್ನು ಕಲಿಸಲಾಗುತ್ತದೆ' ಎಂದು ತಿಳಿಸಿದರು.

'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಇದ್ದರು.

ನೇರಳೆ ಮಾರ್ಗದಲ್ಲಿ ಸಿಗ್ನಲ್ ಸಮಸ್ಯೆ: ರೈಲುಗಳ ವಿಳಂಬ ಸಂಚಾರ

ಪರದಾಡಿದ 'ಮೆಟ್ರೊ' ಪ್ರಯಾಣಿಕರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮ ಮೆಟ್ರೊ'ದ ನೇರಳೆ ಮಾರ್ಗದಲ್ಲಿ ಎಲೆಕ್ಟ್ರಿಕ್ ಸಿಗ್ನಲ್ ಸಮಸ್ಯೆಯಿಂದ ಮಂಗಳವಾರ ಅರ್ಧ ದಿನ ಪ್ರಯಾಣಿಕರು ಪರದಾಡಿದರು. ರೈಲುಗಳ ವಿಳಂಬ ಸಂಚಾರ ಹಾಗೂ ಕೆಲವು ರೈಲುಗಳ ರದ್ದತಿಯಿಂದ ಪ್ರಯಾಣಿಕರು ಸಮಸ್ಯೆ ಎದುರಿಸಿದರು.

ಕೆಂಗೇರಿ–ಬೈಯ್ಯಪ್ಪನಹಳ್ಳಿ, ಬೈಯ್ಯಪನಹಳ್ಳಿ–ಕೆಂಗೇರಿ ನಡುವೆ ನೇರಳೆ ಮಾರ್ಗವಿದೆ. ಬೆಳಿಗ್ಗೆ 7.34ರ ಸುಮಾರಿಗೆ ಬೈಯಪ್ಪನಹಳ್ಳಿಯ ಸಿಗ್ನಲ್‌ನಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡು, ರೈಲುಗಳ ಸಂಚಾರದಲ್ಲಿ ವ್ಯತ್ಯಯ ಉಂಟಾಯಿತು.

ದಿಢೀರ್ ಕಾಣಿಸಿಕೊಂಡ ತಾಂತ್ರಿಕ ದೋಷದಿಂದ ಮೆಟ್ರೊ ಚಾಲಕರಿಗೂ ನೇರಳೆ ಮಾರ್ಗದಲ್ಲಿ ತೆರಳುವುದಕ್ಕೆ ಸೂಚನೆ ಸಿಗಲಿಲ್ಲ. ಕೊಂಚ ಗಲಿಬಿಲಿ ಉಂಟಾಯಿತು. 'ಕೆಲವೇ ಕ್ಷಣಗಳಲ್ಲಿ ಸಿಗ್ನಲ್ ಮರಳಿ ಪಡೆಯಲಾಗುವುದು' ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಟ್ವೀಟ್ ಮಾಡಿದ್ದರೂ ಅದು ಸಾಧ್ಯವಾಗಲಿಲ್ಲ. ಬೆಳಿಗ್ಗೆ ಕಚೇರಿಗೆ ತೆರಳುವವರು, ಕಾಲೇಜಿಗೆ ತೆರಳುವ ವಿದ್ಯಾರ್ಥಿಗಳು ಸಂಕಷ್ಟಕ್ಕೆ ಸಿಲುಕಿದರು.

ಕೆಂಗೇರಿ, ವಿಜಯನಗರ, ದೀಪಾಂಜಲಿ ನಗರ, ಮಾಗಡಿ ರಸ್ತೆ, ಸಂಗೊಳ್ಳಿ ರಾಯಣ್ಣ ನಿಲ್ದಾಣ, ಮೈಸೂರು ರೋಡ್, ಟ್ರಿನಿಟಿ, ಎಂ.ಜಿ. ರಸ್ತೆ, ಇಂದಿರಾ ನಗರದ ಮೆಟ್ರೊ ನಿಲ್ದಾಣಗಳಲ್ಲೂ ದಟ್ಟಣೆ ಕಂಡುಬಂದಿತ್ತು. ಬೆಳಿಗ್ಗೆ 10 ಗಂಟೆ ವೇಳೆಗೆ ಮೆಜೆಸ್ಟಿಕ್ ನಿಲ್ದಾಣದಲ್ಲಿ ಸಾವಿರಾರು ಪ್ರಯಾಣಿಕರು ಸೇರಿದ್ದರು.

ಮ್ಯಾನುವಲ್ ವ್ಯವಸ್ಥೆಯ ಮೂಲಕವೇ ಮಧ್ಯಾಹ್ನದವರೆಗೆ ರೈಲುಗಳು ಸಂಚಾರ ನಡೆಸಿದವು. ಇದರಿಂದ ನಿಗದಿತ ಸಮಯಕ್ಕಿಂತ ತಡವಾಗಿ ನಿಲ್ದಾಣಕ್ಕೆ ಬರುತ್ತಿದ್ದ ಮೆಟ್ರೊ ರೈಲು ಏರಲು ನೂಕುನುಗ್ಗಲು ಉಂಟಾಗುತ್ತಿತ್ತು.

ಹಸಿರು ಮಾರ್ಗದಿಂದ ಬಂದ ಕೆಲವರು ಮೆಜೆಸ್ಟಿಕ್‌ನಲ್ಲಿ ಇಳಿದು ಬಿಎಂಟಿಸಿ ಬಸ್‌ನಲ್ಲಿ ತಮ್ಮ ಕೆಲಸದ ಸ್ಥಳಕ್ಕೆ ತೆರಳಿದರು.

'ಮಂಗಳವಾರ ಮಧ್ಯಾಹ್ನ 12.08ಕ್ಕೆ ಯಾಂತ್ರಿಕ ಸಿಗ್ನಲ್ ಕಾರ್ಯಾಚರಣೆ ಮತ್ತೆ ಆರಂಭವಾಯಿತು. ಅದಾದ ಮೇಲೆ ನೇರಳೆ ಮಾರ್ಗದಲ್ಲಿ ಮೆಟ್ರೊ ಸಂಚಾರವು ಸಹಜ ಸ್ಥಿತಿಗೆ ಮರಳಿತು. ಸಿಗ್ನಲ್ ಸಮಸ್ಯೆಗೆ ಕಾರಣ ಪತ್ತೆ ಮಾಡಲಾಗುತ್ತಿದೆ' ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

'ಬೆಳಿಗ್ಗೆ 11ರ ತನಕ ದಟ್ಟಣೆ ಅವಧಿ ಆಗಿರುತ್ತದೆ. ಮೆಟ್ರೊ ಸೇವೆ ಸ್ಥಗಿತಗೊಳಿಸಬಾರದು ಎಂಬ ಕಾರಣಕ್ಕೆ ಮ್ಯಾನುವಲ್ ಸಿಗ್ನಲ್ ಮೂಲಕವೇ ರೈಲುಗಳು ಸಂಚರಿಸಿದವು. ಸಿಗ್ನಲ್ ದುರಸ್ತಿಗಾಗಿ ರೈಲು ಸಂಚಾರವನ್ನು ಸ್ಥಗಿತಗೊಳಿಸಬೇಕಿತ್ತು. ದಟ್ಟಣೆ ಅವಧಿಯ ಕಾರಣಕ್ಕೆ ಮ್ಯಾನುವಲ್ ವ್ಯವಸ್ಥೆಯ ಮೂಲಕವೇ ರೈಲು ಸಂಚರಿಸಿದವು. ನಂತರ ರೈಲು ಸಂಚಾರ ಸ್ಥಗಿತಗೊಳಿಸಿ ಯಾಂತ್ರಿಕ ಸಿಗ್ನಲ್ ವ್ಯವಸ್ಥೆಯನ್ನು ಆರಂಭಿಸಲಾಯಿತು' ಎಂದು ಮೂಲಗಳು ಹೇಳಿವೆ.



ಕೆಂಪೇಗೌಡ ಮೆಟ್ರೊ ನಿಲ್ದಾಣದಲ್ಲಿ ಮಂಗಳವಾರ ಕಂಡು ಬಂದ ಪ್ರಯಾಣಿಕರ ದಟ್ಟಣೆ

₹ 30 ಲಕ್ಷ ಮೌಲ್ಯದ ಡ್ರಗ್ಸ್: ನೈಜೀರಿಯಾ ಪ್ರಜೆಗಳ ಬಂಧನ

ಬೆಂಗಳೂರು: ಕೆಂಪೇಗೌಡನಗರ ಠಾಣೆ ವ್ಯಾಪ್ತಿಯಲ್ಲಿ ಡ್ರಗ್ಸ್ ಮಾರುತ್ತಿದ್ದ ನೈಜೀರಿಯಾದ ಇಬ್ಬರು ಪ್ರಜೆಗಳನ್ನು ಪೊಲೀಸರು ಬಂಧಿಸಿದ್ದಾರೆ.

'ಚಾಮರಾಜಪೇಟೆಯ ಆದರ್ಶ್ ಕಾಲೇಜು ಬಳಿ ಸುತ್ತಾಡುತ್ತಿದ್ದ ಇಬ್ಬರು ಆರೋಪಿಗಳು, ಕೆಲ ಕಂಪನಿಗಳ ಉದ್ಯೋಗಿಗಳು ಹಾಗೂ ಕೆಲ ವಿದ್ಯಾರ್ಥಿಗಳಿಗೆ ಡ್ರಗ್ಸ್ ಮಾರುತ್ತಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಕಾರ್ಯಾಚರಣೆ ನಡೆಸಿ, ಇಬ್ಬರೂ ಆರೋಪಿಗಳನ್ನು ಬಂಧಿಸಲಾಯಿತು' ಎಂದು ಪೊಲೀಸರು ಹೇಳಿದರು.

'ಆರೋಪಿಗಳನ್ನು ವಿಚಾರಣೆ ನಡೆಸಿದಾಗ, ನೈಜೀರಿಯಾ ಪ್ರಜೆಗಳು ಎಂಬುದು ತಿಳಿಯಿತು. ಉದ್ಯೋಗ ವೀಸಾದಡಿ ನಗರಕ್ಕೆ ಬಂದಿದ್ದ ಆರೋಪಿಗಳು, ಡ್ರಗ್ಸ್ ಮಾರಾಟವನ್ನೇ ವೃತ್ತಿ ಮಾಡಿಕೊಂಡಿದ್ದರು. ಇವರಿಂದ ₹ 30 ಲಕ್ಷ ಮೌಲ್ಯದ 260 ಗ್ರಾಂ ಕೊಕೇನ್ ಹಾಗೂ 30 ಗ್ರಾಂ ತೂಕದ ಎಕ್ಸ್‌ಟೆಸ್ಸಿ ಮಾತ್ರೆಗಳನ್ನು ಜಪ್ತಿ ಮಾಡಲಾಗಿದೆ.'

'ಬಂಧಿತ ಆರೋಪಿಗಳು, ತಮ್ಮದೇ ದೇಶದ ಪೆಡ್ಲರ್‌ಗಳಿಂದ ಡ್ರಗ್ಸ್ ಖರೀದಿಸಿ ತರುತ್ತಿದ್ದರು. ತಮ್ಮ ಬಾಡಿಗೆ ಮನೆಯಲ್ಲಿ ಡ್ರಗ್ಸ್ ಸಂಗ್ರಹಿಸಿಟ್ಟುಕೊಂಡು, ಪರಿಚಯಸ್ಥ ಗ್ರಾಹಕರಿಗೆ ಮಾರುತ್ತಿದ್ದರು' ಎಂದು ತಿಳಿಸಿದರು.

ಸುಲಿಗೆ ನಾಟಕ: ಸೆರೆ

ಬೆಂಗಳೂರು: 'ದ್ವಿಚಕ್ರ ವಾಹನ ಅಡ್ಡಗಟ್ಟಿದ್ದ ಪೊಲೀಸರು, ಗಾಂಜಾ ತಪಾಸಣೆ ನೆಪದಲ್ಲಿ ಸುಲಿಗೆ ಮಾಡಿದ್ದಾರೆ' ಎಂದು ನಾಟಕವಾಡಿ ₹ 5.25 ಲಕ್ಷ ದೋಚಿದ್ದ ಅಣ್ಣ–ತಮ್ಮನನ್ನು ಬ್ಯಾಟರಾಯನಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಶಹಬಾದ್ ಹಾಗೂ ಈತನ ಅಣ್ಣ ಅಜೀಜ್ ಬಂಧಿತರು. ಹೋಲ್‌ಸೇಲ್ ಮೊಬೈಲ್ ಮಾರಾಟ ಅಂಗಡಿ ಮಾಲೀಕ ಅಬೂಬಕ್ಕರ್ ನೀಡಿದ್ದ ದೂರು ಆಧರಿಸಿ ಇಬ್ಬರನ್ನೂ ಬಂಧಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಆರೋಪಿ ಶಹಬಾದ್, ಅಬೂಬಕ್ಕರ್ ಮಳಿಗೆಯಲ್ಲಿ ಕೆಲಸ ಮಾಡುತ್ತಿದ್ದ. ಚಿಲ್ಲರೆ ಅಂಗಡಿಗಳಿಗೆ ಮೊಬೈಲ್ ಮಾರಿ ಹಣ ತಂದು ಕೊಡುವ ಜವಾಬ್ದಾರಿ ಶಹಬಾದ್ ಮೇಲಿತ್ತು. ಕೆ.ಆರ್.ಪುರದಲ್ಲಿರುವ ಮಳಿಗೆಗಳಿಗೆ ಮೊಬೈಲ್ ನೀಡಿ, ಅದರಿಂದ ಬಂದ ₹ 5.25 ಲಕ್ಷ ಲಪಟಾಯಿಸಿದ್ದ' ಎಂದು ತಿಳಿಸಿವೆ.

ಸಂಚು ರೂಪಿಸಿ ಕೃತ್ಯ: 'ಅಕ್ರಮವಾಗಿ ಹಣ ಸಂಪಾದಿಸಲು ಆರೋಪಿ ಶಹಬಾದ್, ಅಣ್ಣ ಅಜೀಜ್ ಜೊತೆ ಸೇರಿ ಸಂಚು ರೂಪಿಸಿದ್ದ' ಎಂದು ಹೇಳಿವೆ.

'ಜೂನ್ 28ರಂದು ₹ 5.25 ಲಕ್ಷ ಸಮೇತ ದ್ವಿಚಕ್ರ ವಾಹನದಲ್ಲಿ ಹೊರಟಿದ್ದ ಆರೋಪಿ ಶಹಬಾದ್, ಮಾರ್ಗಮಧ್ಯೆಯೇ ಹಣವನ್ನು ಅಜೀಜ್‌ಗೆ ಕೊಟ್ಟು ಕಳುಹಿಸಿದ್ದ. ನಂತರ, 'ದ್ವಿಚಕ್ರ ವಾಹನವನ್ನು ಅಡ್ಡಗಟ್ಟಿದ್ದ ಪೊಲೀಸರು, ಗಾಂಜಾ ತಪಾಸಣೆ ನಡೆಸಿದರು. ಇದೇ ವೇಳೆ ನನ್ನ ಬಳಿ ಇದ್ದ ಹಣ ಕಿತ್ತುಕೊಂಡು ಹೋದರು' ಎಂದು ಮಾಲೀಕರಿಗೆ ಸುಳ್ಳು ಹೇಳಿದ್ದ. ಮಾಲೀಕರು, ಪೊಲೀಸರ ಹೆಸರಿನಲ್ಲಿ ಸುಲಿಗೆ ಮಾಡಿದ್ದಾರೆಂದು ಠಾಣೆಗೆ ದೂರು ನೀಡಿದ್ದರು' ಎಂದಿವೆ.

'ತನಿಖೆ ಕೈಗೊಂಡಾಗ ಯಾವುದೇ ಸುಲಿಗೆ ನಡೆದಿಲ್ಲವೆಂಬುದು ಗೊತ್ತಾಗಿತ್ತು. ಶಹಬಾದ್‌ನನ್ನು ವಶಕ್ಕೆ ಪಡೆದು ವಿಚಾರಿಸಿದಾಗ, ತಪ್ಪೊಪ್ಪಿಕೊಂಡ' ಎಂದೂ ಮೂಲಗಳು ಹೇಳಿವೆ.

₹48 ಲಕ್ಷ ಮೌಲ್ಯದ ಚಿನ್ನ ವಶ

ದೇವನಹಳ್ಳಿ: ವಿದೇಶಗಳಿಂದ ಬೆಂಗಳೂರಿಗೆ ಅಕ್ರಮವಾಗಿ ಚಿನ್ನ ಸಾಗಿಸುತ್ತಿದ್ದ 2 ಪ್ರತ್ಯೇಕ ಪ್ರಕರಣಗಳನ್ನು ಭೇದಿಸಿರುವ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಕಸ್ಟಮ್ಸ್ ಅಧಿಕಾರಿಗಳು ನಾಲ್ವರನ್ನು ಬಂಧಿಸಿದ್ದಾರೆ. ಬಂಧಿತರಿಂದ ಸುಮಾರು ₹48 ಲಕ್ಷ ಮೌಲ್ಯದ 783 ಗ್ರಾಂ ಚಿನ್ನ ವಶಕ್ಕೆ ಪಡೆಯಲಾಗಿದೆ. ಬ್ಯಾಂಕಾಕ್‌ನಿಂದ ಬಂದಿದ್ದ ಮೂವರು ಆರೋಪಿಗಳು ಚಿನ್ನದ ಸರಗಳನ್ನು ಮುಚ್ಚಿಟ್ಟುಕೊಂಡಿದ್ದರು. ಅವರ ಬಳಿಯಿದ್ದ ₹31.47 ಲಕ್ಷ ಮೌಲ್ಯದ 516 ಗ್ರಾಂನಷ್ಟು ಚಿನ್ನ ವಶಕ್ಕೆ ಪಡೆಯಲಾಗಿದೆ. ಮತ್ತೊಂದು ಪ್ರಕರಣದಲ್ಲಿ ಟ್ರಾಲಿಬ್ಯಾಗ್‌ನಲ್ಲಿ ದುಬೈನಿಂದ ರೇಡಿಯಂ ಲೇಪಿತ ಚಿನ್ನದ ಸರ, ತುಂಡು ತಂದಿದ್ದ ಪ್ರಯಾಣಿಕನನ್ನು ಬಂಧಿಸಿದ್ದು, ಆತನಿಂದ ₹16.39 ಲಕ್ಷ ಮೌಲ್ಯದ ಚಿನ್ನ ವಶಕ್ಕೆ ಪಡೆಯಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕೋಡಿಹಳ್ಳಿಯಲ್ಲಿ ನಡೆದಿದ್ದ ಆಕಾಂಕ್ಷಾ ಕೊಲೆ ಪ್ರಕರಣ

ಪ್ರೇಯಸಿ ಕೊಂದವನ ಬಂಧನ

ಪ್ರಜಾವಾಣಿ ವಾರ್ತೆ



ಆಕಾಂಕ್ಷಾ



ಅರ್ಪಿತ್

ಅಪರಾಧ ಸುದ್ದಿ

ಬೆಂಗಳೂರು: ಕೋಡಿಹಳ್ಳಿಯಲ್ಲಿರುವ ಅಪಾರ್ಟ್‌ಮೆಂಟ್ ಸಮುಚ್ಚಯವೊಂದರಲ್ಲಿ ನಡೆದಿದ್ದ ಆಕಾಂಕ್ಷಾ ಬಿದ್ಯಾಸರ್ (23) ಕೊಲೆ ಪ್ರಕರಣ ಭೇದಿಸಿರುವ ಜೀವನ್‌ಬಿಮಾನಗರ ಠಾಣೆ ಪೊಲೀಸರು, ಆರೋಪಿ ಅರ್ಪಿತ್ ಗುರಿಜಾಲ್‌ನನ್ನು ಅಸ್ಸಾಂನಲ್ಲಿ ಬಂಧಿಸಿ ನಗರಕ್ಕೆ ಕರೆತಂದಿದ್ದಾರೆ.

'ಹೈದರಾಬಾದ್‌ನ ಆಕಾಂಕ್ಷಾ, ನಗರದ ಮಾರುಕಟ್ಟೆ ವಿಸ್ತರಣೆ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಕೋಡಿಹಳ್ಳಿಯಲ್ಲಿರುವ ಅಪಾರ್ಟ್‌ಮೆಂಟ್ ಸಮುಚ್ಚಯವೊಂದರ ಫ್ಲ್ಯಾಟ್‌ನಲ್ಲಿ ಸ್ನೇಹಿತೆ ಜೊತೆ ನೆಲೆಸಿದ್ದರು. ಆಕಾಂಕ್ಷಾ ಅವರನ್ನು ಜೂನ್ 5ರಂದು ಉಸಿರುಗಟ್ಟಿಸಿ ಕೊಂದಿದ್ದ ಅರ್ಪಿತ್, ತಲೆಮರೆಸಿಕೊಂಡು ಸುತ್ತಾಡುತ್ತಿದ್ದ. ಹಲವು ದಿನಗಳ ತನಿಖೆ ನಂತರ ಈತನನ್ನು ಬಂಧಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ' ಎಂದು ಪೂರ್ವ ವಿಭಾಗದ ಡಿಸಿಪಿ ಭೀಮಾಶಂಕರ್ ಗುಳೇದ್ ತಿಳಿಸಿದರು.

'ದೆಹಲಿಯ ಅರ್ಪಿತ್ ಹಾಗೂ ಆಕಾಂಕ್ಷಾ ಒಂದೇ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಅಲ್ಲಿಯೇ ಅವರಿಬ್ಬರಿಗೂ ಪರಿಚಯವಾಗಿ ಪ್ರೀತಿಸಲಾರಂಭಿಸಿದ್ದರು. ಕೆಲದಿನ ಸಹಜೀವನ ಸಹ ನಡೆಸಿದ್ದರು. ಕೆಲ ತಿಂಗಳ ಹಿಂದೆಯಷ್ಟೇ ಅರ್ಪಿತ್, ನಗರ ತೊರೆದು ಹೈದಾರಾಬಾದ್‌ನಲ್ಲಿದ್ದ ಕಂಪನಿಯಲ್ಲಿ ಕೆಲಸಕ್ಕೆ ಸೇರಿದ್ದರು. ಒಂಟಿಯಾದ ಆಕಾಂಕ್ಷಾ, ಸ್ನೇಹಿತೆ ಜೊತೆ ಫ್ಲ್ಯಾಟ್‌ನಲ್ಲಿ ವಾಸವಿದ್ದರು' ಎಂದು ಹೇಳಿದರು.

ಕೊಲೆಗೆ ಹಲವು ದಿನಗಳ ಸಂಚು: 'ಅರ್ಪಿತ್ ಹೈದರಾಬಾದ್‌ಗೆ ಹೋದ ಬಳಿಕ ಆಕಾಂಕ್ಷಾ, ಮತ್ತೊಬ್ಬ ಯುವಕನನ್ನು ಪ್ರೀತಿಸಲಾರಂಭಿಸಿದ್ದರು. ಈ ವಿಷಯ ತಿಳಿಯುತ್ತಿದ್ದಂತೆ ಆಕಾಂಕ್ಷಾಗೆ ಆರೋಪಿ ತಾಕೀತು ಮಾಡಿದ್ದ. ಮದುವೆಯಾಗೋಣವೆಂದಿದ್ದ. ಅದಕ್ಕೆ ತಲೆಕೆಡಿಸಿಕೊಳ್ಳದ ಆಕಾಂಕ್ಷಾ, ತಮ್ಮ ಜೀವನ ತಮ್ಮ ಇಷ್ಟವೆಂದು ಆರೋಪಿಗೆ ಹೇಳಿದ್ದರು' ಎಂದು ಪೊಲೀಸರು ತಿಳಿಸಿದರು.

'ತನ್ನನ್ನು ಪ್ರೀತಿಸುತ್ತಿದ್ದ ಆಕಾಂಕ್ಷಾ, ಇದೀಗ ಮತ್ತೊಬ್ಬ ಯುವಕನ ಬೆನ್ನು ಬಿದ್ದಿದ್ದಾಳೆಂದು ಆರೋಪಿ ಕೋಪಗೊಂಡಿದ್ದ. ಆಕಾಂಕ್ಷಾ ಅವರನ್ನು ಕೊಲೆ ಮಾಡಲು ಹಲವು ದಿನದಳಿಂದ ಸಂಚು ರೂಪಿಸುತ್ತಿದ್ದ ಆರೋಪಿ, ಜೂನ್ 5ರಂದು ಹೈದರಾಬಾದ್‌ನಿಂದ ಬೆಂಗಳೂರಿಗೆ ಬಂದು ಹೋಟೆಲ್‌ನಲ್ಲಿ ಉಳಿದುಕೊಂಡಿದ್ದ' ಎಂದರು.

ದಿಂಬಿನಿಂದ ಉಸಿರುಗಟ್ಟಿಸಿ ಹತ್ಯೆ: 'ಆಕಾಂಕ್ಷಾ ಅವರಿಗೆ ಕರೆ ಮಾಡಿ ತನ್ನ ಬಳಿ ಕರೆಸಿಕೊಂಡಿದ್ದ ಆರೋಪಿ, ಕೋಡಿಹಳ್ಳಿಯಲ್ಲಿರುವ ಅಪಾರ್ಟ್‌ಮೆಂಟ್ ಸಮುಚ್ಚಯವೊಂದರ ಫ್ಲ್ಯಾಟ್‌ಗೆ ಕರೆದೊಯ್ದಿದ್ದ. ಸ್ನೇಹಿತೆ ಕೆಲಸಕ್ಕೆ ಹೋಗಿದ್ದರು. ಜಗಳ ತೆಗೆದಿದ್ದ ಆರೋಪಿ, ಆಕಾಂಕ್ಷಾ ಮೇಲೆ ಹಲ್ಲೆ ಮಾಡಿದ್ದ. ಮುಖಕ್ಕೆ ದಿಂಬಿನಿಂದ ಅದುಮಿ ಉಸಿರುಗಟ್ಟಿಸಿ ಕೊಂದಿದ್ದ' ಎಂದು ಪೊಲೀಸರು ಹೇಳಿದರು.

'ಪೊಲೀಸರಿಗೆ ಸುಳಿವು ಸಿಗಬಾರದೆಂದು ಮೊಬೈಲ್, ಪರ್ಸ್, ಗುರುತಿನ ಚೀಟಿ ಹಾಗೂ ಇತರೆ ಎಲ್ಲ ದಾಖಲೆಗಳನ್ನು ಆರೋಪಿ ಫ್ಲ್ಯಾಟ್‌ನಲ್ಲಿ ಬಿಟ್ಟಿದ್ದ. ನಂತರ, ವಿಮಾನದಲ್ಲಿ ದೆಹಲಿಗೆ ಹೋಗಿದ್ದ. ಪೊಲೀಸರ ತಂಡ ದೆಹಲಿಗೆ ಹೋಗುತ್ತಿದ್ದಂತೆ, ಆರೋಪಿ ಭೂಪಾಲ್‌ಗೆ ತೆರಳಿದ್ದ. ಅಲ್ಲಿಂದ ಅಸ್ಸಾಂಗೆ ಹೋಗಿದ್ದ. ಈ ಬಗ್ಗೆ ಸುಳಿವು ಸಿಕ್ಕಿರಲಿಲ್ಲ' ಎಂದು ತಿಳಿಸಿದರು.

ಸ್ನೇಹಿತನಿಗೆ ಹಣ ಕೇಳಿ ಸಿಕ್ಕಿಬಿದ್ದ

'ಅರ್ಪಿತ್ ಕೆಲಸ ಮಾಡುತ್ತಿದ್ದ ಸ್ಥಳ, ದೆಹಲಿಯಲ್ಲಿರುವ ತಂದೆ–ತಾಯಿ, ಸಂಬಂಧಿಕರು, ಸ್ನೇಹಿತರನ್ನು ವಿಚಾರಣೆ ನಡೆಸಲಾಗಿತ್ತು. ಇದರ ನಡುವೆಯೇ, ಆರೋಪಿಯ ಎಲ್ಲ ಬ್ಯಾಂಕ್ ಖಾತೆಗಳನ್ನು ವಹಿವಾಟು ನಡೆಸದಂತೆ ನಿಷ್ಕ್ರಿಯಗೊಳಿಸಲಾಗಿತ್ತು' ಎಂದು ಪೊಲೀಸರು ಹೇಳಿದರು.

'ಆರೋಪಿಗೆ ಹಣದ ಅವಶ್ಯಕತೆ ಇತ್ತು. ಆದರೆ, ಖಾತೆಯಿಂದ ಹಣ ಡ್ರಾ ಆಗಿರಲಿಲ್ಲ. ಹೀಗಾಗಿ, ಕೂಲಿ ಕೆಲಸ ಮಾಡಲಾರಂಭಿಸಿದ್ದ. ಇತ್ತೀಚೆಗೆ ಸ್ನೇಹಿತನಿಗೆ ಕರೆ ಮಾಡಿದ್ದ ಆರೋಪಿ, ಹಣ ಕಳುಹಿಸುವಂತೆ ಕೋರಿದ್ದ. ಇದೇ ಸುಳಿವು ಆಧರಿಸಿ ಆರೋಪಿಯ ವಿಳಾಸವನ್ನು ಪತ್ತೆ ಮಾಡಿ ಬಂಧಿಸಲಾಗಿದೆ' ಎಂದು ತಿಳಿಸಿದರು.

ವಾಟ್ಸ್‌ಆ್ಯಪ್ ಸ್ಟೇಟಸ್‌ನಲ್ಲಿ ಮರಣಪತ್ರ: ಆತ್ಮಹತ್ಯೆ

ಬೆಂಗಳೂರು: ಕೆಂಗೇರಿ ಉಪನಗರದ ವಿಶ್ವೇಶ್ವರಯ್ಯ ಬಡಾವಣೆ ಮನೆಯೊಂದರಲ್ಲಿ ಪವಿತ್ರಾ ಆರ್. (35) ಅನುಮಾನಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದು, ಆತ್ಮಹತ್ಯೆ ಶಂಕೆ ವ್ಯಕ್ತವಾಗಿದೆ.

'ಫೈನಾನ್ಸ್ ಕಂಪನಿಯೊಂದರಲ್ಲಿ ವ್ಯವಸ್ಥಾಪಕರಾಗಿ ಕೆಲಸ ಮಾಡುತ್ತಿದ್ದ ಪವಿತ್ರಾ ಮೃತದೇಹ ನೇಣು ಬಿಗಿದ ಸ್ಥಿತಿಯಲ್ಲಿ ಜುಲೈ 2ರಂದು ಪತ್ತೆಯಾಗಿದೆ. ಸಾವಿಗೂ ಮುನ್ನ ಪವಿತ್ರಾ, ತಮ್ಮ ವಾಟ್ಸ್‌ಆ್ಯಪ್ ಸ್ಟೇಟಸ್‌ನಲ್ಲಿ ಮರಣಪತ್ರ ಪ್ರಕಟಿಸಿದ್ದಾರೆ. ಅದನ್ನು ಆಧರಿಸಿ ತಾಯಿ ದೂರು ನೀಡಿದ್ದಾರೆ. ಪತಿ ಚೇತನ್ ಗೌಡ ಹಾಗೂ ಈತನ ಪ್ರೇಯಸಿ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಕೆಂಗೇರಿ ಪೊಲೀಸರು ಹೇಳಿದರು.

'ಪವಿತ್ರಾ ಅವರು 2006ರಲ್ಲಿ ನರಸಿಂಹಮೂರ್ತಿ ಎಂಬುವವರನ್ನು ಮದುವೆಯಾಗಿದ್ದರು. ದಂಪತಿಗೆ ಹೆಣ್ಣು ಮಗಳಿದ್ದಾಳೆ. ಕೆಲ ವರ್ಷ ಚೆನ್ನಾಗಿದ್ದ ದಂಪತಿ ನಡುವೆ ವೈಮನಸ್ಸು ಬೆಳೆದಿತ್ತು. ಪವಿತ್ರಾ ಅವರು ವಿಚ್ಛೇದನ ಕೋರಿ ನ್ಯಾಯಾಲಯದ ಮೆಟ್ಟಿಲೇರಿದ್ದರು. 2019ರಲ್ಲಿ ವಿಚ್ಛೇದನ ಸಿಕ್ಕಿತ್ತು' ಎಂದು ತಿಳಿಸಿದರು.



ಪವಿತ್ರಾ

'ಚೇತನ್ ಗೌಡ ಮಾಲೀಕತ್ವದ ಫೈನಾನ್ಸ್ ಕಂಪನಿಯಲ್ಲಿಯೇ ಪವಿತ್ರಾ ಕೆಲಸ ಮಾಡುತ್ತಿದ್ದರು. ಪರಸ್ಪರ ಒಪ್ಪಿ ಮದುವೆಯಾಗಿದ್ದರು. ಆರೋಪಿ ಚೇತನ್, ಬೇರೊಬ್ಬ ಮಹಿಳೆ ಜೊತೆ ಸಲುಗೆ ಇಟ್ಟುಕೊಂಡಿದ್ದರೆಂದು ಹೇಳಲಾಗಿದೆ. ಈ ವಿಷಯ ಗೊತ್ತಾಗಿ ಪವಿತ್ರಾ ಮತ್ತಷ್ಟು ನೊಂದಿದ್ದರು. ಮಹಿಳೆ ಸಹವಾಸ ಬಿಡಲು ತಾಕೀತು ಮಾಡಿದ್ದರು. ಒಪ್ಪದ ಚೇತನ್, ಪವಿತ್ರಾಗೆ ವಿನಾಕಾರಣ ಕಿರುಕುಳ ನೀಡಲಾರಂಭಿಸಿದ್ದರು. ನೊಂದ ಪವಿತ್ರಾ, 'ನನ್ನ ಸಾವಿಗೆ ಚೇತನ್ ಗೌಡ ಹಾಗೂ ಪತಿ ಜೊತೆ ಅಕ್ರಮ ಸಂಬಂಧ ಹೊಂದಿರುವ ಮಹಿಳೆ ಕಾರಣ' ಎಂದು ವಾಟ್ಸ್‌ಆ್ಯಪ್ ಸ್ಟೇಟಸ್‌ನಲ್ಲಿ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ದೂರಿನಲ್ಲಿದೆ' ಎಂದು ಹೇಳಿದರು.

'ಅಪರಾಧ ಸಂಚು, ಆತ್ಮಹತ್ಯೆಗೆ ಪ್ರಚೋದನೆ ನೀಡಿರುವ ಆರೋಪದಡಿ ಚೇತನ್ ಗೌಡ ಹಾಗೂ ಮಹಿಳೆ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಪವಿತ್ರ ಅವರ ದಿನಚರಿ ಪುಸ್ತಕ ಹಾಗೂ ಎರಡು ಮೊಬೈಲ್‌ಗಳನ್ನು ಜಪ್ತಿ ಮಾಡಿ, ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ' ಎಂದು ತಿಳಿಸಿದರು.

ಯುವತಿ ಜೊತೆ ಮೊಮ್ಮಗ ಪರಾರಿ: ಅಜ್ಜಿ ಕೊಲೆಗೆ ಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಯನಗರ 26ನೇ ಅಡ್ಡರಸ್ತೆಯಲ್ಲಿ ಬೀದಿಬದಿ ವ್ಯಾಪಾರ ಮಾಡುತ್ತಿದ್ದ ಚಂದ್ರಮ್ಮ (60) ಅವರ ತಲೆಗೆ ಮಾರಕಾಸ್ತ್ರದಿಂದ ಹೊಡೆದು ಕೊಲೆಗೆ ಯತ್ನಿಸಿದ್ದ ಇಬ್ಬರು ಆರೋಪಿಗಳನ್ನು ತಿಲಕ್‌ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಮೈಕೊಲೇಔಟ್ ನಿವಾಸಿ ವಸಂತ್ ಹಾಗೂ ಕಾರ್ತಿಕ್ ಬಂಧಿತರು. ಜುಲೈ 1ರಂದು ಇವರಿಬ್ಬರು ಹೆಲ್ಮೆಟ್ ಧರಿಸಿ ಬೈಕ್‌ನಲ್ಲಿ ಬಂದು ಚಂದ್ರಮ್ಮ ತಲೆಗೆ ಹೊಡೆದು ಪರಾರಿಯಾಗಿದ್ದರು. ತೀವ್ರ ಗಾಯಗೊಂಡಿದ್ದ ಚಂದ್ರಮ್ಮ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಅವರು ನೀಡಿದ್ದ ಹೇಳಿಕೆ ಆಧರಿಸಿ ಕೊಲೆ ಯತ್ನ ಪ್ರಕರಣ ದಾಖಲಿಸಿಕೊಂಡು ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ತಂಗಿಯ ಕರೆದೊಯ್ದಿದ್ದಕ್ಕೆ ಕೋಪ: 'ಆರೋಪಿ ವಸಂತ್‌ನ ತಂಗಿ ಹಾಗೂ ವೃದ್ಧೆ ಚಂದ್ರಮ್ಮ ಅವರ ಮೊಮ್ಮಗ ಲಕ್ಷ್ಮಣಕುಮಾರ್ ಪರಸ್ಪರ ಪ್ರೀತಿಸುತ್ತಿದ್ದರು. ಅವರಿಬ್ಬರು ಇತ್ತೀಚೆಗೆ ಮನೆ ತೊರೆದು ನಾಪತ್ತೆಯಾಗಿದ್ದಾರೆ. ಈ ಬಗ್ಗೆ ಮೈಕೊ ಲೇಔಟ್ ಠಾಣೆಯಲ್ಲಿ ಪ್ರಕರಣ ಸಹ ದಾಖಲಾಗಿದೆ' ಎಂದು ಪೊಲೀಸರು ತಿಳಿಸಿದರು.

'ಪ್ರೀತಿ ನಾಟಕವಾಡಿದ್ದ ಲಕ್ಷ್ಮಣ ಕುಮಾರ್, ತನ್ನ ತಂಗಿಯನ್ನು ಪುಸಲಾಯಿಸಿ ಕರೆದೊಯ್ದಿದ್ದಕ್ಕೆ ವಸಂತ್ ಕೋಪಗೊಂಡಿದ್ದ. ಅವರಿಬ್ಬರು ಎಲ್ಲಿದ್ದಾರೆಂಬ ಮಾಹಿತಿ ಯಾರಿಗೂ ಗೊತ್ತಿರಲಿಲ್ಲ. ಈ ಬಗ್ಗೆ ಅಜ್ಜಿಯನ್ನು ವಿಚಾರಿಸಿದಾಗ, ತಮಗೆ ಗೊತ್ತಿಲ್ಲವೆಂದು ಹೇಳಿದ್ದರು.'

'ಮೊಮ್ಮಗ ಇರುವ ವಿಳಾಸ ಗೊತ್ತಿದ್ದರೂ ಮೌನವಾಗಿದ್ದರು. ಚಂದ್ರಮ್ಮ, ಬೀದಿಬದಿ ತರಕಾರಿ–ಸೊಪ್ಪು ವ್ಯಾಪಾರ ಮುಂದುವರಿಸಿದ್ದರು. ವಿಳಾಸ ಪತ್ತೆಗೆ ಸಹಾಯ ಮಾಡಲಿಲ್ಲವೆಂದು ಸಿಟ್ಟಾಗಿದ್ದ ವಸಂತ್, ಸ್ನೇಹಿತ ಕಾರ್ತಿಕ್ ಜೊತೆ ಸೇರಿ ಅಜ್ಜಿಯ ತಲೆಗೆ ಹೊಡೆದು ಕೊಲೆಗೆ ಯತ್ನಿಸಿದ್ದನೆಂಬುದು ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸರು ಹೇಳಿದರು.

'ಬೀದಿಬದಿ ವ್ಯಾಪಾರ ನಡೆಸುತ್ತಿದ್ದ ಕಾರಣಕ್ಕೆ ಚಂದ್ರಮ್ಮ ಮೇಲೆ ಹಲ್ಲೆ ನಡೆದಿರುವುದಾಗಿ ಸುದ್ದಿ ಹರಿದಾಡಿತ್ತು. ತನಿಖೆ ಕೈಗೊಂಡಾಗ, ಇದೊಂದು ಕೌಟುಂಬಿಕ ಜಗಳವೆಂಬುದು ಗೊತ್ತಾಗಿದೆ' ಎಂದು ತಿಳಿಸಿದರು.

ಅಖಿಲ ಭಾರತ ದಲಿತ ಕ್ರಿಯಾ ಸಮಿತಿ ನೇತೃತ್ವದಲ್ಲಿ ಪ್ರತಿಭಟನೆ

ಪಿಟಿಸಿಎಲ್ ಕಾಯ್ದೆಗೆ ತಿದ್ದುಪಡಿಗೆ ಪಟ್ಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಎಸ್‌ಸಿ, ಎಸ್‌ಟಿ ಉಪ ಯೋಜನೆ ಕಾಯ್ದೆ ಸೆಕ್ಷನ್ 7(ಡಿ) ರದ್ದು ಪಡಿಸುವುದು ಹಾಗೂ ಪಿಟಿಸಿಎಲ್ ಕಾಯ್ದೆ (ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಭೂಪರಭಾರೆ ನಿಷೇಧ ಕಾಯ್ದೆ)ಗೆ ತಿದ್ದುಪಡಿ ತಂದು ಪರಿಶಿಷ್ಟರ ಭೂಮಿ ರಕ್ಷಣೆ ಮಾಡುವಂತೆ ಆಗ್ರಹಿಸಿ, ಅಖಿಲ ಭಾರತ ದಲಿತ ಕ್ರಿಯಾ ಸಮಿತಿ ನೇತೃತ್ವದಲ್ಲಿ ಮಂಗಳವಾರ ಪ್ರತಿಭಟನೆ ನಡೆಯಿತು.

ಸೆಕ್ಷನ್ 7(ಡಿ) ಅಡಿಯಲ್ಲಿರುವ ವೆಚ್ಚದ ಅವಕಾಶವನ್ನು ದುರ್ಬಳಕೆ ಮಾಡಿಕೊಂಡು ಪರಿಶಿಷ್ಟರ ಕಲ್ಯಾಣಕ್ಕೆ ಮೀಸಲಿಡುವ ದೊಡ್ಡ ಮೊತ್ತವನ್ನು ಅನ್ಯಯೋಜನೆಗೆ ವರ್ಗಾವಣೆ ಮಾಡಲಾಗುತ್ತಿದೆ. ಇದರಿಂದ ಪರಿಶಿಷ್ಟ ಪರವಿರುವ ಯೋಜನೆಗಳಿಗೆ ಹಣದ ಕೊರತೆ ಎದುರಾಗುತ್ತಿದೆ. ಕಲ್ಯಾಣ ಕಾರ್ಯಕ್ರಮಗಳೂ ನಡೆಯುತ್ತಿಲ್ಲ ಎಂದು ದೂರಿದರು.

'ಪರಿಶಿಷ್ಟರಿಗೆ ಮೀಸಲಿಟ್ಟ ಹಣವು ಅವರ ಅಭ್ಯುದಯಕ್ಕೇ ಬಳಕೆ ಆಗಬೇಕು. ಈ ಹಣವನ್ನು ಬೇರೆಡೆಗೆ ವರ್ಗಾಯಿಸುವುದೇ ಆದರೆ ಎಸ್‌ಸಿ–ಎಸ್‌ಟಿ ಉಪ ಯೋಜನೆ ಕಾಯ್ದೆ ಆಶಯ ಮಣ್ಣು ಪಾಲಾಗುತ್ತದೆ. ಅಲಕ್ಷಿತ ಸಮುದಾಯವನ್ನು ಬಡತನ ರೇಖೆಯಿಂದ ಮೇಲಕ್ಕೆತ್ತಿ ಸಮಾಜದ ಮುಖ್ಯವಾಹಿನಿಗೆ ತರಬೇಕು ಎಂದು ಉದ್ದೇಶವೇ ಹಳ್ಳ ಹಿಡಿಯಲಿದೆ' ಎಂದು ಪ್ರತಿಭಟನಕಾರರು ದೂರಿದರು.

'ಕಾಯ್ದೆಯ ಸೆಕ್ಷನ್ 7(ಡಿ) ಅನ್ನು ತೆಗೆದರೆ ಪರಿಶಿಷ್ಟರ ಕಲ್ಯಾಣಕ್ಕೆ ಮೀಸಲಿಡುವ ಹಣವು ಸದ್ವಿನಿಯೋಗ ಆಗಲಿದೆ. ಈ ಸೆಕ್ಷನ್ ರದ್ದು ಪಡಿಸಿ ಕಾಯ್ದೆಗೆ ತಿದ್ದುಪಡಿ ತರಬೇಕು' ಎಂದು ಸಮಿತಿ ರಾಷ್ಟ್ರೀಯ ಅಧ್ಯಕ್ಷ ಡಾ.ಚಿ. ನಾ.ರಾಮು ಹೇಳಿದರು.

ಪಿಟಿಸಿಎಲ್ ಕಾಯ್ದೆಯಲ್ಲಿರುವ ಲೋಪದಿಂದ ಪರಿಶಿಷ್ಟರು ಭೂಮಿ ಕಳೆದುಕೊಳ್ಳುತ್ತಿದ್ದಾರೆ. ಈ ಕಾಯ್ದೆಗೆ ಶೀಘ್ರವೇ ತಿದ್ದುಪಡಿ ತಂದು ದಲಿತರ ಭೂಮಿಯನ್ನು ರಕ್ಷಿಸಬೇಕು. ಅನೇಕ ಪ್ರಕರಣಗಳಲ್ಲಿ ನ್ಯಾಯಾಲಯಗಳಿಗೆ ಮೇಲ್ಮನವಿ ಸಲ್ಲಿಸಿದಾಗ ಹಿನ್ನಡೆಯಾಗಿದೆ. ಇದನ್ನು ತಪ್ಪಿಸಲು ಪರಿಶಿಷ್ಟರ ಹಿತ ಕಾಪಾಡುವ ರೀತಿಯಲ್ಲಿ ಕಾಯ್ದೆಗೆ ತಿದ್ದುಪಡಿ ತರಬೇಕು ಎಂದು ಪ್ರತಿಭಟನಕಾರರು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಸಮಿತಿ ರಾಜ್ಯ ಅಧ್ಯಕ್ಷ ನಾಗರಾಜ್ ಬಳ್ಳೇಕೆರೆ, ಖಿಲ ಭಾರತ ಡಾ.ಅಂಬೇಡ್ಕರ್ ಪ್ರಚಾರ ಸಮಿತಿ ರಾಜ್ಯ ಅಧ್ಯಕ್ಷ ವಿಶ್ವನಾಥ್ ಇದ್ದರು.



ಅಖಿಲ ಭಾರತ ದಲಿತ ಕ್ರಿಯಾ ಸಮಿತಿ ಸದಸ್ಯರು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು —ಪ್ರಜಾವಾಣಿ ಚಿತ್ರ

‘ಬ್ರೇನ್ಸ್ ನ್ಯೂರೋ ಸ್ಪೈನ್ ಸೆಂಟರ್’ಗೆ ಚಾಲನೆ ಇಂದು

ಬೆಂಗಳೂರು: ಮತ್ತಿಕೆರೆಯಲ್ಲಿರುವ ವಿವಿಡಸ್ ಆಸ್ಪತ್ರೆಯಲ್ಲಿ ಇದೇ 5ರಂದು ಬೆಳಿಗ್ಗೆ 11ಕ್ಕೆ ‘ದಿ ಬ್ರೇನ್ಸ್ ನ್ಯೂರೋ ಸ್ಪೈನ್ ಸೆಂಟರ್’ ಅನ್ನು ಶಾಸಕ ಡಾ. ಅಶ್ವತ್ಥನಾರಾಯಣ ಉದ್ಘಾಟಿಸಲಿದ್ದಾರೆ.

ಈ ಕಾರ್ಯಕ್ರಮದಲ್ಲಿ ಶಾಸಕ ಮುನಿರತ್ನ ಮತ್ತು ತಜ್ಞ ವೈದ್ಯ ಡಾ. ಎನ್.ಕೆ. ವೆಂಕಟರಾಮನ್ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ನಗರದಲ್ಲಿ ಇಂದು

ನಾಡಪ್ರಭು ಕೆಂಪೇಗೌಡ ಜಯಂತಿ: ಉದ್ಘಾಟನೆ: ಎಸ್.ಟಿ. ಸೋಮಶೇಖರ್, ಉಪಸ್ಥಿತಿ: ರಾಮಕೃಷ್ಣಪ್ಪ, ಸುನೇತ್ರ ಪಂಡಿತ, ಮಂಜುನಾಥ, ಆಂಜನೇಯ, ಸುಧೀಂದ್ರರಾವ್, ಆಯೋಜನೆ: ಬಿಬಿಎಂಪಿ ರಾಜರಾಜೇಶ್ವರಿ ನಗರ ವಲಯ, ಕೆಂಪೇಗೌಡ ದಿನಾಚರಣೆ ಸಮಿತಿ, ಸ್ಥಳ: ನಗೆಮನೆ ಆವರಣ, ಕುವೆಂಪು ರಸ್ತೆ, ಅಮ್ಮ ಆಶ್ರಮ, ಉಲ್ಲಾಳ, ಬೆಳಿಗ್ಗೆ 10

‘ವಿದ್ಯುತ್ ಸುಧಾರಣೆ’ ಕುರಿತು ರಾಜ್ಯಮಟ್ಟದ ಸಮಾವೇಶದ ಉದ್ಘಾಟನೆ: ಮಹಮ್ಮದ್ ಸಮೀವುಲ್ಲಾ, ಪ್ರಸ್ತಾವನೆ: ಮೀನಾಕ್ಷಿ ಸುಂದರಂ, ನಿರ್ಣಯ ಮಂಡನೆ: ಪ್ರಕಾಶ್ ಕೆ., ಅಧ್ಯಕ್ಷತೆ: ಜಿ.ಸಿ. ಬಯ್ಯಾರೆಡ್ಡಿ, ಆಯೋಜನೆ: ಸಿಪಿಐ(ಎಂ), ಸ್ಥಳ: ಗಾಂಧಿಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10.30

ಧರ್ಮ ಮತ್ತು ಲಿಂಗತ್ವ, ಲೈಂಗಿಕತೆ: ಸಾನ್ನಿಧ್ಯ: ಜ್ಞಾನಪ್ರಕಾಶ್ ಸ್ವಾಮೀಜಿ, ಗುರುಲಿಂಗ ಸ್ವಾಮೀಜಿ, ಬಸವನಾಗಿದೇವ ಶರಣರು, ಬಸವಶಾಂತಲಿಂಗ ಸ್ವಾಮೀಜಿ, ಉಪಸ್ಥಿತಿ: ಅಕ್ಬರ್ ಅಲಿ, ಸಿರಿಲ್ ವಿಕ್ಟರ್ ಜೋಸೆಫ್, ಸೊಲೊಮೋನ್ ಪಾಲ್, ತಾಷಿ ಚೋಡಪ್, ಲೈಶ್ರಾಮ್ ರೊಮಲ್ ಮೈಕೆಲ್ ಸಿಂಗ್, ಆಯೋಜನೆ: ಅನೇಕ, ಸ್ಥಳ: ಪಾಲನಾ ಭವನ, ನಂದಿದುರ್ಗ ರಸ್ತೆ, ಬೆನ್ಸನ್‌ಟೌನ್, ಬೆಳಿಗ್ಗೆ 11

‘ಕುಂಟ ಕೋಣ ಮೂಕ ಜಾಣ’ ನಾಟಕದ 150ನೇ ಪ್ರಯೋಗದ ಸಮಾರಂಭ: ಉದ್ಘಾಟನೆ: ಕೆ.ಎ. ದಯಾನಂದ, ಅತಿಥಿಗಳು: ಹುಣಸವಾಡಿ ರಾಜನ್, ಅಶೋಕ ಎನ್. ಚಲವಾದಿ, ಅಧ್ಯಕ್ಷತೆ: ಬಿ.ವಿ. ರಾಜರಾಂ, ಆಯೋಜನೆ: ವಿಶ್ವಜ್ಯೋತಿ ಶ್ರೀಪಂಚಾಕ್ಷರ ನಾಟ್ಯ ಸಂಘ ಜೇವರ್ಗಿ, ಸ್ಥಳ: ಗುಬ್ಬಿ ವೀರಣ್ಣ ರಂಗಮಂದಿರ, ಗಾಂಧಿನಗರ, ಮಧ್ಯಾಹ್ನ 2.30

ಗುರುವಂದನೆ, ಬಡ ವಿದ್ಯಾರ್ಥಿಗಳಿಗೆ ಪುಸ್ತಕ ವಿತರಣೆ: ಸಾನ್ನಿಧ್ಯ: ಭಗವಾನ್ ವಿಷ್ಣುದತ್ತ ಗುರೂಜಿ, ಉಪಸ್ಥಿತಿ: ಡಾ.ಸಿ. ಎನ್. ಅಶ್ವತ್ಥನಾರಾಯಣ, ಪ್ರಮೋದ್ ಮುತಾಲಿಕ್, ನೆ.ಲ. ನರೇಂದ್ರ ಬಾಬು, ಎಚ್.ಡಿ. ಬಸವರಾಜ್, ರಾಧಾಕೃಷ್ಣ ಪಲ್ಲಕ್ಕಿ, ಓಂಶ್ರೀ ಸಾಯಿಪ್ರಕಾಶ್, ಗಂಡಸಿ ಸದಾನಂದ, ಆಯೋಜನೆ: ಅಖಿಲ ಭಾರತ ಹಿಂದೂ ಮಹಾಸಭಾ, ಸ್ಥಳ: ತೆಲುಗು ವಿಜ್ಞಾನ ಸಮಿತಿ, ಚೌಡಯ್ಯ ಸ್ಮಾರಕ ಸಭಾಂಗಣ ಹಿಂಭಾಗ, ಮಲ್ಲೇಶ್ವರ, ಸಂಜೆ 4ರಿಂದ

ವೀರಶೈವ ಲಿಂಗಾಯತ ನೂತನ ಸಚಿವರು, ಶಾಸಕರಿಗೆ ಅಭಿನಂದನಾ ಸಮಾರಂಭ: ಸಾನ್ನಿಧ್ಯ: ರಂಭಾಪುರಿ ಪ್ರಸನ್ನ ರೇಣುಕ ವೀರಸೋಮೇಶ್ವರ ಶಿವಾಚಾರ್ಯ ಸ್ವಾಮೀಜಿ, ಅಧ್ಯಕ್ಷತೆ: ಜಯಸಿದ್ಧೇಶ್ವರ ಶಿವಾಚಾರ್ಯ ಸ್ವಾಮೀಜಿ, ಉದ್ಘಾಟನೆ: ಶಿವರಾಜ್ ಪಾಟೀಲ, ಅತಿಥಿ: ಭಗವಂತ ಖೂಬಾ, ಪ್ರಾಸ್ತಾವಿಕ ಪ್ರದೀಪ ಕಂಕಣವಾಡಿ, ಸನ್ಮಾನಿತರು: ಎಂ.ಬಿ. ಪಾಟೀಲ, ಡಾ. ಶರಣಪ್ರಕಾಶ್ ಪಾಟೀಲ, ಈಶ್ವರ್ ಖಂಡ್ರೆ, ಎಸ್.ಎಸ್. ಮಲ್ಲಿಕಾರ್ಜುನ, ಶಿವಾನಂದ ಪಾಟೀಲ, ಲಕ್ಷ್ಮಿ ಹೆಬ್ಬಾಳಕರ, ಶರಣಬಸಪ್ಪ ದರ್ಶನಾಪೂರ, ಆಯೋಜನೆ: ವೀರಶೈವ ಲಿಂಗಾಯತ ಸಂಘಟನಾ ವೇದಿಕೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ ಕಳುಹಿಸಿ

nagaradalli_indu@prajavani.co.in

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Multiple Vacancy

WANTED PHYSICAL Education teacher 22K to 25K, Maths/ science Teacher primary. 18k to 22k, Computer Teacher/ Data entry 18 to 20k Matha's International School, Garuve bhavi palya, Bangalore-68 M: 9449814917

AIRWAYS GROUP
AIRWAYS COURIER (I) PVT.LTD.

Airways is expanding its existing business in Bangalore and across Karnataka
(Bangalore, Hubli, Belgaum, Mysore, Udupi, Mangalore, Manipal)
Kindly Mention The Position Applied For And The Location In Your CV
Airways Is Looking For Suitable Candidates For The Below Positions

1. Branch Managers	10	With 1-2 years Courier & Cargo Experience
2. Sales Executives	8	With 2 years Courier & Cargo Experience
3. Accounts Head	2	With Tally Background
4. Accounts Managers	3	With Tally Background
5. Accounts Executive	5	With Tally Background
6. EDP Assistants	10	
7. Field Executives	30	with bike and valid license
8. Credit Control Manager / Recovery Officer	3	
9. IT Managers	2	
10. IT Executives	3	
11. Customer Care Executive	7	with 2 years courier & cargo experience
12. Drivers	15	With LCV / HEAVY License

Please walk in for an interview till 15.07.2023
Timings : 1030 am to 1300 hrs.
37/11, Airways House, 2nd cross Road, Meanee Avenue Road, Next to A2B Hotel, Near Ulsoor Lake, Bangalore- 42.
Contact : Admin / HR with your CV
Tel : 080 -4652 5252 - 100 Lines.

Teachers/ Professors

FRANK PUBLIC SCHOOL, J.P.Nagar, 6th Phase, requires HIGH SCHOOL SOCIAL STUDIES TEACHERS MIDDLE SCHOOL MATHEMATICS TEACHERS. rumysud@gmail.com 7019301626

REQUIRED EXPERIENCED Primary Hindi Teacher and Lady helpers (4). Contact: ROYAL PUBLIC SCHOOL,Ullal. 9035033560/ 8867569333

ST. ALOYSIUS DEGREE COLLEGE
Centre for Post Graduate Studies, Accredited by NAAC
Sarvagna Nagar, Cox Town, Bengaluru - 560 005
Wanted Assistant Professors for M.Com Department (2 posts)
Qualification: M.Com (Finance) NET/ KSET/ Ph.D With minimum experience.
Wanted Assistant Professors In Political Science
Qualification: M.A (Pol), NET/ KSET/ Ph.D With minimum experience.
Wanted Clerks (2 Staffs)
Qualification: B.Com, Knowledge of ERP Tally With minimum experience.
Walk-in-Interview. (9.00 a.m. – 3.00 p.m.) Monday to Friday
Please contact : Principal / Manager 7975543466 / 080 - 25460226 managersadc@gmail.com

ST LAWRENCE SCHOOL Avalahalli Mysore Road, Near Satellite busstop/ Girinagar, B'lore-26 Mob 97401-54959/ 80738-57671. Wanted Trained & experienced MATHS TEACHER High School 30K- 40K, HINDI Teacher 15- 20K DRAWING TEACHER 15- 20K. WALK-IN on 6th July Betn10 to 3

WANTED EXPERIENCED LECTURERS M.Com/MCA/M.A (Sociology), Librarian(M.Lib) Reservation as per Government Norms, Attractive Salary, Contact Principal with original Certificates between 10.00 am and 1.00 pm, SREE VENKATESHWARA DEGREE COLLEGE, Krishnarajapuram, Bangalore-36. Phone-9036068144, 7411135627, E-mail: svs.krp.bangalore@gmail.com

SDA HIGHER Secondary School Fraser Town Bangalore-05. Wanted D.Ed/ BA B.Ed Teacher to teach Kannada for Middle School & BCA/ MCA with or Without B.Ed to teach Computer Science Contact: 8050500075

SHREE SHARADA Education Centre, MC Layout, Vijayanagar, Bangalore requires teachers for English Primary & High School contact HM: 9980109803 / 080-23113366

Dr. Sri. Sri. Sri. Shivakumara Mahaswamy College of Engineering & Polytechnic
(Affiliated to VTU, Belgaum & Approved by AICTE, New Delhi)
Byranayakanahalli, Nelamangala Taluk, Bangalore Rural District - 562 132
Email: recruitdrsmce2211@gmail.com Website: www.drsmce.org

Faculty Positions for Engineering & Polytechnic

Applications are invited for the posts of Professors, Associate Professors and Asst. Professors in the following Disciplines...

- Civil Engineering
- Mechanical Engineering
- Electrical & Electronics Engineering
- Electronics & Communication Engineering
- Computer Science & Engineering
- Information Science & Engineering
- Basic Science Department : Physics, Chemistry and Mathematics
- MBA (Marketing, Finance, HR)
- Physical Education Director
- Librarian and Asst. Librarian

Non Teaching Posts

- Placement officer
- Office Superintendent
- FDA, SDA, Accountants
- Typists (Kannada & English)
- Wardens : Boys Hostel & Girls Hostel
- Receptionist, Drivers
- Foremen, Instructors and attenders in the above departments

Qualification and Pay Scale: As per AICTE norms

Note: For the posts of Professor & Associate Professor, Candidates having Ph.D are only eligible. Apply Via email and hard copy so as to reach before 7 days from the date of advertisement along with your detailed CV & supporting documents.

Dr. H.D. Ramesh, Principal 98806 58861 / 77602 68213
Sri D.C. Venugopal Chairman

CITY ENGG. COLLEGE
Affiliated to VTU. Approved by AICTE
REQUIRED FACULTY
PROFESSORS, ASSCT. PROFESSORS ASST. PROFESSORS & LECTURERS IN
CS / IS / AI & ML / MBA / MCA
Admin Staff: Placement Officer,HR, Accounts Officer
ELIGIBILITY: First Class Masters Degree Compulsory in all relevant disciplines. **Lecturers** - Freshers or 1 year experience. **Asst. Professors** - 1 to 3 years' experience. **Associate Professor** - Ph.D with 7 years' experience. **Professors** - Ph.D with 13 years' experience.
Send One page CV to: amccityrecruitment@gmail.com

WANTED LADY Social Studies/ Maths/ PET teacher and Computer Teacher for Nivedita High School in Basavanagudi. Candidates in surrounding areas preferred. Call 080-26677932 b/w 10 am to 2 pm.

Part-Time Jobs

LIMITED MNC COMPANY Lost Job, Provide Work From Home Earn 30K to 35K: 9886641282/ 7019215243

Marketing & Sales

WANTED: TELEMARKETING COMPUTER OPERATOR, HELPERS, COOKS. BELOW 30 YEARS FOR REALESTATE DEVELOPERS AT SANJAYNAGAR: 9035883017

WANTED MARKETING Head minimum 10 years experience for TMT SteelManufacturing plant at Goa for Promotion our brand in Goa, Karnataka ,Maharashtra and Kerala. Sales Manager and Assistant Sales Manager, Minimum 5years Experience , Salary as per experience . Interested candidates can mailyour CV With Photo : appog2021@gmail.com

Engg/ Production Technical

WANTED EXPERIENCED Civil Structural Design Engineer and Civil Auto CAD Draftsman for structural consultancy office in Mahalakshmi Layout, Bangalore. vasulu86@gmail.com 9845171084

SALES SERVICE Executives and Engineers for Industrial Products and Compressors, Degree, PUC, ITI, DIP, Email: chandra@synergics.in/ Mob: 9341856562

WE ARE HIRING
We require professionals for our location at LALBAGH ROAD
SENIOR SALES CONSULTANT
Experience in Automobile Industry
SALES CONSULTANT
Experienced/Freshers
TRAINEE Freshers
Walk-In Interview
Date: 5th to 8th July 2023
Time: 10 A.M. to 5 P.M.
ADVAITH KIA
#71, 71/1, Lalbagh Road, Opp Urvashi Theater, Sudhamanagara, Bengaluru - 560027
6366355142 | 6366355136

Security & Detectives

PUNJAB SECURITY SERVICE, Bangalore, Wanted SECURITY SUPERVISOR, SECURITY GUARD. Good Salary. Guard Hindi, Kannada. Contact No. 8971517825/ 9591672408.

General

WANTED (1)PLANT Manager (Food Technologist) 1:Post 5years`exp`in Food industry quality output operations Management equipment Maintenance (2)Production Executive 1:Post 3years`exp`in Mechanical Electrical Maintanence quality-Output Manpower Management (3)Machine Operator 1:Post 2+yrs`exp`in Inpack-machine operation, Pampack machine operation grinder/blender machine operation Qualification ITI/ Diploma Send-Mail svaindustriesblr@gmail.com Call:9886503283 9611347525

BOOK YOUR CLASSIFIEDS ONLINE (DH Deccan Herald / ಪ್ರಜಾವಾಣಿ)
5 EASY STEP
5 Easy steps to book your ads
- LOG INTO WWW.DHCLASSIFIEDS.COM
- CHOOSE THE CATEGORY
- CHOOSE THE AD DATES
- COMPOSE THE MATTER
- CONFIRM AND PAY

TO BOOK YOUR CLASSIFIEDS ADS ONLINE
JOB | LOST | REAL ESTATE | NAME CHANGE | EDU | HEALTH
MATRI | AUTO | ASTRO | NOTICE | TRAVEL
*conditions apply
WWW.DHCLASSIFIEDS.COM
For more information Contact: 9731810277 9901641752 9845114560 9886213331 | 080 - 45557163 / 164
Email: dhclassifieds@deccanherald.co.in

AUTOMOTIVE

2 / 3 Wheelers Selling

Mobikes

QUOTATION REQUIRED without RC KA51 HP6154 Bajaj Pulsar 220 CC Accident Vehicle. Contact: 9535245858

TOURS & TRAVEL

Travel

CONTACT ORCHID Travel and Tours, Basavanagudi to Book 20 Days Australia and Newzealand Group Tour, Package cost Includes Air Tickets, visa Accommodation in 4 Star Hotel, Indian Meal, Tour Manager from Bangalore, Call: 9900080796 9880100099

PUBLIC NOTICE

PUBLIC NOTICE

It is informed to general public that my client **Mrs Spandana S Pardikar, D/o Mr Sandeep H Pardikar** is going to purchase the schedule property from its present owner **Mr. Vallabh S Rao, S/o.Late Shantaram Rao** and if anyone having any manner of rights, claims, title, and interest over the same or any objection for the said transaction the same may be intimated to me with supporting documents if any within 07 (Seven) days from the date of publishing this notice, failing which the said transaction will be completed as if no objection is received from any one and any objection received thereafter will not be considered.

SCHEDULE PROPERTY

All that piece and parcel of the BDA Vacant Site No. 444, having BDA Property ID / PID No. 3217100189, situated in the layout formed by the Bangalore Development Authority, Bangalore at Anjanapura Extension 1 Block, Bangalore. Measuring East to West: 12.00 Meters and North to South: 18.00 Meters, totally measuring 216.00 Sq.meters and bounded as follows: **East by:** Site No 445, **West by:** Site No.443, **North by:** Site No.463, **South by:** Road.

Sri Sai Law Associate,
S. Somashekar, Advocate, #30, 6th Cross, 6th Block, Nagarabhavi, Near BDA Complex, Bangalore -91
Mob: 9844646567 / 9448236908
Bangalore Dt:05-07-2023

ಸಾರ್ವಜನಿಕ ಪ್ರಕಟಣೆ

ನಾನು ಶ್ರೀ ಜವಳಿ ಮಲ್ಲಿಕಾರ್ಜುನ ಸಾರ್ವಜನಿಕರಲ್ಲಿ ಈ ಮೂಲಕ ವಿನಂತಿಸಿಕೊಳ್ಳುವುದೇನೆಂದರೆ ಆನೇಕಲ್, ಬೆಂಗಳೂರು ಉಪನೊಂದಣಾಧಿಕಾರಿಗಳ ಕಚೇರಿಯಲ್ಲಿ ದಿನಾಂಕ 13-2-2002 ರಲ್ಲಿ ನೋಂದಾಯಿಸಲಾಗಿದ್ದ ಮೂಲ ಕ್ರಯಪತ್ರ ಸಂಖ್ಯೆ 7250/2001-02 ವನ್ನು ಕಳೆದುಕೊಂಡಿದ್ದೇನೆ. ಇದನ್ನು ಶ್ರೀಮತಿ ಮುನಿಯಮ್ಮ w/o ಮುನಿವೆಂಕಟಪ್ಪ, ತಮ್ಮ ಪ್ರತಿನಿಧಿ ಶ್ರೀ ವಿ ಚಂದ್ರಶೇಖರ್(GPA Holder), ಮುಖಾಂತರ ನನ್ನ ಮಗ ಜೆ ಎಂ ಗಿರಿಪ್ರಸಾದ್ ಪರವಾಗಿ ಕಾರ್ಯಗತ ಗೊಳಿಸಿದ್ದಾರೆ. ಈ ಅನುಸೂಚಿತ ಆಸ್ತಿಯನ್ನು ದಾನ ಪತ್ರದ ಮೂಲಕ ನಾನು ನನ್ನ ಮಗನಿಂದ ಪಡೆದುಕೊಂಡಿದ್ದು ಈಗ ಮೂಲ ಕ್ರಯಪತ್ರ ಕಳೆದು ಹೋದುದರ ಬಗ್ಗೆ ದಿನಾಂಕ 01-07-2023ರಂದು ಪೊಲೀಸ್ ಇಲಾಖೆ, ಬೆಂಗಳೂರು ಇವರಿಗೆ ದೂರನ್ನು ದಾಖಲಿಸಿದ್ದೇನೆ. ಈ ಸದರಿ ಮೂಲ ಕ್ರಯಪತ್ರ ದೊರೆತವರು ಈ ಕೆಳಗೆ ನಮೂದಿಸಿದ ವಿಳಾಸಕ್ಕೆ ತಕ್ಷಣವೇ ಹಸ್ತಾಂತರಿಸಬೇಕಾಗಿ ಸಾರ್ವಜನಿಕರಲ್ಲಿ ವಿನಂತಿ.

ಶೆಡ್ಯೂಲ್ ಪ್ರಾಪರ್ಟಿ

ಆನೇಕಲ್ ತಾಲ್ಲೂಕಿನ ಸರ್ಜಾಪುರ ಹೋಬಳಿಯ ಕೂಡ್ಲು ಗ್ರಾಮದಲ್ಲಿ ಪೂರ್ವದಿಂದ ಪಶ್ಚಿಮಕ್ಕೆ 40ಅಡಿ, ಉತ್ತರದಿಂದ ದಕ್ಷಿಣಕ್ಕೆ 30 ಅಡಿ ಒಟ್ಟು 1200 ಚದರ ಅಡಿ ವಿಸ್ತೀರ್ಣದ ಖಾಲಿ ಸೈಟ್ ಸಂಖ್ಯೆ 74, ಖಾತಾ ಸಂಖ್ಯೆ 529 ಹೊಂದಿರುವ ಆಸ್ತಿಯ ತುಣುಕು. ಚಕ್ಕುಬಂಧಿ : ಪೂರ್ವದಿಂದ ರಸ್ತೆ, ಪಶ್ಚಿಮದಿಂದ ಸೈಟ್ ಸಂಖ್ಯೆ 83, ಉತ್ತರದಿಂದ ಸೈಟ್ ಸಂಖ್ಯೆ 73 ಮತ್ತು ದಕ್ಷಿಣದಿಂದ ರಸ್ತೆ ಇದೆ.

ವಿಳಾಸ : ಜವಳಿ ಮಲ್ಲಿಕಾರ್ಜುನ
#512, A4, ಮಲಪ್ರಭ ಬ್ಲಾಕ್, ನ್ಯಾಷನಲ್ ಗೇಮ್ಸ್ ಗ್ರಾಮ, ಕೋರಮಂಗಲ, ಬೆಂಗಳೂರು -560047, ಕರ್ನಾಟಕ
ಮೊಬೈಲ್ - +919980619899
ಬೆಂಗಳೂರು ದಿ॥ 05-07-2023

ಸಾರ್ವಜನಿಕ ಪ್ರಕಟಣೆ

ನಾನು ಶ್ರೀ ನಂದಿಪ್ರಸಾದ್ ಜೆ.ಎಂ. ಸಾರ್ವಜನಿಕರಲ್ಲಿ ಈ ಮೂಲಕ ವಿನಂತಿಸಿಕೊಳ್ಳುವುದೇನೆಂದರೆ ಆನೇಕಲ್, ಬೆಂಗಳೂರು ಉಪನೊಂದಣಾಧಿಕಾರಿಗಳ ಕಚೇರಿಯಲ್ಲಿ ದಿನಾಂಕ 13-2-2002 ರಲ್ಲಿ ನೋಂದಾಯಿಸಲಾಗಿದ್ದ ಮೂಲ ಕ್ರಯಪತ್ರ ಸಂಖ್ಯೆ 7249/2001-02 ವನ್ನು ಕಳೆದುಕೊಂಡಿದ್ದೇನೆ. ಇದನ್ನು ಶ್ರೀಮತಿ ಮುನಿಯಮ್ಮ w/o ಮುನಿವೆಂಕಟಪ್ಪ, ತಮ್ಮ ಪ್ರತಿನಿಧಿ ಶ್ರೀ ವಿ ಚಂದ್ರಶೇಖರ್ (GPA Holder), ಮುಖಾಂತರ ನನ್ನ ಪರವಾಗಿ ಕಾರ್ಯಗತಗೊಳಿಸಿದ್ದಾರೆ. ಈಗ ಮೂಲ ಕ್ರಯಪತ್ರ ಕಳೆದು ಹೋದುದರ ಬಗ್ಗೆ ದಿನಾಂಕ 01-07-2023ರಂದು ಪೊಲೀಸ್ ಇಲಾಖೆ, ಬೆಂಗಳೂರು ಇವರಿಗೆ ದೂರನ್ನು ದಾಖಲಿಸಿದ್ದೇನೆ. ಈ ಸದರಿ ಮೂಲ ಕ್ರಯಪತ್ರ ದೊರೆತವರು ಈ ಕೆಳಗೆ ನಮೂದಿಸಿದ ವಿಳಾಸಕ್ಕೆ ತಕ್ಷಣವೇ ಹಸ್ತಾಂತರಿಸಬೇಕಾಗಿ ಸಾರ್ವಜನಿಕರಲ್ಲಿ ವಿನಂತಿ.

ಶೆಡ್ಯೂಲ್ ಪ್ರಾಪರ್ಟಿ

ಆನೇಕಲ್ ತಾಲ್ಲೂಕಿನ ಸರ್ಜಾಪುರ ಹೋಬಳಿಯ ಕೂಡ್ಲು ಗ್ರಾಮದಲ್ಲಿ ಪೂರ್ವದಿಂದ ಪಶ್ಚಿಮಕ್ಕೆ 60ಅಡಿ, ಉತ್ತರದಿಂದ ದಕ್ಷಿಣಕ್ಕೆ 40 ಅಡಿ ಒಟ್ಟು 2400 ಚದರ ಅಡಿ ವಿಸ್ತೀರ್ಣದ ಖಾಲಿ ಸೈಟ್ ಸಂಖ್ಯೆ 83, ಖಾತಾ ಸಂಖ್ಯೆ 528 ಹೊಂದಿರುವ ಆಸ್ತಿಯ ತುಣುಕು. ಚಕ್ಕುಬಂಧಿ : ಪೂರ್ವಕ್ಕೆ ಸೈಟ್ ಸಂಖ್ಯೆ 74, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ಸೈಟ್ ಸಂಖ್ಯೆ 84, ಮತ್ತು ದಕ್ಷಿಣಕ್ಕೆ ರಸ್ತೆ ಇದೆ.

ವಿಳಾಸ : ನಂದಿಪ್ರಸಾದ್ ಜೆಎಂ
#512, A4, ಮಲಪ್ರಭ ಬ್ಲಾಕ್, ನ್ಯಾಷನಲ್ ಗೇಮ್ಸ್ ಗ್ರಾಮ, ಕೋರಮಂಗಲ, ಬೆಂಗಳೂರು -560047, ಕರ್ನಾಟಕ
ಮೊಬೈಲ್ - +918861034582
ಬೆಂಗಳೂರು ದಿ॥ 05-07-2023

REAL ESTATE SELLING

House

Kanakapura Road

VAKIL GARDEN CITY, 4BHK, INDEPENDENT HOUSE SALE 5.5CR PLOT 4200SFT 3500SFT BUILTUP 9845291967 9900743700

Industrial & Factory

Tumkur Road

SALE COMMERCIAL Converted Land. 12-22 Acres. Suitable for Warehouse, Logistics, Educational University. NAIK: 9141326819

Sites

Nagarabhavi

"SALE 40X60,30X40 MPM-Layout near Ambedkar Engineering college, Good location, Genuine Buyers Contact: 7760388034/ 9242135834"

Sadashiva Nagar

SALE POSH Location West 5400 Sft, /South 2550 Sft/East 2400 Sft, Buyers Contact: 9243116401

BUILDERS ESSENTIAL

Building Contractors

WE WILL undertake building constructions & renovations M/s Samruddhi infrastructures Engineers & contractors 9980632771/ 9900434127

ಕ್ಲಾಸಿಫೈಡ್ಸ್ ADMISSION CORNER



MASTER THE FUTURE OF CORPORATE BUSINESS & MANAGEMENT
ADMISSIONS ARE OPEN

BCA with optional add ons
- Social Cyber Defence
- Artificial Intelligence
- Data Science
- Machine Learning

BBA Aviation Management with optional add ons
- Logistics Network Planning
- Environmental Research
- Aviation Corporate Affairs

BBA with optional add ons
- Cyber Threat Management
- HR Act and Law
- Data Modelling

B.Com with optional add ons
- Advanced Business Techniques
- Finance Modelling
- People and Culture

B.Sc. Aircraft Maintenance

M.Com

MBA (UPES - Study Partner)

SYLLABUS as per National Education Policy 2020 with ENTRY/EXIT options

HBS HINDUSTAN BUSINESS SCHOOL
P. B. No. 3776, Ashwathanagar
Marathahalli, Bengaluru - 560037
Ph: 080-25238650, 25232217 • Toll Free: 18004258650
Email: admissions@hindustanacademy.edu.in
www.hindustanacademy.edu.in
8971404357 • 9740037853
See more details

PUBLIC NOTICE
Form No. INC-25A
SURETEC PRECISION LIMITED,
CIN: U85110KA1990PLC010752
Before the Regional Director, Ministry of Corporate Affairs Southeastern Region

In the matter of the Companies Act, 2013, section 14 of Companies Act, 2013 and rule 41 of the Companies (Incorporation) Rules, 2014 AND In the matter of **M/s Suretec Precision Limited** having its registered office at Plot.No-318F, Harohalli Industrial Area 2ND Phase Bannikuppe Village Harohalli, Kanakapura, Taluk, Ramanagara Bangalore Rural -562112 - **Applicant**

Notice is hereby given to the general public that the company intending to make an application to the Central Government under section 14 of the Companies Act, 2013 read with aforesaid rules and is desirous of converting into a private limited company in terms of the special resolution passed at the Extra Ordinary General Meeting held on 22ND June, 2023 to enable the company to give effect for such conversion.

Any person whose interest is likely to be affected by the proposed change/status of the company may deliver or cause to be delivered or send by registered post of his objections supported by an affidavit stating the nature of his interest and grounds of opposition to the **Regional Director Southeastern Region,** 3rd Floor, Corporate Bhavan, Bandlaguda, Nagole, Tattiannaram Village, Hayat Nagar Mandal, Ranga Reddy District, Hyderabad-500068, Telangana. Within fourteen days from the date of publication of this notice with a copy to the applicant company at its registered office at the address mentioned below: Plot.No-318F, Harohalli Industrial Area, 2ND Phase Bannikuppe Village Harohalli, Kanakapura, Taluk, Ramanagara Bangalore Rural -562112

For Suretec Precision Limited
Sd/-
Sridharan Rajagopalan,
Director, DIN: 01893618
Registered Office: Plot.No-318F, Harohalli Industrial Area 2nd Phase Bannikuppe Village Harohalli, Kanakapura, Taluk, Ramanagara Bangalore Rural, Karnataka - 562112
Date: 05/07/2023 Place: Ramanagara

PUBLIC NOTICE
Form No. INC-25A
RAPSRI ENGINEERING PRODUCTS COMPANY LIMITED
CIN: U29100KA2012PLC063295
Before the Regional Director, Ministry of Corporate Affairs Southeastern Region

In the matter of the Companies Act, 2013, section 14 of Companies Act, 2013 and rule 41 of the Companies (Incorporation) Rules, 2014 AND In the matter of **M/s Rapsri Engineering Products Company Limited** having its registered office at Plot.No-318F, Harohalli Industrial Area 2ND Phase Bannikuppe Village Harohalli, Kanakapura, Taluk, Ramanagara Bangalore Rural -562112 - **Applicant**

Notice is hereby given to the general public that the company intending to make an application to the Central Government under section 14 of the Companies Act, 2013 read with aforesaid rules and is desirous of converting into a private limited company in terms of the special resolution passed at the Extra Ordinary General Meeting held on 22ND June, 2023 to enable the company to give effect for such conversion.

Any person whose interest is likely to be affected by the proposed change/status of the company may deliver or cause to be delivered or send by registered post of his objections supported by an affidavit stating the nature of his interest and grounds of opposition to the **Regional Director Southeastern Region,** 3rd Floor, Corporate Bhavan, Bandlaguda, Nagole, Tattiannaram Village, Hayat Nagar Mandal, Ranga Reddy District, Hyderabad-500068, Telangana. Within fourteen days from the date of publication of this notice with a copy to the applicant company at its registered office at the address mentioned below: Plot.No-318F, Harohalli Industrial Area, 2ND Phase Bannikuppe Village Harohalli, Kanakapura, Taluk, Ramanagara, Bangalore Rural -562112

For Rapsri Engineering Products Company Limited
Sd/-
Sridharan Rajagopalan,
Executive Director & Co. Secretary, DIN: 01893618
Registered Office: Plot.No-318F, Harohalli Industrial Area 2nd Phase Bannikuppe Village Harohalli, Kanakapura, Taluk, Ramanagara Bangalore Rural, Karnataka - 562112
Date: 05/07/2023 Place: Ramanagara

PUBLIC NOTICE
Form No. INC-25A
RAPSRI ENGINEERING INDUSTRIES LIMITED
CIN: U29210KA1971PLC002030
Before the Regional Director, Ministry of Corporate Affairs Southeastern Region

In the matter of the Companies Act, 2013, section 14 of Companies Act, 2013 and rule 41 of the Companies (Incorporation) Rules, 2014 AND In the matter of **M/s Rapsri Engineering Industries Limited** having its registered office at Plot.No-318F, Harohalli Industrial Area 2ND Phase Bannikuppe Village Harohalli, Kanakapura, Taluk, Ramanagara Bangalore Rural -562112 - **Applicant**

Notice is hereby given to the general public that the company intending to make an application to the Central Government under section 14 of the Companies Act, 2013 read with aforesaid rules and is desirous of converting into a private limited company in terms of the special resolution passed at the Extra Ordinary General Meeting held on 22ND June, 2023 to enable the company to give effect for such conversion.

Any person whose interest is likely to be affected by the proposed change/status of the company may deliver or cause to be delivered or send by registered post of his objections supported by an affidavit stating the nature of his interest and grounds of opposition to the **Regional Director Southeastern Region,** 3rd Floor, Corporate Bhavan, Bandlaguda, Nagole, Tattiannaram Village, Hayat Nagar Mandal, Ranga Reddy District, Hyderabad-500068, Telangana. Within fourteen days from the date of publication of this notice with a copy to the applicant company at its registered office at the address mentioned below: Plot.No-318F, Harohalli Industrial Area, 2ND Phase Bannikuppe Village Harohalli, Kanakapura, Taluk, Ramanagara, Bangalore Rural -562112

For Rapsri Engineering Industries Limited
Sd/-
Sridharan Rajagopalan,
Director, DIN: 01893618
Registered Office: Plot.No-318F, Harohalli Industrial Area 2nd Phase Bannikuppe Village Harohalli, Kanakapura, Taluk, Ramanagara Bangalore Rural, Karnataka - 562112
Date: 05/07/2023 Place: Ramanagara

BUSINESS

Business to Business

Finance

WE ARRANGE Loans for Mortgage, Purchase, Construction, Project, Takeover of Loans from Reputed Bank. T&C Apply. Contact: 9353705002.

Business Offers

Finance

NRI'S Investment And Finance Available On Low Interest Against Properties,Land & Building,Sites,Flats,Converted & Agriculture Lands Call:7204995189

PERSONAL

Change of Name

I, ALI RAZA, residing at Pothenahalli, Thondebhavi Hobli, Gauribidanur Taluk, Chikkaballapur District, Karnataka, have changed my name to MIR ALI RAZA vide affidavit dated 24.06.2023 before Notary H.M. Adi Narayana Gowda, Gauribidanur. Henceforth I shall be called MIR ALI RAZA only.

I K.V. Manthan No- 57, Prakruthi Pai Layout,Hope Farm Whitefield, Bengaluru -560066 have changed my name to Manthan Kamila vide affidavit dated 21-06-2023 before notary A.R.Muneer Ahmed

I, SONIYA.G daughter of No.14359941 EX-NAIK GAJARAJA.N, residing at No.172, Raj Gopal Main Road Opposite Bus Stand, Nagashettyhalli, Bangalore-560094 have changed my name to SONIA.G vide affidavit dated 28/06/2023 sworn before notary Ravi Kumar.V, Bangalore

CHANGE OF NAME

I, **NIRMALA JOISHY** W/o K. Gokuldas Joishy, residing at #A-4, Ohana Gardens, Ramamurthy Nagar Main Road, Near New Baldwin School, Dodda Banasawadi, Bengaluru North Taluk, Bengaluru - 560043 have changed my name from **NIRMALA BAI JOISHY** to **NIRMALA JOISHY** vide affidavit sworn before Notary Anitha Bai, Bengaluru dated 03-07-2023

I, NAVANEETH RAHUL S.R S/o.Ravi.B.S R/a#67/5 4th`cross, 1st stage Okalipuram Bangalore- 560021 Have`Changed My_Name_to NAVANEETH S.R vide`Affidavit Dated:4.7.2023 Before_Notary Onkarappa.N.R Bangalore

I, CHUNARAM DAHIMA, residing at Bengaluru-2 have changed my name as CHUNARAM P DAHIMA, vide affidavit dated 4/7/2023 before Notary P.C.Ramaiah, Bengaluru

I, LOKESH, R/a #46, Lakshmisagara, Anekal Taluk, Bengaluru- 562107 have changed my name to LOKESH RANGEGOWDA vide affidavit dated 04/07/2023 before notary B.M. Chandrashekar

Lost

LOST OF ALLOTMENT LATTER

I, Chandramma R/at No. 347/1, 2nd Main, Jagajyothi Layout, Janatha Colony, Bangalore south, Kengeri, Bangalore-560060. have Lost original BDA Allotment latter of Site No. 259, **document No.BDA/D6-2/259/BLK-V/SMVL/2003-2004,** in Vishveshwaraiah Layout 5th Block.
finder please Contact: 9880031654

LOST

This is to inform the general public, my client **K.M. JAYASHANKAR SETTY,** Resident at No.3926, Thyagaraja Colony, Mulabagalu, Kolar - 563131, have LOST Original Partition Deed, Doc.No. MBL-1-03273/2015-16 of Book-I, Stored in CD No.MBLD184 in the office of the Sub-Registrar, Mulabagalu, Kolar District, in this regard I have lodged a missing complaint with the lost article No.053162/2023, dt 12.04.2023, **Finders please contact: K. Venkatesh, BA,LL.B, Advocate, Mob: 9886776570**

PROPERTY CORNER



Kanakapura Road, Nice Road Junction Adjacent to Silk Kendra Metro Station
ರೇಷ್ಮೆ ಸಂಸ್ಥೆ Silk Institute
12°51'43.7"N 77°31'50.2"E Kanakapura Road Bangalore
Scan For Location

Built to Suit Commercial For Rent with All Approvals completion by Dec 2024
Site Measuring 92020 Sq.ft Built-up Area 300 000 Sq.ft
2 Level Car Parks for 400 Cars
Each Floor 32000 Sq.ft + 10 Floors
20 Minutes Drive way for Electronic City & Mysore Rd
Foundation Completed Commencement Certificate (CC) Obtained from BBMP
SUITABLE FOR IT/ ITES, HD DATA CENTER, HOTELS, HOSPITALS, DAY CARE CENTERS & MULTI LEVEL CONVENTION HALLS
For Details Call- 9901453477
E mail:- valueforgeassets@gmail.com

ಇದೇ 5ರಂದು ನಡೆಯಬೇಕಿದ್ದ ಒಕ್ಕಲಿಗರ ಸಂಘದ ಸಭೆ ಮುಂದೂಡಿಕೆಗೆ ಆದೇಶ

ತೀರ್ಪು ಕಾಯ್ದಿರಿಸಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷ ಬಿ.ಕೆಂಚಪ್ಪಗೌಡರ ಅಧ್ಯಕ್ಷತೆಯಲ್ಲಿ ಇದೇ 5ರಂದು ನಡೆಯಬೇಕಿದ್ದ ಸಂಘದ ಕಾರ್ಯಕಾರಿ ಸಮಿತಿ ಸಭೆಯನ್ನು ಮುಂದೂಡಲು ಆದೇಶಿಸಿರುವ ಹೈಕೋರ್ಟ್; ಕೆಂಚಪ್ಪಗೌಡರ ನೇತೃತ್ವದ ಕಾರ್ಯಕಾರಿ ಸಮಿತಿ ಆಯ್ಕೆ ಪ್ರಶ್ನಿಸಲಾದ ಮೇಲ್ಮನವಿಯ ಮೇಲಿನ ತೀರ್ಪನ್ನು ಕಾಯ್ದಿರಿಸಿದೆ.

ಈ ಸಂಬಂಧ ಸಂಘದ ಸದಸ್ಯರಾದ ಹಾಸನ ಜಿಲ್ಲೆಯ ಸಂಕ್ಲಾಪುರದ ಎಸ್.ಎಸ್.ರಘುಗೌಡ, ಸೇರಿದಂತೆ ನಾಲ್ವರು ಸದಸ್ಯರು ಸಲ್ಲಿಸಿದ್ದ ಮೇಲ್ಮನವಿಯನ್ನು ನ್ಯಾಯಮೂರ್ತಿ ಎಚ್.ಪಿ.ಸಂದೇಶ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ಮೇಲ್ಮನವಿದಾರರ ಪರ ಹಾಜರಾಗಿದ್ದ ಹಿರಿಯ ವಕೀಲ ರಾಜಗೋಪಾಲ, ಉದಯ ಹೊಳ್ಳ ಮತ್ತು ಅಶೋಕ ಹಾರನಹಳ್ಳಿ ಅವರು, 'ಕೆಂಚಪ್ಪಗೌಡ ನೇತೃತ್ವದ ಸಮಿತಿ



ಕರೆದಿದೆ ಎನ್ನಲಾಗುವ 2023ರ ಜುಲೈ 5ರ ಕಾರ್ಯಕಾರಿ ಸಮಿತಿಯ ಸಭೆ ಬಗ್ಗೆ ಆಡಳಿತ ಮಂಡಳಿಯ ಇತರೆ ಸದಸ್ಯರಿಗೆ ಯಾವುದೇ ಪೂರ್ವ ನೋಟಿಸ್ ನೀಡಿಲ್ಲ. ಹೀಗಾಗಿ, ಈ ಸಭೆಯನ್ನು ಮುಂದೂಡಬೇಕು' ಎಂದು ಒಕ್ಕೊರಲಿನ ವಾದ ಮಂಡಿಸಿದರು.

ಇದಕ್ಕೆ ಪ್ರತಿಯಾಗಿ ಪ್ರತಿವಾದಿಗಳ ಪರ ಹಾಜರಿದ್ದ ಹಿರಿಯ ವಕೀಲ ರವಿವರ್ಮ ಕುಮಾರ, ವಿವೇಕ್ ರೆಡ್ಡಿ, ಡಿ.ಆರ್.ರವಿಶಂಕರ್, 'ಸಭೆಯನ್ನು ಮುಂದೂಡುವಂತೆ ಹೈಕೋರ್ಟ್ ಮೆಟ್ಟಿಲೇರಿರುವ ಮೇಲ್ಮನವಿದಾರರ ಮೂಲ ಉದ್ದೇಶವೇ ಬೇರೆ ಇದೆ. ಸಂಘವು ನೂರು ವರ್ಷಗಳಿಗೂ ಹೆಚ್ಚಿನ ಇತಿಹಾಸದ ಹೆಗ್ಗಳಿಕೆ ಹೊಂದಿದ್ದು, ಹಲವಾರು ಶೈಕ್ಷಣಿಕ ವಿದ್ಯಾಸಂಸ್ಥೆಗಳು, ಸಾವಿರಾರು ನೌಕರರು ಇದ್ದಾರೆ. ಕಳೆದ ಮೂರು ತಿಂಗಳಿಂದ ಸಭೆ ನಡೆದಿಲ್ಲ. ಹೀಗಾಗಿ, ಸಂಘದ ದೈನಂದಿನ ಚಟುವಟಿಕೆಗಳ ನಿರ್ವಹಣೆಗಾಗಿ ಸಭೆ ನಡೆಯುವ ಅಗತ್ಯವಿದೆ' ಎಂದು ಪ್ರತಿಪಾದಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಮೂರ್ತಿ ಎಚ್.ಪಿ.ಸಂದೇಶ್, 'ರಾಜ್ಯದ ಅತ್ಯಂತ ಹಳೆಯದಾದ ಸಂಘ ಎನಿಸಿರುವ ಒಕ್ಕಲಿಗರ ಸಂಘವು ತನ್ನ ಧ್ಯೇಯೋದ್ದೇಶ ಮತ್ತು ಆಶಯಗಳ ಈಡೇರಿಕೆಗೆ ತಕ್ಕನಾಗಿ ನಡೆದುಕೊಳ್ಳುತ್ತಿದೆಯೇ ಎಂಬುದನ್ನು ಸಂಘದ ಎಲ್ಲ 35 ಸದಸ್ಯರೂ ಆತ್ಮಾವಲೋಕನ ಮಾಡಿಕೊಳ್ಳಬೇಕು' ಎಂದು ಕಿವಿಮಾತು ಹೇಳಿದರಲ್ಲದೆ, ಇದೇ 5ರಂದು ಕರೆಯಲಾಗಿರುವ ಕಾರ್ಯಕಾರಿ ಸಮಿತಿಯ ಸಭೆಯನ್ನು ಮುಂದೂಡಿ ಅಂತಿಮ ತೀರ್ಪನ್ನು ಕಾಯ್ದಿರಿಸಿದರು. ಮೇಲ್ಮನವಿದಾರರ ಪರ ಮಧುಕರ ದೇಶಪಾಂಡೆ ಮತ್ತು ಬಸವರಾಜು ವಕಾಲತ್ತು ವಹಿಸಿದ್ದಾರೆ.

ನೋಟಿಸ್ ನೀಡದೇ ಕಾನೂನುಬಾಹಿರ ಸಭೆ ಕರೆದ ಆರೋಪ

ಸಂಘದ ನಿಕಟಪೂರ್ವ ಅಧ್ಯಕ್ಷ ಸಿ.ಎನ್.ಬಾಲಕೃಷ್ಣ ಮತ್ತು ಕಾರ್ಯದರ್ಶಿ ಕೋನಪ್ಪ ರೆಡ್ಡಿ ನೇತೃತ್ವದ ಕಾರ್ಯಕಾರಿ ಸಮಿತಿಯ ವಿರುದ್ಧ ಬಿ.ಕೆಂಚಪ್ಪಗೌಡರ ಗುಂಪು 2023ರ ಮೇ 29ರಂದು ಅವಿಶ್ವಾಸ ಗೊತ್ತುವಳಿ ಮಂಡಿಸಿತ್ತು. ಈ ಗೊತ್ತುವಳಿಯನ್ನು ಬಾಲಕೃಷ್ಣ ನೇತೃತ್ವದ ಸಮಿತಿ ಬಲವಾಗಿ ವಿರೋಧಿಸಿ, 'ಯಾರಿಗೂ ಪೂರ್ವ ನೋಟಿಸ್ ನೀಡದೇ ಕಾನೂನುಬಾಹಿರವಾಗಿ ಸಭೆ ಕರೆಯಲಾಗಿದೆ' ಎಂದು ಆಕ್ಷೇಪಿಸಿತ್ತು.

ಈ ವಿರೋಧದ ಮಧ್ಯದಲ್ಲೇ ಕೆಂಚಪ್ಪಗೌಡರ ಗುಂಪು ಸಭೆಯನ್ನು ನಡೆಸಿ 2023ರ ಜೂನ್ 17ರಂದು ಚುನಾವಣೆ ನಡೆಸುವುದಾಗಿ ಘೋಷಿಸಿತು. ಆದರೆ, ಬಾಲಕೃಷ್ಣ ನೇತೃತ್ವದ ಸಮಿತಿಯು, ಚುನಾವಣೆ ನಿರ್ಧಾರವನ್ನು ಆಕ್ಷೇಪಿಸಿ 2023ರ ಜೂನ್ 12ರಂದು ಸಿವಿಲ್ ದಾವೆ ಹೂಡಿತು. ಸಿವಿಲ್ ಕೋರ್ಟ್ ಚುನಾವಣೆಗೆ ತಡೆ ನೀಡಲಿಲ್ಲ.

ಇದನ್ನು ಪ್ರಶ್ನಿಸಿ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸುವ ಮಧ್ಯದಲ್ಲೇ 2023ರ ಜೂನ್ 17ರಂದು ಚುನಾವಣೆ ನಡೆಸಲಾಯಿತು. ಈ ಚುನಾವಣೆಯಲ್ಲಿ ಅಧ್ಯಕ್ಷರಾಗಿದ್ದ ಸಿ.ಎನ್.ಬಾಲಕೃಷ್ಣ ಮತ್ತು ಅವರ ಬೆಂಬಲಿಗರ ತಂಡವನ್ನು ಕಾರ್ಯಕಾರಿ ಸಮಿತಿಯಿಂದ ಪದಚ್ಯುತಗೊಳಿಸಿ, ಬಿ.ಕೆಂಚಪ್ಪಗೌಡ ಗುಂಪಿನ ಆರು ಮಂದಿ ಅವಿರೋಧ ಆಯ್ಕೆಯಾದರು.

ಈ ನೂತನ ಸಮಿತಿ 2023ರ ಜುಲೈ 5ರಂದು ಕಾರ್ಯಕಾರಿ ಸಮಿತಿಯ ಸಭೆಯನ್ನು ಕರೆದಿತ್ತು. ಈ ಸಭೆಗೆ ಎಸ್.ಆರ್.ಕೃಷ್ಣಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಧ್ಯಂತರ ತಡೆ ನೀಡಿತ್ತು. ಮಂಗಳವಾರ (ಜು.04) ಈ ಅರ್ಜಿಯ ವಿಚಾರಣೆ ಪೂರ್ಣಗೊಳಿಸಿದ ನ್ಯಾಯಮೂರ್ತಿ ಎಚ್.ಪಿ.ಸಂದೇಶ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಅಂತಿಮ ಆದೇಶ ಕಾಯ್ದಿರಿಸಿದೆ.



ನೆನಪು ಹಸಿರು

ಎಂ.ಎಸ್. ರಾಮಯ್ಯ ಅವರ ಜನ್ಮ ಶತಮಾನೋತ್ಸವದ ಅಂಗವಾಗಿ ರಾಮಯ್ಯ ತಾಂತ್ರಿಕ ಮಹಾವಿದ್ಯಾಲಯದ ಎನ್‌ಎಸ್‌ಎಸ್ ವಿಭಾಗವು ಡಾಲರ್ಸ್ ಕಾಲೊನಿಯ ಬುಲೋವಾರ್ಡ್ ಉದ್ಯಾನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಗೋಕುಲ ಶಿಕ್ಷಣ ಫೌಂಡೇಷನ್‌ನ ಉಪಾಧ್ಯಕ್ಷ ಎಂ.ಆರ್. ಸೀತಾರಾಂ ಸಸಿ ನೆಟ್ಟರು. ಮಹಾವಿದ್ಯಾಲಯದ ಪ್ರಾಂಶುಪಾಲ ಎಂ.ಆರ್.ವಿ. ನಾಯ್ಡು, ಉಪಪ್ರಾಂಶುಪಾಲ ಪ್ರದೀಪ್ ಕುಮಾರ್ ದೀಕ್ಷಿತ್, ಎನ್‌ಎಸ್‌ಎಸ್ ಘಟಕದ ನಿರ್ದೇಶಕ ಪುಟ್ಟಬೋರೆ ಗೌಡ ಇದ್ದರು.

ಬಾಲಬ್ರೂಯಿ ಇನ್ನು 'ಕಾನ್‌ಸ್ಟಿಟ್ಯೂಷನ್ ಕ್ಲಬ್'

ಪಾರಂಪರಿಕ ಕಟ್ಟಡ 'ವಿಧಾನ ಮಂಡಲ ಸಂಸ್ಥೆ'ಗೆ ಹಸ್ತಾಂತರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರ ತನ್ನ ಸುಪರ್ದಿಯಲ್ಲಿರುವ ಬಾಲಬ್ರೂಯಿ ಅತಿಥಿ ಗೃಹವನ್ನು 'ಕಾನ್‌ಸ್ಟಿಟ್ಯೂಷನ್ ಕ್ಲಬ್' ಆಗಿ ಪರಿವರ್ತಿಸಲು ಕರ್ನಾಟಕ ವಿಧಾನ ಮಂಡಲ ಸಂಸ್ಥೆಗೆ ನೀಡಿದೆ. ನಗರದ ಹೃದಯಭಾಗದಲ್ಲಿರುವ ಈ ಪಾರಂಪರಿಕ ಕಟ್ಟಡ ಇನ್ನು ಮುಂದೆ ಶಾಸಕರ, ಮಾಜಿ ಶಾಸಕರ 'ಮನೋರಂಜನಾ' ಕೇಂದ್ರ ಆಗಲಿದೆ!

ಬಾಲಬ್ರೂಯಿ ಅತಿಥಿ ಗೃಹವನ್ನು 'ಕಾನ್‌ಸ್ಟಿಟ್ಯೂಷನ್ ಕ್ಲಬ್' ಆಗಿ ಪರಿವರ್ತಿಸುವ ಸಂಬಂಧ ಲೋಕೋಪಯೋಗಿ ಇಲಾಖೆಯ ವಶಕ್ಕೆ ನೀಡಿ, ಇಲಾಖೆಯ ಮುಖ್ಯ ಎಂಜಿನಿಯರ್‌ಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ (ಡಿಪಿಎಆರ್) ಕಾರ್ಯದರ್ಶಿ ಸೋಮವಾರ (ಜುಲೈ 3) ಪತ್ರ ಬರೆದಿದ್ದಾರೆ. ಈ ಪತ್ರಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅನುಮೋದಿಸಿದ್ದಾರೆ.

ಈ ಪತ್ರದ ಬೆನ್ನಲ್ಲೇ ಮತ್ತೊಂದು ಪತ್ರವನ್ನು ಬರೆದಿರುವ ಡಿಪಿಎಆರ್ ಕಾರ್ಯದರ್ಶಿ, 'ಅತಿಥಿ ಗೃಹವನ್ನು 'ಕಾನ್‌ಸ್ಟಿಟ್ಯೂಷನ್ ಕ್ಲಬ್' ಆಗಿ ಪರಿವರ್ತಿಸುವ ಸಂಬಂಧ ಹೈಕೋರ್ಟ್ ಆದೇಶದ ಅನ್ವಯ ಮತ್ತು ರಾಷ್ಟ್ರೀಯ ಹಸಿರು



ಬಾಲಬ್ರೂಯಿ ಅತಿಥಿ ಗೃಹ

ನ್ಯಾಯಮಂಡಳಿಯ (ಎನ್‌ಜಿಟಿ) ಮುಂಬರುವ ಆದೇಶವನ್ನು ಪಾಲಿಸುವ ಆದೇಶಕ್ಕೆ ಒಳಪಟ್ಟು ಮುಂದಿನ ಸೂಕ್ತ ಕ್ರಮ ತೆಗೆದುಕೊಳ್ಳಬೇಕು' ಎಂದೂ ಸೂಚಿಸಿದ್ದಾರೆ.

ಬಾಲಬ್ರೂಯಿ ಅತಿಥಿ ಗೃಹವನ್ನು ಕಾನ್‌ಸ್ಟಿಟ್ಯೂಷನ್ ಕ್ಲಬ್ ಆಗಿ ಪರಿವರ್ತಿಸುವ ರಾಜ್ಯ ಸರ್ಕಾರದ ಪ್ರಸ್ತಾವಕ್ಕೆ ಆಕ್ಷೇಪ ವ್ಯಕ್ತಪಡಿಸಿ ಈ ಹಿಂದೆ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಕೆ ಆಗಿತ್ತು.

'ಬಾಲಬ್ರೂಯಿ ಅತಿಥಿಗೃಹವನ್ನು ಕಾನ್‌ಸ್ಟಿಟ್ಯೂಷನ್ ಕ್ಲಬ್ ಆಗಿ ಪರಿವರ್ತಿಸುವ ನಿಟ್ಟಿನಲ್ಲಿ, ಆವರಣದಲ್ಲಿನ ಹಳೆಯ ಮರಗಳನ್ನು ತೆರವುಗೊಳಿಸದಂತೆ ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಕೋರಿ ದತ್ತಾತ್ರೇಯ ಟಿ. ದೇವರೆ ಹಾಗೂ ಬೆಂಗಳೂರು ಎನ್ವಿರಾನ್ಮೆಂಟ್ ಟ್ರಸ್ಟ್ ಸಲ್ಲಿಸಿದ್ದ ಮಧ್ಯಂತರ ಅರ್ಜಿ ವಿಚಾರಣೆ ನಡೆಸಿದ್ದ ಹೈಕೋರ್ಟ್ ಇದೇ ಜ. 17ರಂದು ಹಸಿರು ನಿಶಾನೆ ತೋರಿಸಿತ್ತು. ತನ್ನ ತೀರ್ಪಿನಲ್ಲಿ 'ಯಾವುದೇ ರಚನಾತ್ಮಕ ಮಾರ್ಪಾಡು ಮಾಡದೆ ಅತಿಥಿಗೃಹದ ಒಳಾಂಗಣದ ಸೌಂದರ್ಯ ಸುಧಾರಿಸುವ ಮೂಲಕ ನಿರ್ವಹಿಸಬೇಕು. ಅಲ್ಲದೆ, ಅತಿಥಿಗೃಹದ ಸುತ್ತಮುತ್ತಲಿನ ಮರಗಳಿಗೆ ಹಾನಿ ಆಗಬಾರದು. ಸಂಬಂಧಿಸಿದ ಇಲಾಖೆಗಳಿಂದ ಅನುಮತಿ ಪಡೆದು ಕ್ಲಬ್ ಆಗಿ ಪರಿವರ್ತಿಸಬಹುದು' ಎಂದು ಹೇಳಿತ್ತು.

'ಬಾಲಬ್ರೂಯಿಯ ಪಾರಂಪರಿಕ ಕಟ್ಟಡದ ಸ್ವರೂಪಕ್ಕೆ ಯಾವುದೇ ಧಕ್ಕೆ ಆಗದಂತೆ ನೋಡಿಕೊಳ್ಳಲಾಗುವುದು. ಅತಿಥಿ ಗೃಹದ ಆವರಣದಲ್ಲಿರುವ 159 ಮರಗಳನ್ನು ಕಡಿಯುವುದಿಲ್ಲ' ಎಂದು ಹೈಕೋರ್ಟ್‌ಗೆ ರಾಜ್ಯ ಸರ್ಕಾರ ಕೂಡಾ ತಿಳಿಸಿತ್ತು. ಈ ಬಳಿಕ ವಕೀಲ ಬ್ರಿಜೇಶ್ ಕಾಳಪ್ಪ ಅವರು, 'ಅತಿಥಿ ಗೃಹದಲ್ಲಿ ಕಾನ್‌ಸ್ಟಿಟ್ಯೂಷನ್ ಕ್ಲಬ್ ನಿರ್ಮಾಣ ಮಾಡಿದರೆ ಮರಗಳನ್ನು ಕಡಿಯಬೇಕಾಗುತ್ತದೆ' ಎಂದು ಆತಂಕ ವ್ಯಕ್ತಪಡಿಸಿ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಗೆ (ಎನ್‌ಜಿಟಿ) ದೂರು ನೀಡಿದ್ದರು. ಎನ್‌ಜಿಟಿ ಚೆನ್ನೈ ಪೀಠವು ಕರ್ನಾಟಕ ಸರ್ಕಾರ ಹಾಗೂ ಇತರ ಪ್ರತಿವಾದಿಗಳಿಗೆ ನೋಟಿಸ್ ನೀಡಿದ್ದು, ಪ್ರಕರಣ ಇನ್ನೂ ವಿಚಾರಣೆ ಹಂತದಲ್ಲಿದೆ.

ಪಿಎಸ್‌ಐ ಹಗರಣ: ಮರು ಪರೀಕ್ಷೆಗೆ ಅಭ್ಯರ್ಥಿಗಳ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಎಸ್‌ಐ ನೇಮಕಾತಿ ಪರೀಕ್ಷೆಯಲ್ಲಿ ನಡೆದಿರುವ ಅಕ್ರಮದಿಂದ 56 ಸಾವಿರ ಅಭ್ಯರ್ಥಿಗಳಿಗೆ ಅನ್ಯಾಯವಾಗಿದೆ. ಆದ್ದರಿಂದ, ಕೂಡಲೇ ಮರು ಲಿಖಿತ ಪರೀಕ್ಷೆ ನಡೆಸುವಂತೆ ಪರೀಕ್ಷೆ ಬರೆದಿದ್ದ ಆಕಾಂಕ್ಷಿಗಳು ಒತ್ತಾಯಿಸಿದ್ದಾರೆ.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅಭ್ಯರ್ಥಿಗಳು, 'ಹಿಂದಿನ ಬಿಜೆಪಿ ಸರ್ಕಾರದಲ್ಲಿ ಪಿಎಸ್‌ಐ ಹಗರಣದ ತನಿಖೆ ದಾರಿ ತಪ್ಪಿತ್ತು. ಆದ್ದರಿಂದ, ಕಾಂಗ್ರೆಸ್ ಸರ್ಕಾರ ಪಿಎಸ್‌ಐ ಹಗರಣವನ್ನು ಮರು ತನಿಖೆಗೊಳಪಡಿಸಿ ಅಕ್ರಮದಲ್ಲಿ ಭಾಗಿಯಾಗಿರುವ ಎಲ್ಲರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿದರು.

'2021ರಲ್ಲಿ ಅಂದಿನ ಬಿಜೆಪಿ ಸರ್ಕಾರ 545 ಸಿವಿಲ್ ಪಿಎಸ್‌ಐ ಹುದ್ದೆಗಳ ಅಧಿಸೂಚನೆ ಹೊರಡಿಸಿತ್ತು. 2021ರ ಅಕ್ಟೋಬರ್ 3ರಂದು ಪರೀಕ್ಷೆ ನಡೆದಿತ್ತು. ಇದರ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು 2022ರ ಜನವರಿ 19ರಂದು ಪ್ರಕಟಿಸಲಾಗಿತ್ತು. ಈ ಪರೀಕ್ಷೆಯಲ್ಲಿ ಅಕ್ರಮ ನಡೆದ ಕಾರಣ ಉನ್ನತ ಅಧಿಕಾರಿಗಳು ಮತ್ತು ಕೆಲ ಅಭ್ಯರ್ಥಿಗಳು ಜೈಲು ಪಾಲಾಗಿದ್ದಾರೆ. 2022ರ ಏಪ್ರಿಲ್ 29ರಂದು ರಾಜ್ಯಪಾಲರ ಆದೇಶದಂತೆ ಮರು ಲಿಖಿತ ಪರೀಕ್ಷೆ ನಡೆಸಬೇಕಿತ್ತು. ಆದರೆ, ಇದುವರೆಗೂ ಕಾರ್ಯಗತವಾಗಲಿಲ್ಲ. ಇದರಿಂದ, ಅಭ್ಯರ್ಥಿಗಳು ಮಾನಸಿಕ ತೊಂದರೆಗೆ ಒಳಗಾಗಿದ್ದಾರೆ. ಸರ್ಕಾರ ಕೂಡಲೇ ಮರುಲಿಖಿತ ಪರೀಕ್ಷೆ ನಡೆಸಬೇಕು' ಎಂದು ಹೇಳಿದರು.

ಅಭ್ಯರ್ಥಿಗಳಾದ ರವಿಶಂಕರ್ ಮಾಲಿ ಪಾಟೀಲ್, ಶಿವಾನಂದ್, ಮೌನೇಶ್, ಹರಿಹರನ್, ಇರ್ಫಾನ್ ಇದ್ದರು.

ಖುಲಾಸೆಯಾಗಿದ್ದರೆ ಪಾಸ್‌ಪೋರ್ಟ್ ಮರಳಿಸಿ: ಹೈಕೋರ್ಟ್

ಬೆಂಗಳೂರು: 'ಕ್ರಿಮಿನಲ್ ಪ್ರಕರಣಗಳ ಆರೋಪಿಯು ಖುಲಾಸೆಯಾದರೆ, ಅದರ ವಿರುದ್ಧ ಮೇಲ್ಮನವಿ ಸಲ್ಲಿಸುವ ಅವಧಿ ಮುಗಿಯುವವರೆಗೆ ಕಾಯಬಾರದು. ಅದೇ ಆಧಾರದ ಮೇಲೆ ವಿಚಾರಣಾ ನ್ಯಾಯಾಲಯ ಪಾಸ್‌ಪೋರ್ಟ್ ಅನ್ನು ತನ್ನ ಬಳಿಯೇ ಇಟ್ಟುಕೊಳ್ಳಬಾರದು. ಖುಲಾಸೆಯಾದ ಆರೋಪಿಯ ಪಾಸ್‌ಪೋರ್ಟ್ ಮರಳಿಸಬೇಕು' ಎಂದು ಹೈಕೋರ್ಟ್ ಆದೇಶಿಸಿದೆ.

ಕ್ರಿಮಿನಲ್ ಪ್ರಕರಣವೊಂದರಲ್ಲಿ ಆರೋಪಿಯಾಗಿದ್ದ ಬೆಂಗಳೂರಿನ ಫ್ರಾನ್ಸಿಸ್ ಝೇವಿಯರ್ ಕ್ರಾಸ್ಟೊ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದ್ದು, ಫ್ರಾನ್ಸಿಸ್ ಝೇವಿಯರ್‌ಗೆ ಪಾಸ್‌ಪೋರ್ಟ್ ವಾಪಸು ನೀಡುವಂತೆ ವಿಚಾರಣಾ ನ್ಯಾಯಾಲಯಕ್ಕೆ ನಿರ್ದೇಶಿಸಿದೆ.

ಪ್ರಕರಣವೇನು?: ಮುಂಬೈನ ಫ್ರಾನ್ಸಿಸ್ ಝೇವಿಯರ್ ವಿರುದ್ಧ ಸೋಲದೇವನಹಳ್ಳಿ ಠಾಣಾ ಪೊಲೀಸರು 2015ರಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಿದ್ದರು. ಆರೋಪಿಯಾಗಿದ್ದ ಅವರ ಪಾಸ್‌ಪೋರ್ಟ್ ಅನ್ನು ಬೆಂಗಳೂರು ಗ್ರಾಮಾಂತರ ಜಿಲ್ಲಾ ನ್ಯಾಯಾಲಯ ವಶಕ್ಕೆ ಪಡೆದಿತ್ತು. 2023ರ ಏಪ್ರಿಲ್ 12ರಂದು ಅವರನ್ನು ನಿರಪರಾಧಿ ಎಂದು ಖುಲಾಸೆಗೊಳಿಸಲಾಗಿತ್ತು.

ಆದರೆ, ವಿಚಾರಣಾ ನ್ಯಾಯಾಲಯ, 'ಪ್ರಕರಣದ ಕುರಿತಾದ ಮೇಲ್ಮನವಿ ಅವಧಿ ಮುಗಿಯುವತನಕ ಪಾಸ್‌ಪೋರ್ಟ್ ಮರಳಿಸುವುದಿಲ್ಲ' ಎಂದು ಹೇಳಿತ್ತು. ಈ ಆದೇಶವನ್ನು ಪ್ರಶ್ನಿಸಿ ಫ್ರಾನ್ಸಿಸ್ ಹೈಕೋರ್ಟ್ ಮೆಟ್ಟಿಲೇರಿದ್ದರು.

ಕೌಟುಂಬಿಕ ನ್ಯಾಯಾಲಯದ ಆದೇಶ ರದ್ದು: ವಿಚ್ಛೇದನ ಮಂಜೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ರೌರ್ಯದ ಆಧಾರದಡಿ ವಿಚ್ಛೇದನ ನೀಡುವಂತೆ ಪತ್ನಿ ಸಲ್ಲಿಸಿದ್ದ ಅರ್ಜಿಗೆ ಪತಿ ಆಕ್ಷೇಪಣೆ ಸಲ್ಲಿಸದೇ ಇದ್ದರೂ ಪತ್ನಿಯ ಅರ್ಜಿಯನ್ನು ವಜಾಗೊಳಿಸಿದ್ದ ಕೌಟುಂಬಿಕ ನ್ಯಾಯಾಲಯದ ಆದೇಶವನ್ನು ಹೈಕೋರ್ಟ್ ರದ್ದುಪಡಿಸಿದೆ. ಅಂತೆಯೇ, ದಂಪತಿಗೆ ವಿಚ್ಛೇದನ ಮಂಜೂರು ಮಾಡಿ ಆದೇಶಿಸಿದೆ.

ವಿಚ್ಛೇದನ ಅರ್ಜಿ ವಜಾಗೊಳಿಸಿದ್ದ ಮೈಸೂರಿನ 1ನೇ ಹೆಚ್ಚುವರಿ ಕೌಟುಂಬಿಕ ನ್ಯಾಯಾಲಯದ ಕ್ರಮವನ್ನು ಪ್ರಶ್ನಿಸಿ 30 ವರ್ಷದ ಮಹಿಳೆಯೊಬ್ಬರು ಸಲ್ಲಿಸಿದ್ದ ಮೇಲ್ಮನವಿಯನ್ನು ನ್ಯಾಯಮೂರ್ತಿ ಅಲೋಕ್ ಅರಾಧೆ ಹಾಗೂ ನ್ಯಾಯಮೂರ್ತಿ ಅನಂತ ರಾಮನಾಥ ಹೆಗಡೆ ಅವರಿದ್ದ ವಿಭಾಗೀಯ ನ್ಯಾಯಪೀಠ ಮಾನ್ಯ ಮಾಡಿದೆ.

'ಪತ್ನಿ ಸಲ್ಲಿಸಿದ್ದ ವಿಚ್ಛೇದನ ಅರ್ಜಿಯ ವಿಚಾರಣೆಗೆ ಪತಿ ಹಾಜರಾಗಿದ್ದರೂ, ಅದಕ್ಕೆ ಆಕ್ಷೇಪಣೆ ಸಲ್ಲಿಸಿಲ್ಲ. ಪತ್ನಿಯನ್ನು ಪಾಟಿ ಸವಾಲಿಗೆ ಒಳಪಡಿಸಿ, ಆಕೆ ಒದಗಿಸಿರುವ ಸಾಕ್ಷ್ಯಾಧಾರಗಳನ್ನೂ ಪರಿಶೀಲನೆ ಮಾಡಿಲ್ಲ. ಆದರೂ, ಪತ್ನಿಯ ಅರ್ಜಿಯನ್ನು ವಜಾಗೊಳಿಸಿ ಕೌಟುಂಬಿಕ ನ್ಯಾಯಾಲಯ ಲೋಪ ಎಸಗಿದೆ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ವಿಚ್ಛೇದನ ಅರ್ಜಿ ವಜಾಗೊಳಿಸಿ 2017ರ ಮಾರ್ಚ್ 27ರಂದು ಕೌಟುಂಬಿಕ ನ್ಯಾಯಾಲಯ ಹೊರಡಿಸಿದ್ದ ಆದೇಶವನ್ನು ರದ್ದುಪಡಿಸಿ ದಂಪತಿಯ ವಿವಾಹವನ್ನು ಅನೂರ್ಜಿತಗೊಳಿಸಿ ಆದೇಶಿಸಿದೆ.

ಸಾರಿಗೆ ನಿಗಮ: ಅಂತರ ನಿಗಮ ವರ್ಗಾವಣೆಗೆ ಅವಕಾಶ

ಬೆಂಗಳೂರು: ಸಾರಿಗೆ ನಿಗಮಗಳಲ್ಲಿ ದರ್ಜೆ–3 ಮೇಲ್ವಿಚಾರಕೇತರ ಹಾಗೂ ದರ್ಜೆ–4ರ ನೌಕರರಿಗೆ ಅಂತರ ನಿಗಮಗಳ ವರ್ಗಾವಣೆಗೆ ಅವಕಾಶ ಕಲ್ಪಿಸಲಾಗಿದೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ (ಕೆಎಸ್‌ಆರ್‌ಟಿಸಿ), ಬೆಂಗಳೂರು ಮಹಾನಗರ ಸಾರಿಗೆ (ಬಿಎಂಟಿಸಿ), ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಹಾಗೂ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆಯಲ್ಲಿ (ಕೆಕೆಆರ್‌ಟಿಸಿ) ಜುಲೈ 5ರ ಬೆಳಿಗ್ಗೆ 10ರಿಂದ ವರ್ಗಾವಣೆ ಪ್ರಕ್ರಿಯೆ ಆರಂಭವಾಗಲಿದೆ. ಆಗಸ್ಟ್ 18ರಂದು ಸಂಜೆ 5.30ರ ವರೆಗೆ ಆನ್‌ಲೈನ್ ಮೂಲಕ: www.ksrtc.org/transferರಲ್ಲಿ ಸಾಮಾನ್ಯ ಮತ್ತು ಪರಸ್ಪರ ವರ್ಗಾವಣೆಗೆ ಅರ್ಜಿ ಸಲ್ಲಿಸಬಹುದು ಎಂದು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಾಮಾನ್ಯ ವರ್ಗಾವಣೆಯಲ್ಲಿ ಪತಿ/ಪತ್ನಿ ಪ್ರಕರಣಗಳೊಂದಿಗೆ ಶೇ 40ಕ್ಕಿಂತ ಹೆಚ್ಚಿನ ಅಂಗವಿಕಲತೆ ಹೊಂದಿರುವ ನೌಕರರು, ತೀವ್ರ ತರಹದ ಅನಾರೋಗ್ಯ (ಎಚ್‌ಐವಿ, ಹೃದ್ರೋಗ, ಕ್ಯಾನ್ಸರ್, ಸ್ಪೈನಲ್ ಕಾರ್ಡ್ ಸಮಸ್ಯೆ, ಮೂತ್ರಪಿಂಡ ವೈಫಲ್ಯ, ಮಿದುಳು ಸಂಬಂಧಿ ಕಾಯಿಲೆಗಳು) ಪ್ರಕರಣಗಳಲ್ಲಿ ವರ್ಗಾವಣೆಯಲ್ಲಿ ಶೇ 5ರಷ್ಟು ಮೀಸಲಾತಿ ಕಲ್ಪಿಸಲಾಗಿದೆ.

ನೌಕರರು ವೈದ್ಯಕೀಯ ಮಂಡಳಿ ನೀಡುವ ಪ್ರಮಾಣ ಪತ್ರ ಸಲ್ಲಿಸ ಬೇಕು. ಪರಸ್ಪರ ವರ್ಗಾವಣೆಗೆ ಪರಸ್ಪರ ನೌಕರರ ಮೂಲ ವೇತನ ಹಾಗೂ ತುಟ್ಟಿ ಭತ್ಯೆ ಶೇ 10ರ ಬದಲಿಗೆ ಶೇ 15ರಷ್ಟನ್ನು ಪರಿಗಣಿಸಲಾಗುವುದು ಎಂದಿದ್ದಾರೆ.

ಸಂಕ್ಷಿಪ್ತ ಸುದ್ದಿ

ಸಿ.ಎಂ ನೇತೃತ್ವದಲ್ಲಿ ಸಮಿತಿ

ಬೆಂಗಳೂರು: ರಾಜ್ಯದಲ್ಲಿ ಬೃಹತ್ ಬಂಡವಾಳ ಹೂಡಿಕೆ ಪ್ರಸ್ತಾವನೆಗಳನ್ನು ಪರಿಶೀಲಿಸಿ, ವಿಶೇಷ ರಿಯಾಯಿತಿ ಮತ್ತು ಉತ್ತೇಜನಗಳನ್ನು ಮಂಜೂರು ಮಾಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಸಚಿವ ಸಂಪುಟ ಉಪ ಸಮಿತಿ ರಚಿಸಲಾಗಿದೆ.

ಜೂನ್ 28ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಉಪ ಸಮಿತಿ ರಚಿಸುವ ಕುರಿತು ನಿರ್ಧರಿಸಲಾಗಿತ್ತು.

ಸಮಿತಿಯಲ್ಲಿ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಎಂ.ಬಿ. ಪಾಟೀಲ, ಇಂಧನ ಸಚಿವ ಕೆ.ಜೆ. ಜಾರ್ಜ್, ಮಾಹಿತಿ ಮತ್ತು ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ, ಸಣ್ಣ ಕೈಗಾರಿಕೆ ಸಚಿವ ಶರಣಬಸಪ್ಪ ದರ್ಶನಾಪುರ್, ಕಾರ್ಮಿಕ ಸಚಿವ ಸಂತೋಷ್ ಎಸ್. ಲಾಡ್, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್. ಬೋಸರಾಜು ಸದಸ್ಯರಾಗಿದ್ದಾರೆ. ಸಮಿತಿಗೆ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಅಗತ್ಯ ನೆರವು ನೀಡಬೇಕು ಎಂದೂ ವಿವರಿಸಲಾಗಿದೆ.

ಸಹಾಯಕ ಪ್ರಾಧ್ಯಾಪಕ ಆಕಾಂಕ್ಷಿಗಳ ಮೊರೆ

ಬೆಂಗಳೂರು: ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರ ಹುದ್ದೆಯ ಅಂತಿಮಪಟ್ಟಿಯಲ್ಲಿ ಸ್ಥಾನ ಪಡೆದ ಅಭ್ಯರ್ಥಿಗಳು ನೇಮಕಾತಿ ಆದೇಶ ಕೊಡಿಸುವಂತೆ ಕೋರಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ಬಹಿರಂಗ ಪತ್ರ ಬರೆದಿದ್ದಾರೆ.

'ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಪರೀಕ್ಷೆ ಬರೆದು ಮೆರಿಟ್ ಆಧಾರದ ಮೇಲೆ ಆಯ್ಕೆಯಾಗಿದ್ದೇವೆ. ನೇಮಕಾತಿ ಪ್ರಕ್ರಿಯೆಗೆ ಕೆಲವರು ಅನಗತ್ಯ ಆಕ್ಷೇಪಣೆ, ಆರೋಪಗಳನ್ನು ಮಾಡಿದ್ದಾರೆ. ಅಕ್ರಮ ನಡೆದಿರುವ ಕುರಿತು ಸೂಕ್ತ ದಾಖಲೆಗಳಿದ್ದರೆ ನೀಡಲಿ. ಸಾಕ್ಷಾಧಾರ ನೀಡದೇ ಅನಗತ್ಯವಾಗಿ ಪ್ರಕ್ರಿಯೆ ವಿಳಂಬ ಮಾಡುತ್ತಿದ್ದಾರೆ' ಎಂದು ಪತ್ರದಲ್ಲಿ ವಿವರಿಸಿದ್ದಾರೆ.

'ಕರ್ನಾಟಕ ಪರೀಕ್ಷಾ ಪ್ರಾಧಿಕಾರ 1,242 ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಪರೀಕ್ಷೆ ನಡೆಸಿದೆ. ವಿಷಯವಾರು ರೂಪಿಸಿದ್ದ ಪ್ರಶ್ನೆಪತ್ರಿಕೆಗಳೂ ಕಠಿಣವಾಗಿದ್ದವು. ಪರೀಕ್ಷೆ ಬರೆದಿದ್ದವರಲ್ಲಿ ಪ್ರತಿಭಾವಂತರು ಆಯ್ಕೆಯಾಗಿದ್ದಾರೆ. ರಾಜ್ಯಪಾಲರು ಸೂಕ್ತ ಮಾಹಿತಿ ಪಡೆದು, ಆಯ್ಕೆಯಾದ ಅಭ್ಯರ್ಥಿಗಳ ನೆರವಿಗೆ ಬರಬೇಕು' ಎಂದು ಕೋರಿದ್ದಾರೆ.

ವಂಚಿಸಿದ ಹಣವನ್ನೇ ಜಾಮೀನಿಗೆ ಠೇವಣಿ: 'ಸುಪ್ರಿಂ' ಅಸಮಾಧಾನ

ನವದೆಹಲಿ: ವಂಚನೆ ಪ್ರಕರಣಗಳಲ್ಲಿ ಜಾಮೀನು ಪಡೆಯಲು ಕೆಳಹಂತದ ಕೋರ್ಟ್‌ಗಳು ಆರೋಪಿಗಳಿಗೆ, ವಂಚಿಸಿರುವ ಹಣವನ್ನೇ ಠೇವಣಿ ಇಡುವಂತೆ ತಿಳಿಸುತ್ತಿರುವುದು 'ಆತಂಕಕಾರಿ ಪ್ರವೃತ್ತಿ' ಎಂದು ಸುಪ್ರೀಂ ಕೋರ್ಟ್ ಅಸಮಾಧಾನ ವ್ಯಕ್ತಪಡಿಸಿದೆ.

ನ್ಯಾಯಮೂರ್ತಿಗಳಾದ ಎಸ್. ರವೀಂದ್ರ ಭಟ್ ಮತ್ತು ದೀಪಂಕರ್ ದತ್ತಾ ಅವರಿದ್ದ ಪೀಠವು, 'ಜಾಮೀನು ಪಡೆಯಲು ಹಣ ಠೇವಣಿ ಇಡುವಂತೆ ಷರತ್ತು ವಿಧಿಸುವುದು, ಹಣ ಠೇವಣಿ ಇಟ್ಟು ಜಾಮೀನು ಪಡೆಯಬಹುದು ಎಂಬ ನಂಬಿಕೆ ಗಟ್ಟಿಯಾಗಿಸುತ್ತಿದೆ. ಇದು, ಅಪರಾಧ ಪ್ರಕ್ರಿಯೆ ಸಂಹಿತೆ (ಸಿಆರ್‌ಪಿಸಿ) ಅನುಸಾರ ಜಾಮೀನು ನೀಡಲು ಇರುವ ಅವಕಾಶದ ಉದ್ದೇಶ ಅಲ್ಲ' ಎಂದು ಅಭಿಪ್ರಾಯಪಟ್ಟಿತು.

ಮತ್ತೆ ಟೋಯಿಂಗ್: ಪ್ರಸ್ತಾವ ಸಲ್ಲಿಸಿಲ್ಲ

ಬೆಂಗಳೂರು: ನಗರದಲ್ಲಿ ಮತ್ತೆ ಟೋಯಿಂಗ್ ವ್ಯವಸ್ಥೆ ಜಾರಿ ಕುರಿತು ವದಂತಿಗಳು ಹರಡಿದ್ದು, ಈ ಬಗ್ಗೆ ಪ್ರಸ್ತಾವವಿಲ್ಲವೆಂದು ಸಂಚಾರ ಪೊಲೀಸರು ತಿಳಿಸಿದ್ದಾರೆ.

ಸಂಚಾರ ನಿಯಮ ಉಲ್ಲಂಘಿಸಿ ರಸ್ತೆಯ ಎಲ್ಲೆಂದರಲ್ಲಿ ನಿಲ್ಲಿಸುತ್ತಿದ್ದ ವಾಹನಗಳನ್ನು ಟೋಯಿಂಗ್ ಮಾಡಲು ವ್ಯವಸ್ಥೆ ಜಾರಿಗೆ ತರಲಾಗಿತ್ತು. ಟೋಯಿಂಗ್ ದಂಡದ ಮೊತ್ತವು ಜನರಿಗೆ ಹೊರೆಯಾಗಿತ್ತು. ಇದರ ನಡುವೆಯೇ, ಅಕ್ರಮ ಹಾಗೂ ನಿಯಮಬಾಹಿರ ಚಟುವಟಿಕೆಯಿಂದಾಗಿ ಟೋಯಿಂಗ್ ರದ್ದುಗೊಳಿಸಲಾಗಿತ್ತು.

ಸದ್ಯ ರಾಜ್ಯದಲ್ಲಿ ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದಿದ್ದು, ರಾಜಧಾನಿಯಲ್ಲಿ ಪುನಃ ಟೋಯಿಂಗ್ ವ್ಯವಸ್ಥೆ ಜಾರಿಯಾಗುವ ಬಗ್ಗೆ ಸುದ್ದಿಗಳು ಹರಿದಾಡುತ್ತಿವೆ. ಈ ಬಗ್ಗೆ ಸಾಮಾಜಿಕ ಮಾಧ್ಯಮಗಳಲ್ಲಿ ಚರ್ಚೆ ಆರಂಭವಾಗಿದೆ. ಪೊಲೀಸ್ ಇಲಾಖೆಯಲ್ಲೂ ಕೆಲವರು, ಟೋಯಿಂಗ್ ಮತ್ತೆ ಬರಬಹುದೆಂದು ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದಾರೆ.

ಸಂಚಾರ ವಿಭಾಗದ ಪೊಲೀಸ್ ಅಧಿಕಾರಿಯೊಬ್ಬರು, 'ಟೋಯಿಂಗ್ ಜಾರಿ ವದಂತಿ ಅಷ್ಟೇ. ನಮ್ಮಿಂದ ಇದುವರೆಗೂ ಪ್ರಸ್ತಾವ ಸಲ್ಲಿಸಿಲ್ಲ' ಎಂದರು.

ವಿದ್ಯಾರ್ಥಿ ಕೊಂದವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂಜುನಾಥನಗರದಲ್ಲಿ ನಡೆದಿದ್ದ ಪಿಯುಸಿ ವಿದ್ಯಾರ್ಥಿ ಇ.ಕೆ. ಸುಹೈಲ್ (17) ಕೊಲೆ ಪ್ರಕರಣದಲ್ಲಿ ಬಾಲಕರು ಸೇರಿ ಎಂಟು ಮಂದಿಯನ್ನು ಬಸವೇಶ್ವರನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಸ್ಥಳೀಯ ಮಹಾಗಣಪತಿನಗರ ನಿವಾಸಿ ಸುಹೈಲ್‌ನನ್ನು ಜುಲೈ 3ರಂದು ಮಧ್ಯಾಹ್ನ ಕೊಲೆ ಮಾಡಲಾಗಿತ್ತು. ಪೋಷಕರು ನೀಡಿದ್ದ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು. ಆರೋಪಿ ಯೋಗೇಶ್ ಸೇರಿ ಎಂಟು ಮಂದಿಯನ್ನು ಬಂಧಿಸಲಾಗಿದೆ. ಏಳು ಮಂದಿ ಬಾಲಕರಾಗಿದ್ದು, ಅವರ ಹೆಸರು ಬಹಿರಂಗಪಡಿಸಲಾಗದು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಸುಹೈಲ್, ಮಂಜುನಾಥ ನಗರದ ಕಾಲೇಜೊಂದರಲ್ಲಿ ಮೊದಲ ವರ್ಷದ ಪಿಯು ಓದುತ್ತಿದ್ದ. ಇತ್ತೀಚೆಗೆ ಕಾಲೇಜಿನಲ್ಲಿ ಹೊಸ ವಿದ್ಯಾರ್ಥಿಗಳ ಸ್ವಾಗತ ಕಾರ್ಯಕ್ರಮ ಆಯೋಜಿಸಲಾಗಿತ್ತು. ಅದೇ ಸಂದರ್ಭದಲ್ಲಿ ಸುಹೈಲ್ ಹಾಗೂ ಆರೋಪಿಗಳ ನಡುವೆ ಗಲಾಟೆ ಆಗಿತ್ತು. ಶಿಕ್ಷಕರು ಜಗಳ ಬಿಡಿಸಿ ಬುದ್ಧಿವಾದ ಹೇಳಿದ್ದರು. ಎರಡೂ ಗುಂಪಿನ ನಡುವೆ ವೈಷಮ್ಯ ಬೆಳೆದಿತ್ತು' ಎಂದು ತಿಳಿಸಿವೆ.

ತೊಡೆಗೆ ಚಾಕು ಇರಿದಿದ್ದರಿಂದ ಸಾವು: 'ಸುಹೈಲ್ ಮೇಲೆ ಹಲ್ಲೆಗೆ ಆರೋಪಿಗಳು ಸಂಚು ರೂಪಿಸಿದ್ದರು. ಜುಲೈ 3ರಂದು ಮಧ್ಯಾಹ್ನ ಸುಹೈಲ್, ಕಾಲೇಜು ಮುಗಿಸಿ ಹೊರಗೆ ಬಂದು ಮನೆಯತ್ತ ಹೊರಟಿದ್ದ' ಎಂದು ಮೂಲಗಳು ಹೇಳಿವೆ. 'ಸುಹೈಲ್‌ನನ್ನು ಅಡ್ಡಗಟ್ಟಿದ್ದ ಆರೋಪಿಗಳು, ಜಗಳ ತೆಗೆದು ಹಲ್ಲೆ ಮಾಡಿದ್ದರು. ಆರೋಪಿಯೊಬ್ಬ, ಚಾಕುವಿನಿಂದ ಸುಹೈಲ್ ತೊಡೆಗೆ ಇರಿದಿದ್ದ. ರಕ್ತ ಸೋರಲಾರಂಭಿಸಿತ್ತು. ಕುಸಿದು ಬಿದ್ದಿದ್ದ ಸುಹೈಲ್‌ನನ್ನು ಸ್ಥಳೀಯರು ಸಮೀಪದ ಆಸ್ಪತ್ರೆಗೆ ಕರೆದೊಯ್ದಿದ್ದರು. ತೀವ್ರ ರಕ್ತಸ್ರಾವದಿಂದಾಗಿ ಆತ ಮೃತಪಟ್ಟ' ಎಂದು ತಿಳಿಸಿವೆ.

ಬೆದರಿಕೆ: ಯುವತಿ ಆತ್ಮಹತ್ಯೆ

ಬೆಂಗಳೂರು: ಬಾಗಲಗುಂಟೆ ಠಾಣೆ ವ್ಯಾಪ್ತಿಯಲ್ಲಿ ಆಶಾ (21) ಎಂಬುವವರು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದು, ಆತ್ಮಹತ್ಯೆಗೆ ಪ್ರಚೋದನೆ ನೀಡಿದ್ದ ಆರೋಪದಡಿ ಸ್ನೇಹಿತ ಅವಿನಾಶ್‌ನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

'ಸ್ಥಳೀಯ ನಿವಾಸಿ ಆಶಾ ಸಾವಿನ ಸಂಬಂಧ ಪೋಷಕರು ದೂರು ನೀಡಿದ್ದಾರೆ. ಸ್ನೇಹಿತ ಅವಿನಾಶ್ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ಆತನ ವಿಚಾರಣೆ ನಡೆಸಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಆಶಾ ಹಾಗೂ ಅವಿನಾಶ್, ಹಲವು ವರ್ಷಗಳ ಸ್ನೇಹಿತರು. ಇವರಿಬ್ಬರು ಪರಸ್ಪರ ಪ್ರೀತಿಸುತ್ತಿದ್ದರೆಂದು ಗೊತ್ತಾಗಿದೆ. ಆದರೆ, ಇವರಿಬ್ಬರ ಪ್ರೀತಿಗೆ ಮನೆಯವರು ಒಪ್ಪಿರಲಿಲ್ಲ. ಮನೆಯವರು ಬುದ್ಧಿವಾದ ಹೇಳಿದ್ದರಿಂದ ಆಶಾ, ಅವಿನಾಶ್ ಜೊತೆ ಮಾತನಾಡುವುದನ್ನು ನಿಲ್ಲಿಸಿದ್ದರು.'

'ತನ್ನ ಜೊತೆ ಮಾತನಾಡದಿದ್ದಕ್ಕೆ ಕೋಪಗೊಂಡಿದ್ದ ಅವಿನಾಶ್, 'ನಿನ್ನ ಫೋಟೊಗಳು ನನ್ನ ಬಳಿ ಇವೆ. ನೀನು ಪ್ರೀತಿ ಮುಂದುವರಿಸದಿದ್ದರೆ, ಅವುಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡುತ್ತೇನೆ' ಎಂದು ಬೆದರಿಕೆಯೊಡ್ಡಿದ್ದ. ಇದರಿಂದ ನೊಂದ ಆಶಾ, ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ದೂರಿನಲ್ಲಿ ಆರೋಪಿಸಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಅಪರಾಧ ಸುದ್ದಿ

ಬಣಜಿಗ ಸಮಾಜದಿಂದ ಸಚಿವರು, ಶಾಸಕರಿಗೆ ಸನ್ಮಾನ

'ಅವಕಾಶವಾದಿ ಸಾಹಿತಿಗಳಿಂದ ಸಾಹಿತ್ಯ ಕ್ಷೇತ್ರಕ್ಕೆ ಧಕ್ಕೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶಾಂತಿಯ ಕಾಲದಲ್ಲಿ ಕ್ರಾಂತಿಯ ಮಾತನ್ನಾಡುತ್ತಾ, ಕ್ರಾಂತಿಯ ಕಾಲದಲ್ಲಿ ಮೌನ ವಹಿಸುತ್ತಿರುವ ಕೆಲವು ಸಾಹಿತಿಗಳ ಧೋರಣೆ ಸರಿಯಲ್ಲ. ಇದು ಸಮಾಜಕ್ಕೆ ಬಗೆಯುವ ದ್ರೋಹ' ಎಂದು ಸಾಹಿತಿ ಡಾ.ಎಸ್.ಜಿ. ಸಿದ್ದರಾಮಯ್ಯ ಹೇಳಿದರು.

ರಾಜ್ಯ ಬಣಜಿಗ ಸಮಾಜ ಕ್ಷೇಮಾಭಿವೃದ್ಧಿ ಸಂಘದ ಬೆಂಗಳೂರು ನಗರ ಜಿಲ್ಲಾ ಘಟಕವು ಆಯೋಜಿಸಿದ್ದ ಸಮಾಜದ ನೂತನ ಸಚಿವರು, ಶಾಸಕರಿಗೆ ಸನ್ಮಾನ, ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಸಂಗಮೇಶ ಬಾದವಾಡಗಿ ಅವರ 'ಶೃಂಗಾರಶಾಯಿರಿ' ಕೃತಿ ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿದರು.

'ಮಾತನಾಡಬೇಕಿದ್ದ ಕಾಲದಲ್ಲಿ ಸುಮ್ಮನಿರುವ ಸಾಹಿತಿಗಳ ಸಂಖ್ಯೆ ಪ್ರಸ್ತುತ ಕಾಲಘಟ್ಟದಲ್ಲಿ ಹೆಚ್ಚಾಗಿದೆ. ಸಮಾಜವು ಸುವ್ಯವಸ್ಥೆಗೆ ಬಂದಾಗ ಮುಂಚೂಣಿಗೆ ಬಂದು ನೆರೆಯುವವರಿಂದ ಸಾಹಿತ್ಯ ಕ್ಷೇತ್ರವು ಹಾಳಾಗುತ್ತಿದೆ. ಈ ಅವಕಾಶವಾದಿ ಸಾಹಿತಿಗಳ ಮೇಲೆ ಸಾಹಿತ್ಯ ಲೋಕ ಹಾಗೂ ರಾಜಕಾರಣಿಗಳು ಸದಾ ಎಚ್ಚರಿಕೆ ವಹಿಸಬೇಕು' ಎಂದು ಹೇಳಿದರು.



ಸಮಾರಂಭದಲ್ಲಿ ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ಪಾಟೀಲ, ಬೈಲಹೊಂಗಲ ಕ್ಷೇತ್ರದ ಶಾಸಕ ಮಹಾಂತೇಶ ಕೌಜಲಗಿ ಅವರನ್ನು ವಿಧಾನ ಪರಿಷತ್ ಸದಸ್ಯ ಜಗದೀಶ್ ಶೆಟ್ಟರ್ ಸನ್ಮಾನಿಸಿದರು. (ನಿಂತವರು ಎಡದಿಂದ) ಸಂಘದ ವಿಶ್ವಸ್ಥ ಮಂಡಳಿ ಸದಸ್ಯ ಎನ್‌ಬಿ. ಬನ್ನೂರ, ಅಧ್ಯಕ್ಷ ಸಂಗಮೇಶ್ ಬಾದವಾಡಗಿ, ಮಾಜಿ ಅಧ್ಯಕ್ಷ ಅಂದಪ್ಪ ಜವಳಿ ಇದ್ದರು ಪ್ರಜಾವಾಣಿ ಚಿತ್ರ

'ಗಜಲ್ ಹಾಗೂ ಶಾಯಿರಿಗಳು ಪರ್ಶಿಯನ್ ಹಾಗೂ ಉರ್ದು ಮೂಲದವು. ಅವುಗಳಿಗೆ ತನ್ನದೇ ಛಂದೋರೂಪವಿರುತ್ತದೆ. ಬದುಕಿನ ಸಾಂಸ್ಕೃತಿಕ ಸ್ಪರ್ಶವಿರುತ್ತದೆ. ಅವು ಬೇರೆ ಭಾಷೆಗೆ ಹೋದರೆ ಛಾಯಾ ರಚನೆ ಆಗಿರುತ್ತವೆ. ಹಾಗೆಂದಾಕ್ಷಣ ಬೇರೆ ಭಾಷೆಗೆ ಹೋಗಬಾರದೆಂಬ ಅರ್ಥವಲ್ಲ. ಸಾಂಸ್ಕೃತಿಕ ಸಂವಹನದ ದೃಷ್ಟಿಯಿಂದ ಬೇರೆ ಭಾಷೆಗಳಿಗೂ ಅವು ಹೋಗುವುದು ಅಗತ್ಯ' ಎಂದು ಪ್ರತಿಪಾದಿಸಿದರು.

ನಟ ದೊಡ್ಡಣ್ಣ, ಹಿಂದುಳಿದ ವರ್ಗ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ತಂಗಡಗಿ ಇದ್ದರು. ಕೇಂದ್ರ ಲೋಕ ಸೇವಾ ಆಯೋಗದ ಪರೀಕ್ಷೆಯಲ್ಲಿ ಯಶಸ್ಸು ಗಳಿಸಿದ ಶ್ರುತಿ ಶಿವಾನಂದ ಯರಗಟ್ಟಿ ಅವರನ್ನು ಸನ್ಮಾನಿಸಲಾಯಿತು.

'ಉನ್ನತ ಹುದ್ದೆ ಪಡೆಯಲಿ'

ಸಂಜೆ ನಡೆದ ನೂತನ ಸಚಿವರು ಹಾಗೂ ಶಾಸಕರ ಸನ್ಮಾನ ಸಮಾರಂಭದಲ್ಲಿ ವಿಧಾನ ಪರಿಷತ್ ಸದಸ್ಯ ಜಗದೀಶ್ ಶೆಟ್ಟರ್ ಮಾತನಾಡಿ, 'ಸಮಾಜವು ಜಾಗೃತವಾಗಬೇಕು. ಮತ್ತಷ್ಟು ಸಂಘಟನೆಯಾಗಬೇಕು' ಎಂದು ಕರೆ ನೀಡಿದರು.

'ಸಮಾಜಕ್ಕೆ ಈಗ ನಾಯಕತ್ವವೂ ಇದೆ. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಮುನ್ನಡೆಯಬೇಕು. ಬರೀ ವ್ಯಾಪಾರಕ್ಕೆ ಸೀಮಿತಗೊಳ್ಳದೇ ಐಎಎಸ್, ಐಪಿಎಸ್ ಅಧಿಕಾರಿಗಳು ಆಗಬೇಕು' ಎಂದು ಕರೆ ನೀಡಿದರು.

'ನ್ಯಾಯಾಂಗ ಕ್ಷೇತ್ರದಲ್ಲೂ ಸಮಾಜದ ಸಾಕಷ್ಟು ಮಂದಿ ಸಾಧನೆ ತೋರಿದ್ದಾರೆ. ಅವರ ಮಾರ್ಗದಲ್ಲಿ ಸಮಾಜದ ಯುವಕರು ಮುನ್ನಡೆಯಬೇಕು' ಎಂದು ಶೆಟ್ಟರ್ ಹೇಳಿದರು.

ಅಡುಗೆ ಅನಿಲ ದರ ಇಳಿಸಿ

ಬೆಂಗಳೂರು: ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆ ಮತ್ತು ಅಡುಗೆ ಅನಿಲ ಬೆಲೆ ಕಡಿಮೆಯಾದರೂ ದೇಶದಲ್ಲಿ ಅವುಗಳ ಬೆಲೆ ಇಳಿಕೆಯಾಗುತ್ತಿಲ್ಲ ಎಂದು ಬೃಹತ್ ಬೆಂಗಳೂರು ಹೋಟೆಲ್‌ಗಳ ಸಂಘ ದೂರಿದೆ.

ಈ ಬಗ್ಗೆ ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರದೀಪ್ ಸಿಂಗ್ ಪುರಿ ಅವರಿಗೆ ಪತ್ರ ಬರೆದಿರುವ ಸಂಘದ ಅಧ್ಯಕ್ಷ ಪಿ.ಸಿ. ರಾವ್, 'ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಒಂದು ಬ್ಯಾರಲ್ ಕಚ್ಚಾ ತೈಲದ ಬೆಲೆ 134 ಡಾಲರ್‌ನಿಂದ 72 ಡಾಲರ್‌ಗೆ ಸಿಗುತ್ತಿದೆ. ಹೀಗಿದ್ದರೂ ದೇಶದಲ್ಲಿ ಡಿಸೇಲ್ ಮತ್ತು ಪೆಟ್ರೋಲ್ ಬೆಲೆ ಕಡಿಮೆಯಾಗಿಲ್ಲ. ಪ್ರತಿ ಲೀಟರ್‌ಗೆ ₹102 ಪಡೆಯಲಾಗುತ್ತಿದ್ದು, ಇದರಲ್ಲಿ ಸುಮಾರು ₹58 ತೆರಿಗೆ ಪಡೆಯಲಾಗುತ್ತಿದೆ. ಇದರಿಂದ ಜನಸಾಮಾನ್ಯರಿಗೆ ಹಾಗೂ ಉದ್ಯಮಿಗಳಿಗೆ ಅನ್ಯಾಯವಾಗುತ್ತಿದೆ ಎಂದು ತಿಳಿಸಿದ್ದಾರೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಎಲ್‌ಪಿಜಿ ಅಡುಗೆ ಅನಿಲದ ದರ ಕಡಿಮೆಯಾಗಿದೆ. ಆದರೆ ದೇಶದಲ್ಲಿ ಅಡುಗೆ ಅನಿಲ ದರದಲ್ಲಿ ಕಡಿಮೆಗೊಳಿಸುತ್ತಿಲ್ಲ. ವಾಣಿಜ್ಯ ಅಡುಗೆ ಅನಿಲ ದರದ ಮೇಲೆ 18ರಷ್ಟು ಜಿಎಸ್‌ಟಿ ಹಾಕಲಾಗುತ್ತಿದೆ. ಇದನ್ನು ಶೇ 5ಕ್ಕೆ ಇಳಿಸಬೇಕು ಎಂದು ಒತ್ತಾಯಿಸಿದ್ದಾರೆ. ಹಾಲು, ನೀರು, ಜುಲೈ ತಿಂಗಳ ವಿದ್ಯುತ್ ಬಿಲ್‌ನಲ್ಲಿ ಎಷ್ಟು ಹೆಚ್ಚಿಗೆ ಮಾಡುತ್ತಾರೆ ಎನ್ನುವುದನ್ನು ನೋಡಿಕೊಂಡು ಮುಂದಿನ ದಿನಗಳಲ್ಲಿ ಹೋಟೆಲ್ ತಿಂಡಿ–ತಿನಿಸುಗಳ ಬೆಲೆ ಹೆಚ್ಚಿಸುವ ಬಗ್ಗೆ ತೀರ್ಮಾನ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

21 ರವರೆಗೆ ಅಧಿವೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆ ಅಧಿವೇಶನವನ್ನು ಜುಲೈ 21ರವರೆಗೆ ನಡೆಸಲು ತೀರ್ಮಾನಿಸಲಾಗಿದೆ ಎಂದು ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ತಿಳಿಸಿದರು.

ಮಂಗಳವಾರ ನಡೆದ ಕಲಾಪ ಸಲಹಾ ಸಮಿತಿ ಸಭೆಯಲ್ಲಿ ಈ ತೀರ್ಮಾನ ತೆಗೆದುಕೊಳ್ಳಲಾಯಿತು ಎಂದು ಅವರು ವಿಧಾನಸಭೆಗೆ ತಿಳಿಸಿದರು.

ಇದೇ 5ರಂದು ಈಗಾಗಲೇ ಸ್ವೀಕರಿಸಿರುವ ಮಸೂದೆಗಳನ್ನು ಮಂಡಿಸುವುದರ ಜತೆಗೆ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಚರ್ಚೆ ನಡೆಸಲಾಗುವುದು. ಇದೇ 6ರಂದು ಬೆಳಿಗ್ಗೆ ಮುಖ್ಯಮಂತ್ರಿಯವರು ವಂದನಾ ನಿರ್ಣಯದ ಮೇಲಿನ ಚರ್ಚೆಗೆ ಉತ್ತರ ನೀಡಲಿದ್ದಾರೆ.

ಇದೇ 7ರಂದು ಮುಖ್ಯಮಂತ್ರಿಯವರು 2023- 24 ನೇ ಸಾಲಿನ ಬಜೆಟ್ ಮಂಡಿಸಲಿದ್ದು, ಇದೇ 10ರಿಂದ 19ರವರೆಗೆ ಇಲಾಖಾವಾರು ಬೇಡಿಕೆಗಳ ಕುರಿತು ಚರ್ಚೆ ನಡೆಸಲಾಗುವುದು. ಜುಲೈ 20ರಂದು ಹಣಕಾಸು ಮಸೂದೆಗಳ ಅಂಗೀಕಾರ ಮಾಡಲಾಗುವುದು ಎಂದು ಖಾದರ್ ವಿವರಿಸಿದರು.

ಬಿಜೆಪಿ ಬಹಿಷ್ಕಾರ, ಜೆಡಿಎಸ್ ಭಾಗಿ: ಕಲಾಪ ಸಲಹಾ ಸಮಿತಿಗೆ ಸಭೆಗೆ ಬಿಜೆಪಿ ಶಾಸಕರು ಗೈರಾಗಿದ್ದರು. ಜೆಡಿಎಸ್ ಶಾಸಕಾಂಗ ಪಕ್ಷದ ಉಪನಾಯಕಿ ಶಾರದಾ ಪೂರ್ಯಾನಾಯ್ಕ ಪಾಲ್ಗೊಂಡಿದ್ದರು.

'ಕಲಾಪ ಸಲಹಾ ಸಮಿತಿ ಸಭೆ ಕರೆದಿದ್ದರು. ಈಗಿನ ಗೊಂದಲ ಬಗೆಹರಿಸದೇ ಮುಂದಿನ ಕಲಾಪದ ಬಗ್ಗೆ ಚರ್ಚೆ ಮಾಡುವ ಅಗತ್ಯವಿಲ್ಲ. ಹೀಗಾಗಿ ನಾವು ಸಭೆಯನ್ನು ಬಹಿಷ್ಕಾರ ಮಾಡಿದ್ದೇವೆ' ಎಂದು ಬಿಜೆಪಿಯ ಬಸವರಾಜ ಬೊಮ್ಮಾಯಿ ಅವರು ಹೇಳಿದರು.

ನಾಲ್ಕು ವರ್ಷಗಳಲ್ಲಿ 11.64 ಲಕ್ಷ ಪ್ರಕರಣಗಳಲ್ಲಿ ಶಸ್ತ್ರಚಿಕಿತ್ಸೆ • ಸರ್ಕಾರಿ ಆಸ್ಪತ್ರೆಗಳಲ್ಲೂ ಏರಿಕೆ

ರಾಜ್ಯದಲ್ಲಿ ಸಿಸೇರಿಯನ್ ಹೆಚ್ಚಳ

• ವರುಣ ಹೆಗಡೆ

ಬೆಂಗಳೂರು: ವೈದ್ಯಕೀಯ ವಿಮೆ, ಆಸ್ಪತ್ರೆ ಅವಧಿ ಹೆಚ್ಚಳ, ನೋವು ರಹಿತ ಹೆರಿಗೆ ಸೇರಿ ವಿವಿಧ ಕಾರಣಗಳಿಂದ ರಾಜ್ಯದಲ್ಲಿನ ಆಸ್ಪತ್ರೆಗಳಲ್ಲಿ ಸಹಜ ಹೆರಿಗೆಯ ಪ್ರಮಾಣ ತಗ್ಗಿದ್ದು, ಸಿಸೇರಿಯನ್ ಹೆರಿಗೆಯಲ್ಲಿ ಭಾರಿ ಏರಿಕೆ ಕಂಡಿದೆ.

ಆರೋಗ್ಯ ಇಲಾಖೆಯ ಅಂಕಿ-ಅಂಶಗಳ ಪ್ರಕಾರ 2012-13ನೇ ಸಾಲಿಗೆ ಹೋಲಿಸಿದರೆ, 2021-22ರ ವೇಳೆಗೆ ಖಾಸಗಿ ಆಸ್ಪತ್ರೆಗಳಲ್ಲಿ ಸಿಸೇರಿಯನ್ ಪ್ರಮಾಣ ಶೇ 81ರಷ್ಟು ಹೆಚ್ಚಳವಾಗಿದೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಶೇ 77ರಷ್ಟು ಏರಿಕೆಯಾಗಿದೆ. 2012ರಿಂದ 2016ರ ಅವಧಿಯಲ್ಲಿ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ಒಟ್ಟು 35.19 ಲಕ್ಷ ಹೆರಿಗೆಗಳಾಗಿದ್ದವು. ಇವುಗಳಲ್ಲಿ 7.84 ಲಕ್ಷ ಸಿಸೇರಿಯನ್ ಹೆರಿಗೆಯಾಗಿದ್ದವು. ಇನ್ನುಳಿದವರಿಗೆ ಸಹಜ ಹೆರಿಗೆಯಾಗಿತ್ತು. 2019ರಿಂದ 2022ರ ಅವಧಿಯಲ್ಲಿ 32.14 ಲಕ್ಷ ಹೆರಿಗೆಗಳಾಗಿವೆ. ಇವುಗಳಲ್ಲಿ 11.64 ಲಕ್ಷ ಸಿಸೇರಿಯನ್ ಹೆರಿಗೆಯಾಗಿವೆ.

2022ರಲ್ಲಿ ಚಿತ್ರದುರ್ಗ, ರಾಮನಗರ ಸೇರಿ ಕೆಲ ಜಿಲ್ಲೆಗಳ ಸರ್ಕಾರಿ ಆಸ್ಪತ್ರೆಗಳಲ್ಲಿ ಸಹಜ ಹೆರಿಗೆಗಳಿಂತ ಸಿಸೇರಿಯನ್ ಪ್ರಕರಣಗಳ ಸಂಖ್ಯೆಯೇ ಹೆಚ್ಚಿದೆ. ದಾವಣಗೆರೆ, ಉಡುಪಿ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ತುಮಕೂರು ಸೇರಿ ಕೆಲ ಜಿಲ್ಲೆಗಳಲ್ಲಿ ಹೆಚ್ಚಿನ ಪ್ರಕರಣಗಳು ಸಿಸೇರಿಯನ್ ಆಗಿವೆ. ಬಳ್ಳಾರಿ, ಬೀದರ್, ಚಾಮರಾಜನಗರ, ಉಡುಪಿ ಸೇರಿ 16 ಜಿಲ್ಲೆಗಳ ಖಾಸಗಿ ಆಸ್ಪತ್ರೆಗಳಲ್ಲಿ ಸಹಜ ಹೆರಿಗೆಗಳಿಗಿಂತ ಸಿಸೇರಿಯನ್‌ಗೆ ಒಳಗಾದವರ ಸಂಖ್ಯೆಯೇ ಅಧಿಕವಿದೆ.

52.5ಕ್ಕೆ ಏರಿಕೆ: ಸಿಸೇರಿಯನ್ ಪ್ರಮಾಣ ಕಡಿಮೆಗೊಳಿಸಿ, ಸಹಜ ಹೆರಿಗೆಗೆ ಆದ್ಯತೆ ನೀಡಲು ಆರೋಗ್ಯ ಇಲಾಖೆ ಹಲವು ಕ್ರಮಗಳನ್ನು ಕೈಗೊಂಡರೂ ರಾಜ್ಯದಲ್ಲಿ ಸಿಸೇರಿಯನ್ ಪ್ರಮಾಣ ಏರುಮುಖವಾಗಿದೆ. ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ 2015-16ರ ಪ್ರಕಾರ ರಾಜ್ಯದ ಖಾಸಗಿ ಆಸ್ಪತ್ರೆಗಳಲ್ಲಿ ಸಿಸೇರಿಯನ್ ಹೆರಿಗೆ ಪ್ರಮಾಣ ಶೇ 40.3ರಷ್ಟಿತ್ತು. 2019-20ರ ಸಮೀಕ್ಷೆಯಲ್ಲಿ ಈ ಪ್ರಮಾಣ ಶೇ 52.5ಕ್ಕೆ ಏರಿಕೆಯಾಗಿದೆ.

'ಇತ್ತೀಚಿನ ದಿನಗಳಲ್ಲಿ ಸಿಸೇರಿಯನ್ ಪ್ರಮಾಣ ಹೆಚ್ಚಳವಾಗಿದೆ. ಸಿಸೇರಿಯನ್ ಮಾಡಿದ ಬಳಿಕ ಚೇತರಿಸಿಕೊಳ್ಳಲು ಮಹಿಳೆಗೆ ಹೆಚ್ಚು ಅವಧಿ ಬೇಕಾಗುತ್ತದೆ. ಆದ್ದರಿಂದ ಸಹಜ ಹೆರಿಗೆಗೆ ಆದ್ಯತೆ ನೀಡಬೇಕು. ಕೆಲ ಪ್ರಕರಣಗಳಲ್ಲಿ ಮಗು ಹಾಗೂ ತಾಯಿಯನ್ನು ರಕ್ಷಿಸಲು ಸಿಸೇರಿಯನ್ ಅನಿವಾರ್ಯ. ಖಾಸಗಿ ಆಸ್ಪತ್ರೆಗಳು ಸಿಸೇರಿಯನ್‌ಗೆ ₹1 ಲಕ್ಷದಿಂದ ₹2 ಲಕ್ಷದವರೆಗೆ ಹಣ ಪಡೆಯುತ್ತಿವೆ. ಸಹಜ ಹೆರಿಗೆಯಾದರೆ ₹50 ಸಾವಿರದಿಂದ ₹80 ಸಾವಿರದವರೆಗೆ ಪಾವತಿಸಬೇಕಾಗುತ್ತದೆ. ಸಿಸೇರಿಯನ್ ಹೆಚ್ಚಳವಾಗಲು ಖಾಸಗಿ ಆಸ್ಪತ್ರೆಗಳ ಮಾಲೀಕರ ಧನದಾಹವೂ ಕಾರಣ' ಎಂದು ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಯ ಪ್ರಾಧ್ಯಾಪಕರೊಬ್ಬರು ತಿಳಿಸಿದರು.



ಹಲವು ಕಾರಣಗಳಿಂದ ಸಿಸೇರಿಯನ್ ಪ್ರಕರಣಗಳು ಹೆಚ್ಚಳವಾಗುತ್ತಿವೆ. ಮಧುಮೇಹ, ಅಧಿಕ ರಕ್ತದೊತ್ತಡ ಸೇರಿ ವಿವಿಧ ಸಮಸ್ಯೆ ಇರುವವರಿಗೆ ಸಹಜ ಹೆರಿಗೆ ಕಷ್ಟ

ಡಾ.ಸಿ. ಸವಿತಾ, ವಾಣಿವಿಲಾಸ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕಿ

'ತಡ ವಿವಾಹದಿಂದಲೂ ಸಮಸ್ಯೆ'

'ಸಂಕೀರ್ಣ ಹೆರಿಗೆ ಪ್ರಕರಣಗಳೂ ಇತ್ತೀಚೆಗೆ ಹೆಚ್ಚಳವಾಗುತ್ತಿದೆ. ಮೊದಲ ಹೆರಿಗೆಯಲ್ಲಿ ಸಿಸೇರಿಯನ್‌ಗೆ ಒಳಗಾಗದರೆ ಎರಡನೇ ಮಗು ಪಡೆಯುವಾಗ ಸಹಜ ಹೆರಿಗೆ ಕಷ್ಟ. ಆದ್ದರಿಂದ ಮತ್ತೆ ಸಿಸೇರಿಯನ್‌ಗೆ ಒಳಗಾಗಬೇಕಾಗುತ್ತದೆ. ತಡ ವಿವಾಹವೂ ಮಕ್ಕಳನ್ನು ಪಡೆಯುವಾಗ ಸಮಸ್ಯೆಯಾಗುತ್ತದೆ. ನಮ್ಮಲ್ಲಿ ನಡೆಯುವ ಬಹುತೇಕ ಹೆರಿಗೆಗಳು ಸಹಜ ಹೆರಿಗೆಯಾಗಿವೆ' ಎಂದು ತಾಯಿ-ಮಕ್ಕಳ ಆಸ್ಪತ್ರೆಯಾದ ವಾಣಿವಿಲಾಸದ ವೈದ್ಯಕೀಯ ಅಧೀಕ್ಷಕಿ ಡಾ.ಸಿ. ಸವಿತಾ ತಿಳಿಸಿದರು.

'ಸರ್ಕಾರಿ ಆಸ್ಪತ್ರೆಗಳಿಗೆ ಹೆಚ್ಚಾಗಿ ಬಡ-ಮಧ್ಯಮ ವರ್ಗದವರು ಬರುತ್ತಾರೆ. ಖಾಸಗಿ ಆಸ್ಪತ್ರೆಗಳಿಗೆ ಹೆಚ್ಚಾಗಿ ಶ್ರೀಮಂತರು ಹೋಗುತ್ತಾರೆ. ಹೆಚ್ಚಿನವರು ಉದ್ಯೋಗಸ್ಥರಾಗಿರುತ್ತಾರೆ. ಅವರು ಅಪಾಯ ಇಲ್ಲದೆಯೇ ಹೆರಿಗೆಯಾಗಲು ಸಿಸೇರಿಯನ್‌ಗೆ ಮೊರೆ ಹೋಗುತ್ತಾರೆ. ಐವಿಎಫ್ ತಂತ್ರಜ್ಞಾನದಿಂದ ಗರ್ಭಧಾರಣೆಗೆ ಒಳಗಾದವರೂ ಸಿಸೇರಿಯನ್‌ಗೆ ಆದ್ಯತೆ ನೀಡುತ್ತಾರೆ' ಎಂದು ಹೇಳಿದರು.

ಖಾಸಗಿ ಆಸ್ಪತ್ರೆಗಳಲ್ಲಿ ಹೆರಿಗೆಗಳು

ಹೆರಿಗೆ ವಿಧಾನ	2019-2020	2020-21	2021-22	2022-23 (ಜನವರಿ ಅಂತ್ಯಕ್ಕೆ)
ಸಹಜ ಹೆರಿಗೆ	2,03,430	1,95,336	1,93,069	1,40,926
ಸಿಸೇರಿಯನ್	1,45,624	1,53,710	1,52,351	1,28,644

ಸರ್ಕಾರಿ ಆಸ್ಪತ್ರೆಗಳಲ್ಲಿ ಹೆರಿಗೆಗಳು

ಹೆರಿಗೆ ವಿಧಾನ	2019-2020	2020-21	2021-22	2022-23 (ಜನವರಿ ಅಂತ್ಯಕ್ಕೆ)
ಸಹಜ ಹೆರಿಗೆ	4,06,692	3,69,084	3,75,350	3,07,706
ಸಿಸೇರಿಯನ್	1,44,257	1,38,723	1,56,462	1,44,465

ಸಿಸೇರಿಯನ್ ಏರಿಕೆ ಅಂತರ

ವರ್ಷ	ಒಟ್ಟು ಹೆರಿಗೆ	ಖಾಸಗಿ ಕೇಂದ್ರಗಳಲ್ಲಿ ಸಿಸೇರಿಯನ್	ಸರ್ಕಾರಿ ಕೇಂದ್ರಗಳಲ್ಲಿ ಸಿಸೇರಿಯನ್
2012-13	8.54 ಲಕ್ಷ	84 ಸಾವಿರ	88 ಸಾವಿರ
2021-22	8.77 ಲಕ್ಷ	1.52 ಲಕ್ಷ	1.56 ಲಕ್ಷ

ವರ್ಷವಾರು ಒಟ್ಟು ಹೆರಿಗೆಗಳು

ವರ್ಷ	ಸರ್ಕಾರಿ ಆಸ್ಪತ್ರೆಗಳು	ಖಾಸಗಿ ಆಸ್ಪತ್ರೆಗಳು
2019-20	5,50,949	3,49,054
2020-21	5,07,807	3,49,046
2021-22	5,31,812	3,45,420
2022-23 (ಜನವರಿ ಅಂತ್ಯಕ್ಕೆ)	4,52,171	1,28,644

ಖಾಸಗಿ ಆಸ್ಪತ್ರೆ: ಸಹಜಕ್ಕಿಂತ ಅಧಿಕ ಸಿಸೇರಿಯನ್ ಪ್ರಕರಣ (2022)

ಜಿಲ್ಲೆ	ಸಿಸೇರಿಯನ್	ಸಹಜ ಹೆರಿಗೆ
ತುಮಕೂರು	11,231	4,139
ಮೈಸೂರು	7,939	5,161
ಕೋಲಾರ	5,010	2,117
ಬಳ್ಳಾರಿ	7,092	3,881
ಚಿಕ್ಕಬಳ್ಳಾಪುರ	2,515	935

ಸರ್ಕಾರಿ ಆಸ್ಪತ್ರೆ: ಅಧಿಕ ಸಿಸೇರಿಯನ್ ಪ್ರಕರಣ (2023 ಜನವರಿ ಅಂತ್ಯ)

ಜಿಲ್ಲೆ	ಸಿಸೇರಿಯನ್	ಸಹಜ ಹೆರಿಗೆ
ತುಮಕೂರು	7,227	6,769
ಚಿತ್ರದುರ್ಗ	6,158	6,091
ಚಿಕ್ಕಬಳ್ಳಾಪುರ	4,654	5,052
ರಾಮನಗರ	2,081	2,009
ಬೆಂಗಳೂರು ಗ್ರಾಮಾಂತರ	2,343	2,742

ಸುದ್ದಿ 2 ನಿಮಿಷ

'ಅತಿಥಿ ಶಿಕ್ಷಕರ ಕಾಯಂ ಇಲ್ಲ'

ಬೆಂಗಳೂರು: ಅತಿಥಿ ಶಿಕ್ಷಕರನ್ನು ಕಾಯಂ ಮಾಡಲು ಸಾಧ್ಯವಿಲ್ಲ. ಈ ಸಂಬಂಧ ಸರ್ಕಾರದ ಮುಂದೆ ಯಾವುದೇ ಪ್ರಸ್ತಾವನೆಯೂ ಇಲ್ಲ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧುಬಂಗಾರಪ್ಪ ಹೇಳಿದರು.

ವಿಧಾನಸಭೆಯಲ್ಲಿ ಮಂಗಳವಾರ ಗಮನ ಸೆಳೆಯುವ ಸೂಚನೆಯಡಿ ಕಾಂಗ್ರೆಸ್‌ನ ಕೆ.ವೈ.ನಂಜೇಗೌಡರ ಪ್ರಶ್ನೆಗೆ ಉತ್ತರಿಸಿದರು.

ವಿಷಯ ಪ್ರಸ್ತಾಪಿಸಿದ ನಂಜೇಗೌಡ ಅವರು, ರಾಜ್ಯದಲ್ಲಿ 33 ಸಾವಿರ ಅತಿಥಿ ಶಿಕ್ಷಕರು ಇದ್ದಾರೆ. ಕೇವಲ ₹ 5,000 ರಿಂದ ₹6,000 ಗಳಿಗೆ ದುಡಿಯುತ್ತಿದ್ದಾರೆ. ಇವರನ್ನು ಕಾಯಂ ಮಾಡಬೇಕು. ಅದಕ್ಕೂ ಮೊದಲು ಇವರಿಗೆ ಕನಿಷ್ಠ ವೇತನ ನಿಯಮದಡಿ ವೇತನ ನೀಡಬೇಕು. ತಿಂಗಳಿಗೆ ₹10,000 ದಿಂದ ₹15,000 ಕನಿಷ್ಠ ವೇತನ ನೀಡಬೇಕು ಒತ್ತಾಯಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಮಧು ಬಂಗಾರಪ್ಪ, ಶಿಕ್ಷಕರ ನೇಮಕಾತಿ ಪ್ರಕ್ರಿಯೆಗೆ ನ್ಯಾಯಾಲಯದ ತಡೆಯಾಜ್ಞೆ ಇದೆ. ಅದು ತೆರವುಗೊಂಡ ಬಳಿಕ ನೇಮಕಾತಿ ಪ್ರಕ್ರಿಯೆ ಮುಂದುವರಿಸಲಾಗುವುದು ಎಂದರು.



ಮದ್ಯದ ಅಕ್ರಮ ಮಾರಾಟ 1.20 ಲಕ್ಷ ಪ್ರಕರಣ ದಾಖಲು

ಬೆಂಗಳೂರು: 2020ರ ಜುಲೈನಿಂದ 2023ರ ಮೇ ಅಂತ್ಯದವರೆಗೆ ರಾಜ್ಯದಲ್ಲಿ ಮದ್ಯದ ಅಕ್ರಮ ಮಾರಾಟ ಮಾಡಿದ ಆರೋಪದ ಮೇಲೆ 1.20 ಲಕ್ಷ ಪ್ರಕರಣಗಳನ್ನು ದಾಖಲಿಸಲಾಗಿದೆ ಎಂದು ಅಬಕಾರಿ ಸಚಿವ ಆರ್.ಬಿ. ತಿಮ್ಮಾಪುರ ತಿಳಿಸಿದ್ದಾರೆ.

ಜೆಡಿಎಸ್‌ನ ಸಿ.ಬಿ. ಸುರೇಶ್ ಬಾಬು ಪ್ರಶ್ನೆಗೆ ಮಂಗಳವಾರ ವಿಧಾನಸಭೆಯಲ್ಲಿ ಲಿಖಿತ ಉತ್ತರ ನೀಡಿರುವ ಸಚಿವರು, 'ಮದ್ಯದ ಅಕ್ರಮ ಮಾರಾಟ ನಡೆಯುತ್ತಿರುವ ಮಾಹಿತಿ ಆಧರಿಸಿ ರಾಜ್ಯದಾದ್ಯಂತ ಮೂರು ವರ್ಷಗಳಲ್ಲಿ 2.66 ಲಕ್ಷ ದಾಳಿಗಳನ್ನು ನಡೆಸಲಾಗಿದೆ. ಕರ್ನಾಟಕ ಅಬಕಾರಿ ಕಾಯ್ದೆಯ ಸೆಕ್ಷನ್ 32 ಹಾಗೂ 34ರ ಅಡಿಯಲ್ಲಿ 13,013 ಪ್ರಕರಣ ಮತ್ತು ಅಬಕಾರಿ ಕಾಯ್ದೆಯ ಸೆಕ್ಷನ್ 15(ಎ) ಅಡಿಯಲ್ಲಿ 1,07,166 ಪ್ರಕರಣಗಳನ್ನು ದಾಖಲಿಸಲಾಗಿದೆ' ಎಂದು ಮಾಹಿತಿ ನೀಡಿದ್ದಾರೆ.

2020-21ರಲ್ಲಿ ಒಟ್ಟು 25,779, 2021-22ರಲ್ಲಿ ಒಟ್ಟು 29,863 ಮತ್ತು 2022-23ನೇ ಸಾಲಿನಲ್ಲಿ ಮೇ ಅಂತ್ಯದವರೆಗೆ ಒಟ್ಟು 64,537 ಪ್ರಕರಣಗಳನ್ನು ದಾಖಲು ಮಾಡಲಾಗಿದೆ ಎಂದು ತಿಳಿಸಿದ್ದಾರೆ.



ಮಾತು ಕತೆ

ವಿಧಾನಸಭೆ ಕಲಾಪ ಆರಂಭಕ್ಕೂ ಮೊದಲು ಬಿಜೆಪಿ ಶಾಸಕರಾದ ಬಸವರಾಜ ಬೊಮ್ಮಾಯಿ, ವಿ. ಸುನಿಲ್ ಕುಮಾರ್ ಅವರು ಸಭಾಧ್ಯಕ್ಷರ ಕೊಠಡಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜತೆ ಮಾತುಕತೆ ನಡೆಸಿದರು. ಸಭಾಧ್ಯಕ್ಷ ಯು.ಟಿ.ಖಾದರ್ ಇದ್ದಾರೆ

ಎತ್ತಿನಹೊಳೆ ಕಾಮಗಾರಿ ಖುದ್ದು ಪರಿಶೀಲನೆ: ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎತ್ತಿನಹೊಳೆ ಕುಡಿಯುವ ನೀರಿನ ಯೋಜನೆಯ ಎಲ್ಲ ಕಾಮಗಾರಿ ಸ್ಥಳಗಳಿಗೆ ಶೀಘ್ರದಲ್ಲಿ ಖುದ್ದಾಗಿ ಭೇಟಿ ನೀಡಿ ಪರಿಶೀಲನೆ ನಡೆಸುತ್ತೇನೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ವಿಧಾನಸಭೆಯಲ್ಲಿ ಪಕ್ಷೇತರ ಸದಸ್ಯ ಕೆ.ಎಚ್. ಪುಟ್ಟಸ್ವಾಮಿ ಗೌಡ ಪ್ರಶ್ನೆಗೆ ಮಂಗಳವಾರ ಉತ್ತರಿಸಿದ ಅವರು, 'ಎತ್ತಿನಹೊಳೆ ಯೋಜನೆಯಡಿ 51.87 ಕಿಲೋಮೀಟರ್ ಉದ್ದದ ಕೊಳವೆ ಮಾರ್ಗದ ನಿರ್ಮಾಣಕ್ಕೆ ಮಂಜೂರಾತಿ ನೀಡಲಾಗಿದೆ. 48.25 ಕಿ.ಮೀ. ಕೊಳವೆ ಮಾರ್ಗ ನಿರ್ಮಾಣ ಪೂರ್ಣಗೊಂಡಿದ್ದು, 3.62 ಕಿ.ಮೀ. ಕೊಳವೆ ಮಾರ್ಗದ ಕಾಮಗಾರಿ ಬಾಕಿ ಇದೆ' ಎಂದರು.

ಈ ಯೋಜನೆಯಡಿ ಗೌರಿಬಿದನೂರು ತಾಲ್ಲೂಕಿನ 86 ಕೆರೆಗಳಿಗೆ ಅವುಗಳ ಸಾಮರ್ಥ್ಯದ ಶೇಕಡ 50ರಷ್ಟು ನೀರು ತುಂಬಿಸಲು ಯೋಜಿಸಲಾಗಿದೆ. ಇದಕ್ಕಾಗಿ ₹863.48 ಕೋಟಿ ವೆಚ್ಚದ ಕಾಮಗಾರಿಗಳ ಗುತ್ತಿಗೆ ನೀಡಿದ್ದು, ಶೇಕಡ 72.33ರಷ್ಟು (₹623.76 ಕೋಟಿ) ಆರ್ಥಿಕ ಪ್ರಗತಿ ಸಾಧಿಸಲಾಗಿದೆ. ಪ್ರಸಕ್ತ ವರ್ಷದ ಡಿಸೆಂಬರ್ ಅಂತ್ಯಕ್ಕೆ ಕಾಮಗಾರಿ ಪೂರ್ಣಗೊಳಿಸುವ ಗುರಿ ಇದೆ ಎಂದು ತಿಳಿಸಿದರು.

'ನಮ್ಮ ಕ್ಷೇತ್ರದಲ್ಲಿ ರಸ್ತೆಗಳು ಅತಿಯಾಗಿ ಹಾಳಾಗಿವೆ. ಎತ್ತಿನಹೊಳೆ ಯೋಜನೆಯ ಅನುದಾನದಲ್ಲಿ ಪರಿಶಿಷ್ಟ ಜಾತಿ ಉಪ ಯೋಜನೆ ಮತ್ತು ಪರಿಶಿಷ್ಟ ಪಂಗಡಗಳ ಉಪ ಯೋಜನೆಗಳಿಗೆ ಮೀಸಲಿಡುವ ಅನುದಾನವನ್ನು ರಸ್ತೆಗಳ ದುರಸ್ತಿಗೆ ಮಂಜೂರು ಮಾಡಬೇಕು' ಎಂದು ಪುಟ್ಟಸ್ವಾಮಿ ಗೌಡ ಮನವಿ ಮಾಡಿದರು.

'ಎತ್ತಿನಹೊಳೆಯ ಎಲ್ಲ ಕಾಮಗಾರಿಗಳ ಸ್ಥಳಗಳಿಗೆ ಶೀಘ್ರದಲ್ಲಿ ಖುದ್ದಾಗಿ ಭೇಟಿ ನೀಡಿ ಪರಿಶೀಲನೆ ನಡೆಸುತ್ತೇನೆ. ಆಗ ರಸ್ತೆಗಳ ದುರಸ್ತಿಗೆ ಅನುದಾನ ಒದಗಿಸುವ ಬೇಡಿಕೆ ಕುರಿತೂ ಪರಿಶೀಲಿಸುವೆ' ಎಂದು ಶಿವಕುಮಾರ್ ಭರವಸೆ ನೀಡಿದರು.

₹2,379 ಕೋಟಿ ಬಾಕಿ: ಬೋಸರಾಜು

ಸಣ್ಣ ನೀರಾವರಿ ಇಲಾಖೆಯಲ್ಲಿ 2023ರ ಮೇ ಅಂತ್ಯಕ್ಕೆ ₹ 2,379 ಕೋಟಿ ಬಿಲ್ ಬಾಕಿ ಇದೆ ಎಂದು ಸಣ್ಣ ನೀರಾವರಿ ಸಚಿವ ಎನ್.ಎಸ್. ಬೋಸರಾಜು ತಿಳಿಸಿದ್ದಾರೆ.

ಕಾಂಗ್ರೆಸ್‌ನ ಕೆ.ಎಂ. ಶಿವಲಿಂಗೇಗೌಡ ಪ್ರಶ್ನೆಗೆ ಮಂಗಳವಾರ ವಿಧಾನಸಭೆಯಲ್ಲಿ ಲಿಖಿತ ಉತ್ತರ ನೀಡಿರುವ ಸಚಿವರು, 'ಕಳೆದ ಮೂರು ವರ್ಷಗಳಲ್ಲಿ ಇಲಾಖೆಯಲ್ಲಿ ವಿವಿಧ ಕಾಮಗಾರಿಗಳಿಗೆ ₹8,088 ಕೋಟಿ ಅನುದಾನ ಬಿಡುಗಡೆಯಾಗಿದೆ' ಎಂದು ತಿಳಿಸಿದ್ದಾರೆ.



ಕಾಂಗ್ರೆಸ್ ಸರ್ಕಾರವು ಜನವಿರೋಧಿ ನೀತಿ ಅನುಸರಿಸುತ್ತಿದೆ ಎಂದು ಆಪಾದಿಸಿ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್ ಯಡಿಯೂರಪ್ಪ ಅವರ ನೇತೃತ್ವದಲ್ಲಿ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಪ್ರತಿಭಟನೆ ನಡೆಯಿತು —ಪ್ರಜಾವಾಣಿ ಚಿತ್ರ

ಟೋಲ್‌ಗಳಲ್ಲಿ ಶಾಸಕರಿಗೆ 'ವಿಐಪಿ ಮಾರ್ಗ': ಖಾದರ್

ಒಂದನೇ ಪುಟದಿಂದ...

'ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ರಸ್ತೆಗಳನ್ನು ನಿರ್ಮಿಸಿ ಖಾಸಗಿಯವರಿಗೆ ಹಸ್ತಾಂತರಿಸುತ್ತಾರೆ. ಅವರು ಅಲ್ಲಿ ಗೂಂಡಾಗಳನ್ನು ನೇಮಿಸಿಕೊಳ್ಳುತ್ತಾರೆ' ಎಂದು ನರೇಂದ್ರ ಸ್ವಾಮಿ ಕಿಡಿಕಾರಿದರು.

ಟೋಲ್‌ಗಳಲ್ಲಿ ಶಾಸಕರು, ಸಂಸದರು ಶುಲ್ಕ ಪಾವತಿಸಬೇಕಾಗಿಲ್ಲ. ಇದಕ್ಕಾಗಿ ಪಾಸ್ ನೀಡಲಾಗುತ್ತದೆ. ಶಾಸಕರು, ಸಂಸದರು ಹೌದೋ ಅಲ್ಲವೋ ಎಂಬುದನ್ನು ಖಚಿತಪಡಿಸಿಕೊಳ್ಳಲು ಟೋಲ್‌ಗಳಲ್ಲಿ ಗುರುತಿನ ಚೀಟಿ ಪರಿಶೀಲನೆ ನಡೆಸಲಾಗುತ್ತದೆ. ಇದಕ್ಕೆ ಶಾಸಕರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

'ಎಚ್‌ಡಿಕೆ ಎಷ್ಟು ವರ್ಗಾವಣೆ ಮಾಡಿದರೆಂದು ಗೊತ್ತಿದೆ'

ಪ್ರಜಾವಾಣಿ ವಾರ್ತೆ

ನಾಗಮಂಗಲ (ಮಂಡ್ಯ ಜಿಲ್ಲೆ): 'ಎಚ್.ಡಿ.ಕುಮಾರಸ್ವಾಮಿ ಅವರು ಸಿ.ಎಂ. ಆಗಿದ್ದಾಗ ಎಷ್ಟು ವರ್ಗಾವಣೆ ಮಾಡಿದರೆಂದು ಗೊತ್ತಿದೆ' ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಮಂಗಳವಾರ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ವರ್ಗಾವಣೆ ಎಂಬುದು ಪ್ರಜಾಪ್ರಭುತ್ವದ ಪ್ರಕ್ರಿಯೆ. 135 ಸ್ಥಾನ ಗೆದ್ದು ಸಿದ್ದರಾಮಯ್ಯ ಅವರು ಗೌರವಯುತವಾಗಿ ಸರ್ಕಾರ ನಡೆಸುತ್ತಿದ್ದಾರೆ. ಆದರೆ ಕುಮಾರಸ್ವಾಮಿ ಇಲ್ಲಸಲ್ಲದ ಆರೋಪ ಮಾಡುತ್ತಿದ್ದಾರೆ' ಎಂದು ಟೀಕಿಸಿದರು.

'ಕುಮಾರಸ್ವಾಮಿ ಎರಡು ಬಾರಿ ಮುಖ್ಯಮಂತ್ರಿಯಾಗಿದ್ದವರು. ಅವರ ತಂದೆ ಪ್ರಧಾನಿಯಾಗಿದ್ದವರು. ಅವರು ಅಧಿಕಾರದಲ್ಲಿದ್ದಾಗ ಹೇಗೆಲ್ಲಾ ಮಾತನಾಡಿದ್ದಾರೆಂಬುದು ಎಲ್ಲರಿಗೂ ಗೊತ್ತಿದೆ. ಸಚಿವರಿಗೆ ಯತೀಂದ್ರ ಸಿದ್ದರಾಮಯ್ಯ ಸಲಹೆ ನೀಡಿದರೆ ತಪ್ಪೇನು? ಅವರ ವಿರುದ್ಧ ಅನವಶ್ಯಕವಾಗಿ ಮಾತನಾಡುವುದನ್ನು ನಿಲ್ಲಿಸಬೇಕು. ಸ್ವಲ್ಪ ಸಮಾಧಾನದಿಂದಿರಬೇಕು. ದಾಖಲೆ ಬಿಡುಗಡೆ ಮಾಡುವುದಾಗಿ ಕುಮಾರಸ್ವಾಮಿ ಹೇಳುತ್ತಲೇ ಇದ್ದಾರೆ. ಆದರೆ ಒಂದೂ ಬಿಡುಗಡೆಯಾಗಿಲ್ಲ. ಬುಟ್ಟಿಯಲ್ಲಿ ಹಾವು ಇದೆಯೋ ಇಲ್ಲವೋ ಎಂಬುದು ಗೊತ್ತಾಗಬೇಕು. ಬಿ.ಎಸ್. ಯಡಿಯೂರಪ್ಪ ಅವರು ಕುಮಾರಸ್ವಾಮಿ ಅವರಿಗೆ ಬೆಂಬಲ ನೀಡದೇ ಬೇರೆ ದಾರಿ ಇಲ್ಲ. ಬಿಜೆಪಿ- ಜೆಡಿಎಸ್ ಮೈತ್ರಿ ಆಗಲಿದೆಯೋ ಬಿಜೆಪಿ ಜೊತೆ ಜೆಡಿಎಸ್ ವಿಲೀನವಾಗುತ್ತದೋ ಗೊತ್ತಿಲ್ಲ' ಎಂದರು.

'ದಾಖಲೆ ಕೊಟ್ಟರೆ ವಜಾ ಮಾಡ್ತಾರಾ?'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಸರ್ಕಾರ ದೊಡ್ಡಮೊತ್ತ ಪಡೆದು ಅಧಿಕಾರಿಗಳ ಸ್ಥಳ ನಿಯೋಜನೆ ಮಾಡುತ್ತಿರುವುದಕ್ಕೆ ದಾಖಲೆ ಕೊಡಲು ಸಿದ್ಧ. ವರ್ಗಾವಣೆ ದಂಧೆಯ ದಾಖಲೆಕೊಟ್ಟರೆ ತನಿಖೆ ಮಾಡುತ್ತೀರಾ? ಆಯಾ ಇಲಾಖೆಗಳ ಸಚಿವರನ್ನು ವಜಾ ಮಾಡುತ್ತೀರಾ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಸವಾಲು ಹಾಕಿದರು.

ಸುದ್ದಿಗಾರರ ಜತೆ ಮಂಗಳವಾರ ಮಾತನಾಡಿದ ಅವರು, 'ಮುಖ್ಯಮಂತ್ರಿ ಕಚೇರಿಯೇ ಭ್ರಷ್ಟಾಚಾರದ ಕೇಂದ್ರ ವಾಗಿದೆ. ಆರಂಭದಲ್ಲೇ ಹೀಗಾದರೆ ಮುಂದಿನ ದಿನಗಳ ಕಥೆ ಏನು? ನಾನು ದಾಖಲೆ ಬಿಡುಗಡೆ ಮಾಡಿದರೆ ಈ ಸರ್ಕಾರ ಇರುವುದಿಲ್ಲ. ಸದನದಲ್ಲೇ ಬಿಡುಗಡೆ ಮಾಡುತ್ತೇನೆ. ಸರ್ಕಾರ ತನ್ನ ನಡೆ ತಿದ್ದಿಕೊಂಡರೆ ಒಳ್ಳೆಯದು' ಎಂದರು.

'ಹಿಂದಿನ ಎರಡು ವರ್ಷಗಳಲ್ಲಿ ಕಾಂಗ್ರೆಸ್ ಒಂದು ದಾಖಲೆಯನ್ನೂ ಬಿಡುಗಡೆ ಮಾಡಿಲ್ಲ. ನನ್ನ ಅವಧಿಯ ತನಿಖೆಯೂ ನಡೆಯಲಿ. ಚುನಾವಣೆ ಸಮಯದಲ್ಲಿ ಕೊಟ್ಟ ಜಾಹೀರಾತಿಗಷ್ಟೇ ಇವರ ಆರೋಪಗಳು ಸೀಮಿತವಾಗಿವೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಷರತ್ತಿಲ್ಲದೇ ಗ್ಯಾರಂಟಿ ಜಾರಿ ಮಾಡಿ: ಬಿಎಸ್‌ವೈ

ಒಂದನೇ ಪುಟದಿಂದ...

'ಸಿದ್ದರಾಮಯ್ಯ ಅವರ ಸರ್ಕಾರವು ಗೋಹತ್ಯೆಯ ಪರ ನಿಂತಿದೆ. ಸಮರ್ಪಕವಾಗಿ ಗ್ಯಾರಂಟಿ ಅನುಷ್ಠಾನಗೊಳಿಸದೇ ವಿದ್ಯುತ್ ದರ ಏರಿಸಿದೆ' ಎಂದು ಕಿಡಿಕಾರಿದರು.

'ಕರ್ನಾಟಕದ ಅಜಿತ್ ಪವಾರ್‌ಗೆ ಮೋಸ': ಮುಖಂಡ ಕೆ.ಎಸ್. ಈಶ್ವರಪ್ಪ ಮಾತನಾಡಿ, 'ಈ ಸರ್ಕಾರಕ್ಕೆ ಮೂರು ತಿಂಗಳಷ್ಟೇ ಭವಿಷ್ಯ. ಅದಾದ ಮೇಲೆ ಸರ್ಕಾರ ಪತನವಾಗಲಿದೆ. ರಾಜ್ಯದ ಅಜಿತ್ ಪವಾರ್‌ಗೆ ಮೋಸವಾಗಿದೆ. ಈಗಿನ ಮುಖ್ಯಮಂತ್ರಿ ಜನರಿಗೆ ಅಲ್ಲದೇ ತನಗೂ ವಂಚಿಸಿದ್ದಾರೆ ಎಂಬುದು ಪವಾರ್‌ಗೆ ತಿಳಿದಿದೆ. ಮಹಾರಾಷ್ಟ್ರದಲ್ಲಿ ನಡೆದ ಬದಲಾವಣೆಯು ರಾಜ್ಯದಲ್ಲೂ ನಡೆಯಲಿದೆ' ಎಂದರು.

'ಪದವೀಧರ ನಿರುದ್ಯೋಗಿಗಳಿಗೂ ಕಾಂಗ್ರೆಸ್ ದ್ರೋಹ ಎಸಗಿದೆ. ಎಲ್ಲ ನಿರುದ್ಯೋಗಿಗಳನ್ನೂ ಯುವನಿಧಿಗೆ ಪರಿಗಣಿಸದಿದ್ದರೆ ಹೋರಾಟ ತೀವ್ರಗೊಳ್ಳಲಿದೆ' ಎಂದು ಎಚ್ಚರಿಸಿದರು.

ಸಂಸದ ಡಿ.ವಿ.ಸದಾನಂದಗೌಡ, ಮುಖಂಡರಾದ ವಿಶ್ವೇಶ್ವರ ಹೆಗಡೆ ಕಾಗೇರಿ, ಗೋವಿಂದ ಕಾರಜೋಳ, ಬಿ.ಸಿ.ನಾಗೇಶ್, ಬಿ.ಸಿ.ಪಾಟೀಲ, ತಾರಾ ಅನೂರಾಧ ಇದ್ದರು.

'ಗ್ಯಾರಂಟಿ' ವಿಚಾರದಲ್ಲಿ ಎಚ್.ಡಿ.ಕುಮಾರಸ್ವಾಮಿ ಜವಾಬ್ದಾರಿಯಿಂದ ಹೋರಾಟ ನಡೆಸುತ್ತಿದ್ದಾರೆ. ನಾವು ಅವರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳುತ್ತೇವೆ

ಬಿ.ಎಸ್.ಯಡಿಯೂರಪ್ಪ
ಬಿಜೆಪಿ ಸಂಸದೀಯ ಮಂಡಳಿ ಸದಸ್ಯ

ಉಭಯ ಸದನಗಳ ಕಲಾಪಕ್ಕೆ ಅಡ್ಡಿ

ಒಂದನೇ ಪುಟದಿಂದ...

'ನಿಯಮಗಳ ಅನುಸಾರ ಪ್ರಶ್ನೋತ್ತರ, ಶೂನ್ಯವೇಳೆಯ ಬಳಿಕವೇ ಚರ್ಚೆಗೆ ಅವಕಾಶ ನೀಡಲು ಸಾಧ್ಯ. ಪ್ರಶ್ನೋತ್ತರಕ್ಕೆ ಸಹಕರಿಸಿ' ಎಂದು ಸಭಾಧ್ಯಕ್ಷರು ಮನವಿ ಮಾಡಿದರು. 'ನೀವು ಆಡಳಿತ ಪಕ್ಷದ ಪರ ವಾಲಬೇಡಿ. ನಮ್ಮ ಬೆಂಬಲಕ್ಕೆ ನಿಲ್ಲಬೇಕು' ಎಂದು ಬಿಜೆಪಿ ಸದಸ್ಯರು ಸ್ಪೀಕರ್ ಅವರನ್ನು ಒತ್ತಾಯಿಸಿದರು.

ಆಡಳಿತ ಮತ್ತು ವಿರೋಧ ಪಕ್ಷಗಳ ಸದಸ್ಯರ ಮಧ್ಯೆ ವಾಕ್ಸಮರ ಜೋರಾಗುತ್ತಿದ್ದಂತೆಯೇ, ಮುಖ್ಯಮಂತ್ರಿ ಸಿದ್ದರಾಮಯ್ಯ, 'ಯಾವತ್ತಾದರೂ ಪ್ರಶ್ನೋತ್ತರ ಕೈಬಿಟ್ಟು ಚರ್ಚೆ ನಡೆಸಿದ ಉದಾಹರಣೆ ಇದೆಯೆ? ನಿಯಮಗಳನ್ನು ಮುರಿಯುವುದು ಬೇಡ. ಮೊಂಡಾಟ ಆಡಬೇಡಿ' ಎಂದರು.

'ಮೊಂಡಾಟ' ಎಂಬ ಪದ ಬಳಕೆಯನ್ನು ಬಿಜೆಪಿ ಸದಸ್ಯರು ಆಕ್ಷೇಪಿಸಿದರು. ಆ ಪದವನ್ನು ಕಡತದಿಂದ ತೆಗೆದುಹಾಕುವಂತೆ ಬಸನಗೌಡ ಪಾಟೀಲ ಯತ್ನಾಳ ಸೇರಿ ದಂತೆ ಹಲವರು ಆಗ್ರಹಿಸಿದರು. ಪ್ರಶ್ನೋತ್ತರ ಮುಂದುವರಿಸಲು ಪ್ರಯತ್ನಿಸಿದಾಗ ಬಿಜೆಪಿ ಸದಸ್ಯರು ಸಭಾಧ್ಯಕ್ಷರ ಪೀಠದ ಎದುರು ಧರಣಿ ಆರಂಭಿಸಿದರು. ಗದ್ದಲ ಜೋರಾಗುತ್ತಿದ್ದಂತೆ ಸ್ಪೀಕರ್ ಕಲಾಪವನ್ನು 15 ನಿಮಿಷ ಮುಂದೂಡಿದರು.

ಸಭಾಧ್ಯಕ್ಷರ ಕೊಠಡಿಯಲ್ಲಿ ಸಂಧಾನ ಪ್ರಯತ್ನ ನಡೆದು, ಮುಕ್ಕಾಲು ಗಂಟೆ ಬಳಿಕ ಮತ್ತೆ ಕಲಾಪ ಆರಂಭವಾಯಿತು. ಬಿಜೆಪಿ ಸದಸ್ಯರು ಧರಣಿ ನಡೆಸುತ್ತಾ, 'ದೋಖಾ ದೋಖಾ ಕಾಂಗ್ರೆಸ್ ದೋಖಾ...' 'ಮಹದೇವಪ್ಪಗೂ ದೋಖಾ, ಕಾಕಾ ಪಾಟೀಲಗೂ ದೋಖಾ...' ಎಂದು ಘೋಷಣೆ ಕೂಗುತ್ತಿದ್ದರು.

ಭೋಜನ ವಿರಾಮದ ಬಳಿಕವೂ ಬಿಜೆಪಿ ಸದಸ್ಯರು ಧರಣಿ ಮುಂದುವರಿಸಿದರು. ಮತ್ತೊಮ್ಮೆ 10 ನಿಮಿಷಗಳ ಕಾಲ ಮುಂದೂಡಿ ಸಂಧಾನ ನಡೆಯಿತು. ಅದನ್ನು ಒಪ್ಪದ ಬಿಜೆಪಿ ಸದಸ್ಯರು, ಧರಣಿ ಮುಂದುವರಿಸಿದರು.

'ನಿಯಮ 69 ರಡಿ ವಿಷಯ ಪ್ರಸ್ತಾಪಕ್ಕೆ ಅವಕಾಶ ನೀಡುತ್ತೇನೆ' ಎಂದು ಖಾದರ್ ಹೇಳಿದರು. ಆದರೆ, ಬಿಜೆಪಿ ಸದಸ್ಯರು ಕೇಳುವ ಸ್ಥಿತಿಯಲ್ಲಿ ಇರಲಿಲ್ಲ. 'ಸಭಾಧ್ಯಕ್ಷರೇ ಇದು ಕೆಪಿಸಿಸಿ ಅಧಿವೇಶನವಲ್ಲ ವಿಧಾನಸಭೆ. ವಿರೋಧ ಪಕ್ಷದವರ ಮುಖವನ್ನೇ ನೋಡದಿದ್ದರೆ ಹೇಗೆ? ಏಕಪಕ್ಷೀಯವಾಗಿ ವರ್ತಿಸಬೇಡಿ' ಎಂದು ವಿ.ಸುನಿಲ್‌ಕುಮಾರ್ ಕುಟುಕಿದರು. ಇನ್ನು ಕೆಲವು ಸದಸ್ಯರು, 'ಸ್ಪೀಕರ್ ಒನ್ ಸೈಡ್ ...ಸ್ಪೀಕರ್ ಒನ್ ಸೈಡ್' ಎಂದು ಘೋಷಣೆ ಕೂಗಿದರು. ಇದನ್ನು ಟೀಕಿಸಿದ ಡಿ.ಕೆ.ಶಿವಕುಮಾರ್ 'ಏನು ಒನ್ ಸೈಡ್, ಇವರು ನಿಮ್ಮ ಸ್ಪೀಕರ್ ಹಾಗೆ ವರ್ತಿಸುತ್ತಿಲ್ಲ' ಎಂದು ಸಭಾಧ್ಯಕ್ಷರ ರಕ್ಷಣೆಗೆ ಧಾವಿಸಿದರು.

ಪರಿಷತ್‌ನಲ್ಲೂ ನಡೆಯದ ಕಲಾಪ: ವಿಧಾನ ಪರಿಷತ್‌ನಲ್ಲೂ ಇದೇ ವಿಚಾರದ ಚರ್ಚೆಗೆ ಪಟ್ಟುಹಿಡಿದ ಬಿಜೆಪಿ ಸದಸ್ಯರು, ಧರಣಿ ಆರಂಭಿಸಿದರು. ಬೆಳಿಗ್ಗೆ ಪೀಠದಲ್ಲಿದ್ದ ಉಪ ಸಭಾಪತಿ ಎಂ.ಕೆ. ಪ್ರಾಣೇಶ್ ಎರಡು ಬಾರಿ ಕಲಾಪ ಮುಂದೂಡಿದರು.

ಮಧ್ಯಾಹ್ನದ ಬಳಿಕ ಕಲಾಪ ಆರಂಭವಾಗುತ್ತಿದ್ದಂತೆ ಬಿಜೆಪಿ ಸದಸ್ಯರು ಧರಣಿ ಮುಂದುವರಿಸಿದರು. ಕಲಾಪ ಮುಂದೂಡಿದ ಸಭಾಪತಿ ಬಸವರಾಜ ಹೊರಟ್ಟಿ ಸಂಧಾನಕ್ಕೆ ಯತ್ನಿಸಿದರು. ಪುನಃ ಕಲಾಪ ಆರಂಭವಾದಾಗಲೂ ಬಿಜೆಪಿ ಸದಸ್ಯರು ಪಟ್ಟು ಸಡಿಲಿಸದೇ ಇದ್ದಾಗ, ಕಲಾಪ ಮುಂದೂಡಲಾಯಿತು.

ಕೊಬ್ಬರಿ ದರ ಕುಸಿತ ಜೆಡಿಎಸ್ ಧರಣಿ

ಕೊಬ್ಬರಿ ದರ ಕುಸಿತದ ಕುರಿತು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಕಾಂಗ್ರೆಸ್‌ನ ಶಿವಲಿಂಗೇಗೌಡ ಮುಂದಾದರು. ಆಗ ಆಕ್ಷೇಪಿಸಿದ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ, 'ಇದೇ ವಿಚಾರದಲ್ಲಿ ನಮ್ಮ ಪಕ್ಷ ನಿಲುವಳಿ ಸೂಚನೆಯ ನೋಟಿಸ್ ನೀಡಿದೆ. ಈ ಮಹಾ ನಾಯಕರಿಗೆ ಈಗ ಕೊಬ್ಬರಿ ರೈತರ ಮೇಲೆ ಪ್ರೀತಿ ಬಂದಿದೆ' ಎಂದು ವಾಗ್ದಾಳಿ ನಡೆಸಿದರು. ಶಿವಲಿಂಗೇಗೌಡರು ಮಾತು ಮುಂದುವರಿಸಲು ಯತ್ನಿಸಿದಾಗ, ಜೆಡಿಎಸ್ ಸದಸ್ಯರು ಸಭಾಧ್ಯಕ್ಷರ ಪೀಠದ ಎದುರು ಧಾವಿಸಿ ಧರಣಿ ಆರಂಭಿಸಿದರು.

ವಿರೋಧ ಪಕ್ಷದ ನಾಯಕನಿಲ್ಲದೆ ಧರಣಿ

ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕರ ಆಯ್ಕೆಯೇ ಆಗಿಲ್ಲ. ಶಾಸಕಾಂಗ ಪಕ್ಷದ ನಾಯಕನೇ ಇಲ್ಲದೆ ಬಿಜೆಪಿ ಸದಸ್ಯರು ಮಂಗಳವಾರ ಇಡೀ ದಿನ ಧರಣಿ ನಡೆಸಿದರು. ವಿರೋಧ ಪಕ್ಷದ ನಾಯಕರ ಪಕ್ಕದ ಆಸನದಲ್ಲಿ ಕುಳಿತಿದ್ದ ಬಸವರಾಜ ಬೊಮ್ಮಾಯಿ ನೇತೃತ್ವ ವಹಿಸಿದ್ದರು. ಆರ್. ಅಶೋಕ, ವಿ. ಸುನಿಲ್ ಕುಮಾರ್, ಡಾ.ಸಿ.ಎನ್. ಅಶ್ವತ್ಥ ನಾರಾಯಣ ಮತ್ತು ಬಸವನಗೌಡ ಪಾಟೀಲ ಯತ್ನಾಳ ಪೈಪೋಟಿಗೆ ಬಿದ್ದವರಂತೆ ಘೋಷಣೆ ಕೂಗುತ್ತಿದ್ದರು.

'ಈಗಲೇ ಬಾವಿಗೆ ಬಿದ್ದಿಲ್ಲವೆ?'

ನಿಲುವಳಿ ಸೂಚನೆ ಮಂಡನೆಗೆ ಅವಕಾಶ ಕೋರಿ ಪ್ರಾಥಮಿಕ ಪ್ರಸ್ತಾವ ಮಂಡಿಸಲು ಅವಕಾಶ ನೀಡದಿರುವುದನ್ನು ವಿರೋಧಿಸಿ ಧರಣಿ ಆರಂಭಿಸಲು ಮುಂದಾದಾಗ, 'ಎಲ್ಲರೂ ಬಾವಿಗೆ (ಸಭಾಧ್ಯಕ್ಷರ ಪೀಠದ ಎದುರು) ಬನ್ನಿ' ಎಂದು ಬಸವರಾಜ ಬೊಮ್ಮಾಯಿ ಬಿಜೆಪಿ ಸದಸ್ಯರನ್ನು ಕರೆದರು. 'ಈಗಲೇ ಬಾವಿಗೆ ಬಿದ್ದಿಲ್ಲವೆ? ಇನ್ನೂ ಬೀಳಬೇಕಾ' ಎಂದು ಬಿಜೆಪಿಯ ಎಸ್.ಆರ್. ವಿಶ್ವನಾಥ್ ಮಾರ್ಮಿಕವಾಗಿ ಕೇಳಿದರು.

ಕಾಂಗ್ರೆಸ್ ಸರ್ಕಾರ ವಿರೋಧ ಪಕ್ಷಗಳ ಧ್ವನಿಯನ್ನು ದಮನಿಸಲು ಹೊರಟಿದೆ. ಸರ್ಕಾರದ ನಿರಂಕುಶ ವರ್ತನೆಯ ಮೇಲೆ ಅಂಕುಶ ಹಾಕಿ

ಬಸವರಾಜ ಬೊಮ್ಮಾಯಿ, ಶಾಸಕ

ಬಿಜೆಪಿ ಸದಸ್ಯರು 45 ದಿನಗಳಿಂದ ತೊಳಲಾಟದಲ್ಲಿದ್ದಾರೆ. ಪ್ರಶ್ನೋತ್ತರದ ಬಳಿಕ ಅವರ ಎಲ್ಲ ಪ್ರಶ್ನೆಗಳಿಗೂ ಸರ್ಕಾರ ಉತ್ತರ ನೀಡಲಿದೆ

ಡಿ.ಕೆ.ಶಿವಕುಮಾರ್, ಡಿ.ಸಿ.ಎಂ

ಆಡಳಿತ, ವಿರೋಧ ಪಕ್ಷವೆಂಬ ತಾರತಮ್ಯವಿಲ್ಲದೇ ಅವಕಾಶ ನೀಡುತ್ತಿದ್ದೇನೆ. ಸದನದ ನಿಯಮ ಮೀರಿ ಅವಕಾಶ ಕೊಡಿ ಎಂದು ಕೆಟ್ಟ ಸಂಪ್ರದಾಯಕ್ಕೆ ನಾಂದಿ ಹಾಡಬೇಡಿ

ಯು.ಟಿ.ಖಾದರ್, ಸಭಾಧ್ಯಕ್ಷ

ಯುಎಪಿಎ ಚರ್ಚೆಗೆ ನಕಾರ ಐಐಎಸ್‌ಸಿ ಧೋರಣೆಗೆ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾನೂನುಬಾಹಿರ ಚಟುವಟಿಕೆ ನಿಗ್ರಹ ಕಾಯ್ದೆ (ಯುಎಪಿಎ) ಕುರಿತು ಚರ್ಚೆ ನಡೆಸಲು ಅವಕಾಶ ನೀಡದಿರುವ ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್ಸಿ) ಧೋರಣೆಗೆ 500ಕ್ಕೂ ಹೆಚ್ಚು ವಿಜ್ಞಾನಿಗಳು, ಶಿಕ್ಷಣ ತಜ್ಞರು ಮತ್ತು ವಿದ್ಯಾರ್ಥಿಗಳು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಜೂನ್ 28ರಂದು ವಿದ್ಯಾರ್ಥಿ ಹೋರಾಟಗಾರರಾದ ನತಾಶಾ ನರ್ವಾಲ್ ಮತ್ತು ದೇವಾಂಗನಾ ಕಲಿತಾ ನೇತೃತ್ವದಲ್ಲಿ ಯುಎಪಿಎ ಕುರಿತ ಚರ್ಚಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಪೌರತ್ವ ತಿದ್ದುಪಡಿ ಕಾಯ್ದೆ ವಿರುದ್ಧ ಹೋರಾಟದಲ್ಲಿ ಈ ಇಬ್ಬರು ಭಾಗಿಯಾಗಿದ್ದರು. ದೆಹಲಿ ಹಿಂಸಾಚಾರಕ್ಕೆ ಸಂಬಂಧಿಸಿದಂತೆ 2020ರಲ್ಲಿ ಯುಎಪಿಎ ಅಡಿಯಲ್ಲಿ ಇವರನ್ನು ಬಂಧಿಸಲಾಗಿತ್ತು. ನಂತರ, ದೆಹಲಿ ಹೈಕೋರ್ಟ್ ನೀಡಿದ ಜಾಮೀನಿನ ಮೇರೆಗೆ ಇಬ್ಬರನ್ನು ಬಿಡುಗಡೆ ಮಾಡಲಾಗಿತ್ತು.

ಐಐಎಸ್‌ಸಿಯ ನಿರಂತರ ಶಿಕ್ಷಣ ಕೇಂದ್ರದಲ್ಲಿ (ಸಿಸಿಇ) ಯುಎಪಿಎ ಕುರಿತ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮಕ್ಕೆ ಸಿಸಿಇ ಮುಖ್ಯಸ್ಥರು ಅನುಮೋದನೆ ನೀಡಿದ್ದರು.

ಆದರೆ, ಜೂನ್ 27ರಂದು ಸಂಘಟಕರಿಗೆ ಇ-ಮೇಲ್ ಕಳುಹಿಸಿದ ಐಐಎಸ್‌ಸಿ ರಿಜಿಸ್ಟ್ರಾರ್ ಕ್ಯಾಪ್ಟನ್ ಶ್ರೀಧರ್ ವಾರಿಯರ್, 'ಮುಂಚಿತವಾಗಿಯೇ ಆಡಳಿತಾತ್ಮಕ ಅನುಮೋದನೆ ಪಡೆದುಕೊಂಡಿಲ್ಲ' ಎನ್ನುವ ಕಾರಣ ನೀಡಿ ಅನುಮತಿ ನಿರಾಕರಿಸಿದರು. 'ಕಾರ್ಯಕ್ರಮದ ಬಗ್ಗೆ ದೂರುಗಳು ಸಹ ಬಂದಿವೆ' ಎಂದು ಇ-ಮೇಲ್‌ನಲ್ಲಿ ಉಲ್ಲೇಖಿಸಲಾಗಿತ್ತು.

ಐಐಎಸ್‌ಸಿ ನಡೆಗೆ ಆಕ್ಷೇಪ ವ್ಯಕ್ತಪಡಿಸಿ ನಿರ್ದೇಶಕ ಪ್ರೊ. ಗೋವಿಂದನ್ ರಂಗರಾಜನ್ ಅವರಿಗೆ ಪತ್ರ ಬರೆದಿರುವ ವಿಜ್ಞಾನಿಗಳು, ಶಿಕ್ಷಣ ತಜ್ಞರು ಮತ್ತು ವಿದ್ಯಾರ್ಥಿಗಳು, 'ನಾವು ಬದುಕುವ ಸಮಾಜದಲ್ಲಿನ ವಿಚಾರಗಳ ಕುರಿತು ಚರ್ಚಿಸಲು ಮುಕ್ತ ಸ್ವಾತಂತ್ರ್ಯವಿರುವ ವಾತಾವರಣ ಕಲ್ಪಿಸಬೇಕು' ಎಂದು ಒತ್ತಾಯಿಸಿದ್ದಾರೆ.

'ಈ ರೀತಿಯ ಧೋರಣೆಯಿಂದ ಸಂಸ್ಥೆಯ ಘನತೆಗೆ ಜಾಗತಿಕವಾಗಿ ಧಕ್ಕೆಯಾಗಿದೆ. ಕ್ರಿಯಾಶೀಲ ಪ್ರಜಾಪ್ರಭುತ್ವದ ದೃಷ್ಟಿಯಿಂದ ಇಂತಹ ಚರ್ಚೆಗಳು ಅಗತ್ಯವಾಗಿವೆ. ನತಾಶಾ ಮತ್ತು ದೇವಾಂಗನಾ ಅವರ ಅನುಭವಗಳನ್ನು ಆಲಿಸಲು ಇದೊಂದು ಉತ್ತಮ ವೇದಿಕೆಯಾಗಿತ್ತು. ಶಾಂತಿಯುತವಾಗಿ ಚರ್ಚೆ ನಡೆಸಲು ಅವಕಾಶ ನೀಡದ ಸಂಸ್ಥೆಯು, ವೈಜ್ಞಾನಿಕ ವಿಶ್ಲೇಷಣೆಗಳನ್ನು ನಡೆಸಲು ಹೇಗೆ ಉತ್ತೇಜನ ನೀಡುತ್ತದೆ' ಎಂದು ಪ್ರಶ್ನಿಸಿದ್ದಾರೆ.

ಐಐಎಸ್‌ಸಿ, ಐಐಟಿ, ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಫಂಡಮೆಂಟಲ್ ರಿಸರ್ಚ್, ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್, ರಾಮನ್ ಸಂಶೋಧನಾ ಸಂಸ್ಥೆ ಹಾಗೂ ಯೂನಿವರ್ಸಿಟಿ ಆಫ್ ಕ್ಯಾಲಿಫೋರ್ನಿಯಾ, ಕಾರ್ನೆಲ್ ಯುನಿವರ್ಸಿಟಿ, ಇಂಪೀರಿಯಲ್ ಕಾಲೇಜ್ ಲಂಡನ್, ಸೋಲ್ ನ್ಯಾಷನಲ್ ಯುನಿವರ್ಸಿಟಿ ಸೇರಿದಂತೆ ವಿದೇಶದ ಹಲವು ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳು, ಶಿಕ್ಷಣ ತಜ್ಞರು ಈ ಪತ್ರಕ್ಕೆ ಸಹಿ ಹಾಕಿದ್ದಾರೆ.

ಆದರೆ, ವಿದ್ಯಾರ್ಥಿಗಳ ಮತ್ತು ತಜ್ಞರ ಅಭಿಪ್ರಾಯವನ್ನು ಸಂಸ್ಥೆಯ ಅಭಿಪ್ರಾಯವೆಂದು ಬಿಂಬಿಸುವುದಿಲ್ಲ ಎಂದು ಸ್ಪಷ್ಟಪಡಿಸಲಾಗಿದೆ.

'ಕಾರ್ಯಕ್ರಮ ಆಯೋಜಿಸಲು ಅಗತ್ಯ ಇದ್ದ ಎಲ್ಲ ಅನುಮತಿಗಳನ್ನು ಮುಂಚಿತವಾಗಿಯೇ ಪಡೆಯಲಾಗಿತ್ತು' ಎಂದು ಐಐಎಸ್‌ಸಿಯ ಪಿಎಚ್.ಡಿ. ವಿದ್ಯಾರ್ಥಿ ಶೈರಿಕ್ ಸೇನ್‌ಗುಪ್ತಾ ತಿಳಿಸಿದ್ದಾರೆ.

ಅನುಮತಿ ಸಿಗದ ಕಾರಣ ಕ್ಯಾಂಪಸ್‌ನಲ್ಲಿರುವ ಫುಡ್‌ಕೋರ್ಟ್ ಸಮೀಪದಲ್ಲೇ ವಿದ್ಯಾರ್ಥಿಗಳು ಅನೌಪಚಾರಿಕವಾಗಿ ಈ ಕಾರ್ಯಕ್ರಮ ನಡೆಸಿದರು. ಆದರೆ, ಭದ್ರತಾ ಸಿಬ್ಬಂದಿ ಈ ಅನೌಪಚಾರಿಕ ಕಾರ್ಯಕ್ರಮಕ್ಕೂ ಅಡ್ಡಿಪಡಿಸಲು ಯತ್ನಿಸಿದರು ಎಂದು 'ಇಂಟರ್‌ನ್ಯಾಷನಲ್ ಸೆಂಟರ್ ಫಾರ್ ಥಿಯರಿಟಿಕಲ್ ಸೈನ್ಸಸ್'ನ ಪ್ರೊ. ಸುಬ್ರತ್ ರಾಜು ತಿಳಿಸಿದ್ದಾರೆ.



ಮುಂಗಾರು ಮಳೆ ಚುರುಕಾದ ಕಾರಣ ವಿಜಯನಗರ ಜಿಲ್ಲೆ ಹರಪನಹಳ್ಳಿ ತಾಲ್ಲೂಕಿನ ಜಂಬುಲಿಂಗನಹಳ್ಳಿಯಲ್ಲಿ ಮಂಗಳವಾರ ಹೊಲದಲ್ಲಿ ರೈತ ಮಹಿಳೆಯರು ಮೆಕ್ಕೆಜೋಳ ಬಿತ್ತನೆಯಲ್ಲಿ ತೊಡಗಿದ್ದರು ಪ್ರಜಾವಾಣಿ ಚಿತ್ರ/ ಸತೀಶ ಬಡಿಗೇರ್



ದಕ್ಷಿಣ ಕನ್ನಡ ಜಿಲ್ಲೆ ಚಾರ್ಮಾಡಿ ಹಳ್ಳದಿಂದ ಚಾರ್ಮಾಡಿ ಘಾಟಿವರೆಗಿನ 3 ಕಿ.ಮೀ ರಸ್ತೆಯಲ್ಲಿ ಜಾರುವಿಕೆ ತಡೆಗೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಜೆಸಿಬಿ ಮೂಲಕ ರಸ್ತೆಯಲ್ಲಿ ಗೆರೆಗಳನ್ನು ಕೊರೆದು ಒರಟು ಮಾಡುವ ಕಾರ್ಯ ಪ್ರಾರಂಭಿಸಿದೆ

ರೈತರ ಮೊಗದಲ್ಲಿ ಮಂದಹಾಸ • ಕೃಷಿ ಚಟುವಟಿಕೆ ಆರಂಭ • ಹಲವೆಡೆ ಮನೆಗಳಿಗೆ ಹಾನಿ

ಮುಂಗಾರು ಬಿರುಸು: ಬಿತ್ತನೆ ಚುರುಕು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಮಂಗಳವಾರ ಮುಂಗಾರು ಮಳೆ ಬಿದ್ದಿದ್ದು ಕೃಷಿ ಚಟುವಟಿಕೆಗಳು ಚುರುಕುಗೊಂಡಿವೆ. ಚಿಕ್ಕಮಗಳೂರು, ಶಿವಮೊಗ್ಗ, ದಾವಣಗೆರೆ, ಚಿತ್ರದುರ್ಗ ಜಿಲ್ಲೆಗಳಲ್ಲಿ ರೈತರು ಬಿತ್ತನೆ ಕಾರ್ಯ ಆರಂಭಿಸಿದ್ದಾರೆ.

(ಶಿವಮೊಗ್ಗ ವರದಿ): ಜಿಲ್ಲೆಯ ವಿವಿಧೆಡೆ ಉತ್ತಮ ಮಳೆಯಾಗಿದೆ. ಜಿಲ್ಲೆಯಲ್ಲಿ ಮಳೆ ಬಿರುಸು ಪಡೆದಿರುವುದರಿಂದ ಕೃಷಿ ಚಟುವಟಿಕೆ ಚುರುಕುಗೊಂಡಿದೆ. ಭತ್ತದ ನಾಟಿ ಮಾಡುವ, ಗೊಬ್ಬರ ಹಾಕುವ ಕಾರ್ಯದಲ್ಲಿ ರೈತರು ನಿರತರಾಗಿದ್ದಾರೆ.

ಹೊಸನಗರ, ತುಮರಿಯ ಹೊಳೆ ಬಾಗಿಲು, ಕುಂಸಿ, ಆಯನೂರು, ರಿಪ್ಪನ್‌ಪೇಟೆ, ಆನಂದಪುರ, ಕೋಣಂದೂರು, ಸಾಗರದಲ್ಲೂ ಹದ ಮಳೆಯಾಗಿದೆ.

(ಚಿತ್ರದುರ್ಗ ವರದಿ): ಜಿಲ್ಲೆಯ ಹೊಳಲ್ಕೆರೆ, ಹೊಸದುರ್ಗ, ಹಿರಿಯೂರು ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಹದ ಮಳೆಯಾಗಿದೆ. ಚಳ್ಳಕೆರೆ, ಚಿತ್ರದುರ್ಗ ತಾಲ್ಲೂಕಿನ ಅಲ್ಲಲ್ಲಿ ತುಂತುರು ಮಳೆ ಸುರಿದಿದೆ. ಎರಡು ದಿನಗಳಿಂದ ಮಳೆ ಬರುತ್ತಿರುವುದರಿಂದ ಕೃಷಿ ಚಟುವಟಿಕೆ ಚುರುಕು ಪಡೆದಿದೆ. ರೈತರು ಮೆಕ್ಕೆಜೋಳ, ಶೇಂಗಾ ಬಿತ್ತನೆಯಲ್ಲಿ ತೊಡಗಿದ್ದಾರೆ.

(ಮಂಗಳೂರು ವರದಿ): ಮಳೆಯಿಂದಾಗಿ ದಕ್ಷಿಣ ಕನ್ನಡ ಜಿಲ್ಲೆಯ ಉಳ್ಳಾಲ ತಾಲ್ಲೂಕಿನ ಬೋಳಿಯಾರು ಗ್ರಾಮದ ಅರ್ಕಮೆ, ಉಳ್ಳಾಲ ಬಳಿಯ ಕಲ್ಲಾಪು ಹಾಗೂ ಪುತ್ತೂರು ತಾಲ್ಲೂಕಿನ ಆರ್ಯಾಪು ಗ್ರಾಮಗಳಲ್ಲಿ ತಲಾ ಒಂದು ಮನೆ ಭಾಗಶಃ ಹಾನಿಗೊಳಗಾಗಿದೆ. ಕಡಬ ತಾಲ್ಲೂಕಿನ ಬೆಳಂದೂರಿನಲ್ಲಿ ರಸ್ತೆಗೆ ಮರ ಬಿದ್ದು ಪುತ್ತೂರು-ಕಾಣಿಯೂರು ನಡುವೆ ವಾಹನ ಸಂಚಾರಕ್ಕೆ ಕೆಲ ಕಾಲ ಅಡ್ಡಿಯಾಯಿತು.

ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಹಳ್ನಾಡು, ಕಾರ್ಕಳ ತಾಲ್ಲೂಕಿನ ಕಲ್ಯ, ಬ್ರಹ್ಮಾವರ ತಾಲ್ಲೂಕಿನ ಹಂದಾಡಿ, ಬನ್ನಾಡಿಯಲ್ಲಿ ಮನೆಗಳಿಗೆ ಭಾಗಶಃ ಹಾನಿಯಾಗಿದೆ. ರಾಷ್ಟ್ರೀಯ ಹೆದ್ದಾರಿ 169ಎಯಲ್ಲಿ ಮಣಿಪಾಲ ಸಮೀಪ ಗುಡ್ಡದ ಮಣ್ಣು ರಸ್ತೆಗೆ ಜರಿದು ಕೆಲಕಾಲ ಸಂಚಾರಕ್ಕೆ ಅಡ್ಡಿಯಾಗಿತ್ತು.

ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ, ಕಳಸ, ಶೃಂಗೇರಿ, ಎನ್‌.ಆರ್‌. ಪುರ, ಆಲ್ದೂರು ಭಾಗದಲ್ಲಿ ಉತ್ತಮ ಮಳೆಯಾಗಿದೆ. ಮಳೆಗಾಗಿ ಕಾದಿದ್ದ ಮಲೆನಾಡಿನ ಜನ ಕೃಷಿ ಚಟುವಟಿಕೆ ಚುರುಕುಗೊಳಿಸಿದ್ದಾರೆ.

(ಮಡಿಕೇರಿ ವರದಿ): ಕೊಡಗು ಜಿಲ್ಲೆಯಲ್ಲಿ ಮಂಗಳವಾರ ಬಿರುಗಾಳಿಯಿಂದ ಮರಗಳು ಬುಡಮೇಲಾದವು. ಮಡಿಕೇರಿ– ಮೈಸೂರು ಹೆದ್ದಾರಿ ಸುಂಟಿಕೊಪ್ಪ ಸಮೀಪದ ಬೋಯಿಕೇರಿ ಬಳಿ ಮರ ಹಾಗೂ ವಿದ್ಯುತ್ ಕಂಬಗಳು ರಸ್ತೆಗೆ ಬಿದ್ದಿದ್ದು, ವಾಹನ ಸಂಚಾರ ಅಸ್ತವ್ಯಸ್ತಗೊಂಡಿತ್ತು.

ಮಡಿಕೇರಿ ನಗರದಲ್ಲಿ ಮಂಗಳವಾರ ದಿನವಿಡೀ ಮಳೆ ಸುರಿದರೆ, ಮಧ್ಯಾಹ್ನದ ನಂತರ ಭಾಗಮಂಡಲ ವ್ಯಾಪ್ತಿಯಲ್ಲಿ ಮಳೆಯಾಯಿತು. ಬಲಮುರಿಯಲ್ಲಿ ಕಾವೇರಿ ನದಿ ನೀರಿನಮಟ್ಟ ಏರಿಕೆಯಾಗಿದೆ.

ಭಟ್ಕಳ: ರಾಷ್ಟ್ರೀಯ ಹೆದ್ದಾರಿ ಜಲಾವೃತ-(ಹುಬ್ಬಳ್ಳಿ ವರದಿ): ಉತ್ತರ ಕನ್ನಡ ಜಿಲ್ಲೆಯ ಭಟ್ಕಳದಲ್ಲಿ ನಿರಂತರ ಮಳೆಯಾಗುತ್ತಿದ್ದು, ಕಳೆದ 24 ಗಂಟೆಗಳಲ್ಲಿ 15 ಸೆಂ.ಮೀ. ಮಳೆಯಾಗಿದೆ. ರಾಷ್ಟ್ರೀಯ ಹೆದ್ದಾರಿ ಸಂಪೂರ್ಣ ಜಲಾವೃತ್ತವಾಗಿತ್ತು.

ಹೆದ್ದಾರಿ ಅಂಚಿನಲ್ಲಿರುವ ರಂಗಿನಕಟ್ಟಾ, ಕೋಗ್ತಿ ಭಾಗದ 25ಕ್ಕೂ ಹೆಚ್ಚು ಮನೆಗಳು, ಅಂಗಡಿಗಳಿಗೆ ನೀರು ನುಗ್ಗಿದೆ. ಶಿರಾಲಿ ಗ್ರಾಮದಲ್ಲೂ ಕೆಲ ಮನೆಗಳಿಗೆ ನೀರು ನುಗ್ಗಿದೆ. ಗದಗ ಜಿಲ್ಲೆಯ ರೋಣ ಹಾಗೂ ಲಕ್ಷ್ಮೇಶ್ವರ, ವಿಜಯಪುರ ಜಿಲ್ಲೆಯ ದೇವರ ಹಿಪ್ಪರಗಿಯಲ್ಲಿ ಉತ್ತಮ ಮಳೆಯಾಗಿದೆ.

ವಿಜಯನಗರ ಜಿಲ್ಲೆಯ ಹರಪನಹಳ್ಳಿ, ಕೊಟ್ಟೂರು, ಕೂಡ್ಲಿ ತಾಲ್ಲೂಕುಗಳಲ್ಲಿ ಉತ್ತಮ ಮಳೆಯಾಗಿದೆ.

2 ದಿನ ಮಳೆ ಅಬ್ಬರ ಮುಂದುವರಿಕೆ

ಬೆಂಗಳೂರು: ರಾಜ್ಯದ ಕರಾವಳಿ ಹಾಗೂ ದಕ್ಷಿಣ ಒಳನಾಡು ವ್ಯಾಪ್ತಿಯ ಜಿಲ್ಲೆಗಳಲ್ಲಿ ಇನ್ನೂ ಎರಡು ದಿನ ಮಳೆ ಅಬ್ಬರ ಮುಂದುವರಿಯಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ನೆಚ್ಚರಿಕೆ ನೀಡಿದೆ.

ಜುಲೈ 5ರಂದು ಬೆಳಗಾವಿ, ಉತ್ತರ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಗಳಿಗೆ 'ಆರೆಂಜ್ ಅಲರ್ಟ್', ಅದೇ ದಿನ ವಿಜಯಪುರ, ಗದಗ, ಕೊಪ್ಪಳ, ಧಾರವಾಡ, ಹಾವೇರಿ, ದಾವಣಗೆರೆ, ಹಾಸನ ಹಾಗೂ ಕೊಡಗು ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ನೀಡಲಾಗಿದೆ. ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಬುಧವಾರ ಕೆಲವೆಡೆ 20 ಸೆಂ.ಮೀ.ಗೂ ಅಧಿಕ ಮಳೆಯಾಗುವ ಸಾಧ್ಯತೆ ಇದ್ದು, 'ರೆಡ್ ಅಲರ್ಟ್' ಘೋಷಣೆ ಮಾಡಲಾಗಿದೆ. ಜುಲೈ 6ರಂದು ಉತ್ತರ ಕನ್ನಡ, ಉಡುಪಿ ಹಾಗೂ ಚಿಕ್ಕಮಗಳೂರು ಜಿಲ್ಲೆಗೆ 'ಆರೆಂಜ್ ಅಲರ್ಟ್' ಹಾಗೂ ಅದೇ ದಿನ ಬೆಳಗಾವಿ, ಶಿವಮೊಗ್ಗ, ದಕ್ಷಿಣ ಕನ್ನಡ, ಕೊಡಗಿಗೆ 'ಯೆಲ್ಲೊ ಅಲರ್ಟ್' ನೀಡಲಾಗಿದೆ.

ಮೂಡಲಗಿ: ಮಳೆಗಾಗಿ 'ಬಂದ್' ಹರಕೆ

ಮೂಡಲಗಿ(ಬೆಳಗಾವಿ ಜಿಲ್ಲೆ): ಮಳೆಗಾಗಿ ಪ್ರಾರ್ಥಿಸಿ ಜನರು ಹರಕೆ ಹೊತ್ತಿದ್ದರಿಂದ ಮಂಗಳವಾರ ವ್ಯಾಪಾರಸ್ಥರು ಅಂಗಡಿಗಳನ್ನು ಮುಚ್ಚಿದರು. ಇದರಿಂದ ಪಟ್ಟಣದಲ್ಲಿ ಬಂದ್ ವಾತಾವರಣವಿತ್ತು.

'ಮಂಗಳವಾರ ಅಷ್ಟೇ ಅಲ್ಲ, ಪ್ರತಿ ಶುಕ್ರವಾರ ವಹಿವಾಟು ಬಂದ್ ಮಾಡಿ ಇಲ್ಲಿನ ವರ್ತಕರು ಮಳೆ ಬರಲೆಂದು ಕೋರುತ್ತಾರೆ. ಕಳೆದ ನಾಲ್ಕು ಶುಕ್ರವಾರ ಬಂದ್ ಆಗಿತ್ತು. ಮಂಗಳವಾರ ಸಂಪೂರ್ಣ ಬಂದ್ ಮಾಡಿ ಹರಕೆ ತೀರಿಸಲಾಯಿತು' ಎಂದು ಸ್ಥಳೀಯರು ತಿಳಿಸಿದರು.

'ಇಲ್ಲಿನ ಶಿವಬೋಧರಂಗ ಮಠಾಧೀಶರ ಸಂಕಲ್ಪದಂತೆ ನಾಲ್ಕು ಶುಕ್ರವಾರ ಮತ್ತು ಒಂದು ಮಂಗಳವಾರ ಬಂದ್ ರೂಪದಲ್ಲಿ ಹರಕೆ ತೀರಿಸುವ ಪದ್ಧತಿ ಮೂರು ದಶಕಗಳಿಂದ ಇದೆ. ಮನೆಗಳಲ್ಲಿ ರೊಟ್ಟಿ, ಚಪಾತಿಯನ್ನೂ ಬೇಯಿಸುವುದಿಲ್ಲ' ಎಂದೂ ಅವರು ಮಾಹಿತಿ ನೀಡಿದರು.

24 ಗಂಟೆ ಅವಧಿಯಲ್ಲಿ ಸುರಿದ ಮಳೆ ಪ್ರಮಾಣ (ಸೆಂ.ಮೀಗಳಲ್ಲಿ)	
ಫಜೀರು (ದಕ್ಷಿಣ ಕನ್ನಡ)	17.25
ಮೂಲ್ಕಿ (ದಕ್ಷಿಣ ಕನ್ನಡ)	17
ಮುನ್ನೂರು (ದಕ್ಷಿಣ ಕನ್ನಡ)	15.5
ಕೋಟೆಕಾರು (ದಕ್ಷಿಣ ಕನ್ನಡ)	15.4
ಪಣಂಬೂರು, ಮಂಗಳೂರು (ದಕ್ಷಿಣ ಕನ್ನಡ)	15
ಭಟ್ಕಳ (ಉತ್ತರಕನ್ನಡ)	15
ಪಾಂಡೇಶ್ವರ (ದಕ್ಷಿಣ ಕನ್ನಡ)	13.25
ಆಗುಂಬೆ (ಶಿವಮೊಗ್ಗ)	12.42
ಬಾಳ (ದಕ್ಷಿಣ ಕನ್ನಡ)	12.25
ಅಂಕೋಲ (ಉತ್ತರ ಕನ್ನಡ)	12
ಕುಮಟಾ, ಶಿರಾಲಿ (ಉತ್ತರಕನ್ನಡ)	11
ಮಂಗಳೂರು ನಗರ (ದಕ್ಷಿಣ ಕನ್ನಡ)	11.9
ಚೆಳ್ಯಾರು (ದಕ್ಷಿಣ ಕನ್ನಡ)	11.8
ಕೆಮ್ರಾಲ್ (ದಕ್ಷಿಣ ಕನ್ನಡ)	11.45
ಮೂಡುಶೆಡ್ಡೆ (ದಕ್ಷಿಣ ಕನ್ನಡ)	11.2

ಕಾಸರಗೋಡು: ಬಾಲಕಿ ಸಾವು

ಕಾಸರಗೋಡು: ಜಿಲ್ಲೆಯ ಅಂಡಿನಮೊಗರುವಿನಲ್ಲಿ ಉರುಳಿ ಬಿದ್ದ ಮರದಡಿ ಸಿಲುಕಿ ಶಾಲಾ ಬಾಲಕಿ ಮೃತಪಟ್ಟಿದ್ದಾಳೆ. ಪೆರ್ಲಡ್ಕ ನಿವಾಸಿ ಬಿ.ಎಂ.ಯೂಸುಫ್-ಫಾತಿಮಾ ಝ್ಯುನಬಾ ದಂಪತಿ ಪುತ್ರಿ, ಅಂಗಡಿಮೊಗರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿನಿ ಆಯಿಷತ್ ಮಿನ್ಹಾ (11) ಮೃತಪಟ್ಟಳು. ಶಾಲೆಯಿಂದ ಮನೆಗೆ ಮರಳುವಾಗ ಶಾಲೆಯ ಆವರಣದಲ್ಲಿದ್ದ ಮರವೊಂದು ಬುಡ ಕಳಚಿಕೊಂಡು ಮೇಲೆ ಬಿದ್ದಿತ್ತು. ಜತೆಗಿದ್ದ ಬಾಲಕಿಗೆ ಗಾಯಗಳಾಗಿವೆ.

ಆರ್. ಪೂರ್ಣಿಮಾಗೆ ನಾಗಮಣಿ ರಾವ್ ದತ್ತಿ ಪ್ರಶಸ್ತಿ



ಬೆಂಗಳೂರು: ಕರ್ನಾಟಕ ಲೇಖಕಿಯರ ಸಂಘ ನೀಡುವ ನಾಗಮಣಿ ಎಸ್. ರಾವ್ ದತ್ತಿ ಪ್ರಶಸ್ತಿಗೆ ಪತ್ರಕರ್ತೆ ಆರ್. ಪೂರ್ಣಿಮಾ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ₹5 ಸಾವಿರ ನಗದು ಮತ್ತು ಪ್ರಶಸ್ತಿ ಫಲಕ ಒಳಗೊಂಡಿದೆ. ಜುಲೈ 8ರಂದು ನಗರದ ಬಸವನಗುಡಿಯ ನ್ಯಾಷನಲ್ ಕಾಲೇಜಿನಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಸಾಹಿತಿ ಕಮಲಾ ಹಂಪನಾ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

'ಆಕಾಶವಾಣಿಯಲ್ಲಿ ಕಾರ್ಯನಿರ್ವಹಿಸಿದ್ದ ನಾಗಮಣಿ ಎಸ್. ರಾವ್ ಅವರು ಕರ್ನಾಟಕ ಲೇಖಕಿಯರ ಸಂಘದಲ್ಲಿ ದತ್ತಿ ಪ್ರಶಸ್ತಿ ಸ್ಥಾಪಿಸಿದ್ದಾರೆ. ಕನ್ನಡ ಪತ್ರಿಕಾ ಕ್ಷೇತ್ರ ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ಗುರುತಿಸಿಕೊಂಡಿರುವ ಪತ್ರಕರ್ತೆಯೊಬ್ಬರನ್ನು ಗುರುತಿಸಿ ಅವರಿಗೆ ಪ್ರಶಸ್ತಿ ನೀಡಬೇಕು ಎನ್ನುವುದು ಅವರ ಆಶಯವಾಗಿತ್ತು. ಮೊದಲ ಪ್ರಶಸ್ತಿಯನ್ನು ಪತ್ರಕರ್ತೆ ಆರ್. ಪೂರ್ಣಿಮಾ ಅವರಿಗೆ ನೀಡಲಾಗುತ್ತಿದೆ' ಎಂದು ಲೇಖಕಿಯರ ಸಂಘದ ಅಧ್ಯಕ್ಷೆ ಎಚ್.ಎಲ್. ಪುಷ್ಪ ತಿಳಿಸಿದ್ದಾರೆ.

ಯುವಕ ಸಾವು ಇಲಿ ಜ್ವರ ಶಂಕೆ

ಮಡಿಕೇರಿ: ತಾಲ್ಲೂಕಿನ ಕರಿಕೆ ಗ್ರಾಮದ ಲಿಬಿನ್ (24) ಎಂಬುವರು ಕೇರಳದ ಕಣ್ಣೂರಿನ ಸರ್ಕಾರಿ ವೈದ್ಯಕೀಯ ಕಾಲೇಜು ಆಸ್ಪತ್ರೆಯಲ್ಲಿ ಸೋಮವಾರ ಮೃತಪಟ್ಟಿದ್ದು, ಇಲಿ ಜ್ವರ ಕಾರಣವೇ ಎಂಬ ಶಂಕೆ ವ್ಯಕ್ತವಾಗಿದೆ.

ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕೆ.ಎಂ. ಸತೀಶ್‌ಕುಮಾರ್, 'ಯುವಕ ಕೆಲಸಕ್ಕಾಗಿ ನಿತ್ಯ ಕೇರಳಕ್ಕೆ ಹೋಗಿ ಬರುತ್ತಿದ್ದರು. ಜೂನ್ 26ರಂದು ಜ್ವರಪೀಡಿತರಾಗಿದ್ದ ಅವರು ಜುಲೈ 1ರಂದು ಕಣ್ಣೂರಿನ ಸರ್ಕಾರಿ ವೈದ್ಯಕೀಯ ಆಸ್ಪತ್ರೆಗೆ ದಾಖಲಾಗಿದ್ದು, ಜುಲೈ 3ರಂದು ಮೃತಪಟ್ಟರು. ಇಲಿ ಜ್ವರ ಕಾರಣವೆಂಬುದು ಇನ್ನೂ ದೃಢಪಟ್ಟಿಲ್ಲ. ಸದ್ಯ, ಜಿಲ್ಲೆಯಲ್ಲಿ ಈ ವರ್ಷ 9 ಮಂದಿಗೆ ಇಲಿ ಜ್ವರ ತಗುಲಿದ್ದು, ಎಲ್ಲರೂ ಆರೋಗ್ಯವಾಗಿದ್ದಾರೆ' ಎಂದು ತಿಳಿಸಿದರು.

ಟೋಲ್ ಶುಲ್ಕ: ಬಸ್ ದರ ಹೆಚ್ಚಳ

ಪ್ರಜಾವಾಣಿ ವಾರ್ತೆ

ಮೈಸೂರು: ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್‌ವೇ ಎರಡನೇ ಟೋಲ್ ಶುರುವಾದ ಬಳಿಕ ಈ ಮಾರ್ಗದಲ್ಲಿ ಸಂಚರಿಸುವ ಕೆಎಸ್‌ಆರ್‌ಟಿಸಿ ಬಸ್‌ಗಳ ಪ್ರಯಾಣ ದರವೂ ಮಂಗಳವಾರದಿಂದ ಹೆಚ್ಚಾಗಿದೆ.

ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ಗಣಂಗೂರು ಟೋಲ್ ಜುಲೈ 1ರಿಂದ ಕಾರ್ಯಾರಂಭ ಮಾಡಿದೆ. ಇಲ್ಲಿ ಬಸ್‌ಗಳಿಗೆ ₹525 ಟೋಲ್ ಸಂಗ್ರಹಿಸಲಾಗುತ್ತಿದೆ. ಅದನ್ನು ಸರಿದೂಗಿಸಲು ಕೆಎಸ್‌ಆರ್‌ಟಿಸಿಯು ಈ ಮಾರ್ಗದಲ್ಲಿನ ಟಿಕೆಟ್ ದರವನ್ನು ಸಾಮಾನ್ಯ ಸಾರಿಗೆ ₹15, ರಾಜಹಂಸ ₹20 ಹಾಗೂ ವೋಲ್ವೊ ಮತ್ತು ಎಲೆಕ್ಟ್ರಿಕ್ ಬಸ್‌ಗಳಲ್ಲಿ ₹30ರಷ್ಟು ಹೆಚ್ಚಿಸಿದೆ.

ಬೆಂಗಳೂರಿನ ಕಣಮಿಣಕಿ ಹಾಗೂ ರಾಮನಗರ ಜಿಲ್ಲೆಯ ಶೇಷಗಿರಿಹಳ್ಳಿಯಲ್ಲಿನ ಟೋಲ್ ಪ್ಲಾಜಾಗಳಲ್ಲಿ ಟೋಲ್ ಸಂಗ್ರಹ ಶುರುವಾಗಿತ್ತು. ಆಗಲೂ ಬಸ್ ಪ್ರಯಾಣ ದರವು ₹20ರಿಂದ ₹35ರವರೆಗೆ ಹೆಚ್ಚಾಗಿತ್ತು.

ಕೆಎಸ್‌ಆರ್‌ಟಿಸಿ ಟಿಕೆಟ್ ದರ (ಮೈಸೂರು–ಬೆಂಗಳೂರು)

ಬಸ್ ಮಾದರಿ	ಹಿಂದಿನ ದರ	ಇಂದಿನ ದರ
ಸಾಮಾನ್ಯ ಸಾರಿಗೆ	₹170	₹185
ರಾಜಹಂಸ	₹230	₹250
ವೋಲ್ವೊ/ಇ.ವಿ	₹330	₹360



ತಾಂಡಾ ಮಕ್ಕಳಿಗೆ ಬಿಸಿಯೂಟ

ಪ್ರಜಾವಾಣಿ ವಾರ್ತೆ

ವರದಿ ಪರಿಣಾಮ

ವಾಡಿ (ಕಲಬುರಗಿ ಜಿಲ್ಲೆ): ಚಿತ್ತಾಪುರ ತಾಲ್ಲೂಕಿನ ನಾಲವಾರ ಸಮೀಪದ ಸಕ್ಕುನಾಯಕ ತಾಂಡಾದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ವರ್ಷ ಆರಂಭವಾಗಿ 35 ದಿನಗಳ ಬಳಿಕ ಮಂಗಳವಾರ ಕೊನೆಗೂ ಬಿಸಿಯೂಟ ಹಾಗೂ ಹಾಲು ಲಭಿಸಿತು. ಸಕ್ಕುನಾಯಕ ತಾಂಡಾದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಬಿಸಿಯೂಟ ಹಾಗೂ ಹಾಲು ವಿತರಿಸದಿರುವ ಬಗ್ಗೆ ಜುಲೈ 4ರಂದು 'ಪ್ರಜಾವಾಣಿ'ಯಲ್ಲಿ ವಿಶೇಷ ವರದಿ ಪ್ರಕಟಗೊಂಡ ಬೆನ್ನಲ್ಲೇ ಶಿಕ್ಷಣ ಇಲಾಖೆ ಅಧಿಕಾರಿಗಳು ಶಾಲೆಗೆ ದೌಡಾಯಿಸಿ ಸಮಸ್ಯೆಯನ್ನು ಪರಿಹರಿಸಿದರು.

ಬೆಳಿಗ್ಗೆ 11ಕ್ಕೆ ಅಜಿತ್ ಪವಾರ್ ಬಣ ಹಾಗೂ ಮಧ್ಯಾಹ್ನ 1ಕ್ಕೆ ಶರದ್ ಬಣದ ಸಭೆ • ಗುಟ್ಟು ಬಿಡದ ಹಲವು ಶಾಸಕರು

ಎನ್‌ಸಿಪಿ ಯಾವ ಬಣದ್ದು, ಇಂದು ನಿರ್ಧಾರ?

ಪ್ರಜಾವಾಣಿ ವಾರ್ತೆ

ಮುಂಬೈ: ರಾಷ್ಟ್ರೀಯವಾದಿ ಕಾಂಗ್ರೆಸ್ ಪಕ್ಷದ (ಎನ್‌ಸಿಪಿ) ಉಭಯ ಬಣಗಳು ಬುಧವಾರ ಸಭೆ ಕರೆದಿವೆ. ಪ್ರತ್ಯೇಕ ಸಭೆಗೆ ವೇದಿಕೆ ಸಜ್ಜಾಗಿರುವಂತೆಯೇ ಪಕ್ಷದ ಮೇಲೆ ಹಕ್ಕು ಸ್ಥಾಪಿಸುವ ಕಸರತ್ತು ಎರಡೂ ಬಣಗಳಲ್ಲಿ ತೀವ್ರಗೊಂಡಿದೆ.

ಮಂಗಳವಾರ ರಾತ್ರಿಯವರೆಗೆ ಈ ಬಣಗಳು ಶಾಸಕರನ್ನು ಹಿಡಿದಿಟ್ಟುಕೊಳ್ಳುವ ಕಾರ್ಯದಲ್ಲಿ ತೊಡಗಿದ್ದವು. ಆದರೆ, ಅಜಿತ್ ಬಣ ಈ ವಿಷಯದಲ್ಲಿ ತುಸು ಮುಂದಿರುವಂತೆ ಕಂಡುಬರುತ್ತಿದೆ. ಆದರೆ, ರಾಜಕೀಯ ಬಿಕ್ಕಟ್ಟು ಎದುರಿಸುವಲ್ಲಿ ಹಿರಿಯ ರಾಜಕಾರಣಿ ಶರದ್ ಪವಾರ್ ಕೌಶಲವನ್ನು ಹಗುರವಾಗಿ ಪರಿಗಣಿಸುವಂತಿಲ್ಲ. ತಡರಾತ್ರಿಯೂ ಎರಡೂ ಬಣಗಳ ಸಭೆ ನಡೆದಿತ್ತು.

ಶರದ್ ಪವಾರ್ ನೇತೃತ್ವದ ಬಣವು ಮಧ್ಯಾಹ್ನ1 ಗಂಟೆಗೆ ವೈ.ಬಿ. ಚವಾಣ್ ಸಭಾಂಗಣದಲ್ಲಿ, ಅಜಿತ್ ಪವಾರ್ ಬಣವು ಬಾಂದ್ರಾದಲ್ಲಿ ಬೆಳಿಗ್ಗೆ 11 ಗಂಟೆಗೆ ಸಭೆ ಕರೆದಿವೆ. ಸಭೆಯಲ್ಲಿ ಹಾಜರಿರಬೇಕು ಎಂದು ಎರಡೂ ಬಣಗಳು ಪಕ್ಷದ ಶಾಸಕರು, ಸಂಸದರು, ಪರಿಷತ್ ಸದಸ್ಯರಿಗೆ ಸೂಚನೆ ರವಾನಿಸುತ್ತಿವೆ. ಆದರೆ, ಹೆಚ್ಚಿನ ಶಾಸಕರು ತಾವು ಯಾವ ಬಣದಲ್ಲಿದ್ದೇವೆ ಎಂಬ ಬಗ್ಗೆ ಗುಟ್ಟು ಬಿಟ್ಟುಕೊಟ್ಟಿಲ್ಲ. ಪಕ್ಷಾಂತರ ನಿಷೇಧ ಕಾಯ್ದೆಯ ತೂಗುಕತ್ತಿಯಿಂದ ಪಾರಾಗಲು ಅಜಿತ್ ಪವಾರ್ ಬಣಕ್ಕೆ ಕನಿಷ್ಠ 36 ಶಾಸಕರ ಬೆಂಬಲ ಅಗತ್ಯ. ವಿಧಾನಸಭೆಯಲ್ಲಿ ಎನ್‌ಸಿಪಿ ಬಲ 53 ಆಗಿದೆ.

'ಆದರೆ, ನಮ್ಮ ಬಣ ಅಗತ್ಯ ಸಂಖ್ಯೆಯ ಶಾಸಕರನ್ನು ಹೊಂದಿದೆ' ಎಂದು ಅಜಿತ್ ಪವಾರ್ ಪ್ರತಿಪಾದಿಸಿದ್ದಾರೆ. ಇನ್ನೊಂದೆಡೆ, 'ಮರಾಠಾದ ಪ್ರಬಲ ವ್ಯಕ್ತಿ' ಎಂದೇ ಹೆಸರಾದ ಶರದ್ ಪವಾರ್ ಅವರೇ ಖುದ್ದು ಪಕ್ಷದ ಶಾಸಕರಿಗೆ ಕರೆ ಮಾಡಿ, ಸಭೆಗೆ ಬರುವಂತೆ ಸೂಚಿಸಿದ್ದಾರೆ, ವಿಪ್ ಕೂಡ ಜಾರಿಯಾಗಿದೆ.

ಕಚೇರಿ ಉದ್ಘಾಟನೆ: ಈ ಮಧ್ಯೆ, ಅಜಿತ್ ಪವಾರ್ ನೇತೃತ್ವದ ಬಣವು ಸಚಿವಾಲಯ ಕಟ್ಟಡದಲ್ಲಿ ಕಚೇರಿ ಆರಂಭಿಸಿದ್ದು, 'ಇದು, ಮಹಾರಾಷ್ಟ್ರದ ಜನರಿಗೆ ನಮ್ಮ ಬದ್ಧತೆಯಾಗಿದೆ' ಎಂದು ಮುಖಂಡ ಪ್ರಫುಲ್ ಪಟೇಲ್ ಹೇಳಿದ್ದಾರೆ.



ಮಹಾರಾಷ್ಟ್ರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ನಾನಾ ಪಟೋಲೆ ನೇತೃತ್ವದಲ್ಲಿ ಪಕ್ಷದ ಮುಖಂಡರು ಮಂಗಳವಾರ ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಅವರನ್ನು ಭೇಟಿಯಾಗಿ ಚರ್ಚಿಸಿದರು —ಪಿಟಿಐ ಚಿತ್ರ

ದಿನದ ಬೆಳವಣಿಗೆ

- ಪಕ್ಷದಲ್ಲಿ ಉದ್ಭವಿಸಿರುವ ಬಿಕ್ಕಟ್ಟು ಸಂವಿಧಾನದ 10ನೇ ಪರಿಚ್ಛೇದಕ್ಕೆ ಸಂಬಂಧಿಸಿರುವ ಕಾರಣ, ಈ ವಿಷಯದಲ್ಲಿ ಕಾನೂನು ತಜ್ಞರ ಅಭಿಪ್ರಾಯವನ್ನು ಪಡೆಯಲಾಗುವುದು ಎಂದು ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಹೇಳಿದ್ದಾರೆ.
- ಅಜಿತ್ ಪವಾರ್ ಬಣದಲ್ಲಿ 13ಕ್ಕಿಂತ ಹೆಚ್ಚು ಶಾಸಕರಿಲ್ಲ. ಶರದ್ ಪವಾರ್ ಅವರು ಬುಧವಾರ ಬೆಳಿಗ್ಗೆ ಸಭೆ ಕರೆದಿದ್ದು, ಅಲ್ಲಿ ಸ್ಪಷ್ಟ ಚಿತ್ರಣ ದೊರೆಯಲಿದೆ' ಎಂದು ಪಕ್ಷದ ರಾಷ್ಟ್ರೀಯ ವಕ್ತಾರ ಕ್ಲೈಡ್ ಕ್ರಾಸ್ಟೊ ತಿಳಿಸಿದರು.
- ಎನ್‌ಸಿಪಿ ರಾಜ್ಯ ಅಧ್ಯಕ್ಷ ಸ್ಥಾನದಿಂದ ತನ್ನನ್ನು ಪದಚ್ಯುತಗೊಳಿಸುವ ಯಾವುದೇ ಅಧಿಕಾರ ಅಜಿತ್ ಪವಾರ್ ನೇತೃತ್ವದ ಬಣಕ್ಕೆ ಇಲ್ಲ' ಎಂದು ಜಯಂತ್ ಪಾಟೀಲ್ ಅವರು ಪ್ರತಿಪಾದಿಸಿದ್ದಾರೆ.
- ರಾಜ್ಯ ಕಾಂಗ್ರೆಸ್ ಅಧ್ಯಕ್ಷ ನಾನಾ ಪಟೋಲೆ ಮತ್ತು ಕಾರ್ಯಾಧ್ಯಕ್ಷ ನಸೀಂ ಖಾನ್ ಅವರು ಶರದ್ ಪವಾರ್ ಅವರನ್ನು ಭೇಟಿಯಾಗಿ ಚರ್ಚಿಸಿದ್ದು, ಕಾಂಗ್ರೆಸ್ ಎಂವಿಎ ಜೊತೆಗಿರಲಿದೆ ಎಂದು ಭರವಸೆ ನೀಡಿದ್ದಾರೆ.

ಜನರ ಬಳಿ ಹೋಗಲು ಶರದ್, ಉದ್ಧವ್ ನಿರ್ಧಾರ

ಮುಂಬೈ (ಪಿಟಿಐ): ಪಕ್ಷ ವಿಭಜನೆಯ ಪೆಟ್ಟಿನಿಂದ ತತ್ತರಿಸಿರುವ ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್, ಶಿವಸೇನೆ ಮುಖಂಡ ಉದ್ಧವ್ ಠಾಕ್ರೆ ಅವರು ಲೋಕಸಭೆ ಮತ್ತು ವಿಧಾನಸಭೆ ಚುನಾವಣೆಯ ಪೂರ್ವದಲ್ಲಿ ತಮ್ಮ ಪಕ್ಷವನ್ನು ಬಲಪಡಿಸಲು ರಾಜ್ಯವ್ಯಾಪಿ ಪ್ರವಾಸ ನಡೆಸಲಿದ್ದಾರೆ.

82 ವರ್ಷ ವಯೋಮಾನದ ಪವಾರ್ ಮತ್ತು 62 ವರ್ಷದ ಉದ್ಧವ್ ಇಬ್ಬರೂ ಅನಾರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಆದರೆ, ಪಕ್ಷದ ಬೆಳವಣಿಗೆಗಳು ಇಬ್ಬರಿಗೂ ಪ್ರವಾಸ ಮಾಡುವ ಸಂದರ್ಭಗಳನ್ನು ಸೃಷ್ಟಿಸಿವೆ.

ಪ್ರಾದೇಶಿಕ ಮತ್ತು ಸಣ್ಣ ಪಕ್ಷಗಳನ್ನು ಗುರಿಯಾಗಿಸಿ ಬಿಜೆಪಿ ಚುನಾವಣಾ ಕಾರ್ಯತಂತ್ರವನ್ನು ರೂಪಿಸುವ ಮೊದಲೇ ಸದ್ಯದ ರಾಜಕೀಯ ಬೆಳವಣಿಗೆಗಳ ಕುರಿತಂತೆ ಜನರ ಬಳಿಗೇ ತೆರಳುವುದು ಮುಖಂಡರ ಪ್ರವಾಸದ ಉದ್ದೇಶ.

ಎರಡೂ ಪಕ್ಷಗಳು ಮಹಾ ವಿಕಾಸ ಆಘಾಡಿ (ಎಂವಿಎ) ಮೈತ್ರಿಕೂಟದ ಭಾಗವಾಗಿದ್ದು, ಕಾಂಗ್ರೆಸ್ ಪಕ್ಷ ಕೂಡಾ ಇದರಲ್ಲಿದೆ. ರಾಜ್ಯ ಪ್ರವಾಸದ ಜೊತೆಗೆ ಮೈತ್ರಿ ಪಕ್ಷಗಳ ಜೊತೆಗೂಡಿ ಪ್ರತ್ಯೇಕ ರ್‍ಯಾಲಿಗಳನ್ನು ಸಂಘಟಿಸಲು ಮುಖಂಡರು ನಿರ್ಧರಿಸಿದ್ದಾರೆ.

'ಪವಾರ್ ಅವರು ಈಗಾಗಲೇ ಪುಣೆಯಿಂದ ಕರಾಡ್‌ಗೆ ಪ್ರವಾಸ ಮಾಡಿದ್ದಾರೆ. ಬರುವ ದಿನಗಳಲ್ಲಿ ರಾಜ್ಯವ್ಯಾಪಿ ಪ್ರವಾಸ ತೆರಳುವರು' ಎಂದು ಎನ್‌ಸಿಪಿ ಅಧ್ಯಕ್ಷ ಜಯಂತ್ ಪಾಟೀಲ್ ಹೇಳಿದರು.

ಶಿವಸೇನೆ (ಉದ್ಧವ್ ಬಣ) ಸಭೆಯಲ್ಲಿ ಮಾತನಾಡಿರುವ ಉದ್ಧವ್ ಠಾಕ್ರೆ ಅವರೂ, ರಾಜ್ಯ ಪ್ರವಾಸದ ಇಂಗಿತ ವ್ಯಕ್ತಪಡಿಸಿದ್ದಾರೆ. ಅವರ ಪುತ್ರ ಆದಿತ್ಯ ಠಾಕ್ರೆ ಕಳೆದೊಂದು ವರ್ಷದಿಂದ ಪ್ರವಾಸದಲ್ಲಿದ್ದು, ಹಲವು ಸಭೆ ನಡೆಸಿದ್ದಾರೆ.

ಕಾದು ನೋಡಲು ಕಾಂಗ್ರೆಸ್ ನಿರ್ಧಾರ

ಮುಂಬೈ (ಪಿಟಿಐ): ಪ್ರಸಕ್ತ ರಾಜಕೀಯ ಬೆಳವಣಿಗೆಗಳ ಹಿನ್ನೆಲೆಯಲ್ಲಿ ವಿಧಾನಸಭೆಯಲ್ಲಿ ವಿರೋಧಪಕ್ಷದ ನಾಯಕನ ಸ್ಥಾನ ಕುರಿತಂತೆ ಹಕ್ಕು ಪ್ರತಿಪಾದಿಸದೇ ಕಾದು ನೋಡುವ ನಿಲುವನ್ನು ಕಾಂಗ್ರೆಸ್ ಪಕ್ಷ ಕೈಗೊಂಡಿದೆ. ಬದಲಾದ ರಾಜಕೀಯ ಚಿತ್ರಣದಲ್ಲಿ ವಿರೋಧ ಪಕ್ಷದ ನಾಯಕನ ಸ್ಥಾನಕ್ಕೆ ಕಾಂಗ್ರೆಸ್ ಪಕ್ಷ ಹಕ್ಕು ಪ್ರತಿಪಾದಿಸಲಿದೆ ಎನ್ನಲಾಗಿತ್ತು. ಆದರೆ, ಮಂಗಳವಾರ ನಡೆದ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ಈ ವಿಷಯ ಚರ್ಚೆಯಾಗಿಲ್ಲ.

'ಸುಪ್ರೀಂ'ಗೆ ಶಿವಸೇನೆ (ಉದ್ಧವ್ ಬಣ) ಮನವಿ

ನವದೆಹಲಿ: 'ಶಿಂದೆ ನೇತೃತ್ವದ ಪಕ್ಷದ ಬಂಡಾಯ ಶಾಸಕರ ಅನರ್ಹತೆಗೆ ಸಂಬಂಧಿಸಿ ತ್ವರಿತ ನಿರ್ಧಾರ ಕೈಗೊಳ್ಳಲು ಸ್ಪೀಕರ್ ಅವರಿಗೆ ನಿರ್ದೇಶಿಸಬೇಕು' ಎಂದು ಶಿವಸೇನೆ (ಉದ್ಧವ್ ಬಣ) ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ.

'ಸ್ಪೀಕರ್ ರಾಹುಲ್ ನಾರ್ವೇಕರ್ ಪಕ್ಷಪಾತ ನಿಲುವು ಹೊಂದಿದ್ದಾರೆ. ಸುಪ್ರೀಂ ಕೋರ್ಟ್‌ನ ಮೇ 11ರ ತೀರ್ಪಿನ ನಂತರವು ನಿರ್ಧಾರ ತೆಗೆದುಕೊಳ್ಳುವುದನ್ನು ಉದ್ದೇಶಪೂರ್ವಕವಾಗಿ ವಿಳಂಬ ಮಾಡುತ್ತಿದ್ದಾರೆ' ಎಂದು ಆರೋಪಿಸಿದೆ.

ಶಿವಸೇನೆ (ಉದ್ಧವ್ ಬಣ) ಶಾಸಕ ಸುನೀಲ್ ಪ್ರಭು ಅರ್ಜಿ ಸಲ್ಲಿಸಿದ್ದಾರೆ. ಇವರು ಶಿವಸೇನೆಯ ವಿಭಜನೆ ಪೂರ್ವದಲ್ಲಿ ಮುಖ್ಯ ಸಚೇತಕರಾಗಿದ್ದರು. ಅನರ್ಹತೆ ಕೋರಿದ್ದ ಅರ್ಜಿ ಒಂದು ವರ್ಷದಿಂದ ಬಾಕಿ ಉಳಿದಿದೆ ಎಂದು ತಿಳಿಸಿದ್ದಾರೆ. 'ಸ್ಪೀಕರ್ ವಿಳಂಬ ಮಾಡುತ್ತಿರುವ ಕಾರಣ, ಸಂವಿಧಾನದ ವಿಧಿ 32ರ ಅನ್ವಯ ದತ್ತವಾಗಿರುವ ಅಧಿಕಾರ ಬಳಸಿ ಕೋರ್ಟ್ ಈ ಬಗ್ಗೆ ತೀರ್ಮಾನ ಪ್ರಕಟಿಸಬೇಕು' ಎಂದು ವಕೀಲರ ಮೂಲಕ ಸಲ್ಲಿಸಿದ ಅರ್ಜಿಯಲ್ಲಿ ಕೋರಿದ್ದಾರೆ. 'ನಿಗದಿತ ಅವಧಿಯಲ್ಲಿ ಸ್ಪೀಕರ್ ನಿರ್ಧಾರ ತೆಗೆದುಕೊಳ್ಳಬೇಕು ಎಂದು ಸುಪ್ರೀಂ ಕೋರ್ಟ್ ತೀರ್ಪಿನಲ್ಲಿ ಹೇಳಿದೆ. ಆದರೆ, ಸ್ಪೀಕರ್ ಈ ಬಗ್ಗೆ ಒಂದೂ ಸಭೆ ನಡೆಸಿಲ್ಲ. ಸಾಂವಿಧಾನಿಕ ಕರ್ತವ್ಯ ನಿಭಾಯಿಸುವಲ್ಲಿ ವಿಫಲರಾಗಿದ್ದಾರೆ' ಎಂದಿದೆ.

ನನ್ನ ಚಿಂತನೆ, ಸಿದ್ಧಾಂತವನ್ನು ಕಡೆಗಣಿಸಿದವರು ನನ್ನ ಭಾವಚಿತ್ರ ಬಳಸಬಾರದು. ನಾನು ಸ್ಥಾಪಿಸಿರುವ, ಜಯಂತ್ ಪಾಟೀಲ್ ಅಧ್ಯಕ್ಷರಾಗಿರುವ ಪಕ್ಷ ಮಾತ್ರವೇ ಭಾವಚಿತ್ರ ಬಳಸಬೇಕು.
ಶರದ್ ಪವಾರ್, ಎನ್‌ಸಿಪಿ ಮುಖ್ಯಸ್ಥ

ಪ್ರಧಾನಿ ಮೋದಿ ಅವರಿಗೆ ಪರ್ಯಾಯವಾಗಿ ಯಾರೊಬ್ಬರೂ ಇಲ್ಲ. ಅದೇ ವಾಸ್ತವ ಸ್ಥಿತಿ.
ಅಜಿತ್ ಪವಾರ್, ಉಪ ಮುಖ್ಯಮಂತ್ರಿ.

ಸಿಬಿಐ, ಇ.ಡಿ ಮತ್ತು ಐ.ಟಿ ವರ್ತುಲ ಕುರಿತಂತೆ ಮಹಾರಾಷ್ಟ್ರದ ಜನತೆಗೆ ಅರಿವಿದೆ. ರಾಜ್ಯದ ಜನರು ಬಿಜೆಪಿಗೆ ವಿರುದ್ಧವಾಗಿ ಇದ್ದಾರೆ.
ನಾನಾ ಪಟೋಲೆ
ಅಧ್ಯಕ್ಷ, ಮಹಾರಾಷ್ಟ್ರ ಕಾಂಗ್ರೆಸ್

ಎನ್‌ಸಿಪಿ ಸರ್ಕಾರದ ಭಾಗವಾಗಿದೆಯೇ ಅಥವಾ ವಿರೋಧ ಪಕ್ಷದಲ್ಲಿದೆಯೇ ಎಂಬುದನ್ನು ಮೊದಲು ನಿರ್ಧರಿಸಬೇಕು. ಎನ್‌ಸಿಪಿ ಇನ್ನು ಅಧಿಕೃತವಾಗಿ ವಿಭಜನಗೊಂಡಿಲ್ಲ
ರಾಹುಲ್ ನಾರ್ವೇಕರ್
ಸ್ಪೀಕರ್, ಮಹಾರಾಷ್ಟ್ರ ವಿಧಾನಸಭೆ

ಸುದ್ದಿ 2 ನಿಮಿಷ

ಮಾನಹಾನಿ ಪ್ರಕರಣ: ರಾಹುಲ್ ಖುದ್ದು ಹಾಜರಿಗೆ ವಿನಾಯಿತಿ

ರಾಂಚಿ(ಪಿಟಿಐ): 'ಮೋದಿ' ಉಪನಾಮದ ಬಗ್ಗೆ ಅಪಮಾನಕರವಾಗಿ ಮಾತನಾಡಿದ್ದಾರೆ ಎಂದು ದಾಖಲಾಗಿರುವ ಮಾನನಷ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ನ್ಯಾಯಾಲಯಕ್ಕೆ ಖುದ್ದು ಹಾಜರಾಗುವುದಕ್ಕೆ ಜಾರ್ಖಂಡ್ ಹೈಕೋರ್ಟ್ ಮಂಗಳವಾರ ವಿನಾಯಿತಿ ನೀಡಿದೆ.

2019ರ ಏಪ್ರಿಲ್‌ನಲ್ಲಿ ಕೋಲಾರದಲ್ಲಿ ನಡೆದ ಚುನಾವಣಾ ಪ್ರಚಾರದ ವೇಳೆ 'ಎಲ್ಲಾ ಕಳ್ಳರಿಗೆ ಮೋದಿ ಎಂಬ ಉಪನಾಮ ಏಕಿದೆ' ಎಂದು ರಾಹುಲ್ ಪ್ರಶ್ನಿಸಿದ್ದರು. ಈ ಸಂಬಂಧ ಪ್ರದೀಪ್ ಮೋದಿ ಎಂಬುವರು ದೂರು ದಾಖಲಿಸಿದ್ದರು.

ಈ ಪ್ರಕರಣಕ್ಕೆ ಸಂಬಂಧಿಸಿ ರಾಹುಲ್ ಕೋರ್ಟ್‌ಗೆ ಖುದ್ದಾಗಿ ಹಾಜರಾಗಬೇಕು ಎಂದು ರಾಂಚಿ ಜನಪ್ರತಿನಿಧಿಗಳ ನ್ಯಾಯಾಲಯವು ಆದೇಶಿಸಿತ್ತು. ಇದನ್ನು ಪ್ರಶ್ನಿಸಿ ಅವರು ಹೈಕೋರ್ಟ್ ಮೆಟ್ಟಿಲೇರಿದ್ದರು. ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್.ಕೆ. ದ್ವಿವೇದಿ ಅವರು, ರಾಹುಲ್‌ಗೆ ವಿನಾಯಿತಿ ನೀಡಿ ಆಗಸ್ಟ್ 16ಕ್ಕೆ ವಿಚಾರಣೆಯನ್ನು ಮುಂದೂಡಿದರು.

ರಾಹುಲ್ ಹೇಳಿಕೆ ವಿರುದ್ಧ ಗುಜರಾತ್ ಶಾಸಕ ಪೂರ್ಣೇಶ್ ಗಾಂಧಿ ಕೂಡ ಮಾನನಷ್ಟ ಪ್ರಕರಣ ದಾಖಲಿಸಿದ್ದರು. ಈ ಪ್ರಕರಣದಲ್ಲಿ ಸೂರತ್ ನ್ಯಾಯಾಲಯವು ರಾಹುಲ್ ಗಾಂಧಿ ಅವರಿಗೆ ಮಾರ್ಚ್ 23ರಂದು ಎರಡು ವರ್ಷಗಳ ಜೈಲು ಶಿಕ್ಷೆ ವಿಧಿಸಿತ್ತು. ಹಾಗಾಗಿ, ಅವರು ಲೋಕಸಭಾ ಸದಸ್ಯತ್ವದಿಂದ ಅನರ್ಹಗೊಂಡಿದ್ದಾರೆ.



ಬ್ರಿಜ್‌ಭೂಷಣ್ ಮೊಕದ್ದಮೆ ರದ್ದತಿ: ಸಂತ್ರಸ್ತೆ ಪ್ರತಿಕ್ರಿಯೆಗೆ ಸೂಚನೆ

ನವದೆಹಲಿ (ಪಿಟಿಐ): ಕುಸ್ತಿಪಟುವಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪಕ್ಕೆ ಸಂಬಂಧಿಸಿದಂತೆ ಭಾರತೀಯ ಕುಸ್ತಿ ಫೆಡರೇಷನ್‌ನ ನಿರ್ಗಮಿತ ಅಧ್ಯಕ್ಷ ಬ್ರಿಜ್‌ಭೂಷಣ್ ಶರಣ್ ಸಿಂಗ್ ವಿರುದ್ಧ ದಾಖಲಾಗಿರುವ ಮೊಕದ್ದಮೆ ರದ್ದುಗೊಳಿಸುವಂತೆ ದೆಹಲಿ ಪೊಲೀಸರು ಕೋರಿದ್ದು, ಈ ಕುರಿತು ಪ್ರತಿಕ್ರಿಯೆ ನೀಡುವಂತೆ ಪ್ರಕರಣದ ಸಂತ್ರಸ್ತೆ ಮತ್ತು ದೂರುದಾರರಿಗೆ ಇಲ್ಲಿಯ ನ್ಯಾಯಾಲಯ ಮಂಗಳವಾರ ಹೇಳಿದೆ.

ಅಪ್ರಾಪ್ತ ವಯಸ್ಸಿನ ಕುಸ್ತಿಪಟುವಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದ ಮೇಲೆ ಬ್ರಿಜ್‌ಭೂಷಣ್ ವಿರುದ್ಧ ಪೋಕ್ಸೊ ಅಡಿ ಮೊಕದ್ದಮೆ ದಾಖಲಿಸಲಾಗಿತ್ತು. ಈ ಆರೋಪವನ್ನು ದೃಢೀಕರಿಸುವಂಥ ಸಾಕ್ಷ್ಯಗಳು ದೊರಕಿಲ್ಲದ ಕಾರಣ ಮೊಕದ್ದಮೆಯನ್ನು ರದ್ದುಪಡಿಸಬೇಕು ಎಂದು ಪೊಲೀಸರು ಜೂನ್ 15ರಂದು ವರದಿ ಸಲ್ಲಿಸಿದ್ದರು.

ಈ ಮೊಕದ್ದಮೆಯ ವಿಚಾರಣೆ ನಡೆಸಿದ ನ್ಯಾಯಾಲಯವು ಮುಂದಿನ ವಿಚಾರಣೆಯನ್ನು ಆಗಸ್ಟ್ 1ಕ್ಕೆ ನಿಗದಿಪಡಿಸಿತು. ಅಂದೇ ಪ್ರತಿಕ್ರಿಯೆ ನೀಡುವಂತೆ ಸಂತ್ರಸ್ತೆ ಮತ್ತು ದಾರುದಾರರಿಗೆ (ಸಂತ್ರಸ್ತೆಯ ತಂದೆ) ಸೂಚಿಸಿತು. ಏಳು ಮಹಿಳಾ ಕುಸ್ತಿಪಟುಗಳಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪವನ್ನು ಬ್ರಿಜ್‌ಭೂಷಣ್ ಎದುರಿಸುತ್ತಿದ್ದಾರೆ.

ಸಂಕ್ಷಿಪ್ತ ಸುದ್ದಿ

ಎಸ್‌ಟಿ ಆಯೋಗದ ಅಧ್ಯಕ್ಷರ ತಲೆದಂಡ

ನವದೆಹಲಿ(ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಸರ್ಕಾರವು ಅರಣ್ಯ ಮತ್ತು ಬುಡಕಟ್ಟು ಜನರ ಹಕ್ಕುಗಳನ್ನು ದುರ್ಬಲಗೊಳಿಸುತ್ತಿದೆ. ಇದನ್ನು ಪ್ರಶ್ನಿಸಿದ ರಾಷ್ಟ್ರೀಯ ಪರಿಶಿಷ್ಟ ಪಂಗಡ ಆಯೋಗದ(ಎನ್‌ಸಿಎಸ್‌ಟಿ) ಅಧ್ಯಕ್ಷರ ತಲೆದಂಡವಾಗಿದೆ ಕಾಂಗ್ರೆಸ್ ಟೀಕಿಸಿದೆ.

2021ರ ಫೆಬ್ರುವರಿಯಲ್ಲಿ ಆಯೋಗದ ಅಧ್ಯಕ್ಷರಾಗಿ ಹರ್ಷ ಚೌಹಾಣ್ ಅಧಿಕಾರ ವಹಿಸಿಕೊಂಡಿದ್ದರು. 73 ವರ್ಷದ ಅವರು ದೆಹಲಿ ಐಐಟಿಯಲ್ಲಿ ವ್ಯವಸ್ಥೆ ಮತ್ತು ನಿರ್ವಹಣೆ ವಿಷಯದಲ್ಲಿ ಎಂ.ಟೆಕ್ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಆಯೋಗದ ಕೆಲಸಗಳನ್ನು ನಿಭಾಯಿಸುವಲ್ಲಿ ಸಮರ್ಥರಿದ್ದಾರೆ. ಆದರೆ, ಮೋದಿ ಅವರ ನಿಲುವುಗಳನ್ನು ಪ್ರಶ್ನಿಸಿದ್ದಕ್ಕೆ ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಯುವಂತಾಗಿದೆ ಎಂದು ದೂರಿದೆ. 'ಕಳೆದ ಎರಡು ವರ್ಷದಿಂದಲೂ ಅರಣ್ಯ ಕಾನೂನಿನ ಜಾರಿ ಮೂಲಕ ಆದಿವಾಸಿಗಳ ಹಕ್ಕುಗಳು ಮತ್ತು ಹಿತಾಸಕ್ತಿ ಕಡೆಗಣಿಸಲಾಗುತ್ತಿದೆ. ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವಾಲಯದ ಈ ನೀತಿಯನ್ನು ಚೌಹಾಣ್ ವಿರೋಧಿಸಿದ್ದರು.

ನ್ಯಾಯಬೆಲೆ ಅಂಗಡಿಯಲ್ಲಿ ₹60ಕ್ಕೆ ಟೊಮೆಟೊ



ಚೆನ್ನೈ (ಪಿಟಿಐ): ತಮಿಳುನಾಡಿನ 82 ನ್ಯಾಯಬೆಲೆ ಅಂಗಡಿಗಳಲ್ಲಿ ಮಂಗಳವಾರದಿಂದ ₹60ರ ದರದಲ್ಲಿ ಕೆ.ಜಿ ಟೊಮೆಟೊ ಮಾರಾಟ ಮಾಡಲಾಗುತ್ತಿದೆ. ಏರುತ್ತಿರುವ ಟೊಮೆಟೊ ಬೆಲೆಯನ್ನು ನಿಯಂತ್ರಿಸುವ ನಿಟ್ಟಿನಲ್ಲಿ ತಮಿಳುನಾಡು ಸರ್ಕಾರವು ಈ ನಿರ್ಧಾರ ಕೈಗೊಂಡಿದೆ.

'ಅಗತ್ಯಬಿದ್ದಲ್ಲಿ ಇದೇ ಕ್ರಮವನ್ನು ರಾಜ್ಯದ ಇತರ ಭಾಗಗಳಿಗೂ ವಿಸ್ತರಿಸಲಾಗುವುದು' ಎಂದು ಸಹಕಾರ ಸಚಿವ ಕೆ.ಆರ್. ಪೆರಿಯಕರುಪ್ಪನ್ ಹೇಳಿದ್ದಾರೆ.

ಅಪಘಾತ: 12 ಮಂದಿ ಸಾವು

ಮುಂಬೈ (ಪಿಟಿಐ): ಮಹಾರಾಷ್ಟ್ರದ ಧುಲೆ ಜಿಲ್ಲೆಯ ಮುಂಬೈ–ಆಗ್ರಾ ರಾಷ್ಟ್ರೀಯ ಹೆದ್ದಾರಿಯಲ್ಲಿ ಟ್ರಕ್‌ವೊಂದು ನಾಲ್ಕು ವಾಹನಗಳಿಗೆ ಡಿಕ್ಕಿ ಹೊಡೆದು, ನಂತರ ಹೋಟೆಲ್‌ವೊಂದಕ್ಕೆ ಗುದ್ದಿದ ಪರಿಣಾಮ 12 ಜನ ಮೃತಪಟ್ಟಿದ್ದು, 26ಕ್ಕೂ ಹೆಚ್ಚು ಜನ ಗಾಯಗೊಂಡಿದ್ದಾರೆ ಎಂದು ಮಂಗಳವಾರ ಪೊಲೀಸರು ತಿಳಿಸಿದ್ದಾರೆ.

ರಾಜ್ಯ ರಾಜಧಾನಿಯಿಂದ 300 ಕಿ.ಮೀ. ದೂರದಲ್ಲಿರುವ ಧುಲೆಯ ಮುಂಬೈ–ಆಗ್ರಾ ರಾಷ್ಟ್ರೀಯ ಹೆದ್ದಾರಿಯ ಪಲಸ್ನೇರ್ ಗ್ರಾಮದ ಬಳಿ ಬೆಳಿಗ್ಗೆ 10.45ಕ್ಕೆ ಈ ಘಟನೆ ಸಂಭವಿಸಿದೆ.

'ಕೈ' ವಿರುದ್ಧ ಸೆಣಸಾಟಕ್ಕೆ ಎಎಪಿ ಸಜ್ಜು

ಛತ್ತೀಸಗಢ, ಮಧ್ಯಪ್ರದೇಶ, ರಾಜಸ್ಥಾನ ವಿಧಾನಸಭೆಗೆ ಸ್ಪರ್ಧಿಸಲು ಸಿದ್ಧತೆ

ಪ್ರಜಾವಾಣಿ ವಾರ್ತೆ

ನವದೆಹಲಿ: ದೆಹಲಿಯ ಸೇವಾ ಆಡಳಿತ ನಿಯಂತ್ರಣ ಸಂಬಂಧ ಕೇಂದ್ರ ಸರ್ಕಾರ ಹೊರಡಿಸಿರುವ ಸುಗ್ರೀವಾಜ್ಞೆ ಬಗ್ಗೆ ಕಾಂಗ್ರೆಸ್ ತಳೆದಿರುವ ತಟಸ್ಥ ನಿಲುವು ಎಪಿಪಿ ಮುನಿಸಿಗೆ ಕಾರಣವಾಗಿದೆ.

ಸುಗ್ರೀವಾಜ್ಞೆ ವಿರುದ್ಧ ಸಂಸತ್‌ನಲ್ಲಿ ಮತ ಚಲಾಯಿಸುವಂತೆ ಎಎಪಿ ಮಾಡಿರುವ ಮನವಿಗೆ ಕಾಂಗ್ರೆಸ್ ಹೊರತುಪಡಿಸಿ ಹಲವು ಪಕ್ಷಗಳು ಸಹಮತ ಸೂಚಿಸಿವೆ. ಆದರೆ, ಕಾಂಗ್ರೆಸ್ ಕಾದು ನೋಡುವ ತಂತ್ರಕ್ಕೆ ಮೊರೆ ಹೋಗಿರುವುದು ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರನ್ನು ಕೆರಳಿಸಿದೆ.

ಹಾಗಾಗಿ, ಈ ವರ್ಷಾಂತ್ಯ ದಲ್ಲಿ ಛತ್ತೀಸಗಢ, ಮಧ್ಯಪ್ರದೇಶ ಮತ್ತು ರಾಜಸ್ಥಾನದ ವಿಧಾನಸಭೆಗೆ ನಡೆಯಲಿರುವ ಚುನಾವಣಾ ಅಖಾಡದಲ್ಲಿ ಕೈ ಪಾಳಯದ ವಿರುದ್ಧ ಸೆಣಸಾಟಕ್ಕೆ ಅವರು ಸಿದ್ಧತೆ ನಡೆಸಿದ್ದಾರೆ.

ಕಳೆದ ತಿಂಗಳು ಪಟ್ನಾದಲ್ಲಿ ನಡೆದ ಸಭೆಯಲ್ಲಿಯೂ ವಿರೋಧ ಪಕ್ಷಗಳು ಈ ನಿಟ್ಟಿನಲ್ಲಿ ಕಾಂಗ್ರೆಸ್ ಮೇಲೆ ಒತ್ತಡ ಹೇರಲು ಪ್ರಯತ್ನಿಸಲಿಲ್ಲ. ಕೇಜ್ರಿವಾಲ್ ಅವರು ಮುಂಬರುವ ಚುನಾವಣೆಗಳಲ್ಲಿ ಕಾಂಗ್ರೆಸ್ ವಿರುದ್ಧ ತೊಡೆ ತಟ್ಟಲು ನಿರ್ಧರಿಸಿರುವುದಕ್ಕೆ ಇದೇ ಮೂಲ ಕಾರಣ ಎನ್ನುತ್ತವೆ ಮೂಲಗಳು.

ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಗಳ ಪರ ಪ್ರಚಾರಕ್ಕೆ ಕೇಜ್ರಿವಾಲ್ ಬರಲಿಲ್ಲ. ಆದರೆ, ಇದಕ್ಕೂ ಮುನ್ನ ನಡೆದ ಗುಜರಾತ್ ಮತ್ತು ಗೋವಾ ಚುನಾವಣೆಯಲ್ಲಿ ಎಎಪಿ ಸ್ಪರ್ಧೆಯು ಕಾಂಗ್ರೆಸ್ ಅಭ್ಯರ್ಥಿಗಳ ಪಾಲಿಗೆ ತೊಡರುಗಾಲಾಗಿದ್ದು ಗುಟ್ಟಾಗಿ ಉಳಿದಿಲ್ಲ. ಆಗ ಎಎಪಿಯು ಬಿಜೆಪಿಯ 'ಬಿ' ಟೀಂ ಎಂದು 'ಕೈ' ವರಿಷ್ಠರು ಟೀಕಿಸಿದ್ದೂ ಉಂಟು.

ತೆಲಂಗಾಣದತ್ತ ದೃಷ್ಟಿ ಹರಿಸಿಲ್ಲ: ಕೆ. ಚಂದ್ರಶೇಖರ್ ರಾವ್ ನೇತೃತ್ವದ ಬಿಆರ್‌ಎಸ್ ಜೊತೆಗೆ ಕೇಜ್ರಿವಾಲ್ ಸೌಹಾರ್ದಯುತ ಸಂಬಂಧ ಹೊಂದಿದ್ದಾರೆ. ಹಾಗಾಗಿಯೇ, ಅವರು ತೆಲಂಗಾಣ ವಿಧಾನಸಭಾ ಚುನಾವಣೆಯತ್ತ ದೃಷ್ಟಿ ಹರಿಸಿಲ್ಲ ಎನ್ನುತ್ತವೆ ಮೂಲಗಳು.

ಸುಗ್ರೀವಾಜ್ಞೆ ವಿರುದ್ಧದ ಹೋರಾಟಕ್ಕೆ ಸಂಬಂಧಿಸಿದಂತೆ ಇನ್ನೂ ತನ್ನ ನಿಲುವಿಗೆ ಅಂಟಿಕೊಂಡಿರುವ ಕೈ ನಾಯಕರು ಎಎಪಿಗೆ ಕಾಯುವಂತೆ ಸಲಹೆ ನೀಡಿದ್ದಾರೆ. ಆದರೆ, ಇದನ್ನು ಆ ಪಕ್ಷವು ಮೃದುವಾಗಿ ಸ್ವೀಕರಿಸಿಲ್ಲ. ಜುಲೈ 1ರಂದು ಮಧ್ಯಪ್ರದೇಶದಲ್ಲಿ ನಡೆದ ರ್‍ಯಾಲಿಯಲ್ಲಿ ಕಾಂಗ್ರೆಸ್ ವಿರುದ್ಧ ಬಹಿರಂಗವಾಗಿಯೇ ಕೇಜ್ರಿವಾಲ್ ವಾಗ್ದಾಳಿ ನಡೆಸಿದ್ದು ಇದಕ್ಕೆ ನಿದರ್ಶನವಾಗಿದೆ.

ಕಾಂಗ್ರೆಸ್ ತನ್ನ ಸ್ಪಷ್ಟ ನಿಲುವು ಪ್ರಕಟಿಸಬೇಕು. ಅಲ್ಲಿಯವರೆಗೂ ಅದರೊಟ್ಟಿಗೆ ಪ್ರತಿಪಕ್ಷಗಳ ಸಭೆ ಅಥವಾ ಇನ್ಯಾವುದೇ ಸಭೆಯಲ್ಲಿ ವೇದಿಕೆ ಹಂಚಿಕೊಳ್ಳುವುದಿಲ್ಲ ಎಂದು ಎಎಪಿ ಸ್ಪಷ್ಟಪಡಿಸಿದೆ. ಆದರೆ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ಇತರೆ ಪಕ್ಷಗಳ ನಾಯಕರು, ಕಾಂಗ್ರೆಸ್ ಮೇಲೆ ಒತ್ತಾಯ ಹೇರಿಕೆ ಸರಿಯಲ್ಲ ಎಂದು ಪ್ರತಿಪಾದಿಸಿವೆ.

ಜೂನ್‌ನಲ್ಲಿ ರಾಜಸ್ಥಾನದಲ್ಲಿ ನಡೆದ ರ್‍ಯಾಲಿಯಲ್ಲಿ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಆಡಳಿತ ವೈಫಲ್ಯದ ವಿರುದ್ಧ ಕೇಜ್ರಿವಾಲ್ ಹರಿಹಾಯ್ದಿದ್ದರು. ಪಟ್ನಾ ಸಭೆಯಲ್ಲಿ ಎರಡೂ ಪಕ್ಷಗಳ ನಡುವಣ ಸಂಘರ್ಷಕ್ಕೆ ಈ ಅಂಶವೂ ಕಾರಣವಾಗಿತ್ತು ಎನ್ನುತ್ತವೆ ಮೂಲಗಳು.

ಕಾಂಗ್ರೆಸ್ ವಿರುದ್ಧ ಹೋರಾಟ ಏಕೆ?

ಪಂಜಾಬ್‌ನ ಜಲಂಧರ್ ಲೋಕಸಭಾ ಕ್ಷೇತ್ರವು ಕಾಂಗ್ರೆಸ್‌ನ ಭದ್ರಕೋಟೆಯಾಗಿತ್ತು. ಈ ಕ್ಷೇತ್ರದ ಸಂಸದ ಸಂತೋಖ್ ಸಿಂಗ್ ಚೌಧರಿ ಅವರ ನಿಧನದಿಂದ ನಡೆದ ಉಪ ಚುನಾವಣೆಯು ಕಾಂಗ್ರೆಸ್ ಬಗೆಗಿನ ಎಎಪಿಯ ದೃಷ್ಟಿಕೋನವನ್ನು ಬದಲಾಯಿಸಿತು.


ಕ್ಷೇತ್ರವನ್ನು ಪಕ್ಷದ ಹಿಡಿತಕ್ಕೆ ತೆಗೆದುಕೊಳ್ಳಲು ಮುಖ್ಯಮಂತ್ರಿ ಭಗವಂತ್ ಮಾನ್ ನಿರ್ಧರಿಸಿದರು. ರಾಜ್ಯದಲ್ಲಿ ಕೈ ಪಡೆಯ ಸಾಮರ್ಥ್ಯ ಕುಗ್ಗುತ್ತಿರುವುದನ್ನು ಕೇಜ್ರಿವಾಲ್‌ಗೆ ಮನವರಿಕೆ ಮಾಡಿಕೊಟ್ಟರು. ನಿರೀಕ್ಷೆಯಂತೆ ಪಕ್ಷವೂ ಜಯಗಳಿಸಿತು. ಮತ್ತೊಂದೆಡೆ ಪಕ್ಷದ ಎರಡನೇ ಹಂತದ ನಾಯಕರು, ಅಪ್ಪಟ ಕಾಂಗ್ರೆಸ್ ವಿರೋಧಿ ಮನಸ್ಥಿತಿ ಹೊಂದಿದ್ದಾರೆ. ಇದು ಕೈ ಭದ್ರಕೋಟೆ ವಿರುದ್ಧ ಕೇಜ್ರಿವಾಲ್ ಸೆಣಸಾಟದ ಹಾದಿಯನ್ನು ಸುಲಭಗೊಳಿಸಿದೆ ಎನ್ನುತ್ತವೆ ಮೂಲಗಳು.

ಕೇಂದ್ರ ಸಚಿವ ಸಂಪುಟ ಪುನರ್‌ರಚನೆ ಸಾಧ್ಯತೆ

ಬಿಜೆಪಿ: 4 ರಾಜ್ಯಗಳ ಅಧ್ಯಕ್ಷರ ನೇಮಕ

ಪ್ರಜಾವಾಣಿ ವಾರ್ತೆ


ಡಿ.ಪುರಂದೇಶ್ವರಿ


ಸುನೀಲ್ ಜಾಖಡ್


ಜಿ.ಕಿಶನ್ ರೆಡ್ಡಿ


ಬಾಬುಲಾಲ್ ಮರಾಂಡಿ

ನವದೆಹಲಿ: ಲೋಕಸಭಾ ಚುನಾವಣೆಗೂ ಮುನ್ನ ಪಕ್ಷದ ಸಂಘಟನೆಯಲ್ಲಿ ಇನ್ನಷ್ಟು ಬದಲಾವಣೆ ಮಾಡಲು ಮುಂದಾಗಿರುವ ಬಿಜೆಪಿ, ಪಕ್ಷದ ನಾಲ್ಕು ರಾಜ್ಯ ಘಟಕಗಳಿಗೆ ಅಧ್ಯಕ್ಷರನ್ನು ಮಂಗಳವಾರ ನೇಮಕ ಮಾಡಿದೆ. ಇದರೊಂದಿಗೆ, ಕೇಂದ್ರ ಸಚಿವ ಸಂಪುಟ ಪುನರ್ ರಚನೆಯಾಗುವ ಸಾಧ್ಯತೆ ದಟ್ಟವಾಗಿದೆ.

ಪ್ರಧಾನಿ ನರೇಂದ್ರ ಮೋದಿ ಅವರು ಮಂತ್ರಿ ಪರಿಷತ್‌ನ ಸದಸ್ಯರೊಂದಿಗೆ ಸೋಮವಾರ ಸಭೆ ನಡೆಸಿದ್ದರು. ಅದರ ಬೆನ್ನಲ್ಲೇ, ನಾಲ್ಕು ರಾಜ್ಯಗಳ ಅಧ್ಯಕ್ಷರ ಬದಲಾವಣೆ ಆಗಿದೆ.

ಬಿಜೆಪಿ ಕರ್ನಾಟಕ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರ ಅವಧಿ ಮುಗಿದಿದೆ. ರಾಜ್ಯ ಘಟಕದ ಅಧ್ಯಕ್ಷರನ್ನಾಗಿ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರನ್ನು ನೇಮಿಸಲು ಹೈಕಮಾಂಡ್ ಉತ್ಸುಕವಾಗಿದೆ. ಈ ಬಗ್ಗೆ ಶೀಘ್ರ ಆದೇಶ ಹೊರಬೀಳಲಿದೆ. ಕೇಂದ್ರ ಸಚಿವ ಸಂಪುಟ ಪುನರ್ ರಚನೆಗೆ ಮುನ್ನ ಈ ಪ್ರಕ್ರಿಯೆ ನಡೆಯಲಿದೆ ಎಂದು ಮೂಲಗಳು ತಿಳಿಸಿವೆ.

ನವೆಂಬರ್‌ನಲ್ಲಿ ತೆಲಂಗಾಣ ವಿಧಾನಸಭಾ ಚುನಾವಣೆ ನಡೆಯಲಿದೆ. ಪಕ್ಷದ ರಾಜ್ಯ ಘಟಕದ ಅಧ್ಯಕ್ಷರಾಗಿದ್ದ ಬಂಡಿ ಸಂಜಯ್ ಕುಮಾರ್ ಕಾರ್ಯವೈಖರಿ ಬಗ್ಗೆ ಪಕ್ಷದೊಳಗೆ ಅಸಮಾಧಾನ ವ್ಯಕ್ತವಾಗಿತ್ತು. ಅವರ ಸ್ಥಾನಕ್ಕೆ ಕೇಂದ್ರ ಸಚಿವ ಜಿ.ಕಿಶನ್ ರೆಡ್ಡಿ ಅವರನ್ನು ನೇಮಕ ಮಾಡಲಾಗಿದೆ. ಬಂಡಿ ಅವರು ಕೇಂದ್ರ ಸಚಿವ ಸಂಪುಟಕ್ಕೆ ಸೇರುವ ಸಾಧ್ಯತೆ ಇದೆ. ಒಬಿಸಿ ನಾಯಕ ಎಟೆಲಾ ರಾಜೇಂದರ್ ಅವರನ್ನು ಚುನಾವಣಾ ನಿರ್ವಹಣಾ ಸಮಿತಿಯ ಅಧ್ಯಕ್ಷರನ್ನಾಗಿ ಮಾಡಲಾಗಿದೆ. ರಾಜೇಂದರ್ ಬಿಆರ್‌ಎಸ್‌ನಲ್ಲಿದ್ದರು.

ಆಂಧ್ರ ಪ್ರದೇಶದ ರಾಜ್ಯ ಘಟಕದ ಅಧ್ಯಕ್ಷರನ್ನಾಗಿ ಕೇಂದ್ರದ ಮಾಜಿ ಸಚಿವೆ ಡಿ.ಪುರಂದೇಶ್ವರಿ ನೇಮಿಸಲಾಗಿದೆ. ಮಾಜಿ ಮುಖ್ಯಮಂತ್ರಿ ಎನ್.ಟಿ.ರಾಮರಾವ್ ಅವರ ಪುತ್ರಿ. ಕಾಂಗ್ರೆಸ್ ತ್ಯಜಿಸಿ ಬಿಜೆಪಿ ಸೇರ್ಪಡೆಯಾಗಿದ್ದರು.

2024ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಳ್ಳಲು ಟಿಡಿಪಿ ಉತ್ಸುಕವಾಗಿದೆ. ಟಿಡಿಪಿ ಮುಖ್ಯಸ್ಥ ಚಂದ್ರಬಾಬು ನಾಯ್ಡು ಬಿಜೆಪಿಯ ರಾಷ್ಟ್ರೀಯ ನಾಯಕರೊಂದಿಗೆ ಮಾತುಕತೆ ನಡೆಸಿದ್ದಾರೆ. ಪುರಂದೇಶ್ವರಿ ನೇಮಕ ಆಗಿರುವುದು ಕುತೂಹಲಕ್ಕೆ ಕಾರಣವಾಗಿದೆ. ಕಾಂಗ್ರೆಸ್ ಬಿಟ್ಟು ಬಿಜೆಪಿಗೆ ಸೇರಿರುವ ಮಾಜಿ ಮುಖ್ಯಮಂತ್ರಿ ಕಿರಣ್ ಕುಮಾರ್ ರೆಡ್ಡಿ ಅವರನ್ನು ರಾಷ್ಟ್ರೀಯ ಕಾರ್ಯಕಾರಿಣಿಯ ಸದಸ್ಯರನ್ನಾಗಿ ಮಾಡಲಾಗಿದೆ.

ಜಾರ್ಖಂಡ್ ರಾಜ್ಯ ಘಟಕದ ಅಧ್ಯಕ್ಷರನ್ನಾಗಿ ಮಾಜಿ ಮುಖ್ಯಮಂತ್ರಿ ಬಾಬುಲಾಲ್ ಮರಾಂಡಿ ಅವರನ್ನು ನೇಮಿಸಲಾಗಿದೆ. ಬುಡಕಟ್ಟು ಸಮುದಾಯದ ನಾಯಕರಾದ ಅವರು 2006ರಲ್ಲಿ ಬಿಜೆಪಿ ತ್ಯಜಿಸಿದ್ದರು. 'ಜಾರ್ಖಂಡ್ ವಿಕಾಸ್ ಮೋರ್ಚಾ' ಪಕ್ಷ ಸ್ಥಾಪಿಸಿದ್ದ ಅವರು, ಅದನ್ನು 2020ರಲ್ಲಿ ಬಿಜೆಪಿಯೊಂದಿಗೆ ವಿಲೀನ ಮಾಡಿದ್ದರು.

ಪಂಜಾಬ್ ರಾಜ್ಯ ಘಟಕದ ಅಧ್ಯಕ್ಷರನ್ನಾಗಿ ಸುನೀಲ್ ಜಾಖಡ್ ಅವರನ್ನು ನೇಮಕ ಮಾಡಲಾಗಿದೆ. ಕಾಂಗ್ರೆಸ್‌ನಲ್ಲಿದ್ದ ಅವರು ಕಳೆದ ವರ್ಷ ಬಿಜೆಪಿಗೆ ಸೇರ್ಪಡೆಯಾಗಿದ್ದರು.

'ಭಯೋತ್ಪಾದನೆ ಸಮರ್ಥನೀಯವಲ್ಲ'

ನವದೆಹಲಿ (ಪಿಟಿಐ): 'ತಮ್ಮ ರಾಜಕೀಯ ಹಾಗೂ ಜಾಗತಿಕ ರಾಜಕಾರಣದ ಗುರಿಗಳ ಸಾಧನೆಗಾಗಿ ಉಗ್ರರನ್ನು ಹಾಗೂ ಭಯೋತ್ಪಾದಕ ಗುಂಪುಗಳನ್ನು ಬಳಸಿಕೊಳ್ಳುವುದನ್ನು ಒಪ್ಪಲಾಗದು. ಇಂಥ ಕೃತ್ಯ ಅಪರಾಧ ಮತ್ತು ಸಮರ್ಥನೀಯವಲ್ಲ'

ಮಂಗಳವಾರ ನಡೆದ ಶಾಂಘೈ ಸಹಕಾರ ಸಂಘಟನೆಯ (ಎಸ್‌ಸಿಒ) ಶೃಂಗಸಭೆಯಲ್ಲಿ ಸದಸ್ಯ ರಾಷ್ಟ್ರಗಳ ನಾಯಕರ ಒಕ್ಕೊರಲ ಮಾತಿದು.

ತಮ್ಮ ದೇಶಗಳಲ್ಲಿ ಜಾರಿಯಲ್ಲಿ ಇರುವ ಕಾನೂನುಗಳ ಚೌಕಟ್ಟಿಗೆ ಅನುಗುಣವಾಗಿ ಭಯೋತ್ಪಾದಕ ಸಂಘಟನೆಗಳ ಏಕೀಕೃತ ಪಟ್ಟಿಯನ್ನು ಸಿದ್ಧಪಡಿಸಲು ಸಮ್ಮತಿಸಿದರು. 'ಭಯೋತ್ಪಾದನೆ, ಪ್ರತ್ಯೇಕವಾದ ಮತ್ತು ತೀವ್ರವಾದಕ್ಕೆ ಮೂಲಭೂತವಾದವೇ ಕಾರಣ. ಇದರ ನಿರ್ಮೂಲನೆ ಅಗತ್ಯ' ಎಂಬ ಹೇಳಿಕೆಯನ್ನು ಶೃಂಗಸಭೆ ಕೊನೆಗೆ ಬಿಡುಗಡೆ ಮಾಡಿದರು.

ಇದಕ್ಕೂ ಮುನ್ನ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ, 'ಭಯೋತ್ಪಾದನೆ ಮತ್ತು ಭಯೋತ್ಪಾದನೆಗೆ ಹಣಕಾಸು ನೆರವು ನೀಡುವುದನ್ನು ನಿಗ್ರಹಿಸಲು ನಿರ್ಣಾಯಕ ಕ್ರಮದ ಅಗತ್ಯವಿದೆ' ಎಂದರು.

ಭಾರತ ಮತ್ತು ಚೀನಾ ನಡುವಿನ ಗಡಿ ವಿವಾದವನ್ನು ಸೂಚ್ಯವಾಗಿ ಪ್ರಸ್ತಾಪಿಸಿದ ಮೋದಿ, 'ನಮ್ಮ ಅಗತ್ಯಗಳು, ಸೂಕ್ಷ್ಮ ವಿಷಯಗಳನ್ನು ಅರ್ಥ ಮಾಡಿಕೊಳ್ಳುವುದು ಪ್ರತಿ ಸದಸ್ಯ ರಾಷ್ಟ್ರದ ಜವಾಬ್ದಾರಿ' ಎಂದರು.

'ಸದಸ್ಯ ರಾಷ್ಟ್ರಗಳ ನಡುವೆ ಸಂವಹನಕ್ಕೆ ಭಾಷೆ ತೊಡಕಾಗಬಾರದು. ಹೀಗಾಗಿ 'ಭಾಷಿಣಿ' ಎಂಬ ಕೃತಕಬುದ್ಧಿಮತ್ತೆ (ಎಐ) ಆಧಾರಿತ ವೇದಿಕೆಯನ್ನು ಭಾರತ ಅಭಿವೃದ್ಧಿಪಡಿಸಿದೆ' ಎಂದೂ ಹೇಳಿದರು. ಕಜಕಸ್ತಾನ, ಕಿರ್ಗಿಸ್ತಾನ, ತಜಕಿಸ್ತಾನ, ಉಜ್ಬೇಕಿಸ್ತಾನದ ನಾಯಕರು ಪಾಲ್ಗೊಂಡಿದ್ದರು. ನೂತನ ಸದಸ್ಯ ರಾಷ್ಟ್ರವಾದ ಇರಾನ್ ಪ್ರತಿನಿಧಿ ಸಹ ಪಾಲ್ಗೊಂಡಿದ್ದರು.

'ಶೀತಲ ಸಮರ'ಕ್ಕೆ ಪ್ರಚೋದನೆ: ಷಿ ಎಚ್ಚರಿಕೆ

ಬೀಜಿಂಗ್ (ಪಿಟಿಐ): 'ಪ್ರಾದೇಶಿಕ ಶಾಂತಿಗೆ ಭಂಗ ತರುವುದಕ್ಕಾಗಿ ಕೆಲ ಬಾಹ್ಯ ಶಕ್ತಿಗಳು ಶೀತಲ ಸಮರಕ್ಕೆ ಪ್ರಚೋದಿಸುತ್ತಿವೆ. ಈ ಬಗ್ಗೆ ಎಸ್‌ಸಿಒ ಸದಸ್ಯ ರಾಷ್ಟ್ರಗಳು ಎಚ್ಚರದಿಂದ ಇರಬೇಕು' ಎಂದು ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಹೇಳಿದರು. ಶೃಂಗಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು,'ಜಂಟಿ ಕಾರ್ಯಾಚರಣೆಗಳ ಮೂಲಕ ಭಯೋತ್ಪಾದನೆಯನ್ನು ಮಟ್ಟ ಹಾಕಬೇಕು' ಎಂದರು. 'ಸಂಘಟನೆಯ ಸದಸ್ಯ ರಾಷ್ಟ್ರಗಳು ತಮ್ಮ ಆರ್ಥಿಕತೆ ಪುನಶ್ಚೇತನಕ್ಕೆ ವೇಗ ನೀಡುವ ಜೊತೆಗೆ ಪ್ರಾದೇಶಿಕ ಶಾಂತಿ ಹಾಗೂ ಭದ್ರತೆ ಬಗ್ಗೆಯೂ ಗಮನ ಹರಿಸಬೇಕು' ಎಂದರು.

ತಕ್ಕ ಉತ್ತರ- ಪುಟಿನ್: ಮಾಸ್ಕೊ(ಎಎಫ್‌ಪಿ): 'ಉಕ್ರೇನ್ ವಿರುದ್ಧ ಸೇನಾ ಕಾರ್ಯಾಚರಣೆ ಕೈಗೊಂಡಿರುವ ಹಿನ್ನೆಲೆಯಲ್ಲಿ ತನ್ನ ಮೇಲೆ ಪಶ್ಚಿಮ ರಾಷ್ಟ್ರಗಳು ಹೇರುತ್ತಿರುವ ಒತ್ತಡ, ನಿರ್ಬಂಧಗಳಿಗೆ ರಷ್ಯಾ ತಕ್ಕ ಉತ್ತರ ನೀಡುವುದನ್ನು ಮುಂದುವರಿಸಲಿದೆ' ಎಂದು ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಹೇಳಿದರು.

ಭಾರತ–ಪಾಕ್ ಜಟಾಪಟಿ

ಒಂದನೇ ಪುಟದಿಂದ

ಘೋಷಣೆ: 'ಭಯೋತ್ಪಾದನೆಯನ್ನು ನಿಗ್ರಹಿಸಲು ಸಂಘಟನೆಯ ಎಲ್ಲ ನಾಯಕರು ಶಪಥ ಮಾಡಿದರು' ಎಂದು ಶೃಂಗಸಭೆ ಕೊನೆಗೊಂಡ ನಂತರ ಬಿಡುಗಡೆ ಮಾಡಿದ ಘೋಷಣೆಯಲ್ಲಿ ತಿಳಿಸಲಾಗಿದೆ.

'ಉಗ್ರರಿಗೆ ಹಣಕಾಸು ನೆರವು ನೀಡುವ ಮಾರ್ಗಗಳಿಗೆ ಕಡಿವಾಣ ಹಾಕಬೇಕು, ಉಗ್ರರನ್ನು ನೇಮಕ ಮಾಡಿಕೊಳ್ಳುವ ಪ್ರಕ್ರಿಯೆಯನ್ನು ಹತ್ತಿಕ್ಕಬೇಕು ಹಾಗೂ ಗಡಿಯಾಚೆಗಿನ ಭಯೋತ್ಪಾದನೆಯನ್ನು ತಡೆಯಬೇಕು' ಎಂಬ ನಿರ್ಣಯಗಳನ್ನು ಸಹ ಸದಸ್ಯ ರಾಷ್ಟ್ರಗಳ ನಾಯಕರು ಕೈಗೊಂಡರು ಎಂದೂ ಘೋಷಣೆಯಲ್ಲಿ ತಿಳಿಸಲಾಗಿದೆ.

ಸಚಿವ ಸೆಂಥಿಲ್ ಬಾಲಾಜಿ ಬಂಧನ: 'ಸುಪ್ರೀಂ' ಸೂಚನೆ

ಮೂರನೇ ನ್ಯಾಯಮೂರ್ತಿಗೆ ವಹಿಸಿ

ಪ್ರಜಾವಾಣಿ ವಾರ್ತೆ


ನವದೆಹಲಿ: ತಮಿಳುನಾಡು ಸಚಿವ ಸೆಂಥಿಲ್ ಬಾಲಾಜಿ ಅವರ ಬಂಧನ ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿಯನ್ನು ವಿಚಾರಣೆಗಾಗಿ ಸಾಧ್ಯವಾದಷ್ಟು ಬೇಗನೇ ಮೂರನೇ ನ್ಯಾಯಮೂರ್ತಿಗೆ ವಹಿಸುವಂತೆ ಮದ್ರಾಸ್ ಹೈಕೋರ್ಟ್ ಮುಖ್ಯನ್ಯಾಯಮೂರ್ತಿಗೆ ಸುಪ್ರೀಂ ಕೋರ್ಟ್ ಮಂಗಳವಾರ ಸೂಚಿಸಿತು.

ನ್ಯಾಯಮೂರ್ತಿಗಳಾದ ಸೂರ್ಯ ಕಾಂತ್, ದೀಪಂಕರ್ ದತ್ತ ಅವರಿದ್ದ ನ್ಯಾಯಪೀಠ ಈ ಸೂಚನೆ ನೀಡಿತು.

'ಸಚಿವ ಸೆಂಥಿಲ್ ಬಾಲಾಜಿ ಅವರ ಬಂಧನವನ್ನು ಪ್ರಶ್ನಿಸಿ ಸಲ್ಲಿಸಿರುವ ಹೇಬಿಯಸ್ ಕಾರ್ಪಸ್ ಅರ್ಜಿಯ ವಿಚಾರಣೆಯನ್ನು ಸುಪ್ರೀಂಕೋರ್ಟ್ ನಡೆಸಬೇಕು' ಎಂದು ಕೋರಿ ಜಾರಿ ನಿರ್ದೇಶನಾಲಯ (ಇ.ಡಿ) ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಪೀಠ ತಿರಸ್ಕರಿಸಿತು.

ಬಾಲಾಜಿ ಅವರ ಪತ್ನಿ ಸಲ್ಲಿಸಿದ್ದ ಅರ್ಜಿ ಕುರಿತು ಮದ್ರಾಸ್ ಹೈಕೋರ್ಟ್‌ನ ಇಬ್ಬರು ನ್ಯಾಯಮೂರ್ತಿಗಳು ಭಿನ್ನ ತೀರ್ಪು ಪ್ರಕಟಿಸಿದ್ದರ ಹಿನ್ನೆಲೆಯಲ್ಲಿ ನ್ಯಾಯಪೀಠ ಈ ನಿರ್ದೇಶನ ನೀಡಿತು.

ಪತಿ ಬಾಲಾಜಿ ಅವರನ್ನು 'ಕಾನೂನುಬಾಹಿರವಾಗಿ ಬಂಧನದಲ್ಲಿ ಇಡಲಾಗಿದೆ' ಎಂದು ಪತ್ನಿ ಮೇಗಲಾ ಅವರು ಸಲ್ಲಿಸಿದ್ದ ಹೇಬಿಯಸ್ ಕಾರ್ಪಸ್ ಅರ್ಜಿಯ ವಿಚಾರಣೆಯನ್ನು ಮದ್ರಾಸ್ ಹೈಕೋರ್ಟ್ ನ್ಯಾಯಮೂರ್ತಿಗಳಾದ ಜೆ.ನಿಶಾ ಬಾನು ಹಾಗೂ ಡಿ.ಭರತ ಚಕ್ರವರ್ತಿ ಅವರಿದ್ದ ವಿಭಾಗೀಯ ನ್ಯಾಯಪೀಠ ಮಂಗಳವಾರ ನಡೆಸಿತ್ತು.



'ಬಾಲಾಜಿ ಬಂಧನ ಕಾನೂನು ಬಾಹಿರ. ಹೇಬಿಯಸ್ ಕಾರ್ಪಸ್ ಅರ್ಜಿ ಸಮರ್ಥನೀಯ' ಎಂದು ನ್ಯಾಯಮೂರ್ತಿ ನಿಶಾ ಬಾನು ಹೇಳಿದ್ದರು. ಹೇಬಿಯಸ್ ಕಾರ್ಪಸ್ ಸಮರ್ಥನೀಯವಲ್ಲ ಎನ್ನುವ ಮೂಲಕ ನ್ಯಾಯಮೂರ್ತಿ ಚಕ್ರವರ್ತಿ ವ್ಯತಿರಿಕ್ತ ತೀರ್ಪು ನೀಡಿದ್ದರು. ಹೀಗಾಗಿ ಈ ವಿಷಯ ಸುಪ್ರೀಂಕೋರ್ಟ್ ಮೆಟ್ಟಿಲೇರಿತ್ತು.

ವಾದ: ಜಾರಿ ನಿರ್ದೇಶನಾಲಯ ಪರ ಹಾಜರಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, 'ವ್ಯಕ್ತಿಯೊಬ್ಬರನ್ನು ಬಂಧಿಸಿದ ವಿಷಯದಲ್ಲಿ ಹೇಬಿಯಸ್ ಕಾರ್ಪಸ್ ಅರ್ಜಿಯನ್ನು ಸಲ್ಲಿಸಬಹುದೇ ಎಂಬುದು ಇಲ್ಲಿರುವ ಪ್ರಶ್ನೆ. ಇದು ಇತ್ಯರ್ಥವಾಗದಿದ್ದರೆ, ಈ ವಿಷಯ ಮೂರನೇ ನ್ಯಾಯಮೂರ್ತಿಗೆ ಹೋಗುತ್ತದೆ. ನಿರ್ಧಾರ ಪ್ರಕಟಿಸಲು ತಿಂಗಳು ಅಥವಾ ಹೆಚ್ಚಿನ ಸಮಯ ಬೇಕಾಗಬಹುದು' ಎಂದು ನ್ಯಾಯಪೀಠಕ್ಕೆ ತಿಳಿಸಿದರು.

'ಬಂಧಿತ ಪ್ರಭಾವಿ ವ್ಯಕ್ತಿಯಾಗಿದ್ದು, ಸಾಕ್ಷ್ಯಗಳನ್ನು ನಾಶ ಮಾಡುವ ಸಾಧ್ಯತೆ ಇದೆ. ಇಂಥ ಸಂದರ್ಭದಲ್ಲಿ ತನಿಖಾ ಸಂಸ್ಥೆಗೆ ಆಗುವ ಹಾನಿಯನ್ನು ಮತ್ತೆ ಸರಿಪಡಿಸಲು ಸಾಧ್ಯವಿಲ್ಲ' ಎಂದು ಮೆಹ್ತಾ ವಿವರಿಸಿದರು.

ಬಾಲಾಜಿ ಪರ ಹಾಜರಿದ್ದ ಹಿರಿಯ ವಕೀಲರಾದ ಕಪಿಲ್ ಸಿಬಲ್ ಹಾಗೂ ದೇವದತ್ತ ಕಾಮತ್ ಆಕ್ಷೇಪಿಸಿದ ಕಾರಣ, ನ್ಯಾಯಪೀಠವು ಮೆಹ್ತಾ ಅವರ ಮನವಿಯನ್ನು ತಿರಸ್ಕರಿಸಿತು.

'ಭಿನ್ನ ತೀರ್ಪು ಬಂದಿರುವ ಕಾರಣ ಸಚಿವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಬಹುದೇ' ಎಂಬ ನ್ಯಾಯಪೀಠದ ಪ್ರಶ್ನೆಗೆ, 'ಕಾನೂನಿನ ಪ್ರಕಾರ ಅವರು (ಸಚಿವ ಬಾಲಾಜಿ) ನ್ಯಾಯಾಂಗ ಬಂಧನದಲ್ಲಿಯೇ ಇರಲಿ' ಎಂದು ಸಿಬಲ್ ಹೇಳಿದರು. ಆಗ, ಈ ಅಂಶವನ್ನು ಆದೇಶದಲ್ಲಿ ಉಲ್ಲೇಖಿಸುವಂತೆ ಮೆಹ್ತಾ ಕೋರಿದರು.

'ಈ ವಿಚಾರವಾಗಿ ಮದ್ರಾಸ್ ಹೈಕೋರ್ಟ್ ನಿರ್ಧಾರ ಕೈಗೊಳ್ಳದಿದ್ದಲ್ಲಿ ಅವರು ನ್ಯಾಯಾಂಗ ಬಂಧನದಲ್ಲಿಯೇ ಇರಲಿದ್ದಾರೆ' ಎಂದ ನ್ಯಾಯಪೀಠ, ವಿಚಾರಣೆಯನ್ನು ಜುಲೈ 24ಕ್ಕೆ ಮುಂದೂಡಿತು.


ಜಾತಿ ವ್ಯವಸ್ಥೆಯ ಮರುವರ್ಗೀಕರಣ ಪಿಐಎಲ್ ವಜಾ

ನವದೆಹಲಿ(ಪಿಟಿಐ): ಜಾತಿ ವ್ಯವಸ್ಥೆಯ ಮರುವರ್ಗೀಕರಣ ಮಾಡುವಂತೆ ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡುವಂತೆ ಕೋರಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಸುಪ್ರೀಂಕೋರ್ಟ್ ಮಂಗಳವಾರ ವಜಾಗೊಳಿಸಿತು.

ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಹಾಗೂ ನ್ಯಾಯಮೂರ್ತಿ ಪಿ.ಎಸ್. ನರಸಿಂಹ ಅವರಿದ್ದ ನ್ಯಾಯಪೀಠ, ಅರ್ಜಿ ಸಲ್ಲಿಸಿದ್ದ ವಕೀಲ ಸಚಿನ್ ಗುಪ್ತ ಎಂಬುವವರಿಗೆ ₹ 25 ಸಾವಿರ ದಂಡ ವಿಧಿಸಿತು.

'ಈ ದಂಡದ ಮೊತ್ತವನ್ನು ಸುಪ್ರೀಂಕೋರ್ಟ್ ವಕೀಲರ ಸಂಘಕ್ಕೆ ಪಾವತಿಸಬೇಕು. ಪಾವತಿಗೆ ಸಂಬಂಧಿಸಿದ ರಸೀದಿಯನ್ನು ಎರಡು ವಾರಗಳ ಒಳಗಾಗಿ ಅರ್ಜಿದಾರ ನ್ಯಾಯಾಲಯಕ್ಕೆ ಸಲ್ಲಿಸಬೇಕು' ಎಂದೂ ಸೂಚಿಸಿತು.

ತಂತ್ರಜ್ಞಾನ





ಅಣುಗಳೂ ಉಸಿರಾಡುತ್ತವೆ!

ನೇಸರ ಕಾಡನಕುಪ್ಪೆ



ಶಾಲೆಯಲ್ಲಿ ಕಲಿತ ಅಣುಗಳ ಬಗೆಗಿನ ಪಾಠ ಮರೆಯುವುದುಂಟೇ? ಅಣುವೊಳಗಿನ ನ್ಯೂಟ್ರಾನ್, ಎಲೆಕ್ಟ್ರಾನ್, ಪ್ರೋಟಾನ್, ಅದರೊಳಗಿನ ನ್ಯೂಕ್ಲಿಯಸ್ ಎಂಬ ರಚನೆಯ ಪ್ರಾಥಮಿಕ ಪಾಠ ನಮಗೆ ಆಗಲೇ ಸಿಕ್ಕಿರುತ್ತದೆ. ಅಂತೆಯೇ, ಅಣುಶಕ್ತಿಯ ಪರಿಚಯವೂ ನಮಗಿದೆ. ಅಣುಬಾಂಬ್, ಅಣುವಿದ್ಯುತ್ ನಮಗೆ ಹೊಸತಲ್ಲ. ಆದರೆ, ಇಲ್ಲಿನ ಚರ್ಚೆ ಕೊಂಚ ಭಿನ್ನವಾಗಿದೆ. 'ಅಣುಗಳೂ ಉಸಿರಾಡುತ್ತವೆ' ಎಂಬ ಹೊಸ ವಿಚಾರವನ್ನು ವಿಜ್ಞಾನಿಗಳು ಕಂಡುಹಿಡಿದಿದ್ದಾರೆ. ಇದನ್ನು ವಿಜ್ಞಾನಿಗಳು 'ಅಣುಪದರ ಕಂಪನ' (Atomic Breath) ಎಂದು ಕರೆದಿದ್ದಾರೆ.

ಈ ಹೊಸ ಆವಿಷ್ಕಾರದ ಬಳಕೆಯ ಸಾಧ್ಯತೆಗಳ ಬಗ್ಗೆ ಈಗ ಚರ್ಚೆ ನಡೆದಿದೆ. ಈ ಅಣುಗಳ ಉಸಿರಾಟ ಎಂದರೇನು? ಹೇಗೆ ಈ ಉಸಿರಾಟ ಸಾಧ್ಯ? ಇದರ ಬಳಕೆ ಏನು? – ಇತ್ಯಾದಿ ಪ್ರಶ್ನೆಗಳಿಗೆ ಉತ್ತರಗಳನ್ನು ಸಂಶೋಧಿಸಿರುವ ವಿಜ್ಞಾನಿಗಳೇ ಸರಳವಾಗಿ ತಿಳಿಸಿದ್ದಾರೆ. ಈ ಹೊಸ ಸಂಶೋಧನೆಯ ಸಹಾಯದಿಂದ ನಮ್ಮ ನಿತ್ಯಜೀವನವನ್ನು ಮತ್ತಷ್ಟು ಸರಳಗೊಳಿಸಿಕೊಳ್ಳಬಹುದು ಎಂದು ವ್ಯಾಖ್ಯಾನಿಸಿದ್ದಾರೆ.

ಏನಿದು ಅಣುಗಳ ಉಸಿರಾಟ?

ಅಣುಗಳಿಂದ ರಚಿಸಲ್ಪಟ್ಟಿರುವ ಎರಡು ಅಣುಪದರಗಳ ನಡುವೆ ಸದಾ ಕಾಲ ಅತಿ ಸೂಕ್ಷ್ಮವಾದ ಭೌತಿಕವಾದ ಘರ್ಷಣೆ ಇದ್ದೇ ಇರುತ್ತದೆ ಎಂಬುದೇ ಈ ಹೊಸ ಆವಿಷ್ಕಾರ. ಈ ಅಣುಗಳ ಉಸಿರಾಟವು ಪ್ರಾಣಿ–ಪಕ್ಷಿಗಳಂತೆ ಆ ಪದರಗಳ ನಡುವೆ ಭೌತಿಕವಾಗಿ ಕಾಣುವಂತೆ ಇರುತ್ತದೆ. ಅಂದರೆ, ಎರಡುಗಳ ಪದರಗಳ ಹಿಗ್ಗುವಿಕೆ ಮತ್ತು ಕುಕ್ಕುವಿಕೆ ಗೋಚರಿಸುತ್ತದೆ. ಈ ಹಿಗ್ಗುವ ಹಾಗೂ ಕುಗ್ಗವ ಪ್ರಕ್ರಿಯೆಯನ್ನೇ ವಿಜ್ಞಾನಿಗಳು ಉಸಿರಾಟಕ್ಕೆ ಹೋಲಿಸಿದ್ದಾರಷ್ಟೇ. ಇಲ್ಲಿ ಮತ್ತೊಂದು ಕೌತುಕದ ವಿಚಾರವಿದೆ. ಇದು ಕೇವಲ ಗೋಚರಿಸುವ ಪ್ರಕ್ರಿಯೆಯಲ್ಲ. ಈ ಅಣು ಉಸಿರಾಟವು ಸದ್ದನ್ನು ಸಹಾ ಮಾಡುತ್ತದೆ. ಈ ಸದ್ದನ್ನು ನಾವು ಅನೇಕ ಕೆಲಸಗಳಿಗೆ ಬಳಸಿಕೊಳ್ಳಬಹುದು ಎಂದು ವಿಜ್ಞಾನಿಗಳು ವ್ಯಾಖ್ಯಾನಿಸಿದ್ದಾರೆ.

ಅಮೆರಿಕದ ವಾಷಿಂಗ್ಟನ್ ವಿಶ್ವವಿದ್ಯಾನಿಲಯದ ವಿಜ್ಞಾನಿ ಮೊ ಲೀ ಅವರು ಅವರು ಈ ಸಂಶೋಧೆಯನ್ನು ಮಾಡಿದ್ದಾರೆ. ಈ ಅಣು ಉಸಿರಾಟ ಅಥವಾ ಅಣುಗಳ ಘರ್ಷಣೆಯನ್ನು ದತ್ತಾಂಶ ರವಾನೆಗೆ ಬಳಸಿಕೊಳ್ಳಬಹುದಾಗಿದೆ. ಅದರಲ್ಲೂ ಧ್ವನಿ ದತ್ತಾಂಶ ರವಾನೆ ಇದರಿಂದ ಅತ್ಯಂತ ಸರಳವಾಗಲಿದೆ. ಟೆಲಿ ಕಮ್ಯುನಿಕೇಷನ್ಸ್‌ನಲ್ಲಿ ಈಗಲೂ ರೇಡಿಯೋ ಸಂಜ್ಞೆಗಳನ್ನು ಬಳಸಿಕೊಂಡು ಮೊಬೈಲ್ ಫೋನ್ ಕಾರ್ಯನಿರ್ವಹಿಸುತ್ತಿದೆ. ಇದಕ್ಕಾಗಿ ಮೊಬೈಲ್ ಟವರ್‌ಗಳ ನಿರ್ಮಾಣ, ಅದಕ್ಕಾಗಿ ಅಪಾರ ಪ್ರಮಾಣದ ವಿದ್ಯುತ್ ಬಳಕೆಯಾಗುತ್ತಿದೆ. ಅಲ್ಲದೇ, ಇದರಿಂದ ಪರಿಸರದ ಮೇಲೂ ಅಡ್ಡ ಪರಿಣಾಮಗಳಾಗುತ್ತಿವೆ. ಈ ಹೊಸ ಸಂಶೋಧನೆಯಿಂದ ಅಣುಗಳ ಘರ್ಷಣೆಯನ್ನು ಬಳಸಿಕೊಂಡು ಧ್ವನಿಯನ್ನು ಉತ್ಪಾದಿಸಿ ಅದನ್ನು ಒಂದೆಡೆಯಿಂದ ಇನ್ನೊಂದೆಡೆಗೆ ಪ್ರಸಾರ ಮಾಡುವ ಸಾಧ್ಯತೆ ಇದೆ.

ಬಳಕೆ ಏನು?

ಧ್ವನಿಯನ್ನು ವಿದ್ಯುತ್ ಸಂಜ್ಞೆಯಾಗಿ ಪರಿವರ್ತಿಸುವ ತಂತ್ರಜ್ಞಾನ ನಮ್ಮಲ್ಲಿ ಈಗಾಗಲೇ ಇದೆ. ಇದೇ ಮಾದರಿಯಲ್ಲಿ ಅಣುಕಂಪನದ ಸಹಾಯದಿಂದ ಧ್ವನಿಸಂಜ್ಞೆಗಳನ್ನು ಉತ್ಪಾದಿಸಿ ಪ್ರಸಾರ ಮಾಡಬಹುದಾಗಿದೆ. ಅಲ್ಲದೇ, ಇಲ್ಲಿ ಅಣುವಿನ ಶಕ್ತಿ ಅಪಾರ. ವಿದ್ಯುತ್ ಉತ್ಪಾದನೆಗೆ ಬಳಸಿಕೊಳ್ಳುವ ಯುರೇನಿಯಂ, ಥೋರಿಯಂ ಅನ್ನೇ ಬಳಸಿಕೊಳ್ಳಬೇಕು ಎಂದೇನಿಲ್ಲ. ಇವುಗಳ ವಿಕರಣಗುಣ ಅತಿ ಹೆಚ್ಚು. ಹೀಗಾಗಿ, ಕಡಿಮೆ ಅಪಾಯಕಾರಿಯುಳ್ಳ ಯಾವುದೇ ರಾಸಾಯನಿಕವನ್ನು ಬಳಸಿಕೊಂಡು ಅಣುಕಂಪನವನ್ನು ಉಂಟುಮಾಡಬಹುದು. ಒಟ್ಟಿನಲ್ಲಿ ಅಣುಕಂಪನವನ್ನು ಸಂಜ್ಞೆಯಾಗಿ ಪರಿವರ್ತಿಸಿ ಭೂಮಿಯ ವಾತಾವರಣಕ್ಕೆ ಸೇರಿಸುವುದಷ್ಟೇ ಕೆಲಸ. ಪರಿವರ್ತನೆಯಾಗಿ ಬಿತ್ತರಗೊಂಡ ಸಂಜ್ಞೆಗಳನ್ನು ಧ್ವನಿಸಂಜ್ಞೆಗಳಾಗಿ ಪರಿವರ್ತಿಸುವ ಸಾಧನಗಳಷ್ಟೇ ಬೇಕಿರುವುದು.

ಅತಿ ವೇಗದ ಇಂಟರ್‌ನೆಟ್

ಅಲ್ಲದೇ, ಅತಿ ವೇಗದ ದತ್ತಾಂಶ ರವಾನೆಯೂ ಇದರಿಂದ ಸಾಧ್ಯ. ಸದ್ಯಕ್ಕೆ ಫೈಬರ್ ಲೈನ್ ಮೂಲಕ ವಿಶ್ವದ ಎಲ್ಲ ಮೂಲೆಗಳಿಗೂ ಇಂಟರ್‌ನೆಟ್ ತಲುಪುತ್ತಿದೆ. ಈ ಅಣುಕಂಪನದ ಮೂಲಕವೂ ಅತಿ ವೇಗದ ದತ್ತಾಂಶವನ್ನು ರವಾನೆ ಮಾಡಬಹುದಾಗಿದೆ. ಇದಕ್ಕಾಗಿ 'ಕ್ವಾಂಟಮ್ ಎಮಿಟರ್' ಎಂಬ ಸಾಧನವನ್ನೂ ಸಂಶೋಧಿಸಿದ್ದಾರೆ. 'ಅಣುಕಂಪನದ ಮೂಲಕ ರವಾನೆಯಾಗುವ ದತ್ತಾಂಶದಲ್ಲಿ ಲೇಟೆನ್ಸಿ (ದತ್ತಾಂಶ ತಡವಾಗಿ ತಲುಪುವುದು) ಬಹಳ ಕಡಿಮೆ. ಹಾಗಾಗಿ, ಕ್ಷಣಾರ್ಧದಲ್ಲಿ ಸಂಜ್ಞೆಗಳ ರವಾನೆ ಸಾಧ್ಯ. ನೀವು ಗಮನಿಸಿರಬಹುದು, ಭೂಮಿಯ ಇನ್ನೊಂದು ಭಾಗದಲ್ಲಿ ನಡೆಯುವ ಕಾರ್ಯಕ್ರಮಗಳಲ್ಲಿ ಕೆಲವು ಸೆಕೆಂಡ್‌ಗಳ ಬಳಿಕವಷ್ಟೇ ನಮಗೆ ಟಿವಿಯಲ್ಲಿ ಕಾಣಿಸುತ್ತವೆ. ಇದಕ್ಕೆ ಕಾರಣ ಡೇಟಾ ಲೇಟೆನ್ಸಿ. ಈ ಬಗೆಯ ಮಿತಿಗಳು ಅಣುಕಂಪನ ದತ್ತಾಂಶ ರವಾನೆಯಲ್ಲಿ ಇರುವುದಿಲ್ಲ. ಏಕೆಂದರೆ, ಇದು ನಿಸ್ತಂತುವಾಗಿ ಕಾರ್ಯನಿರ್ವಹಿಸುತ್ತದೆ' ಎಂದು ಮೊ ಲೀ ವ್ಯಾಖ್ಯಾನಿಸಿದ್ದಾರೆ.

ಇದರ ಉಪಯೋಗಗಳು ಮಾನವ ಪರವಾಗಿವೆ. ದತ್ತಾಂಶವನ್ನು ಬಳಸಿಕೊಂಡು ಕಾರ್ಯನಿರ್ವಹಿಸುವ ಇಂಟರ್‌ನೆಟ್, ದೂರವಾಣಿ ಇತ್ಯಾದಿ ಸೇವೆಗಳನ್ನು ಅತ್ಯಂತ ಕಡಿಮೆ ಬೆಲೆಯಲ್ಲಿ (ಭವಿಷ್ಯದಲ್ಲಿ ಉಚಿತವಾಗಿ) ನೀಡುವುದು. ಅಲ್ಲದೇ, ಈಗಿನ ತಂತ್ರಜ್ಞಾನಗಳಲ್ಲಿನ ಮಿತಿ ನಮಗೆ ತಿಳಿದಿರುವ ಕಾರಣ, ಆ ಮಿತಿಗಳನ್ನು ಇಲ್ಲದಂತೆ ಮಾಡುವುದು. ಜೊತೆಗೆ ಪರಿಸರಕ್ಕೆ ಹಾನಿಯಾಗದಂತೆ, ಭವಿಷ್ಯದ ತಲೆಮಾರಿನ ಜನರೂ ನೆಮ್ಮದಿಯಿಂದ ಬದುಕುವಂತಹ ವಾತಾವರಣವನ್ನು ನಿರ್ಮಿಸುವುದು ಪ್ರಧಾನ ಉದ್ದೇಶ – ಎಂದು ಮೊ ಲೀ ಹಾಗೂ ತಂಡ ತಮ್ಮ ಸಂಶೋಧನೆಯನ್ನು ವಿವರಿಸಿದೆ.

ವ್ಯಾಕರಣ ಛಂದಸ್ಸಿನ ಅಧ್ಯಯನಕ್ಕೊಂದು ತಂತ್ರಾಂಶ

ಜಿ.ಎನ್. ನರಸಿಂಹಮೂರ್ತಿ



ಕನ್ನಡಿಗರು ಬೇರೆ ದೇಶಗಳಿಗೆ ಹೋದಾಗ ಅವರಿಗೆ ಕನ್ನಡದ ಕುರಿತು ಹೆಚ್ಚಿನ ಅಭಿಮಾನ ಜಾಗೃತವಾಗುತ್ತದೆ. ಅದಕ್ಕೆ ಆಯಾ ದೇಶಗಳ ಭಾಷಾ ಸನ್ನಿವೇಶಗಳೇ ಕಾರಣ. ಹೀಗೆ ಬೇರೆ ಭಾಷೆಯವರು ಅವರ ಭಾಷೆಗೆ ಮಾಡುತ್ತಿರುವ ಕೆಲಸಗಳನ್ನು ನೋಡಿ ಅದರಿಂದ ಪ್ರೇರಿತರಾಗಿ ಜರ್ಮನಿಯಲ್ಲಿರುವ ಕನ್ನಡಿಗರ ಸ್ನೇಹಿತ ಬಳಗದವರು ಕನ್ನಡದ ಛಂದಸ್ಸಿನ ಬಗೆಗೆ ಕುತೂಹಲವಿರುವ ಎಲ್ಲ ಕನ್ನಡಿಗರಿಗೆ ಒಂದು ಒಳ್ಳೆಯ ಕೊಡುಗೆಯನ್ನು ನೀಡಿದ್ದಾರೆ.

ವೈಮಾಂತರಿಕ್ಷ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಮಿತ್ರರು ಸೇರಿ 'ವ್ಯಾಕರಣ' ಎಂಬ ತಂತ್ರಾಂಶವೊಂದನ್ನು ರೂಪಿಸಿದ್ದಾರೆ. ರಾಘವೇಂದ್ರಪ್ರಸಾದ್ ಇದರ ಮುಖ್ಯಸ್ಥರು. ಈ ತಂತ್ರಾಂಶದಲ್ಲಿ ಯೂನಿಕೋಡ್ ಶಿಷ್ಟತೆಯಲ್ಲಿರುವ ಪಠ್ಯಗಳ ಸಂಧಿ ಮತ್ತು ಛಂದಸ್ಸುಗಳ ಪರಿಶೀಲನೆ ನಡೆಯುತ್ತದೆ. ಅದಕ್ಕಾಗಿ ಈ ಕೆಳಗಿನಂತೆ ಆಯ್ಕೆಗಳಿರುತ್ತವೆ:



ಉದಾ: ಕೌರವೇಶ್ವರ - ಕೌರವ ಈಶ್ವರ [ಗುಣ ಸಂಧಿ], ಕೈಗೊಂಡು - ಕೈ ಕೊಂಡು - ಕೈಗೊಂಡು [ಆದೇಶ ಸಂಧಿ]

ಹೀಗೆ ಕನ್ನಡದ ಮತ್ತು ಸಂಸ್ಕೃತದ ಸಂಧಿಪದಗಳನ್ನು ಪ್ರತ್ಯೇಕ ಪದಗಳಾಗಿ ಬಿಡಿಸಿ ಸಂಧಿಗಳನ್ನು ಹೆಸರಿಸುತ್ತದೆ.

ಛಂದಸ್ಸಿನ ವಿಚಾರದಲ್ಲಿಯೂ ತಂತ್ರಾಂಶ ಅದ್ಭುತವಾಗಿ ಕೆಲಸ ಮಾಡುತ್ತದೆ. ಎಲ್ಲ ಬಗೆಯ ವೃತ್ತಗಳು, ತ್ರಿಪದಿ ಸಾಂಗತ್ಯಗಳು ಮುಂತಾದವನ್ನು ಗುರುತಿಸಿ ಬೇಕೆಂದರೆ ಅವುಗಳ ಸಾಲುಗಳಿಗೆ ಲಘು ಗುರುಗಳ ಪ್ರಸ್ತಾರವನ್ನೂ ಹಾಕಿ, ಗಣಗಳನ್ನು ಗುರುತಿಸಿ ಛಂದಸ್ಸನ್ನು ತಿಳಿಸುತ್ತದೆ. ಶಿಥಿಲದ್ವಿತ್ವವಿದ್ದರೆ ಅದನ್ನೂ ಗುರುತಿಸಿ ತಿಳಿಸುತ್ತದೆ. ಶಿಥಿಲದ್ವಿತ್ವವನ್ನು ಗುರುತಿಸುವುದು ಬೇಡವಾದರೆ ಹಾಗೆ ತಂತ್ರಾಂಶಕ್ಕೆ ಸೂಚನೆ ನೀಡಲು ಪ್ರಾಶಸ್ತ್ಯ ಎನ್ನುವಲ್ಲಿ ಅವಕಾಶವಿದೆ (ಚಿತ್ರವನ್ನು ಗಮನಿಸಿ). ಪ್ರಾಸವಿದ್ದರೆ ಅದನ್ನು ನಮೂದಿಸಿ ದೋಷವಿದ್ದರೆ ತಿಳಿಸುತ್ತದೆ. ಹೊಸ ಛಂದಸ್ಸುಗಳನ್ನು ರಚಿಸುವ ಕುತೂಹಲವಿದ್ದವರು ಹಾಗೆ ರಚಿಸಿ ತಮ್ಮ ರಚನೆ ಹೊಸ ಛಂದಸ್ಸಿನ ನಿಯಮಗಳಿಗೆ ಅನುಸಾರವಾಗಿ ಇದೆಯೇ ಎಂಬುದನ್ನು ಸುಲಭವಾಗಿ ಇದರಿಂದ ತಿಳಿದುಕೊಳ್ಳಬಹುದು. ಛಂದಸ್ಸಿನ ಪರಿಶೀಲನೆ ಹಾಗಾಗುತ್ತದೆ ಎಂಬುದಕ್ಕೆ ಉದಾಹರಣೆಯಾಗಿ ಈ ಮುಂದಿನ ರಚನೆಗಳನ್ನು ಗಮನಿಸಬಹುದು:

1. ನೆನೆಯದಿರಣ್ಣ ಭಾರತದೊಳಿಂ ಪೆಱರಾರುಮನೊಂದೆ ಚಿತ್ತದಿಂ
ನೆನೆವೊಡೆ ಕರ್ಣನಂ ನೆನೆಯ ಕರ್ಣನೊಳಾರ್ ದೊರೆ ಕರ್ಣನೇಱು ಕ
ರ್ಣನ ಕಡುನನ್ನಿ ಕರ್ಣನಳವಂಕದ ಕರ್ಣನ ಚಾಗಮೆಂದು ಕ
ರ್ಣನ ಪಡೆಮಾತಿನೊಳ್ ಪುದಿದು ಕರ್ಣರಸಾಯನಮಲ್ತೆ ಭಾರತಂ ||

[ಚಂಪಕಮಾಲೆ ವೃತ್ತ]

[ನಗಣ|ಜಗಣ|ಭಗಣ|ಜಗಣ|ಜಗಣ|ಜಗಣ|ರಗಣ]

UUU |U _ U |_ UU |U _ U |U _ U |U _ U |_ U _

(28 ಮಾತ್ರೆಗಳು/21 ಅಕ್ಷರಗಳು)

ನೆನೆಯ|ದಿರಣ್ಣ |ಭಾರತ|ದೊಳಿಂಪೆ|ಱರಾರು|ಮನೊಂದೆ |ಚಿತ್ತದಿಂ

UUU |U _ U |_ UU |U _ U |U _ U |U _ U |_ U _

(28 ಮಾತ್ರೆಗಳು/21 ಅಕ್ಷರಗಳು)

ನೆನೆವೊ|ಡೆ ಕರ್ಣ|ನಂನೆನೆ|ಯ ಕರ್ಣ|ನೊಳಾರ್ ದೊ|ರೆ ಕರ್ಣ|ನೇಱು ಕ

UUU |U _ U |_ UU |U _ U |U _ U |U _ U |_ U _

(28 ಮಾತ್ರೆಗಳು/21 ಅಕ್ಷರಗಳು)

ರ್ಣನ ಕ|ಡುನನ್ನಿ |ಕರ್ಣನ|ಳವಂಕ|ದ ಕರ್ಣ|ನ ಚಾಗ|ಮೆಂದು ಕ

UUU |U _ U |_ UU |U _ U |U _ U |U _ U |_ U _

(28 ಮಾತ್ರೆಗಳು/21 ಅಕ್ಷರಗಳು)

ರ್ಣನ ಪ|ಡೆಮಾತಿ|ನೊಳ್ ಪುದಿ|ದು ಕರ್ಣ|ರಸಾಯ|ನಮಲ್ತೆ |ಭಾರತಂ

ಆದಿಪ್ರಾಸ: ನ --> ಗಜಪ್ರಾಸ
ಅಂತ್ಯಪ್ರಾಸ: -
ಶಿಥಿಲದ್ವಿತ್ವ: ಬಳಸಿದೆ; ಪೂರ್ವಾಂತ್ಯ ದ್ವಿತ್ವ: : ಬಳಸಿಲ್ಲ

2. ಪದನಱಿದು ನುಡಿಯಲುಂ ನುಡಿ
ದುದನಱಿದಾರಯಲುಮಾರ್ಪರಾ ನಾಡವರ್ಗಳ್
ಚದುರರ್ ನಿಜದಿಂ ಕುಱಿತೋ
ದದೆಯುಂ ಕಾವ್ಯಪ್ರಯೋಗಪರಿಣತಮತಿಗಳ್ |

[ಆರ್ಯಾಗೀತಿ: 4 ಪಾದ]

UUUU |UUUU |_ UU

ಪದನಱಿದು ನುಡಿಯ|ಲುಂನುಡಿ (12ಮಾತ್ರೆಗಳು/11 ಅಕ್ಷರಗಳು)

UUUU |_ UU |U _ U |_ _ |UU _ |

ದುದನಱಿ|ದಾರಯ|ಲುಮಾರ್ಪ|ರಾ ನಾ|ಡವರ್ಗಳ್|

(20 ಮಾತ್ರೆಗಳು/15 ಅಕ್ಷರಗಳು

UU _ |UU _ |UU _

ಚದುರರ್ |ನಿಜದಿಂ|ಕುಱಿತೋ

(12 ಮಾತ್ರೆಗಳು/9 ಅಕ್ಷರಗಳು)

UU _ |_ _ |U _ U |UUUU |UU _ |

ದದೆಯುಂ|ಕಾವ್ಯ|ಪ್ರಯೋಗ|ಪರಿಣತ|ಮತಿಗಳ್ |

(20 ಮಾತ್ರೆಗಳು/15 ಅಕ್ಷರಗಳು)

ಆದಿಪ್ರಾಸ: ದ --> ಗಜಪ್ರಾಸ
ಅಂತ್ಯಪ್ರಾಸ: -
ಶಿಥಿಲದ್ವಿತ್ವ: ಬಳಸಿದೆ; ಪೂರ್ವಾಂತ್ಯ ದ್ವಿತ್ವ : : ಬಳಸಿಲ್ಲ

3. ಸಾಧುಗೆ ಸಾಧು ಮಾಧುರ್ಯಂಗೆ ಮಾಧುರ್ಯಂ
ಬಾಧಿಪ್ಪ ಕಲಿಗೆ ಕಲಿಯುಗ ವಿಪರೀತನ್
ಮಾಧವನೀತನ್ ಪೆರನಲ್ಲಂ

[ಅಂಶ: ತ್ರಿಪದಿ]

_ UU |_ U _ |_ _ U |_ _ _

ಸಾಧುಗೆ |ಸಾಧು ಮಾ|ಧುರ್ಯಂಗೆ |ಮಾಧುರ್ಯಂ

(20 ಮಾತ್ರೆಗಳು/12 ಅಕ್ಷರಗಳು)

_ _ U |UUU |UUUU |UU _ _ |

ಬಾಧಿಪ್ಪ |ಕಲಿಗೆ |ಕಲಿಯುಗ |ವಿಪರೀತನ್|

(18 ಮಾತ್ರೆಗಳು/14 ಅಕ್ಷರಗಳು)


_ UU _ |_ UU |_ _


ಮಾಧವನೀ|ತನ್ ಪೆರ|ನಲ್ಲಂ (14 ಮಾತ್ರೆಗಳು/9 ಅಕ್ಷರಗಳು)

ಆದಿಪ್ರಾಸ : ಧ --> ಸಿಂಹಪ್ರಾಸ
ಅಂತ್ಯಪ್ರಾಸ : -
ಶಿಥಿಲದ್ವಿತ್ವ : ಬಳಸಿದೆ ; ಪೂರ್ವಾಂತ್ಯ ದ್ವಿತ್ವ : : ಬಳಸಿಲ್ಲ

ಈ ತಂತ್ರಾಂಶ ಉಚಿತವಾಗಿ brahmiakshara.com ಎಂಬ ಅಂತರ್ಜಾಲದಲ್ಲಿ ಲಭ್ಯವಿದೆ. ಇಲ್ಲಿಂದ ತಂತ್ರಾಂಶದ 'ಎಎಕ್ಸ್ ಎ' ಕಡತವನ್ನು ಇಳಿಸಿಕೊಂಡು ಅನುಸ್ಥಾಪಿಸಿಕೊಂಡರೆ ಅದು ಎಂಎಸ್ ವರ್ಡ್‌ನ ಪರಿವಿಡಿಪಟ್ಟಿಯಲ್ಲಿ ವ್ಯಾಕರಣ ಎಂದೇ ಕಾಣಿಸಿಕೊಳುತ್ತದೆ. ಅಲ್ಲಿಗೆ ಅದು ಕಾರ್ಯನಿರ್ಹಿಸಲು ಸಿದ್ಧವೆ ಎಂದು ತಿಳಿಯಬಹುದು. ಇದು ಸದ್ಯ 64 ಬಿಟ್ ವಿಂಡೋಸ್ ಆವೃತ್ತಿ ಮತ್ತು ಅಂತಹುದೇ 'ಎಂ ಎಸ್ ವರ್ಡ್' ವೇದಿಕೆಗಳಲ್ಲಿ ಮಾತ್ರ ಕೆಲಸ ಮಾಡುತ್ತದೆ. ಆದರೆ ಇಷ್ಟರಲ್ಲಿಯೇ ಸ್ವತಂತ್ರವಾಗಿ ಎಲ್ಲೆಡೆ ಕಾರ್ಯಪ್ರವೃತ್ತವಾಗುವ ರೀತಿಯಲ್ಲಿ ತಂತ್ರಾಂಶವನ್ನು ಅಭಿವೃದ್ಧಿಗೊಳಿಸುತ್ತೇವೆ ಎಂದು ರಾಘವೇಂದ್ರ ಪ್ರಸಾದ್ ತಿಳಿಸಿದ್ದಾರೆ. ಇದು ಸ್ವಾಗತಾರ್ಹವಾದ ಆಶಯವಾಗಿದೆ. ಈ ತಂತ್ರಾಂಶ ಛಂದಸ್ಸಿನ ವಿದ್ಯಾರ್ಥಿಗಳಿಗೆ, ಅಧ್ಯಾಪಕರಿಗೆ, ಈ ದಿಕ್ಕಿನಲ್ಲಿ ಕೆಲಸ ಮಾಡುತ್ತಿರುವ ಎಲ್ಲರಿಗೆ ಉಪಯುಕ್ತ ಸಾಧನವಾಗಿದೆ. ಸದ್ಯ ಎಲ್ಲ ಕನ್ನಡಿಗರು ರಾಘವೇಂದ್ರ ಪ್ರಸಾದ್ ಮತ್ತು ಅವರ ತಂಡಕ್ಕೆ ಕೃತಜ್ಞತೆ ಸಲ್ಲಿಸಬೇಕಾಗಿದೆ.

ಹೀಗೆ ಕನ್ನಡಿಗರು ಎಲ್ಲಿದ್ದರೂ ಕನ್ನಡವನ್ನು ಮರೆಯದೆ ಭಾಷೆಗೆ ತಮ್ಮ ಕೊಡುಗೆಗಳನ್ನು ಸಲ್ಲಿಸುತ್ತಾ ಬಂದರೆ ಕನ್ನಡ ಮರೆಯಾಗುವ ಆತಂಕ ಕಡಿಮೆಯಾಗುತ್ತದೆ. ಜೊತೆಗೆ ಅವರೆಲ್ಲ ಕನ್ನಡವನ್ನು ತಮ್ಮ ವಿದ್ಯಾಭ್ಯಾಸದ ಅವಧಿಯಲ್ಲಿ ಕಲಿತಿದ್ದರಿಂದಲೇ ಈ ಬಗೆಯ ಕೆಲಸಗಳನ್ನು ಮಾಡುವುದು ಸಾಧ್ಯ ಎಂಬು ಗಮನಿಸಬೇಕಾದ ಸಂಗತಿಯಾಗಿದೆ. ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ನಮ್ಮ ದೇಶದಲ್ಲಿಯೂ , ಕರ್ನಾಟಕದಲ್ಲಿಯೂ ಕೆಲಸ ಮಾಡುತ್ತಿದ್ದಾರೆ. ಅವರಲ್ಲಿಯೂ ಕೆಲವರು ಇಂತಹ ಅನೇಕ ಕೆಲಸಗಳನ್ನು ಮಾಡುತ್ತಿದ್ದಾರೆ. ಕನ್ನಡಕ್ಕೆ ತಂತ್ರಜ್ಞಾನ ಕ್ಷೇತ್ರದಲ್ಲಿ ಆಗಬೇಕಾದ ಕೆಲಸಗಳು ಇನ್ನೂ ಬೇಕಾದಷ್ಟಿವೆ. ತಂತ್ರಜ್ಞಾನ ಕ್ಷೇತ್ರದ ಇನ್ನಷ್ಟು ಜನರು ಕನ್ನಡದ ಕೆಲಸಗಳಿಗೆ ವಾರಕ್ಕೆ ಅರ್ಧದಿನ ಸಮಯ ಕೊಟ್ಟರೂ ಏಷ್ಟೋ ಕೆಲಸಗಳನ್ನು ಮಾಡಬಹುದಾಗಿದೆ.





ಆಂಡ್ರಾಯ್ಡ್ ಫೋನ್‌ನಿಂದ ಐಫೋನ್‌ಗೆ ಬದಲಾಗುವುದು ಹೇಗೆ?

ಅವಿನಾಶ್ ಬಿ.

ಭಾರತದಲ್ಲಿ ಗೂಗಲ್‌ನ ಆಂಡ್ರಾಯ್ಡ್ ಕಾರ್ಯಾಚರಣೆ ವ್ಯವಸ್ಥೆಯಿರುವ ಸ್ಮಾರ್ಟ್‌ಫೋನ್‌ಗಳು ಅತ್ಯಂತ ಜನಪ್ರಿಯ. ಇದಕ್ಕೆ ಕಾರಣವೆಂದರೆ, ನಮಗೆ ಬೇಕಾದ ಆ್ಯಪ್‌ಗಳನ್ನು ಅಳವಡಿಸಿಕೊಳ್ಳಬಹುದು ಮತ್ತು ಅದರ ಬಳಕೆಯೂ ಸುಲಭ ಎಂಬುದು. ಜೊತೆಗೆ, ನಮ್ಮ ಅಕ್ಕಪಕ್ಕದವರೂ ಅದನ್ನೇ ಬಳಸುತ್ತಿದ್ದಾರೆ ಎಂಬ ಧೈರ್ಯ ಕೂಡ. ಅದೇ ಹೊತ್ತಿಗೆ, ಆಂಡ್ರಾಯ್ಡ್ ಹೊರತಾಗಿ ವಿಂಡೋಸ್, ಬ್ಲ್ಯಾಕ್‌ಬೆರಿ ಮುಂತಾದ ಕಾರ್ಯಾಚರಣೆ ವ್ಯವಸ್ಥೆಗಳು ಬಂದವಾದರೂ ಅವುಗಳು ಹೆಚ್ಚು ಕಾಲ ಉಳಿಯದೇ ಹೋದವು. ಆದರೆ, ಅಮೆರಿಕ ಮತ್ತಿತರ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಹೆಚ್ಚು ಜನಪ್ರಿಯವಾಗಿರುವುದು ಆ್ಯಪಲ್‌ನ ಐಒಎಸ್ ಕಾರ್ಯಾಚರಣೆ ವ್ಯವಸ್ಥೆಯಲ್ಲಿ ನಡೆಯುವ ಐಫೋನ್, ಐಪ್ಯಾಡ್ ಮುಂತಾದ ಗ್ಯಾಜೆಟ್‌ಗಳು.

ಹೊರಗಿನದನ್ನು ನಮ್ಮದನ್ನಾಗಿಸಿಕೊಳ್ಳುವಲ್ಲಿ ಭಾರತೀಯರು ಯಾವತ್ತೂ ಹಿಂದೆ ಬಿದ್ದಿಲ್ಲ. ಹೀಗಾಗಿ, ಆ್ಯಪಲ್ ಐಫೋನ್‌ಗಳು ದುಬಾರಿಯಾದರೂ, ಹಳೆಯ ಆವೃತ್ತಿಯ ಫೋನ್‌ಗಳು ಕಡಿಮೆ ಬೆಲೆಗೆ ಸಿಗುತ್ತಿರುವುದು ಮತ್ತು ಐಫೋನ್ ಎಂಬುದು ಐಷಾರಾಮದ, ಪ್ರತಿಷ್ಠೆಯ ಸಂಕೇತ ಎಂಬ ಭ್ರಮೆಯೂ ಇದೀಗ ಹೆಚ್ಚಿನವರು ಐಫೋನ್ ಬಳಕೆಗೆ ಮುಂದಾಗಿರುವುದಕ್ಕೆ ಪ್ರಧಾನ ಕಾರಣಗಳು. ಈಗೀಗ ನಗರ ಪ್ರದೇಶಗಳ ಕಾಲೇಜು ವಿದ್ಯಾರ್ಥಿಗಳ ಕೈಯಲ್ಲೂ ಐಫೋನ್‌ಗಳು ರಾರಾಜಿಸುತ್ತಿವೆ.

ಆಂಡ್ರಾಯ್ಡ್ ಹಾಗೂ ಐಒಎಸ್ ಸಾಧನಗಳ ಬಳಕೆಯಲ್ಲಿ ಒಂದಷ್ಟು ವ್ಯತ್ಯಾಸ ಇದೆ. ಅದಕ್ಕೆ ಹೊಂದಿಕೊಂಡರೆ ಐಫೋನ್ ಬಳಕೆ ಕಷ್ಟವೇನಲ್ಲ. ಇತ್ತೀಚೆಗೆ ಕನ್ನಡ ಟೈಪಿಂಗ್ ಕೂಡ ಹಿಂದಿನಷ್ಟು ಕಷ್ಟವಿಲ್ಲ. ಅದಕ್ಕಾಗಿ ಸಾಕಷ್ಟು ಆ್ಯಪ್‌ಗಳು ಬಂದಿದ್ದು, ಕನ್ನಡದಲ್ಲಿ ಸಂವಹನ ಸುಲಭವಾಗಿದೆ. ಐಫೋನ್ ಹೆಚ್ಚು ಸುರಕ್ಷಿತ ಮತ್ತು ಉತ್ತಮ ಗುಣಮಟ್ಟ ಹೊಂದಿದೆ, ಬಹುಕಾಲ ಬಾಳಿಕೆ ಬರುತ್ತದೆ ಎಂಬೆಲ್ಲ ಕಾರಣಕ್ಕೆ ಜನರಿಗೆ ಇಷ್ಟವಾಗಿದೆ.

ಹೀಗಾಗಿ, ಆಂಡ್ರಾಯ್ಡ್ ಫೋನ್‌ಗಳಿಂದ ಐಫೋನ್‌ಗೆ ಬದಲಾಗುವ ಸಂದರ್ಭದಲ್ಲಿ, ಹಳೆಯ ಫೋನ್‌ನ ಕಂಟೆಂಟ್ (ಚಿತ್ರ, ಹಾಡುಗಳು, ವಿಡಿಯೊ, ಡಾಕ್ಯುಮೆಂಟ್‌ಗಳು, ಸಂದೇಶಗಳು ಮುಂತಾದವನ್ನು) ಐಫೋನ್‌ಗೆ ವರ್ಗಾಯಿಸುವುದಕ್ಕಾಗಿ, ಆ್ಯಪಲ್ ಕಂಪನಿಯೇ Move to iOS ಎಂಬ ಆ್ಯಪ್ ಒಂದನ್ನು ಗೂಗಲ್ ಪ್ಲೇ ಸ್ಟೋರ್‌ನಲ್ಲಿ ನೀಡಿದೆ. ಅದರ ಮೂಲಕ ಎಲ್ಲ ಕಂಟೆಂಟನ್ನು ಐಫೋನ್‌ಗೆ ವರ್ಗಾಯಿಸುವುದು ಸುಲಭ.

ವರ್ಗಾವಣೆ ಹೇಗೆ?

ಮೊದಲು ಆಂಡ್ರಾಯ್ಡ್ ಫೋನ್‌ನ ಎಲ್ಲ ಆ್ಯಪ್‌ಗಳನ್ನು ಅಪ್‌ಡೇಟ್ ಮಾಡಿಕೊಳ್ಳಿ. ನಂತರ Move to iOS ಎಂಬ ಆ್ಯಪ್ ಅಳವಡಿಸಿಕೊಳ್ಳಿ. ವೈಫೈ ಆನ್ ಆಗಿರಲಿ. ಹಾಗೂ ಆ್ಯಪಲ್‌ಗೆ ಯಾವೆಲ್ಲ ಕಂಟೆಂಟ್ ಹೋಗಬೇಕೆಂಬುದನ್ನು ನಿರ್ಧರಿಸಿಕೊಂಡು, ಉಳಿದವನ್ನು ಡಿಲೀಟ್ ಮಾಡಿಟ್ಟುಕೊಳ್ಳಿ.

ಆ್ಯಪಲ್ ಫೋನ್ ಹೊಸದಾದರೆ ಪರವಾಗಿಲ್ಲ, ಹಳೆಯದಾಗಿದ್ದರೆ ಅದನ್ನು ಬೇಕಿದ್ದರೆ ಫ್ಯಾಕ್ಟರಿ ರೀಸೆಟ್ ಮಾಡಿಕೊಳ್ಳಬಹುದು. ಎರಡೂ ಸಾಧನಗಳನ್ನು ಅಕ್ಕಪಕ್ಕದಲ್ಲೇ ಇರಿಸಿ. ಪೂರ್ತಿ ಚಾರ್ಜ್ ಆಗಿರಲಿ. ಆ್ಯಪಲ್ ಸಾಧನದಲ್ಲಿ ಸ್ಕ್ರೀನ್ ಮೇಲೆ ಬರುವ ಸೂಚನೆಗಳನ್ನು ಅನುಸರಿಸುತ್ತಾ ಹೋಗಿ. ನಂತರ 'ಕ್ವಿಕ್ ಸ್ಟಾರ್ಟ್ ಸ್ಕ್ರೀನ್'ನಲ್ಲಿ, 'ಸೆಟಪ್ ಮ್ಯಾನ್ಯುವಲಿ' ಎಂಬುದನ್ನು ಒತ್ತಿ. ಆಂಡ್ರಾಯ್ಡ್ ಸಾಧನಕ್ಕೆ ಗೂಗಲ್ ಐಡಿ ಇರುವಂತೆಯೇ, ಆ್ಯಪಲ್ ಸಾಧನಕ್ಕೆ ಆ್ಯಪಲ್ ಐಡಿ ರಚಿಸಬೇಕಾಗುತ್ತದೆ ಎಂಬುದು ನೆನಪಿರಲಿ. ಮುಂದೆ, 'ಆ್ಯಪ್ಸ್ ಆ್ಯಂಡ್ ಡೇಟಾ' ಸ್ಕ್ರೀನ್‌ನಲ್ಲಿ, 'ಮೂವ್ ಡೇಟಾ ಫ್ರಂ ಆಂಡ್ರಾಯ್ಡ್' ಎಂಬುದನ್ನು ಒತ್ತಿ.

ನಂತರ, ಆಂಡ್ರಾಯ್ಡ್ ಫೋನ್‌ನಲ್ಲಿ, 'ಮೂವ್ ಟು ಐಒಎಸ್ ಆ್ಯಪ್' ತೆರೆಯಿರಿ. ಆ್ಯಪಲ್ ಸಾಧನದ ಸ್ಕ್ರೀನ್‌ನಲ್ಲಿ ಕಾಣಿಸುವ ಕೋಡ್ ನಂಬರನ್ನು ಆಂಡ್ರಾಯ್ಡ್ ಫೋನ್‌ನಲ್ಲಿ ನಮೂದಿಸಿ. ಆ್ಯಪಲ್ ಸಾಧನವು ತಾತ್ಕಾಲಿಕ ವೈಫೈ ಸಂಪರ್ಕ ಜಾಲವೊಂದನ್ನು ರಚಿಸುತ್ತದೆ. ಆಂಡ್ರಾಯ್ಡ್ ಫೋನ್‌ನಲ್ಲಿ ಆ ವೈಫೈಗೆ ಸಂಪರ್ಕಿಸಲು 'ಕನೆಕ್ಟ್' ಒತ್ತಿ. ನಂತರ ಡೇಟಾ ವರ್ಗಾವಣೆಯ ಸ್ಕ್ರೀನ್ ಕಾಣಿಸುತ್ತದೆ.

ಆಗ, ಯಾವೆಲ್ಲ ಕಂಟೆಂಟ್ ಅನ್ನು ಆ್ಯಪಲ್ ಸಾಧನಕ್ಕೆ ವರ್ಗಾಯಿಸಬೇಕೋ, ಅವನ್ನು ಮಾತ್ರ ಒಂದೊಂದಾಗಿ ಆಯ್ಕೆ ಮಾಡಿಕೊಳ್ಳಿ. ಎರಡೂ ಸಾಧನಗಳು ಸಮೀಪದಲ್ಲೇ ಇರಲಿ ಮತ್ತು ಚಾರ್ಜ್ ಆಗುತ್ತಿರಲಿ. ಆಂಡ್ರಾಯ್ಡ್ ಸಾಧನದಲ್ಲಿ ವರ್ಗಾವಣೆ ಪೂರ್ಣವಾಗಿದೆ ಎಂಬ ಸಂದೇಶ ಕಾಣಿಸಿಕೊಂಡರೂ, ಆ್ಯಪಲ್ ಸಾಧನದಲ್ಲಿ ಅದರ ಬಗ್ಗೆ ಸಂದೇಶ ಬರುವವರೆಗೂ ಕಾಯುತ್ತಿರಿ. ವರ್ಗಾವಣೆಗೆ ಬೇಕಾಗುವ ಸಮಯವು ಎಷ್ಟು ದತ್ತಾಂಶ ಇದೆ ಎಂಬುದನ್ನು ಅವಲಂಬಿಸಿದೆ. ವರ್ಗಾವಣೆಯಾದ ಮೇಲೆ ಆಂಡ್ರಾಯ್ಡ್ ಸಾಧನದಲ್ಲಿ 'ಡನ್' ಬಟನ್ ಒತ್ತಿ, ಐಒಎಸ್ ಸಾಧನದಲ್ಲಿ, ಸ್ಕ್ರೀನ್ ಮೇಲಿನ ಸೂಚನೆಗಳನ್ನು ಅನುಸರಿಸುತ್ತಾ ಹೋದರೆ, ವರ್ಗಾವಣೆ ಪೂರ್ಣವಾಗುತ್ತದೆ.

ಸಂಪರ್ಕ ಸಂಖ್ಯೆ, ಸಂದೇಶ, ಫೋಟೊ, ವಿಡಿಯೊ, ಆಡಿಯೊ, ಬುಕ್‌ಮಾರ್ಕ್ಸ್, ಇಮೇಲ್ ಖಾತೆಗಳು, ವಾಟ್ಸ್‌ಆ್ಯಪ್, ಕ್ಯಾಲೆಂಡರ್ ಮುಂತಾದವೆಲ್ಲವೂ ವರ್ಗಾವಣೆಯಾಗುತ್ತವೆ. ಆದರೆ, ಸಂಬಂಧಿಸಿದ ಆ್ಯಪ್‌ಗಳನ್ನು ಆ್ಯಪಲ್‌ನ ಆ್ಯಪ್ ಸ್ಟೋರ್‌ನಿಂದಲೇ ಅಳವಡಿಸಿಕೊಳ್ಳಬೇಕಾಗುತ್ತದೆ. ಮತ್ತು ಆಂಡ್ರಾಯ್ಡ್‌ನಿಂದ ಬಂದಿರುವುದರಿಂದ ಆ್ಯಪಲ್ ಸಾಧನದ ಕಾರ್ಯಾಚರಣೆಗೆ ಹೊಂದಿಕೊಳ್ಳಲು, ಅಭ್ಯಾಸವಾಗಲು ಸ್ವಲ್ಪ ಸಮಯ ಬೇಕಾಗಬಹುದು.



ಸುಭಾಷಿತ
ಕೋಪೋದ್ರಿಕ್ತ ವ್ಯಕ್ತಿಯಿಂದ ಮಹತ್ವದ ಕಾರ್ಯ ಸಾಧಿಸಲಾಗದು ಮತ್ತು ಯಾವ ಕಾರಣಕ್ಕೂ ಕೋಪಿಸಿಕೊಳ್ಳದ ವ್ಯಕ್ತಿ ಬಹಳಷ್ಟು ಸಾಧಿಸುತ್ತಾನೆ.
-ಸ್ವಾಮಿ ವಿವೇಕಾನಂದ

ಸಂಶೋಧನಾ ಪ್ರತಿಷ್ಠಾನ ಸ್ಥಾಪನೆ ಕೇಂದ್ರದ ಕ್ರಮ ಸ್ವಾಗತಾರ್ಹ

ಕೇಂದ್ರ ಸಚಿವ ಸಂಪುಟವು ರಾಷ್ಟ್ರೀಯ ಸಂಶೋಧನಾ ಪ್ರತಿಷ್ಠಾನದ (ಎನ್‌ಆರ್‌ಎಫ್) ಸ್ಥಾಪನೆಗೆ ಅನುಮೋದನೆ ನೀಡಿದೆ. ಈ ಪ್ರತಿಷ್ಠಾನಕ್ಕಾಗಿ ₹ 50 ಸಾವಿರ ಕೋಟಿ ಮೊತ್ತದ ನಿಧಿಯನ್ನು ಒದಗಿಸಲಾಗುತ್ತದೆ. ಇದು ಜ್ಞಾನ ಹಾಗೂ ಅಭಿವೃದ್ಧಿಗೆ ಸಂಬಂಧಿಸಿದಂತೆ ಇರಿಸಿರುವ ದೊಡ್ಡ ಹೆಜ್ಜೆ. ಹಾಗೆ ನೋಡಿದರೆ ಈ ತೀರ್ಮಾನ ಕೈಗೊಂಡಿದ್ದು ಬಹಳ ತಡವಾಯಿತು ಎಂದು ಹೇಳಬೇಕಾಗುತ್ತದೆ. ದೇಶದಾದ್ಯಂತ ಇರುವ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ವೈಜ್ಞಾನಿಕ ಸಂಶೋಧನೆಯನ್ನು ಉತ್ತೇಜಿಸಲು, ಅದಕ್ಕೆ ಹಣಕಾಸಿನ ನೆರವು ಒದಗಿಸಲು ಹಾಗೂ ಸಂಶೋಧನೆಗಳಿಗೆ ಮಾರ್ಗದರ್ಶನ ನೀಡಲು ಎನ್‌ಆರ್‌ಎಫ್ ಸ್ಥಾಪಿಸುವ ಆಲೋಚನೆ ಹುಟ್ಟಿಕೊಂಡಿತು. ಎಲ್ಲ ಕ್ಷೇತ್ರಗಳಲ್ಲಿ, ಅದರಲ್ಲೂ ಮುಖ್ಯವಾಗಿ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಭಾರತದ ಸಂಶೋಧನಾ ಸಾಮರ್ಥ್ಯವು ಬಹಳ ಕೆಳಮಟ್ಟದಲ್ಲಿ ಇದೆ. ಭಾರತವು ಹೊಂದಿರುವ ಪ್ರತಿಭಾ ಸಂಪನ್ಮೂಲ, ಇಲ್ಲಿನ ಜನಸಂಖ್ಯೆ, ದೇಶದ ಆರ್ಥಿಕ ಸ್ಥಾನಮಾನ ಮತ್ತು ದೇಶವು ಹೊಂದಿರುವ ಮಹತ್ವಾಕಾಂಕ್ಷೆಗಳನ್ನು ಗಮನಿಸಿದರೆ, ಸಂಶೋಧನೆಯ ವಿಚಾರದಲ್ಲಿ ದೇಶವು ಗಳಿಸಿರುವ ಸಾಮರ್ಥ್ಯ ತೀರಾ ಕಡಿಮೆ. ವಿಶ್ವದರ್ಜೆಯ ಸಂಸ್ಥೆಗಳ ಜೊತೆ ಹೋಲಿಕೆ ಮಾಡಿದರೆ, ದೇಶದ ಬಹುತೇಕ ಶಿಕ್ಷಣ ಸಂಸ್ಥೆಗಳ ಗುಣಮಟ್ಟ ಕಳಪೆಯಾಗಿದೆ. ಅದರಲ್ಲೂ ಮುಖ್ಯವಾಗಿ, ಇಲ್ಲಿ ನಡೆಯುವ ಸಂಶೋಧನೆಗಳ ಪ್ರಮಾಣ ಕಡಿಮೆ ಹಾಗೂ ಗುಣಮಟ್ಟವು ಇನ್ನಷ್ಟು ಕಳಪೆ. ಹೊಸ ಸಂಶೋಧನೆಗಳು ಮತ್ತು ಅವುಗಳಿಗೆ ಹಕ್ಕುಸ್ವಾಮ್ಯ ಪಡೆಯುವಲ್ಲಿ ನಾವು ಇತರ ದೇಶಗಳಿಗಿಂತ ಬಹಳ ಹಿಂದೆ ಉಳಿದಿದ್ದೇವೆ. ನಮ್ಮಲ್ಲಿ ಸಂಶೋಧನೆಗೆ ಮಾಡುವ ವೆಚ್ಚ ಬಹಳ ಕಡಿಮೆ ಇರುವುದು ಇದಕ್ಕೆ ಒಂದು ಕಾರಣ. ಚೀನಾ ದೇಶವು ತನ್ನ ಒಟ್ಟು ಆಂತರಿಕ ಉತ್ಪಾದನೆಯ (ಜಿಡಿಪಿ) ಶೇ 2.6ರಷ್ಟು ಮೊತ್ತವನ್ನು ಸಂಶೋಧನೆಗಳಿಗೆ ವಿನಿಯೋಗಿಸುತ್ತದೆ. ಈಗ ತೊಡಗಿಸುತ್ತಿರುವ ಮೊತ್ತವನ್ನು ಪ್ರತಿವರ್ಷ ಶೇ 7ರಷ್ಟು ಹೆಚ್ಚಿಸುವ ಉದ್ದೇಶ ಹೊಂದಿದೆ. ಆದರೆ ಭಾರತವು ಸಂಶೋಧನೆಗಳಿಗೆ ಮಾಡುವ ವೆಚ್ಚವು ದೇಶದ ಒಟ್ಟು ಜಿಡಿಪಿಯ ಶೇ 0.66ರಷ್ಟು ಮಾತ್ರ. ನಾವು ಒಂದು ರಾಷ್ಟ್ರವಾಗಿ ಮಾಡುವ ವೆಚ್ಚಕ್ಕಿಂತಲೂ ವಿದೇಶಗಳಲ್ಲಿನ ಕೆಲವು ಕಂಪನಿಗಳು ಹೆಚ್ಚು ಮೊತ್ತವನ್ನು ಸಂಶೋಧನೆಗಳಿಗೆ ವಿನಿಯೋಗ ಮಾಡುತ್ತಿವೆ.



ಇದು ಇನ್ನೊಂದು ಅಧಿಕಾರಶಾಹಿ ವ್ಯವಸ್ಥೆ ಮಾತ್ರವೇ ಆಗದೆ, ಪರಿಣಾಮಕಾರಿಯಾಗಿ ಕೆಲಸ ಮಾಡಲು ಅಗತ್ಯವಿರುವ ಸ್ವಾಯತ್ತ ಸಂಸ್ಥೆ ಆಗಬೇಕು

ಹೀಗಾಗಿ ಐದು ವರ್ಷಗಳ ಮುನ್ನೋಟವೊಂದನ್ನು ಹೊಂದಿರುವ ಎನ್‌ಆರ್‌ಎಫ್ ಸ್ಥಾಪನೆಯ ತೀರ್ಮಾನವು ಬಹಳ ಒಳ್ಳೆಯದು. ಇದು 'ದೇಶದ ವಿಶ್ವವಿದ್ಯಾಲಯಗಳು, ಕಾಲೇಜುಗಳು, ಸಂಶೋಧನಾ ಸಂಸ್ಥೆಗಳು ಹಾಗೂ ಸಂಶೋಧನೆ ಮತ್ತು ಅಭಿವೃದ್ಧಿಗೆ ಮೀಸಲಾದ ಪ್ರಯೋಗಾಲಯಗಳ ಮೇಲೆ ಪ್ರಭಾವ ಬೀರುವ' ಗುರಿಯನ್ನು ಹೊಂದಿದೆ. ಭಾರತದ ಖಾಸಗಿ ವಲಯವು ಸಂಶೋಧನೆಯ ಕ್ಷೇತ್ರದಲ್ಲಿ ಹೆಚ್ಚು ಉತ್ಸುಕತೆಯನ್ನು ತೋರಿಸುತ್ತಿಲ್ಲ. ಆದರೆ ಬಹುತೇಕ ದೇಶಗಳಲ್ಲಿ ಖಾಸಗಿ ವಲಯವು ಸಂಶೋಧನೆಯ ವಿಚಾರದಲ್ಲಿ ಮುಂಚೂಣಿಯಲ್ಲಿ ನಿಂತಿರುತ್ತದೆ. ಅಲ್ಲದೆ, ಸಂಶೋಧನೆಗೆ ಸಂಬಂಧಿಸಿದಂತೆ ಅಲ್ಲಿ ಉದ್ಯಮಗಳು ಹಾಗೂ ಶಿಕ್ಷಣ ಸಂಸ್ಥೆಗಳ ನಡುವೆ ನಿಕಟವಾದ ಸಂಬಂಧವೊಂದು ಇರುತ್ತದೆ. ಬೋಧನೆ ಮತ್ತು ಸಂಶೋಧನಾ ಸಂಸ್ಥೆಗಳ ನಡುವೆ ನಿಕಟ ಬಂಧವೊಂದು ನಿರ್ಮಾಣವಾಗುವ ಅಗತ್ಯ ಇದೆ ಎಂಬ ಮಾತು 2020ರ ಹೊಸ ಶಿಕ್ಷಣ ನೀತಿಯಲ್ಲಿ ಇದೆ. ಎನ್‌ಆರ್‌ಎಫ್ ಇದನ್ನು ಸಾಕಾರಗೊಳಿಸುವ ನಿರೀಕ್ಷೆ ಇಟ್ಟುಕೊಳ್ಳಬಹುದು. ದೇಶದ ಕೃಷಿ, ಉದ್ಯಮ ವಲಯಗಳಲ್ಲಿ ನಿರ್ದಿಷ್ಟ ಅಗತ್ಯಗಳು ಹಾಗೂ ನಿರ್ದಿಷ್ಟ ಸಮಸ್ಯೆಗಳು ಇವೆ. ಈ ಸಮಸ್ಯೆಗಳಿಗೆ ದೇಶದ ಒಳಗೇ ಪರಿಹಾರಗಳನ್ನು ಕಂಡುಕೊಳ್ಳಬೇಕು.

ಮೇಲಿನ ಹಂತಗಳಲ್ಲಿ ಉತ್ತಮ ಗುಣಮಟ್ಟದ ಸಂಶೋಧನೆಗಳು ಸಾಧ್ಯವಾಗಬೇಕು ಎಂದಾದರೆ ಶಾಲಾ ಶಿಕ್ಷಣದ ಗುಣಮಟ್ಟವು ಸುಧಾರಣೆ ಕಾಣಬೇಕು. ಮೂಲ ವಿಜ್ಞಾನಕ್ಕೆ ಹೆಚ್ಚಿನ ಆದ್ಯತೆ ಮತ್ತು ಪ್ರೋತ್ಸಾಹ ಸಿಗಬೇಕು. ಈ ದೃಷ್ಟಿಯಿಂದ ನೋಡುವುದಾದರೆ, ವಿಕಾಸವಾದ ಸಿದ್ಧಾಂತ ಕುರಿತ ಪಾಠಗಳನ್ನು ಪಠ್ಯಕ್ರಮದಿಂದ ಕೈಬಿಡುವುದು ಒಳ್ಳೆಯ ಸಂದೇಶ ರವಾನಿಸುವುದಿಲ್ಲ. ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವವನ್ನು ಉದ್ದೀಪಿಸಬೇಕು. ಪ್ರಶ್ನಿಸುವ ಮನೋಭಾವ ಮತ್ತು ಸ್ಥಾಪಿತ ನಂಬಿಕೆಗಳನ್ನು ಟೀಕಿಸುವ ಮನೋಭಾವಕ್ಕೆ ಕೂಡ ಪ್ರೋತ್ಸಾಹ ಬೇಕು. ಮುಕ್ತ ವಾತಾವರಣ ಇದ್ದಲ್ಲಿ ಮಾತ್ರ ಹೊಸತನ ಹಾಗೂ ಸೃಜನಶೀಲತೆ ಅರಳುತ್ತದೆ. ಎನ್‌ಆರ್‌ಎಫ್‌ಗೆ ಪ್ರಧಾನಿಯವರು ಪದನಿಮಿತ್ತ ಅಧ್ಯಕ್ಷ ಆಗಿರುತ್ತಾರೆ ಎಂಬುದು ಅದಕ್ಕೆ ಸರ್ಕಾರವು ನೀಡುತ್ತಿರುವ ಮಹತ್ವವನ್ನು ಹೇಳುತ್ತಿದೆ. ಆದರೆ ಇದು ಇನ್ನೊಂದು ಅಧಿಕಾರಶಾಹಿ ವ್ಯವಸ್ಥೆ ಮಾತ್ರವೇ ಆಗಬಾರದು; ಬದಲಿಗೆ, ಪರಿಣಾಮಕಾರಿಯಾಗಿ ಕೆಲಸ ಮಾಡಲು ಅಗತ್ಯವಿರುವ ಸ್ವಾಯತ್ತೆ ಇದಕ್ಕೆ ಇರಬೇಕು.

ದಿನದ ಟ್ವೀಟ್

ಮಾನವರಾಗೋಣ...



ಮುಂಗಾರಿನ ಈ ಸಮಯದಲ್ಲಿ ಬಹಳಷ್ಟು ಬೀದಿ ನಾಯಿಗಳು ಮತ್ತು ಬೆಕ್ಕುಗಳು ನಮ್ಮ ಕಾರುಗಳ ಕೆಳಗೆ ಆಶ್ರಯ ಪಡೆಯುತ್ತವೆ. ಅವುಗಳಿಗೆ ಗಾಯವಾಗದಂತೆ ನೋಡಿಕೊಳ್ಳಲು, ಕಾರು ಚಲಾಯಿಸುವ ಮುನ್ನ ಅವು ಅಲ್ಲಿವೆಯೇ ಎನ್ನುವುದನ್ನು ಪರಿಶೀಲಿಸುವುದು ಒಳಿತು. ಇಲ್ಲವಾದರೆ ಅವು ಗಂಭೀರವಾಗಿ ಗಾಯಗೊಳ್ಳಬಹುದು, ಅಂಗವೈಕಲ್ಯ ಹೊಂದಬಹುದು ಮತ್ತು ಸಾವಿಗೂ ಈಡಾಗಬಹುದು. ಈ ಮಳೆ ಋತುವಿನಲ್ಲಿ ನಾವೆಲ್ಲರೂ ಅವುಗಳಿಗೆ ತಾತ್ಕಾಲಿಕ ಆಶ್ರಯ ನೀಡಿದರೆ, ಅದು ಹೃದಯಸ್ಪರ್ಶಿಯಾದ ನಿಲುವೇ ಸರಿ.

ರತನ್ ಎನ್. ಟಾಟಾ, ಉದ್ಯಮಿ

ಕಿಡಿನುಡಿ

ಮುಂದಿನ ಚುನಾವಣೆಯಲ್ಲಿ ನಾನು ಮಧ್ಯವರ್ತಿಗಳನ್ನು ಹೊರಗಿಟ್ಟು ನೇರವಾಗಿ ಇ.ಡಿ.ಗೇ (ಜಾರಿ ನಿರ್ದೇಶನಾಲಯ) ಮತ ಹಾಕಲು ನಿರ್ಧರಿಸಿದ್ದೇನೆ.

ಅತುಲ್ ಖತ್ರೀ, ಸ್ಟ್ಯಾಂಡಪ್ ಕಮಿಡಿಯನ್



25 ವರ್ಷಗಳ ಹಿಂದೆ

ಭಾನುವಾರ, 5-7-1998

- **ನ್ಯಾಯಾಧೀಶರ ವೇತನ ಹೆಚ್ಚಳಕ್ಕೆ ಅಸ್ತು**

ನವದೆಹಲಿ, ಜುಲೈ 4– ಸುಪ್ರೀಂ ಕೋರ್ಟ್, ಹೈಕೋರ್ಟ್ ನ್ಯಾಯಮೂರ್ತಿಗಳ ವೇತನವನ್ನು ಮೂರು ಪಟ್ಟು ಹೆಚ್ಚಿಸಿದ ಮಸೂದೆಯನ್ನು ಲೋಕಸಭೆ ಇಂದು ಅಂಗೀಕರಿಸಿತು.

ನ್ಯಾಯಮೂರ್ತಿಗಳ ವೇತನ ಹೆಚ್ಚಿಸಿ ಕಳೆದ ಏಪ್ರಿಲ್‌ನಲ್ಲಿ ಸುಗ್ರೀವಾಜ್ಞೆ ಹೊರಡಿಸಲಾಗಿತ್ತು. ಈಗಿನ ಮಸೂದೆಯನ್ನು ಚರ್ಚೆಯ ನಂತರ ಸದನವು ಒಪ್ಪಿತು.

- **ಬಿಜೆಪಿ ನೇತೃತ್ವದ ಸರ್ಕಾರಕ್ಕೆ ಜಯಾ ಬೆಂಬಲ; ಬಿಕ್ಕಟ್ಟು ಅಂತ್ಯ**

ಚೆನ್ನೈ, ಜುಲೈ 4– ಅಖಿಲ ಭಾರತ ಅಣ್ಣಾ ಡಿಎಂಕೆ ಪಕ್ಷ, ಅಟಲ್ ಬಿಹಾರಿ ವಾಜಪೇಯಿ ನೇತೃತ್ವದ ಸರ್ಕಾರಕ್ಕೆ ನೀಡಿರುವ ಬೆಂಬಲವನ್ನು 'ಸದ್ಯಕ್ಕೆ' ಹಿಂತೆಗೆದುಕೊಳ್ಳದಿರಲು ಇಂದು ನಿರ್ಧರಿಸಿದ್ದು, ಇದರಿಂದ ಬಿಜೆಪಿ ನೇತೃತ್ವದ ಸರ್ಕಾರದ ಸಂಕಷ್ಟ ತಾತ್ಕಾಲಿಕವಾಗಿ ಉಪಶಮನಗೊಂಡಂತಾಯಿತು.

ಆದರೆ, ತಮಿಳುನಾಡಿನ ಕರುಣಾನಿಧಿ ನೇತೃತ್ವದ ಸರ್ಕಾರದ ವಜಾ ಕುರಿತ ಆಗ್ರಹವನ್ನು ಮುಂದುವರಿಸಿಕೊಂಡು ಹೋಗಲು ಹಾಗೂ ಸಂಸತ್ತಿನ ಕಲಾಪಕ್ಕೆ ಮರಳಲು ಪಕ್ಷ ತೀರ್ಮಾನಿಸಿದೆ. ಈ ನಿರ್ಧಾರವನ್ನು ಪಕ್ಷದ ನಾಯಕ ವಿ.ಆರ್. ನೆಡುಂಚೆಳಿಯನ್ ಅವರು ಘೋಷಿಸಿದರು.

- **ಸತತ ಮಳೆ; 6 ಸಾವು ಕನ್ನಂಬಾಡಿ, ಕಬಿನಿ ಏರಿಕೆ**

ಬೆಂಗಳೂರು, ಜುಲೈ 4– ಕರಾವಳಿ ಮತ್ತು ಮಲೆನಾಡು ಪ್ರದೇಶಗಳಲ್ಲಿ ಬೀಳುತ್ತಿರುವ ಭಾರಿ ಮಳೆಯಿಂದಾಗಿ ಮತ್ತೆ ಆರು ಜನರು ಸತ್ತಿದ್ದಾರೆ. ಕಾವೇರಿ ಜಲಾನಯನ ಪ್ರದೇಶದಲ್ಲಿ ಸತತ ಮಳೆ ಸುರಿಯುತ್ತಿದ್ದು ಕೃಷ್ಣರಾಜಸಾಗರ ಮತ್ತು ಕಪಿಲಾ ಜಲಾಶಯಗಳಲ್ಲಿ ನೀರಿನ ಮಟ್ಟ ಒಂದೇ ಸಮನೆ ಏರುತ್ತಿದೆ.

50 ವರ್ಷಗಳ ಹಿಂದೆ

ಗುರುವಾರ, 5-7-1973

- **ರಾಜ್ಯದ ಎಲ್ಲ ಕಡೆ ವ್ಯಾಪಕ ಮಳೆ**

ಬೆಂಗಳೂರು, ಜುಲೈ 4– ಮೂರು ವರ್ಷದ ಬರದ ಬೇಗೆಯಲ್ಲಿ ಬೆಂದು ಹೇಳತೀರದಷ್ಟು ಬವಣೆಯನ್ನು ಅನುಭವಿಸಿದ ರಾಜ್ಯದ ಉತ್ತರದ ಜಿಲ್ಲೆಗಳ ಜನತೆ ಕೊನೆಗೆ ವರುಣನ ಕೃಪೆಯಿಂದ ಹರ್ಷಚಿತ್ತರಾಗಿದ್ದಾರೆ.

ಈ ಬಾರಿಯ ಮುಂಗಾರು ರಾಜ್ಯದ ಎಲ್ಲ ಕಡೆ ವ್ಯಾಪಕವಾಗಿ ಬಿದ್ದಿರುವ ವರದಿಗಳು ಬರುತ್ತಿದ್ದಂತೆ ಸರ್ಕಾರಕ್ಕೂ ನೆಮ್ಮದಿ ತಂದಿದೆ.

ರೈತರು ದೀರ್ಘಕಾಲದ ನಂತರ ಮತ್ತೆ ತಮ್ಮ ಜಮೀನಿಗೆ ಮರಳಿ ಕೃಷಿ ಕಾರ್ಯ ಪ್ರಾರಂಭಿಸುತ್ತಿದ್ದಾರೆ. ಕೆಲವೆಡೆ ಬಿಟ್ಟರೆ ಹೊಲ ಉಳಲು ಎತ್ತುಗಳಿಲ್ಲವೆಂಬ ದೂರು ಅಷ್ಟಾಗಿಲ್ಲವೆಂದೂ ಬಿತ್ತನೆ ಬೀಜದ ಅಭಾವ ಕಂಡುಬಂದಿಲ್ಲವೆಂದೂ ಹೇಳಲಾಗಿದೆ.


- **ರಾಜ್ಯದಲ್ಲಿ ರಾಷ್ಟ್ರದ ಎರಡನೇ ತಾಮ್ರ ಕಾರ್ಖಾನೆ ಸಂಭವ**

ಬೆಂಗಳೂರು, ಜುಲೈ 4– ಹಾಸನ ಜಿಲ್ಲೆಯ ಕಲ್ಯಾಡಿ ಮತ್ತು ಕಲ್ಬುರ್ಗಿ ಜಿಲ್ಲೆಯ ತಿಂತಿಣಿಯಲ್ಲಿ ಆಶಾದಾಯಕ ಪ್ರಮಾಣದಲ್ಲಿ ತಾಮ್ರದ ಅದಿರು ನಿಕ್ಷೇಪ ದೊರೆತಿರುವುದರಿಂದ ರಾಜ್ಯದಲ್ಲಿ ಸುಮಾರು ಹತ್ತು ಕೋಟಿ ರೂ. ವೆಚ್ಚದಲ್ಲಿ ತಾಮ್ರದ ಅದಿರು ಕರಗಿಸುವ ಯಂತ್ರವನ್ನು ಸ್ಥಾಪಿಸಲು ಯೋಚಿಸಲಾಗಿದೆ.

ಕೋಲಾರ ಚಿನ್ನದ ಗಣಿಗಳ ಪಶ್ಚಿಮ ಭಾಗದಲ್ಲೂ ಹೇರಳವಾದ ಪ್ರಮಾಣದಲ್ಲಿ ತಾಮ್ರ ಮತ್ತು ಬೆಳ್ಳಿಯ ಅದಿರು ಪತ್ತೆಯಾಗಿರುವುದು ರಾಜ್ಯದಲ್ಲೇ ಕುಲುಮೆ ಸ್ಥಾಪಿಸುವ ಆಲೋಚನೆಗೆ ಉತ್ತೇಜನಕಾರಿಯಾಗಿದೆ.

ಈ ವಿಚಾರವನ್ನು ಮೊದಲು ರಾಜಕೀಯ ವಿವಾದಗಳಿಂದ ಮುಕ್ತಗೊಳಿಸಬೇಕು

ಏಕರೂಪ ಸಂಹಿತೆ: ಅಗತ್ಯ ಏಕೆ?



ವಿಶ್ಲೇಷಣೆ

ಕ್ಯಾಪ್ಟನ್ ಜಿ.ಆರ್. ಗೋಪಿನಾಥ್

ಧರ್ಮನಿರಪೇಕ್ಷ ಕಾಂಗ್ರೆಸ್, ಧರ್ಮವನ್ನು ನಂಬದ ಎಡಪಕ್ಷಗಳು ಹಾಗೂ ಕೆಲವು ಇತರ ಪಕ್ಷಗಳು ಕೆಲವು ಮುಸ್ಲಿಂ ಕಟ್ಟರ್‌ಪಂಥೀಯರ ಜೊತೆಗೂಡಿ ಏಕರೂಪ ನಾಗರಿಕ ಸಂಹಿತೆಯನ್ನು (ಯುಸಿಸಿ) ವಿರೋಧಿಸುತ್ತಿವೆ. ಧರ್ಮನಿರಪೇಕ್ಷ ತತ್ವವನ್ನು ವಿರೋಧಿಸುವ, ಹಿಂದೂ ಪರಮಾಧಿಕಾರ ಹಾಗೂ ಕೋಮುಧ್ರುವೀಕರಣದ ಹಿಂದುತ್ವ ಸಿದ್ಧಾಂತದ ಪರವಿರುವ ಬಲಪಂಥೀಯ ಬಿಜೆಪಿಯು ಈ ಸಂಹಿತೆಯ ಪರವಾಗಿ ಮಾತನಾಡುತ್ತಿದೆ. ಏಕರೂಪ ನಾಗರಿಕ ಸಂಹಿತೆಯ ಸುತ್ತಲಿನ ವಿಚಾರಗಳು ಇನ್ನೂ ವಿಚಿತ್ರವಾಗಲು ಅವಕಾಶ ಇದೆಯೇ?!

ಪ್ರಧಾನಿ ನರೇಂದ್ರ ಮೋದಿ ಅವರು ಏಕರೂಪ ನಾಗರಿಕ ಸಂಹಿತೆಯ ಬಗ್ಗೆ ಈಚೆಗೆ ಪ್ರಸ್ತಾಪಿಸಿರುವುದು ಭಾರಿ ಚರ್ಚೆಗೆ ಕಾರಣವಾಗಿದೆ. ಮುಸ್ಲಿಮರಲ್ಲಿ ಆಚರಣೆಯಲ್ಲಿದ್ದ, ಏಕಕಾಲಕ್ಕೆ ಮೂರು ಬಾರಿ ತಲಾಖ್ ಎಂದು ಹೇಳಿ ವಿವಾಹ ಸಂಬಂಧವನ್ನು ಕೊನೆಗೊಳಿಸುವ ಪದ್ಧತಿಯು ಅಕ್ರಮ ಹಾಗೂ ಅಸಾಂವಿಧಾನಿಕ ಎಂದು ಸುಪ್ರೀಂ ಕೋರ್ಟ್ ಬಹುಮತದ ತೀರ್ಪೊಂದರಲ್ಲಿ ಹೇಳಿದೆ. ಇದು ಏಕರೂಪ ನಾಗರಿಕ ಸಂಹಿತೆಯನ್ನು ರೂಪಿಸಿ, ಜಾರಿಗೆ ತರಲು ಅಡ್ಡಿಗಳನ್ನು ನಿವಾರಿಸಿದೆ. ಎಲ್ಲರಿಗೂ ಸಮಾನ ಅವಕಾಶಗಳು ದೊರೆಯಬೇಕು ಎಂದು ಬಯಸುವ ಸಮಾಜದಲ್ಲಿ, ನ್ಯಾಯಸಮ್ಮತವಲ್ಲದ ಹಾಗೂ ತಾರತಮ್ಯಕ್ಕೆ ಅವಕಾಶ ಕಲ್ಪಿಸುವ ಕಾನೂನುಗಳಿಗೆ ಪ್ರಗತಿಪರವಾಗಿ ತಿದ್ದುಪಡಿ ತರಬೇಕು.

ವಿವಾಹ, ವಿಚ್ಛೇದನ, ಪರಿಹಾರ, ಆಸ್ತಿಹಕ್ಕು, ದತ್ತು-ಸ್ವೀಕಾರಕ್ಕೆ ಸಂಬಂಧಿಸಿದ ವೈಯಕ್ತಿಕ ಕಾನೂನುಗಳನ್ನು ಮೊದಲು ರೂಪಿಸಿದ್ದು ನಮಗೆ ಸ್ವಾತಂತ್ರ್ಯ ಸಿಗುವುದಕ್ಕೂ ಮೊದಲು. ಈ ಕಾನೂನುಗಳು ನಿಧಾನವಾಗಿ ಕೆಡುಕು ಉಂಟುಮಾಡುವಂತಹ ಬ್ರಿಟಿಷ್ ಆಡಳಿತದ ಉಳಿಕೆಗಳು. ಇಂತಹ ಕಾನೂನುಗಳನ್ನು ಎಷ್ಟು ಬೇಗ ನಿವಾರಿಸಲು ಸಾಧ್ಯವೋ ಅಷ್ಟರಮಟ್ಟಿಗೆ ಜನರಿಗೆ ಒಳಿತಾಗುತ್ತದೆ. ಕಾನೂನು ಸಚಿವರಾಗಿದ್ದ ಡಾ. ಬಿ.ಆರ್.ಅಂಬೇಡ್ಕರ್ ಅವರು, ಪ್ರಧಾನಿ ಜವಾಹರಲಾಲ್ ನೆಹರೂ ಅವರ ಬೆಂಬಲದೊಂದಿಗೆ, ಏಕರೂಪ ನಾಗರಿಕ ಸಂಹಿತೆಯನ್ನು ರೂಪಿಸುವುದಕ್ಕೆ ಶಿಫಾರಸು ಮಾಡಿದ್ದರು. ಆದರೆ ಅಂಧಶ್ರದ್ಧೆಯ ಜನರಿಂದ ಅದಕ್ಕೆ ವಿರೋಧ ವ್ಯಕ್ತವಾದಾಗ ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದರು. ಪ್ರಜಾತಂತ್ರ, ಧರ್ಮನಿರಪೇಕ್ಷ ಮತ್ತು ಸಮಾಜವಾದಿ ಮೌಲ್ಯಗಳಿಗೆ ನಾವು ಹೊಂದಿರುವ ಬದ್ಧತೆಗೆ ಅನುಗುಣವಾಗಿರುವ ಏಕರೂಪ ನಾಗರಿಕ ಸಂಹಿತೆಯನ್ನು ಜಾರಿಗೊಳಿಸಲು ನೆಹರೂ ನೇತೃತ್ವದ ಸರ್ಕಾರ ಹಾಗೂ ನಂತರದ ಸರ್ಕಾರಗಳು ವಿಫಲವಾದವು. ಪುರುಷಪ್ರಧಾನ ಹಿಂದೂ ಸಮಾಜದ ದೊಡ್ಡದೊಂದು ವರ್ಗ ಹಾಗೂ ಹಳೆಯ ಷರಿಯಾ ಕಾನೂನನ್ನು ಪಾಲಿಸಲು ಬಯಸುವ ಮುಸ್ಲಿಂ ಗುಂಪುಗಳ ಒತ್ತಡಕ್ಕೆ ಅವು ಮಣಿದವು. ಏಕರೂಪ ನಾಗರಿಕ ಸಂಹಿತೆಯನ್ನು ಜಾರಿಗೆ ತರಲು ನೆಹರೂ ಬದ್ಧರಾಗಿದ್ದರೂ, ಅದರಲ್ಲಿ ಯಶಸ್ಸು ಕಾಣಲಿಲ್ಲ. ಬದಲಿಗೆ, ಅದನ್ನು ಸಂವಿಧಾನದ ರಾಜ್ಯ ನಿರ್ದೇಶನ ತತ್ವಗಳ ಅಡಿಯಲ್ಲಿ ಸೇರಿಸಿದರು.

ಸಂಹಿತೆಯನ್ನು ರೂಪಿಸುವುದು, ಅದಕ್ಕೆ ಸಂಬಂಧಿಸಿದ ನಿಯಮಗಳನ್ನು ಜಾರಿಗೆ ತರುವುದು ಸಂಸತ್ತಿನ ಕೆಲಸ ಎಂದು ಸುಪ್ರೀಂ ಕೋರ್ಟ್ ಈಗಾಗಲೇ ಸ್ಪಷ್ಟಪಡಿಸಿದೆ. ಸಂಹಿತೆಯನ್ನು ಜಾರಿಗೆ ತರುವ ಕೆಲಸವನ್ನು ಆದಷ್ಟು ಬೇಗ ಮಾಡಬೇಕು ಎಂದು 2015ರಲ್ಲಿ ಸರ್ಕಾರಕ್ಕೆ ಹೇಳಿದೆ. ಬಿಜೆಪಿಯು ಏಕರೂಪ ನಾಗರಿಕ ಸಂಹಿತೆಗೆ ಸಂಬಂಧಿಸಿದ ಮಸೂದೆಯನ್ನು 2019 ಮತ್ತು 2020ರಲ್ಲಿ ಸಂಸತ್ತಿನಲ್ಲಿ ಮಂಡಿಸಿದರೂ, ಆರ್‌ಎಸ್‌ಎಸ್ ಜೊತೆಗಿನ ಭಿನ್ನಾಭಿಪ್ರಾಯದ ಕಾರಣದಿಂದಾಗಿ ಅದನ್ನು ಹಿಂಪಡೆಯಿತು ಎಂದು ವರದಿಯಾಗಿದೆ. ಇಲ್ಲಿ ಎಲ್ಲ ರಾಜಕೀಯ ಪಕ್ಷಗಳೂ ರಾಜಕಾರಣದಲ್ಲಿ ತೊಡಗಿವೆ. 2024ರ ಚುನಾವಣೆಯಲ್ಲಿ ತಮ್ಮ ಮತಬ್ಯಾಂಕ್ ಮೇಲೆ ಯಾವ ಪರಿಣಾಮ ಉಂಟಾಗಬಹುದು ಎಂಬ ಆಲೋಚನೆಯಲ್ಲಿ ಸಮಾಜದ ಬೇರೆ ಬೇರೆ ವರ್ಗಗಳ ನಡುವಿನ ಒಡಕು ಹೆಚ್ಚಿಸುವ ಕೆಲಸದಲ್ಲಿ ತೊಡಗಿವೆ.

ಆಸ್ತಿ ಹಕ್ಕುಗಳು, ಮದುವೆ, ವಿಚ್ಛೇದನ ಮತ್ತು ಪರಿಹಾರದಂತಹ ವಿಷಯಗಳಲ್ಲಿ ಅತಿಹೆಚ್ಚಿನ ತೊಂದರೆಗೆ ಗುರಿಯಾಗುವವರು ಮಹಿಳೆಯರು. ಮುಸ್ಲಿಮರಲ್ಲಿ, ಅವರಲ್ಲಿನ ಉಪಪಂಗಡಗಳಲ್ಲಿ, ದೇಶದ ಇತರ ಧಾರ್ಮಿಕ ಅಲ್ಪಸಂಖ್ಯಾತ ಸಮುದಾಯಗಳಲ್ಲಿನ ಕಥೆ ಕೂಡ ಇದೇ ಆಗಿದೆ. ಧರ್ಮದ ಹೆಸರಿನಲ್ಲಿ ಮತ್ತು ಧರ್ಮವು ನೀಡುವ ಅಧಿಕಾರದ ಹೆಸರಿನಲ್ಲಿ ಮಹಿಳೆಯರನ್ನು ದೈಹಿಕವಾಗಿ ಹಾಗೂ ಮಾನಸಿಕವಾಗಿ ಛಿದ್ರಗೊಳಿಸುವ ದಬ್ಬಾಳಿಕೆಯು ಜಾರಿಯಲ್ಲಿದೆ.

ಫತ್ವಾಗಳಿಗೆ ಕಾನೂನಿನ ಮಾನ್ಯತೆ ಇಲ್ಲ ಎಂದು ಸುಪ್ರೀಂ ಕೋರ್ಟ್ ಮೂರು ವರ್ಷಗಳ ಹಿಂದೆ ತೀರ್ಪು ನೀಡಿದಾಗ, ಧರ್ಮಗುರುಗಳು ಕೆಲವರು ತಮ್ಮ ಧಾರ್ಮಿಕ ಆಚರಣೆಯ ಹಕ್ಕನ್ನು ರಕ್ಷಿಸಿಕೊಳ್ಳಲು ಯತ್ನಿಸಿದರು. ಸುಪ್ರೀಂ ಕೋರ್ಟ್ ಈ ತೀರ್ಪು ನೀಡಿದ್ದು, ಸೊಸೆಯ ಮೇಲೆ ಮಾವ ಅತ್ಯಾಚಾರ ಎಸಗಿದ ಪ್ರಕರಣಕ್ಕೆ ಸಂಬಂಧಿಸಿ. ಈ ಪ್ರಕರಣದಲ್ಲಿ ಫತ್ವಾ ಮೂಲಕ ಆ ಮಾವನಿಗೆ, ಸೊಸೆಯ ಜೊತೆ ಸಂಸಾರ ಮಾಡಬೇಕು ಎಂಬ ಶಿಕ್ಷೆ ವಿಧಿಸಲಾಗಿತ್ತು. ಅತ್ಯಾಚಾರ ಎಸಗಿದವನಿಗೆ ಆ ಹೆಣ್ಣಿನ ಜೊತೆ ಬಾಳ್ವೆ ಮಾಡುವಂತೆ ಹೇಳುವುದು, ಆಕೆಯನ್ನು ಸಲಹುವಂತೆ ಹೇಳುವುದು ಒಂದು ಶಿಕ್ಷೆ ಎಂಬ ವಿಚಿತ್ರ ತರ್ಕವನ್ನು ಆಗ ಮುಂದಿಡಲಾಗಿತ್ತು. ಆದರೆ ಇಂಥದ್ದೊಂದು ಶಿಕ್ಷೆಯು ಇನ್ನಷ್ಟು ಅತ್ಯಾಚಾರ ಪ್ರಕರಣಗಳಿಗೆ ಕಾರಣವಾಗಬಹುದು ಎಂಬುದನ್ನು ಸಂಪೂರ್ಣವಾಗಿ ಅಲಕ್ಷಿಸಲಾಯಿತು. ಅತ್ಯಾಚಾರಕ್ಕೆ ಒಳಗಾದ ಹೆಣ್ಣಿನ ಅನಿಸಿಕೆಯನ್ನು ಯಾರಾದರೂ ಆಗ ಕೇಳಿದ್ದರೇ?

ಪಶ್ಚಿಮದ ಪ್ರಬುದ್ಧ ಪ್ರಜಾತಂತ್ರ ವ್ಯವಸ್ಥೆಗಳಲ್ಲಿ ಕಾನೂನು, ಪ್ರಜೆಗಳಿಗೆ ತಮ್ಮ ಧರ್ಮವನ್ನು ಖಾಸಗಿ ಬದುಕಿನಲ್ಲಿ ಆಚರಿಸುವ ಸ್ವಾತಂತ್ರ್ಯ ನೀಡುತ್ತದೆ. ಆದರೆ ಅವರು ಏಕರೂಪದ ಸಿವಿಲ್ ಹಾಗೂ ಕ್ರಿಮಿನಲ್ ಸಂಹಿತೆಗೆ ಬದ್ಧರಾಗಿರಬೇಕಾಗುತ್ತದೆ. ಈ ಸಂಹಿತೆಯು ಪ್ರಜೆಗಳಿಗೆ, ವಲಸಿಗರಿಗೆ ಸಮಾನವಾಗಿ ಅನ್ವಯವಾಗುತ್ತದೆ. ಈ ದೇಶಗಳ ನ್ಯಾಯದಾನ ವ್ಯವಸ್ಥೆ ಹಾಗೂ ಸಿವಿಲ್ ಸಂಹಿತೆಗಳು ಇನ್ನೂರಕ್ಕೂ ಹೆಚ್ಚು ವರ್ಷಗಳ ಅವಧಿಯಲ್ಲಿ ವಿಕಾಸಗೊಂಡಿವೆ.

ಆದರೆ, ಹಿಂದೂಗಳಿಗೆ ಅನ್ವಯವಾಗುವ ಸಂಹಿತೆಯನ್ನು ಮುಸ್ಲಿಮರಿಗೆ ಅಥವಾ ಇತರ ಅಲ್ಪಸಂಖ್ಯಾತ ಸಮುದಾಯದವರಿಗೆ ಒತ್ತಾಯದ ಮೂಲಕ ಅನ್ವಯ ಮಾಡಬೇಕು ಎಂದು ಹೇಳುತ್ತಿಲ್ಲ; ಮುಸ್ಲಿಮರಿಗೆ ಹಾಗೂ ಇತರ ಧಾರ್ಮಿಕ ಅಲ್ಪಸಂಖ್ಯಾತರಿಗೆ ಮಾತ್ರ ಇದನ್ನು ಅನ್ವಯಿಸಿ, ಹಿಂದೂಗಳಿಗೆ ಅನ್ವಯಿಸಬಾರದು ಎಂದೂ ಹೇಳುತ್ತಿಲ್ಲ. ಖಾಪ್ ಪಂಚಾಯತ್‌ಗಳು ಮಹಿಳೆಯರ ಪಾಲಿಗೆ ಮತ್ತು ಸಮಾಜದ ಪ್ರಗತಿಗೆ ಫತ್ವಾಗಳು ಹಾಗೂ ಷರಿಯಾ ನ್ಯಾಯಾಲಯಗಳಷ್ಟೇ ಅಮಾನವೀಯವಾಗಿ ಇವೆ. ಕಾನೂನಿನ ಎದುರು ಎಲ್ಲರೂ ಸಮಾನರು ಎಂದು ಆಗಬೇಕಾದಲ್ಲಿ, ಎಲ್ಲರಿಗೂ ಏಕರೂಪದ ಸಿವಿಲ್ ಹಾಗೂ ಕ್ರಿಮಿನಲ್ ಸಂಹಿತೆ ಅನ್ವಯವಾಗಬೇಕು.

ದೇಶವೊಂದಕ್ಕೆ ತನ್ನಲ್ಲಿನ ಹೆಣ್ಣುಮಕ್ಕಳಿಗೆ ಮುಕ್ತವಾದ ಬದುಕು ಸಾಗಿಸಲು ಅಗತ್ಯವಿರುವ ರಕ್ಷಣೆ ಹಾಗೂ ಸಮಾನ ಅವಕಾಶಗಳನ್ನು ನೀಡಲು ಆಗದು ಎಂದಾದರೆ, ಅದು ತೀರಾ ಅನಾಗರಿಕ ಸಂಸ್ಕೃತಿಯನ್ನು ಹೊಂದಿದೆ ಎಂದರ್ಥ. ಸರ್ಕಾರವು ಬಿಜೆಪಿಯ ಜೊತೆಯಲ್ಲಿಯೇ ಇರುವ ಕಟ್ಟರ್‌ವಾದಿ ಸಂಘಟನೆಗಳಿಂದ ದೂರವಾಗಿ ನಿಲ್ಲಬೇಕು. ಏಕರೂಪ ನಾಗರಿಕ ಸಂಹಿತೆ ಜಾರಿಯ ವಿಚಾರವನ್ನು ರಾಜಕೀಯ ವಿವಾದಗಳಿಂದ ಮುಕ್ತಗೊಳಿಸಬೇಕು. ಸುಪ್ರೀಂ ಕೋರ್ಟ್‌ನ ಮಾರ್ಗದರ್ಶನದಲ್ಲಿ ಜಗತ್ತಿನ ಪ್ರಜಾತಂತ್ರ ದೇಶಗಳಿಂದ ಅತ್ಯುತ್ತಮ ಮಾದರಿಗಳನ್ನು ಆಯ್ಕೆ ಮಾಡಿಕೊಂಡು ಸಂಹಿತೆಯನ್ನು ರೂಪಿಸಬೇಕು. ಅದಕ್ಕೆ ಸಂಸತ್ತಿನ ಅನುಮೋದನೆ ಪಡೆದುಕೊಳ್ಳಬೇಕು. ಆ ಸಂಹಿತೆಯು ದೇಶದ ಎಲ್ಲ ರಾಜ್ಯಗಳಲ್ಲಿ ಯಾವ ವಿನಾಯಿತಿಯೂ ಇಲ್ಲದೆ ಜಾರಿಗೆ ಬರಬೇಕು.

ಆಗ ಭಾರತವು ನಿಜ ಅರ್ಥದಲ್ಲಿ, ಅಭಿವೃದ್ಧಿ ಹೊಂದಿದ ದೇಶವಾಗುತ್ತದೆ. ದೇಶವು ಆಧುನಿಕ ಹಾಗೂ ನಾಗರಿಕವಾದ ಸಮಾಜವನ್ನು ಹೊಂದಿದಂತೆ ಆಗುತ್ತದೆ. ದೇಶದ ಪುರುಷರು ಹಾಗೂ ಮಹಿಳೆಯರಲ್ಲಿನ ಚೈತನ್ಯವು ಸಮಾನವಾಗಿ ಉಚ್ಛ್ರಾಯ ಸ್ಥಿತಿ ತಲುಪಬಹುದು.



ಚುರುಮುರಿ



ಟೊಮೆಟೊ v/s ಈರುಳ್ಳಿ

• ಆನಂದ

'ಈರುಳ್ಳಿ ಮಾತ್ರ ಕಣ್ಣಿನಲ್ಲಿ ನೀರು ಬರಿಸುತ್ತೆ ಅನ್ನೋ ಕಾಲ ಹೋದ ಹಾಗೆ ಕಾಣುತ್ತೇರಿ' ಎಂದಳು ಮಡದಿ ಅದನ್ನು ಹೆಚ್ಚುತ್ತಾ.

'ಬೇರೆ ಯಾವ ತರಕಾರಿ ನಿನಗೆ ಕಣ್ಣಲ್ಲಿ ನೀರು ಬರಿಸುತ್ತೆ?' ಎಂದು ಕೇಳಿದೆ.

'ನನಗೇನು ನಿಮಗೆ ಸಹ' ಎಂದಾಗ ನನಗೆ ಕುತೂಹಲ ತರಕಾರಿ ಬೆಲೆಯಂತೆ ಇಮ್ಮಡಿ ಆಯ್ತು.

'ಯಾವುದಮ್ಮ ಅದು?'

'ಟೊಮೆಟೊರೀ. ಈರುಳ್ಳಿ ಹೆಚ್ಚಿದಾಗ ಮಾತ್ರ ನೀರು ಬರಿಸುತ್ತೆ, ಆದರೆ ಈ ಕೆಂಪು ತರಕಾರೀನ ಅಂಗಡೀಲಿ ನೋಡಿದರೆ ಕಣ್ಣಿನಲ್ಲಿ ನೀರು ಬರಿಸದೇ?'

'ನಿಜ, ಅಷ್ಟು ಡೇಂಜರಸ್ ಅದು'.

'ಅದಕ್ಕೇ ಅದರ ಬಣ್ಣ ಡೇಂಜರ್ ಕಲರ್'.

'ಟೊಮೆಟೊ ಬೆಲೆ ಜಿಗಿದಿದ್ದರೂ ಎಲ್ಲೂ ಪ್ರತಿಭಟನೆ ಕಾಣ್ತಾನೇ ಇಲ್ಲವಲ್ಲ, ಆಶ್ಚರ್ಯ'.

'ಯಃಕಶ್ಚಿತ್ ಟೊಮೆಟೊಗೆ ಯಾರು ಪ್ರತಿಭಟಿಸ್ತಾರೆ? ಅದೇನು ಈರುಳ್ಳಿಯೇ?'

'ಈರುಳ್ಳಿಗೆ ಪ್ರತಿಭಟನೆಯೇ? ಹೌದೆ?'

'ಯಾಕೆ ಮರೆತುಬಿಟ್ರಾ? ಇಂದಿರಮ್ಮ ಈರುಳ್ಳಿ ಬೆಲೇನೆ ಮುಂದಿಟ್ಟುಕೊಂಡು ಲೋಕಸಭಾ ಚುನಾವಣೇನ ಗೆದ್ದಿದ್ದರು ಒಂದು ಸಲ...'

'ಹ್ಞಾ! ನೆನಪಾಯಿತು. ಕಿಚಡಿ ಜನತಾ ಪಕ್ಷ ಅಧಿಕಾರದಲ್ಲಿದ್ದಾಗ. ತುಂಬಾ... ಹಿಂದೆ. ಆದರೆ ಈರುಳ್ಳಿ ಬೆಲೆ ಟೊಮೆಟೊ ತರ ಸೆಂಚುರಿ ಹೊಡೆದಿರಲಿಲ್ಲ'.

'ಹೌದು, ನೆನಪಿದ್ದಂತೆ ಡಬಲ್ ಫಿಗರ್ ಸಹ ಮುಟ್ಟರಲಿಲ್ಲ. ಆದರೆ ಅದೇ ಆಗ ಭಾರೀ ಬೆಲೆ ಏರಿಕೆ ಆಗಿತ್ತು'.

'ಕಾಲದ ಮಹಿಮೆ. ಆಗ ಪೆಟ್ರೋಲ್ ಬೆಲೆ ಮೂರೋ ನಾಲ್ಕೋ ರೂಪಾಯಿ ಇತ್ತು ಲೀಟರಿಗೆ. ಸೊ, ಈರುಳ್ಳಿ ಬೆಲೆ ಐದೋ ಆರೋ ರೂಪಾಯಿ ಮುಟ್ಟಿದ್ದಕ್ಕೆ ಸರ್ಕಾರದ ಕಣ್ಣಿನಲ್ಲಿ ನೀರು ಬರಿಸಿದ್ದರು ಇಂದಿರಾಜಿ'.

'ಈ ಏರಿಕೆ ನಮ್ಮ ಆರ್ಥಿಕ ತಜ್ಞರು ಹೇಳೊ ಹಾಗೆ ಟೆಂಪರರಿ ಫೆನಾಮಿನ. ಹೊಸ ಬೆಳೆ ಬರುತ್ತಿದ್ದಂತೆ ಬೆಲೆ ಇಳಿಯಲಿಕ್ಕೆ ಹತ್ತುತ್ತೆ'.

'ಅದಿರಲಿ, ಮುಂದಿನ ವಾರ ಶಂಕರರಾಯರ ಮನೇಲಿ ಫಂಕ್ಷನ್. ಕರೆದಿದ್ದಾರೆ, ಏನು ಗಿಫ್ಟ್?'

'ಯೋಚನೆ ಯಾಕೆ? ಒಂದು ಕಿಲೊ ಟೊಮೆಟೊನೇ ಗಿಫ್ಟ್ ಕೊಡೋಣ'.

'ಅವರಿಗೂ ಖುಷಿಯಾಗಬಹುದು'.

ಸಂಗತ

ಮನೆಯಿಂದಲೇ ಕೆಲಸ: ಮಹಿಳೆಗೆ ವರವೇ?

ಮನೆಯಿಂದ ಕೆಲಸ ಮಾಡುವುದು ಮಹಿಳೆಯರಿಗೆ ಮೇಲ್ನೋಟಕ್ಕೆ ಅನುಕೂಲಕರ ಎನಿಸಿದರೂ ಬಹಳಷ್ಟು ಅನನುಕೂಲಗಳೂ ಇವೆ

• ಡಾ. ಕೆ.ಎಸ್.ಚೈತ್ರಾ

ಹಿಂದಿನ ವರ್ಷದ ಡಿಸೆಂಬರ್‌ನಿಂದ ಇಲ್ಲಿಯವರೆಗೆ ಮಹಿಳಾ ಉದ್ಯೋಗಿಗಳು ಅಧಿಕ ಪ್ರಮಾಣದಲ್ಲಿ ಟೆಕ್ ಕಂಪನಿಗಳ ಉದ್ಯೋಗವನ್ನು ತೊರೆದಿದ್ದಾರೆ. ಪುರುಷರಿಗೆ ಹೋಲಿಸಿದರೆ ಈ ಪ್ರಮಾಣ ಎರಡು ಪಟ್ಟು ಹೆಚ್ಚು. ಕಾರಣಗಳು ಅನೇಕವಿದ್ದರೂ ಮನೆಯಿಂದ ಕೆಲಸ ಮಾಡುವ (ವರ್ಕ್ ಫ್ರಮ್ ಹೋಂ) ಪದ್ಧತಿಯನ್ನು ಅನೇಕ ಕಂಪನಿಗಳು ನಿಲ್ಲಿಸಿರುವುದು ಪ್ರಮುಖವಾದದ್ದು! ಇಂಥ ಮಹಿಳೆಯರ ಸಂಖ್ಯೆ ಶೇಕಡ 40ರಷ್ಟಿದೆ ಮತ್ತು ಅವರಲ್ಲಿ ಹೆಚ್ಚಿನವರು 30ರಿಂದ 40 ವರ್ಷ ವಯಸ್ಸಿನವರು ಎಂದು ಇಂಕ್ರೂಟರ್ ಸಂಸ್ಥೆಯ ಇತ್ತೀಚಿನ ಅಧ್ಯಯನದಲ್ಲಿ ತಿಳಿಸಲಾಗಿದೆ.


ಕೋವಿಡ್ ಸಂದರ್ಭದಲ್ಲಿ ಆರೋಗ್ಯದ ದೃಷ್ಟಿಯಿಂದ ಜಾರಿಗೆ ಬಂದಿದ್ದು ಈ ಮನೆಯಿಂದ ಕೆಲಸ ಮಾಡುವ ಪದ್ಧತಿ. ಮಹಿಳೆಯರಲ್ಲಿ, ಅದರಲ್ಲೂ 30ರಿಂದ 40 ವರ್ಷದವರಲ್ಲಿ ಮದುವೆ, ಮಕ್ಕಳು, ಹಿರಿಯರ ಆರೈಕೆ ಹೀಗೆ ಜವಾಬ್ದಾರಿಗಳ ಹೊಣೆ ಹೆಚ್ಚು. ಅಂಥವರಿಗೆ ಮನೆಯಿಂದಲೇ ಕೆಲಸ ಈ ಎಲ್ಲವನ್ನೂ ಹೇಗೋ ನಿಭಾಯಿಸುವ ಅವಕಾಶವನ್ನು ನೀಡಿತ್ತು. ಅಂಥವರಿಗೆ ಈಗ ಇದ್ದಕ್ಕಿದ್ದಂತೆ ಕಚೇರಿಗೆ ಮರಳುವುದೆಂದರೆ ಕಷ್ಟವೆನಿಸುವುದು ಸಹಜವೇ. ಹೀಗಾಗಿ ರಾಜೀನಾಮೆ ನೀಡುವುದು, ಮನೆ ಹತ್ತಿರ ಇರುವ ಕಂಪನಿಯಲ್ಲಿ ಉದ್ಯೋಗಕ್ಕಾಗಿ ಹುಡುಕಾಟ, ಕಡಿಮೆ ಸಂಬಳವಾದರೂ ಪರವಾಗಿಲ್ಲ ಎನ್ನುವ ರಾಜಿ ಮನೋಭಾವ, ಸ್ವತಂತ್ರವಾಗಿ ಸಣ್ಣಪುಟ್ಟ ಕೆಲಸ ಮಾಡಲು ಪ್ರಯತ್ನ ಇವೆಲ್ಲವೂ ಸಾಮಾನ್ಯವಾಗಿವೆ.

ಮನೆಯಿಂದಲೇ ಕೆಲಸದಿಂದ ಮಹಿಳಾ ಉದ್ಯೋಗಿಗಳಿಗೆ ಅನೇಕ ಲಾಭಗಳಿವೆ. ಕಚೇರಿಗೆ ಪ್ರಯಾಣಿಸುವ ಸಮಯದ ಜತೆ ಶಕ್ತಿಯ ಉಳಿತಾಯ. ಉದ್ಯೋಗದ ಜತೆ ಮನೆ ಮತ್ತು ಮಕ್ಕಳನ್ನು ನೋಡಿಕೊಳ್ಳುವುದು, ಬ್ಯಾಂಕ್ ಕೆಲಸ, ತನ್ನ ಆರೋಗ್ಯದ ಕಾಳಜಿ ಇವೆಲ್ಲವನ್ನೂ ಏಕಕಾಲದಲ್ಲಿ ಮಾಡಬೇಕಾದ ಅನಿವಾರ್ಯ ಆಧುನಿಕ ಮಹಿಳೆಗಿದೆ. ಮನೆಯಲ್ಲಿ ಇದ್ದು ಕೆಲಸ ಮಾಡುವಾಗ ಕೆಲಸದ ಸಮಯದಲ್ಲಿ ಸಣ್ಣಪುಟ್ಟ ಬದಲಾವಣೆ ಮಾಡಿಕೊಂಡು, ಇವೆಲ್ಲದರ ಮೇಲ್ವಿಚಾರಣೆಯನ್ನು ಸುಲಭವಾಗಿ ಮಾಡಬಹುದು.

ಮನೆಯಿಂದ ಕೆಲಸ ಮಾಡುವುದು ಆರ್ಥಿಕವಾಗಿಯೂ ಲಾಭದಾಯಕ. ಪ್ರಯಾಣ, ಧರಿಸುವ ಉಡುಪು, ಹೊರಗೆ ತಿನ್ನುವ ಆಹಾರ, ಮನೆಯಲ್ಲಿನ ಕೆಲಸಕ್ಕೆ ಸಹಾಯಕರು, ಆಫೀಸಿಗೆ ಹತ್ತಿರವಿರುವ ಪ್ರದೇಶದಲ್ಲಿ ಮನೆ ಮಾಡುವುದರಿಂದ ಆಗುವ ಹೆಚ್ಚುವರಿ ಖರ್ಚು ಎಲ್ಲವೂ ಕಡಿಮೆಯಾಗುತ್ತದೆ. ಮಕ್ಕಳೊಂದಿಗೆ ಹೆಚ್ಚಿನ ಸಮಯವನ್ನು ಕಳೆಯಲು ಸಾಧ್ಯ.

ಕಂಪನಿಗಳಿಗೂ ಇದರಿಂದ ಬಹಳಷ್ಟು ಲಾಭಗಳಿವೆ. ಉದ್ಯೋಗಿಗಳಿಗೆ ಸ್ಥಳ, ಮೂಲಸೌಕರ್ಯ ಹೆಚ್ಚಿಗೆ ಬೇಕಿಲ್ಲ. ಸಾರಿಗೆ ವ್ಯವಸ್ಥೆ, ಆಹಾರ, ಇತರ ಸಿಬ್ಬಂದಿ, ವಿದ್ಯುತ್, ನೀರು ಈ ಎಲ್ಲದರ ಬಳಕೆ ಕಡಿಮೆ. ಸಣ್ಣ ಮಕ್ಕಳಿರುವ ತಾಯಂದಿರು, ಹಿರಿಯರನ್ನು ನೋಡಿಕೊಳ್ಳುವ ಮಹಿಳೆಯರು, ದೈಹಿಕ ಮತ್ತು ಮಾನಸಿಕ ಸಮಸ್ಯೆ ಇರುವವರು, ನಗರ ಪ್ರದೇಶದಿಂದ ದೂರ ಇರುವವರು ಹೀಗೆ ಎಲ್ಲರಿಗೂ ಕೆಲಸ ಮಾಡುವ ಅವಕಾಶ ದೊರೆಯುತ್ತದೆ. ಮಹಿಳಾ ಉದ್ಯೋಗಿಗಳು ತಮ್ಮ ಮನೆಯ ಜವಾಬ್ದಾರಿಗಳಿದ್ದರೂ ಕಚೇರಿಯ ಕೆಲಸವನ್ನು ಪುರುಷರಿಗಿಂತ ಚೆನ್ನಾಗಿಯೇ ಮಾಡಿ ಸಂಸ್ಥೆಗೆ ಲಾಭವನ್ನೇ ತಂದುಕೊಟ್ಟಿದ್ದಾರೆ. ಹಾಗಿದ್ದೂ ಕಂಪನಿಗಳು ಆಫೀಸಿಗೆ ಬರಬೇಕು ಎಂದು ಹೇಳುತ್ತಿರುವುದೇಕೆ? ಮನೆಯಿಂದ ಕೆಲಸ ಮಾಡುವಾಗ ಉದ್ಯೋಗಿಗಳ ಕೆಲಸದ ಸಮಯದ ಮೇಲೆ ನಿಯಂತ್ರಣ ಇರುವುದಿಲ್ಲ. ಲಾಗಿನ್ ಆಗುವುದೇನೋ ಸರಿ. ಕೆಲಸವನ್ನು ಮಾಡುತ್ತಿದ್ದಾರೆಯೋ ಇಲ್ಲವೋ ಎಂಬುದರ ಬಗ್ಗೆ ತಿಳಿಯಲು ಸಾಧ್ಯವಿಲ್ಲ. ಸಮಸ್ಯೆಗಳನ್ನು ಬಗೆಹರಿಸುವಾಗ ಮುಖಾಮುಖಿ ಕುಳಿತು ಚರ್ಚೆ ಮಾಡಿ ಒಟ್ಟಿಗೆ ಪರಿಹಾರ ಕಂಡುಹಿಡಿಯುವುದು ಸೂಕ್ತವಾದ ವಿಧಾನವಾದರೂ ಅದಿಲ್ಲಿ ಸಾಧ್ಯವಿಲ್ಲ.

ದೊಡ್ಡ ಮಟ್ಟದಲ್ಲಿ ವ್ಯವಹಾರ ಮಾಡುವಾಗ ಕೆಲಸ ಮಾತ್ರವಲ್ಲ ಎದುರಿಗೆ ಕಾಣುವ ವ್ಯಕ್ತಿಯ ಸಂವಹನ ಸಾಮರ್ಥ್ಯ, ನಡೆನುಡಿಯೂ ಪ್ರಭಾವ ಬೀರುತ್ತದೆ. ಹಾಗೆಯೇ ಉನ್ನತ ಹುದ್ದೆಗಳಲ್ಲಿ ಇರುವವರು ಸ್ವತಃ ಕೆಲಸ ಮಾಡುವುದನ್ನು ನೋಡುತ್ತಾ ಇತರರು ಸ್ಫೂರ್ತಿಯನ್ನು ಪಡೆಯುತ್ತಾರೆ. ಐಟಿ ಕ್ಷೇತ್ರದಲ್ಲಿಯೂ ನಿರ್ದಿಷ್ಟ ಹುದ್ದೆಗಳನ್ನು ಮನೆಯಿಂದ ನಿರ್ವಹಿಸಲು ಸಾಧ್ಯವಿಲ್ಲ. ಹಾಗಾಗಿ ಉದ್ಯೋಗಿಗಳ ನಡುವೆಯೂ ಅಸಮಾಧಾನ, ಬೇಸರ ಶುರುವಾಗಬಹುದು. ಕೋವಿಡ್ ಇದ್ದಾಗ, ಹೇಗೋ ಕೆಲಸ ಉಳಿದರೆ ಸಾಕು ಎಂಬ ಹೆದರಿಕೆಯಿಂದ ಮಾಡುತ್ತಿದ್ದ ಪರಿಸ್ಥಿತಿ ಈಗಿಲ್ಲ. ಹಾಗಾಗಿ ಗುಣಮಟ್ಟ ಕಡಿಮೆಯಾಗಬಹುದು ಎಂಬಂತಹ ಅನೇಕ ಕಾರಣಗಳಿವೆ.



ಮಹಿಳೆಯರಿಗೂ ಮನೆಯಿಂದ ಕೆಲಸ ಮಾಡುವುದು ಮೇಲ್ನೋಟಕ್ಕೆ ಅನುಕೂಲಕರ ಎನಿಸಿದರೂ ಬಹಳಷ್ಟು ಅನನುಕೂಲಗಳೂ ಇವೆ. ನಿರ್ದಿಷ್ಟ ಸಮಯಕ್ಕೆ ತಯಾರಾಗಿ ಇಂತಿಷ್ಟು ತಾಸು ಕೆಲಸ ಮಾಡುವ ಶಿಸ್ತು ಮಾಯವಾಗುತ್ತದೆ. ಮನೆವಾರ್ತೆ ಮತ್ತು ಮಕ್ಕಳ ಜವಾಬ್ದಾರಿ ಆಕೆಗೆ ಇನ್ನಷ್ಟು ಗಟ್ಟಿಯಾಗಿ ಅಂಟಿಕೊಳ್ಳುವ ಸಾಧ್ಯತೆ ಹೆಚ್ಚು. ಸಹೋದ್ಯೋಗಿಗಳೊಂದಿಗೆ ಬೆರೆತು ಒಂದಷ್ಟು ಸುಖ ದುಃಖ ಹಂಚಿಕೊಂಡು ಹಗುರಾಗುವ ಜೊತೆಗೆ ಹೊಸತನ್ನು ಕಲಿಯುವ ಅವಕಾಶವೂ ಇಲ್ಲವಾಗುತ್ತದೆ. ಸಮಯದ ಸರಿಯಾದ ನಿರ್ವಹಣೆ ಸಾಧ್ಯವಾಗದೇ ಹೋದಲ್ಲಿ ಮಹಿಳೆಯರಲ್ಲಿ ಮಾನಸಿಕ ಒತ್ತಡ ಹೆಚ್ಚುವ ಸಾಧ್ಯತೆಯೂ ಇದೆ.

ಸದ್ಯಕ್ಕೆ, ಮನೆಯಿಂದಲೇ ಕೆಲಸ ಮಾಡಿದರೂ ವಾರಕ್ಕೆ ಒಂದೆರಡು ದಿನ ಅಗತ್ಯವಿದ್ದಾಗ ಕಚೇರಿಯಲ್ಲಿ ಕೆಲಸ ಮಾಡುವ 'ಹೈಬ್ರಿಡ್ ವಿಧಾನ' ಉತ್ತಮ ಪರಿಹಾರ. ಈ ವಿಧಾನದಲ್ಲೂ ಶಿಸ್ತುಬದ್ಧ ದಿನಚರಿ ರೂಢಿಸಿಕೊಂಡು, ಗುಣಮಟ್ಟದ ಕೆಲಸಕ್ಕೆ ಮಹಿಳೆಯರು ಆದ್ಯತೆ ನೀಡಬೇಕು. ಇವೆಲ್ಲದರ ಜತೆ ಮನೆ, ಮಕ್ಕಳು, ಹಿರಿಯರ ಆರೈಕೆಯಲ್ಲಿ ಪುರುಷರ ಸಹಕಾರವೂ ದೊರೆತಲ್ಲಿ ಆಕೆ ಬಹುಪಾತ್ರ ನಿರ್ವಹಣೆಯನ್ನು ಸಮರ್ಥವಾಗಿ, ಸಮಾಧಾನದಿಂದ ನಿಭಾಯಿಸಬಲ್ಲಳು.

ವಾಚಕರ ವಾಣಿ

ವಿಧಾನಸಭೆ ಕಲಾಪ ನೇರ ಪ್ರಸಾರವಾಗಲಿ

ಕೊರೊನಾ ಕಾಲಘಟ್ಟದಲ್ಲಿ ಮಕ್ಕಳು ಆನ್‌ಲೈನ್ ಮೂಲಕ ಪಾಠ ಕೇಳುತ್ತಿದ್ದಾಗ, ಪಾಠ ಮಾಡುವ ಶಿಕ್ಷಕರು ಯಾರು, ಏನು ಪಾಠ ಮಾಡಿದರು, ಹೇಗೆ ಪಾಠ ಮಾಡುತ್ತಿದ್ದಾರೆ, ತಮ್ಮ ಮಕ್ಕಳ ಏಕಾಗ್ರತೆ ಎಂತಹದ್ದೆಂದು ತಿಳಿಯಲು ಪೋಷಕರಿಗೆ ಅವಕಾಶ ಸಿಕ್ಕಿತ್ತು. ಇತ್ತೀಚೆಗೆ ಸೆಮಿನಾರ್‌ಗಳು ಕಡಿಮೆಯಾಗಿ ವೆಬಿನಾರ್ ಇಲ್ಲವೇ ಜೂಮ್ ಮೀಟಿಂಗ್‌ಗಳು ಹೆಚ್ಚುತ್ತಿವೆ. ಈಗಿರುವ ತಂತ್ರಜ್ಞಾನ ಬಳಸಿಕೊಂಡು ಕಲಿಯಲು ಅವಕಾಶವಿರುವ ಕಾಲದಲ್ಲಿ, ಮತ ಹಾಕಿ ಗೆಲ್ಲಿಸಿದ ನಮ್ಮ ಶಾಸಕರು ವಿಧಾನಸಭೆಗಳಲ್ಲಿ ಏನು ಮಾಡುತ್ತಿದ್ದಾರೆ ಎಂಬುದನ್ನು ತಿಳಿದುಕೊಳ್ಳುವ ಹಕ್ಕು ಮತದಾರರಿಗೆ ಇರಬಾರದೇ?

ವಿದ್ಯುನ್ಮಾನ ಮಾಧ್ಯಮಗಳ ಕ್ಯಾಮೆರಾಗಳಿಗೆ ಹಿಂದಿನ ಸರ್ಕಾರ ಹೇರಿದ್ದ ನಿಷೇಧವನ್ನು ಈ ಸರ್ಕಾರವೂ ತೆರವು ಮಾಡದೆ ಹಾಗೆಯೇ ಮುಂದುವರಿಸಿದರೆ ಹೇಗೆ? ಮಾಧ್ಯಮಗಳು ನೇರವಾಗಿ ವಿಧಾನಸಭೆಯ ಕಾರ್ಯಕಲಾಪಗಳನ್ನು ಸೆರೆಹಿಡಿದು ತೋರಿಸುವುದರಿಂದ ಶಾಸಕರ ಕಾರ್ಯವೈಖರಿ ಹಾಗೂ ಅವರ ಜವಾಬ್ದಾರಿ ಹೆಚ್ಚಾಗುತ್ತದೆ. ತಮ್ಮ ಕ್ಷೇತ್ರದ ಸಮಸ್ಯೆಗಳನ್ನು ಯಾವ ಯಾವ ಶಾಸಕರು ಸದನದಲ್ಲಿ ಪ್ರಸ್ತಾಪಿಸಿದರು, ಯಾರು ಸುಮ್ಮನೆ ಕುಳಿತು ಬಂದರೆಂದೂ ತಿಳಿಯಬಹುದು. ನೇರಪ್ರಸಾರವು ಮತದಾರರಿಗೂ ಒಂದು ಪ್ರಜಾಪ್ರಭುತ್ವದ ಪಾಠ. ಆದ್ದರಿಂದ ವಿಧಾನಸಭೆ ಕಲಾಪವನ್ನು ನೇರವಾಗಿ ಪ್ರಸಾರ ಮಾಡಲು ಅನುಕೂಲವಾಗುವಂತೆ ಮಾಧ್ಯಮಗಳ ಕ್ಯಾಮೆರಾಗಳಿಗೆ ಅವಕಾಶ ಇರಲಿ.

ತಾ.ಸಿ.ತಿಮ್ಮಯ್ಯ, ಬೆಂಗಳೂರು

ಕಂಗಾಲಾಗಿದ್ದಾನೆ ರೈತ, ನೆರವಿಗೆ ಧಾವಿಸಿ

ಈ ಬಾರಿ ಮುಂಗಾರು ಸರಿಯಾದ ಸಮಯಕ್ಕೆ ಬಾರದೇ ರೈತರಲ್ಲಿ ಆತಂಕ ಸೃಷ್ಟಿಸಿದೆ. ನಮ್ಮಲ್ಲಿ ಮುಕ್ಕಾಲುಪಾಲು ಜನರು ಮಳೆ ಆಶ್ರಯದಲ್ಲಿ ಬೆಳೆ ಬೆಳೆಯುತ್ತಾರೆ. ಎಲ್ಲರ ಬಳಿಯೂ ಕೊಳವೆಬಾವಿ ವ್ಯವಸ್ಥೆ ಇರುವುದಿಲ್ಲ. ಇಂತಹವರು ಈ ವ್ಯವಸ್ಥೆ ಇರುವವರಿಂದ ಗಂಟೆಗೆ ಇಂತಿಷ್ಟು ರೊಕ್ಕ ಕೊಟ್ಟು ನೀರು ಪಡೆಯುತ್ತಾರೆ. ಇದು, ತಾತ್ಕಾಲಿಕ ಪರಿಹಾರ ಕ್ರಮ. ಮಳೆಗೆ ಸಾಟಿ ಬೇರೊಂದಿಲ್ಲ. ಮಳೆ ಕೊರತೆಯಿಂದ ರೈತ ಕಂಗಾಲಾಗಿ ಮೋಡದ ಕಡೆಗೆ ಮುಖಮಾಡಿ ಕುಳಿತಿದ್ದಾನೆ. ಕೆಲವು ರೈತರು ವ್ಯವಸಾಯ ಸೇವಾ ಸಹಕಾರ ಸಂಘದ ಮೂಲಕ ಅಲ್ಪ ಪ್ರಮಾಣದ ಸಾಲವನ್ನು ಪಡೆದು, ಸರಿಯಾಗಿ ಪಾವತಿಸಲು ಆಗದೆ, ಮತ್ತೆ ಹೊಸದಾಗಿ ಸಾಲವನ್ನು ಪಡೆಯಲಾಗದೆ ಪರದಾಡುವಂತಾಗಿದೆ. ಇಂತಹ ರೈತರ ₹ 50,000ದವರೆಗಿನ ಸಾಲವನ್ನು ಸರ್ಕಾರ ಮನ್ನಾ ಮಾಡಿ, ಹೊಸ ಸಾಲ ಪಡೆಯಲು ಅನುವಾಗಿಸಲಿ.

ಎ.ಎಸ್.ಗೋವಿಂದೇಗೌಡ, ಅರೇನಹಳ್ಳಿ, ಪಿರಿಯಾಪಟ್ಟಣ

ಮೂಲ ಸೌಕರ್ಯ ಕಾಮಗಾರಿಗೆ ತಡೆ ಏಕೆ?

ಬಿಜೆಪಿ ನೇತೃತ್ವದ ಸರ್ಕಾರದ ಅವಧಿಯಲ್ಲಿ ಮಂಜೂರಾಗಿ ಆರಂಭಗೊಂಡಿದ್ದ ಹಾಗೂ ಇನ್ನಷ್ಟೇ ಆರಂಭ ಆಗಬೇಕಿರುವ ಎಲ್ಲಾ ಕಾಮಗಾರಿಗಳನ್ನು ತಡೆಹಿಡಿಯುವಂತೆ ಆರ್ಥಿಕ ಇಲಾಖೆಯು ಸುತ್ತೋಲೆ ಹೊರಡಿಸಿದ್ದು ಸರಿಯಷ್ಟೆ. ಆದರೆ ಈ ಸುತ್ತೋಲೆಯನ್ನೇ ನೆಪವಾಗಿಸಿಕೊಂಡು, ರಾಜ್ಯದ ಜನವಸತಿಯುಳ್ಳ ಪ್ರದೇಶಗಳಲ್ಲಿ ಸ್ಥಳೀಯ ಸಂಸ್ಥೆಗಳಿಂದ ಆರಂಭಗೊಂಡಿದ್ದ ಒಳಚರಂಡಿ, ರಸ್ತೆ ದುರಸ್ತಿ ಕಾಮಗಾರಿಗಳನ್ನು ಅರ್ಧಕ್ಕೇ ಸ್ಥಗಿತಗೊಳಿಸಿದ್ದಾರೆ. ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗಿದೆ. ಅಧಿಕಾರಿಗಳನ್ನು ಈ ಬಗ್ಗೆ ಪ್ರಶ್ನಿಸಿದರೆ, ಸರ್ಕಾರದ ಸುತ್ತೋಲೆ ಕಡೆ ಕೈ ತೋರಿಸಿ ಅಸಹಾಯಕತೆ ವ್ಯಕ್ತಪಡಿಸುತ್ತಿದ್ದಾರೆ.

ಮಳೆ ಹೆಚ್ಚಾಗುವುದಕ್ಕೂ ಮೊದಲು, ಈ ರೀತಿ ಅರ್ಧಕ್ಕೇ ಸ್ಥಗಿತಗೊಂಡಿರುವ ಮೂಲಸೌಕರ್ಯ ಕಾಮಗಾರಿಗಳನ್ನು ಸಾರ್ವಜನಿಕ ಹಿತದೃಷ್ಟಿಯಿಂದ ತುರ್ತಾಗಿ ಆರಂಭಿಸಲು ಸರ್ಕಾರ ಆದೇಶ ಹೊರಡಿಸಲಿ.

ಪುಟ್ಟದಾಸು, ಮಂಡ್ಯ

ವಿರೋಧ ಪಕ್ಷದ ನಾಯಕ ಸ್ಥಾನ: ಮಹತ್ವ ಅರಿಯಿರಿ

ರಾಜ್ಯದ ವಿಧಾನಸಭೆಯ ಇತಿಹಾಸದಲ್ಲಿಯೇ ಬಹುಶಃ ಮೊದಲ ಬಾರಿಗೆ ವಿರೋಧ ಪಕ್ಷದ ನಾಯಕನಿಲ್ಲದೆ ಜಂಟಿ ಅಧಿವೇಶನ ಆರಂಭವಾಗಿದೆ. ಶಾಸನಸಭೆಯಲ್ಲಿ ಮುಖ್ಯಮಂತ್ರಿ ಹುದ್ದೆಗೆ ಎಷ್ಟು ಮಹತ್ವವಿದೆಯೋ ವಿರೋಧ ಪಕ್ಷದ ನಾಯಕನ ಸ್ಥಾನಕ್ಕೂ ಅಷ್ಟೇ ಪ್ರಾಮುಖ್ಯ ಇದೆ. ರಾಷ್ಟ್ರೀಯ ಪಕ್ಷವೊಂದು ಇದನ್ನು ಅರಿಯದೇ ಹೋದುದು ವಿಪರ್ಯಾಸ. ಶಿಸ್ತಿನ ಪಕ್ಷ ಎಂದು ಕರೆದುಕೊಳ್ಳುವ ಬಿಜೆಪಿಯಲ್ಲಿ ಗುಂಪುಗಾರಿಕೆ ವಿಪರೀತಕ್ಕೆ ಹೋಗಿದೆ. ವಿರೋಧ ಪಕ್ಷದ ನಾಯಕನ ಆಯ್ಕೆಯ ಜಗ್ಗಾಟಕ್ಕೆ ಇದೇ ಕಾರಣ. ಪ್ರಜಾಪ್ರಭುತ್ವದಲ್ಲಿ ವಿರೋಧ ಪಕ್ಷಗಳ ಪಾತ್ರ ಬಹಳ ಮಹತ್ವದ್ದು. ಆದರೆ ಈಚಿನ ದಿನಗಳಲ್ಲಿ ವಿರೋಧ ಪಕ್ಷಗಳ ದನಿ ಕಿಮ್ಮತ್ತು ಕಳೆದುಕೊಂಡಿದೆ. ಇದು ಒಳ್ಳೆಯದಲ್ಲ.

ಭೀಮಾಶಂಕರ ದಾದೆಲಿ ಹಳಿಸಗರ, ಶಹಾಪುರ

ಅರ್ಹತೆ, ಬದ್ಧತೆ ಇಲ್ಲದಿದ್ದರೆ...

'ಒಂದು ಮಳೆಗೇ ಮಂಗಳೂರಿನ ಪಂಪ್‌ವೆಲ್ ಸುತ್ತ ಜಲಾವೃತ' ಎಂದು ಡಾ. ಶ್ರೀನಿವಾಸ ಕಕ್ಕಿಲ್ಲಾಯ ಹೇಳಿದ್ದಾರೆ (ಕಿಡಿನುಡಿ, ಜುಲೈ 4). ರಸ್ತೆಯಲ್ಲೇ ನೀರು ಹರಿಯುವಂತೆ ಆಗಿರುವ ಸ್ಥಿತಿ ಮಂಗಳೂರಿಗಷ್ಟೇ ಸೀಮಿತವಾಗಿಲ್ಲ. ರಾಜ್ಯದ ಬಹುತೇಕ ಪಟ್ಟಣ, ನಗರಗಳಲ್ಲಿ ಕೈಗೊಳ್ಳುವ ಕಾಮಗಾರಿಗಳ ಗುಣಮಟ್ಟ ಅದೇ ರೀತಿ ಇದೆ. ಚಿತ್ರದುರ್ಗ ಜಿಲ್ಲೆಯ ಹಿರಿಯೂರು ನಗರದಲ್ಲಿ ಕೈಗೊಂಡಿರುವ ಸಿಮೆಂಟ್ ಕಾಂಕ್ರೀಟ್ ರಸ್ತೆ (ಸಿ.ಸಿ. ರಸ್ತೆ) ಕಾಮಗಾರಿಗಳು ಪೂರ್ಣಗೊಂಡ ಕೆಲವೇ ದಿನಗಳಲ್ಲಿ ಗುಂಡಿ ಬಿದ್ದು, ವಾಹನಗಳಲ್ಲಿ ಅಡ್ಡಾಡುವಾಗ ಮೈ ಮೂಳೆಗಳು ಕಿತ್ತು ಬರುವ ಅನುಭವ ಆಗುತ್ತದೆ. ನಗರದ ಮೂಲಕ ಹಾದು ಹೋಗಿರುವ ವಾಣಿವಿಲಾಸ ಸಾಗರ ಜಲಾಶಯದ ಕಾಲುವೆ ನೀರು ಏಕಾಏಕಿ ನಗರಕ್ಕೆ ನುಗ್ಗಿ ಎರಡು- ಮೂರು ಬಡಾವಣೆಗಳು ಎರಡು ಬಾರಿ ಪೂರ್ಣ ಜಲಾವೃತ ಆದದ್ದೂ ಇದೆ. ಅವಘಡ ಸಂಭವಿಸಿದಾಗ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಮೊಸಳೆ ಕಣ್ಣೀರು ಸುರಿಸಿದ್ದು ಬಿಟ್ಟರೆ ಬೇರೇನೂ ಬದಲಾಗಿಲ್ಲ.

ಸಿ.ಸಿ. ರಸ್ತೆ ಹಾಳಾಗಲು ಪ್ರಮುಖ ಕಾರಣ ಕಳಪೆ ಕಾಮಗಾರಿ. ಸಮಸ್ಯೆ ಏನೆಂದರೆ, ಗುತ್ತಿಗೆದಾರರನ್ನು ಆಯ್ಕೆ ಮಾಡುವವರು, ಕಾಮಗಾರಿಗೆ ಮಂಜೂರಾತಿ ನೀಡುವವರು, ಉಸ್ತುವಾರಿ ನೋಡುವವರು, ಗುಣಮಟ್ಟ ಪರಿಶೀಲನೆ ನಡೆಸುವವರು ಎಲ್ಲರೂ, ಕಕ್ಕಿಲ್ಲಾಯ ಅವರು ಹೇಳಿದಂತೆ, ಅರ್ಹತೆ ಇಲ್ಲದ ಎಂಜಿನಿಯರ್‌ಗಳು, ಬದ್ಧತೆ ಇಲ್ಲದ ಅಧಿಕಾರಿಗಳು, ಕಮಿಷನ್‌ಗೆ ಬಾಯಿ ತೆರೆಯುವ ಜನಪ್ರತಿನಿಧಿಗಳು. ಕುರಿ ರಕ್ಷಣೆಗೆ ತೋಳಗಳನ್ನೇ ನೇಮಿಸಿದಂತೆ ಇದೆ ನಮ್ಮ (ಅ)ವ್ಯವಸ್ಥೆ.

ಪ್ರೊ. ಎಂ.ಜಿ.ರಂಗಸ್ವಾಮಿ, ಹಿರಿಯೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಕ್ರಿಕೆಟ್: ವೆಸ್ಟ್ ಇಂಡೀಸ್ ಅವನತಿಗೆ ಕಾರಣವೇನು?



ಈ ಬಾರಿಯ ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಗೆ ಅರ್ಹತೆ ಪಡೆಯುವಲ್ಲಿಯೇ ವೆಸ್ಟ್ ಇಂಡೀಸ್ ವಿಫಲವಾಗಿದೆ. ಕ್ರಿಕೆಟ್‌ನ ಜನಕ ಇಂಗ್ಲೆಂಡ್ ಅನ್ನೂ ಬದಿಗೊತ್ತಿ ಮೊದಲ ಎರಡು ವಿಶ್ವಕಪ್‌ಗಳನ್ನು ಗೆದ್ದುಕೊಂಡಿದ್ದ ವೆಸ್ಟ್‌ಇಂಡೀಸ್, ವಿಶ್ವಕಪ್ ಟೂರ್ನಿಗೆ ಅರ್ಹತೆ ಪಡೆಯದೇ ಇರುವುದು ಮತ್ತು ಹೊರಗೆ ಉಳಿದದ್ದು ಇದೇ ಮೊದಲು. ವೆಸ್ಟ್ ಇಂಡೀಸ್ ಕ್ರಿಕೆಟ್ ತಂಡದ ಆಟಗಾರರು ಪಂದ್ಯ ಗೆಲ್ಲುವಂತಹ ಆಟ ಆಡಲಿಲ್ಲ ಎಂದು ಇದನ್ನು ಸರಳವಾಗಿ ವಿವರಿಸಬಹುದಾದರೂ, ಅಂತಹ ಆಟದ ಹಿಂದೆ ಸಾಮಾಜಿಕ–ಆರ್ಥಿಕ ಕಾರಣಗಳೂ ಇವೆ. ವೆಸ್ಟ್ ಇಂಡೀಸ್ ಕ್ರಿಕೆಟ್‌ನ ಹತ್ತಾರು ವರ್ಷಗಳ ಪತನದ ಹಾದಿಯ ಒಂದು ಅಧ್ಯಾಯವಷ್ಟೇ ಈ ಸೋಲು

1975ರ ವಿಶ್ವಕಪ್‌ನಲ್ಲಿ ವೆಸ್ಟ್ ಇಂಡೀಸ್ ಗೆಲವು ಸಾಧಿಸಿತ್ತು

1979ರ ವಿಶ್ವಕಪ್‌ನಲ್ಲೂ ವೆಸ್ಟ್ ಇಂಡೀಸ್ ಗೆಲವು ಸಾಧಿಸಿತ್ತು

1983ರ ವಿಶ್ವಕಪ್‌ನಲ್ಲಿ ಫೈನಲ್ ಪ್ರವೇಶಿಸಿತ್ತಾದರೂ, ಭಾರತದ ಎದುರು ಸೋಲುಕಂಡಿತ್ತು

ಪ್ರಜಾವಾಣಿ ವಾರ್ತೆ

ಈ ಬಾರಿಯ ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಗೆ ನಡೆದ ಅರ್ಹತಾ ಸುತ್ತಿನ ಪಂದ್ಯದಲ್ಲಿ ಸ್ಕಾಟ್ಲೆಂಡ್ ಎದುರು ಸೋತಾಗಲೇ, ಟೂರ್ನಿಗೆ ವೆಸ್ಟ್ ಇಂಡೀಸ್‌ನ ಬಾಗಿಲು ಮುಚ್ಚುವ ಪ್ರಕ್ರಿಯೆ ಆರಂಭ ಆಗಿತ್ತು. ಇನ್ನೂ ಎರಡು ಪಂದ್ಯಗಳಿವೆಯಾದರೂ, ಅವುಗಳಲ್ಲಿಯೂ ವೆಸ್ಟ್ ಇಂಡೀಸ್ ತಂಡವು ಗೆಲುವು ಸಾಧಿಸುವುದು ಕಷ್ಟ ಸಾಧ್ಯ ಎಂದೇ ಹೇಳಲಾಗಿತ್ತು. ಟೂರ್ನಿಗೆ ಪ್ರವೇಶ ಪಡೆಯುವ ಕನಸು ನುಚ್ಚುನೂರಾದ ಬೆನ್ನಲ್ಲೇ, ತಂಡದ ಅಭಿಮಾನಿಗಳು ಕ್ರೀಡಾಂಗಣದಲ್ಲಿಯೇ ಕಣ್ಣೀರಿಟ್ಟಿದ್ದರು. ವೆಸ್ಟ್ ಇಂಡೀಸ್ ಕ್ರಿಕೆಟ್ ತಂಡಕ್ಕೆ ಈ ಗತಿ ಬಂದದ್ದು ಏಕೆ ಎಂಬ ಚರ್ಚೆ ಈಗ ಬಿರುಸು ಪಡೆದಿದೆ. ಇಂತಹ ಪತನ ಎರಡು ದಶಕಗಳ ಹಿಂದೆಯೇ ಆರಂಭವಾಗಿತ್ತು ಎಂದು ತಂಡದ ಮಾಜಿ ಆಟಗಾರರು, ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

20–20 ಪಂದ್ಯಗಳ ಆರಂಭದ ನಂತರ, ಏಕದಿನ ಕ್ರಿಕೆಟ್‌ನಲ್ಲಿ ವೆಸ್ಟ್ ಇಂಡೀಸ್‌ನ ಪತನ ಆರಂಭವಾಯಿತು ಎಂದು ಪ್ರತಿಪಾದಿಸಲಾಗುತ್ತಿದೆ. ಈ ಬಾರಿಯ ವಿಶ್ವಕಪ್ ಅರ್ಹತಾ ಪಂದ್ಯದಲ್ಲಿ ವೆಸ್ಟ್ ಇಂಡೀಸ್ ತಂಡದಲ್ಲಿ ಹಲವು ಪ್ರಮುಖ ಆಟಗಾರರೇ ಇರಲಿಲ್ಲ. ಕೆಲವು ಆಟಗಾರರು ಎರಡು ವರ್ಷಗಳಿಂದ ತಂಡದಲ್ಲಿ ಆಟವಾಡಿಲ್ಲ. ಇನ್ನೂ ಕೆಲವರು ಅರ್ಹತಾ ಪಂದ್ಯಗಳಲ್ಲಿ ತಂಡವನ್ನು ಪ್ರತಿನಿಧಿಸಲು ನಿರಾಕರಿಸಿದರು ಎಂದು ತಂಡದ ಕೋಚ್ ಡ್ಯಾರೆನ್ ಸಮಿ ಹೇಳಿದ್ದರು. ತಂಡದ ಆಟಗಾರರನ್ನು ಒಂದೆಡೆ ಸೇರಿಸಲೂ ವೆಸ್ಟ್ ಇಂಡೀಸ್ ಕ್ರಿಕೆಟ್ ಮಂಡಳಿಗೆ ಸಾಧ್ಯವಾಗಲಿಲ್ಲ ಎಂಬುದರ ಕುರಿತು ಕಟುಟೀಕೆ ವ್ಯಕ್ತವಾಗಿತ್ತು. ವೆಸ್ಟ್ ಇಂಡೀಸ್ ಕ್ರಿಕೆಟ್ ಎಂಬುದು ಬೇರೆಲ್ಲಾ ದೇಶಗಳ ಕ್ರಿಕೆಟ್ ಮಂಡಳಿಗಳಂತೆ ಅಲ್ಲ ಎಂಬುದೂ ಅದರ ಪತನಕ್ಕೆ ಒಂದು ಪ್ರಮುಖ ಕಾರಣ ಎಂದು ಗುರುತಿಸಲಾಗಿದೆ.

ಕ್ರಿಕೆಟ್ ವೆಸ್ಟ್ ಇಂಡೀಸ್ (ಸಿಡಬ್ಲ್ಯುಐ) (ಮೊದಲು ವೆಸ್ಟ್ ಇಂಡೀಸ್ ಕ್ರಿಕೆಟ್ ಮಂಡಳಿ) ಯಾವುದೋ ಒಂದು ದೇಶವನ್ನು ಪ್ರತಿನಿಧಿಸುವ ಕ್ರಿಕೆಟ್ ಮಂಡಳಿ ಅಲ್ಲ. ಕೆರೀಬಿಯನ್ ದ್ವೀಪ ಸಮೂಹದ 13 ದೇಶಗಳನ್ನು ಈ ಮಂಡಳಿ ಪ್ರತಿನಿಧಿಸುತ್ತದೆ ಮತ್ತು ವೆಸ್ಟ್ ಇಂಡೀಸ್ ಎಂಬುದು ದ್ವೀಪರಾಷ್ಟ್ರಗಳ ಒಂದು ಒಕ್ಕೂಟ. 1920ರ ದಶಕದಲ್ಲಿ ಸ್ಥಾಪಿಸಲಾದ ಈ ಮಂಡಳಿ, 1926ರಲ್ಲಿ ಐಸಿಸಿಯ ಮಾನ್ಯತೆ ಪಡೆದಿತ್ತು. ಐಸಿಸಿ ಸದಸ್ಯತ್ವ ಹೊಂದಿರುವ ಅತ್ಯಂತ ಹಳೆಯ ಕ್ರಿಕೆಟ್ ಮಂಡಳಿಗಳಲ್ಲಿ ಸಿಡಬ್ಲ್ಯುಐ ಸಹ ಒಂದು. ದ್ವೀಪರಾಷ್ಟ್ರಗಳಿಂದ ಆಟಗಾರರನ್ನು ಗುರುತಿಸಿ, ಆಯ್ಕೆ ಮಾಡಿ ಕಟ್ಟಿದ್ದ ತಂಡವೇ ಏಕದಿನ ವಿಶ್ವಕಪ್‌ನ ಮೊದಲ ಎರಡು ಸರಣಿಗಳನ್ನು ಗೆದ್ದುಕೊಂಡಿತ್ತು. ಮೂರನೇ ವಿಶ್ವಕಪ್‌ನಲ್ಲಿ ಫೈನಲ್‌ವರೆಗೂ ತಲುಪಿತ್ತು. 1970–80ರ ದಶಕದಲ್ಲಿ ವಿಶ್ವ ಕ್ರಿಕೆಟ್‌ನ ಉತ್ತುಂಗದಲ್ಲಿ ವೆಸ್ಟ್ ಇಂಡೀಸ್ ತಂಡವಿತ್ತು. ಹತ್ತಾರು ದೇಶ ಮತ್ತು ಸಾಂಸ್ಕೃತಿಕ ಭಿನ್ನತೆಯ ಹೊರತಾಗಿಯೂ ಕ್ರಿಕೆಟ್‌ನಲ್ಲಿ ಅಂತಹ ಪಾರಮ್ಯವನ್ನು ಸಾಧಿಸಲು ವೆಸ್ಟ್ ಇಂಡೀಸ್ ತಂಡಕ್ಕೆ ಸಾಧ್ಯವಾಗಿತ್ತು. ಆದರೆ, ಇಂದು ಆ ವೈವಿಧ್ಯವೇ ಆ ತಂಡಕ್ಕೆ ಮಾರಕವಾಗಿದೆ ಎಂದು ವಿಶ್ಲೇಷಿಸಲಾಗಿದೆ.

ಹತ್ತಾರು ಪುಟ್ಟ–ಪುಟ್ಟ ದೇಶಗಳ ಸಮೂಹವಾದ ಕಾರಣ ಅಲ್ಲಿನ ರಾಜಕೀಯ, ಆರ್ಥಿಕ, ಸಾಮಾಜಿಕ ಸ್ಥಿತ್ಯಂತರಗಳು ವೆಸ್ಟ್ ಇಂಡೀಸ್ ಕ್ರಿಕೆಟ್ ಅನ್ನು ಪ್ರಭಾವಿಸಿವೆ. 90ರ ದಶಕದ ನಂತರ ಕೆರೀಬಿಯನ್ ಸಮೂಹದ ಕೆಲವು ದೇಶಗಳು ಆರ್ಥಿಕ ಮುಗ್ಗಟ್ಟು ಅನುಭವಿಸಿದ್ದವು. ಇದರಿಂದ ಕ್ರಿಕೆಟ್‌ಗೆ ಹಣಕಾಸು ಬೆಂಬಲ ಕಡಿಮೆಯಾಯಿತು. ಅದು ಆಟದ ಮೇಲೂ ಪರಿಣಾಮ ಬೀರಿತು. ನಂತರದ ದಿನಗಳಲ್ಲಿ ವೆಸ್ಟ್ ಇಂಡೀಸ್ ಕ್ರಿಕೆಟ್ ಆರ್ಥಿಕ ಮುಗ್ಗಟ್ಟಿನಿಂದ ಪೂರ್ಣ ಪ್ರಮಾಣದಲ್ಲಿ ಚೇತರಿಸಿಕೊಳ್ಳಲೇ ಇಲ್ಲ. ವೆಸ್ಟ್ ಇಂಡೀಸ್ ಕ್ರಿಕೆಟ್‌ನ ಆರ್ಥಿಕ ಮುಗ್ಗಟ್ಟಿಗೆ ತುಸು ಪರಿಹಾರ ಒದಗಿಸಿದ್ದು 20–20 ಕ್ರಿಕೆಟ್. 2008–09ರಲ್ಲಿ ಅಂತಹ ಪಂದ್ಯಗಳನ್ನು ಸಿಡಬ್ಲ್ಯುಐ ಆಯೋಜಿಸಿತ್ತಾದರೂ, ಪ್ರಾಯೋಜಕರ ಸಮಸ್ಯೆಯಿಂದ ಪಂದ್ಯಾವಳಿಗಳನ್ನು ನಿಲ್ಲಿಸಿತ್ತು. ಆದರೆ, ನಡೆದಷ್ಟು ದಿನ ಈ ಪಂದ್ಯಾವಳಿಗಳು ಸಿಡಬ್ಲ್ಯುಐಗೆ ಉತ್ತಮ ಆದಾಯ ತಂದುಕೊಟ್ಟಿತ್ತು. ಇದರಿಂದ ಉತ್ತೇಜನ ಪಡೆದ ಸಿಡಬ್ಲ್ಯುಐ, ಭಾರತದ ಐಪಿಎಲ್‌ನಂತೆ ಸಿಪಿಎಲ್–ಕೆರೀಬಿಯನ್ ಪ್ರೀಮಿಯರ್ ಲೀಗ್ ಅನ್ನು ಆರಂಭಿಸಿತು. 2013ರಲ್ಲಿ ಆರಂಭವಾದ ಸಿಪಿಎಲ್‌ಗೆ ಜಾಗತಿಕ ಮಟ್ಟದಲ್ಲಿ ಪ್ರಾಯೋಜಕತ್ವ ದೊರೆಯಿತು.



ಕೆರೀಬಿಯನ್ ದೇಶಗಳ ಹಲವು ತಂಡಗಳು ಸೃಷ್ಟಿಯಾದವು, ಸಿಪಿಎಲ್ ಜನಪ್ರಿಯತೆ ಹೆಚ್ಚುತ್ತಲೇ ಹೋಯಿತು. ಅಂತರರಾಷ್ಟ್ರೀಯ ಏಕದಿನ ಪಂದ್ಯಗಳಿಗಿಂತ ಸಿಪಿಎಲ್‌ನಲ್ಲಿ ಹೆಚ್ಚು ಆದಾಯವಿದ್ದ ಕಾರಣ ಆಟಗಾರರು, ಅತ್ತಲೇ ಹೆಚ್ಚು ವಾಲಿದರು ಎಂಬ ವಾದವಿದೆ. ಸಿಪಿಎಲ್‌ನ ಜನಪ್ರಿಯತೆ ಜತೆಗೆ, ಕೆರೀಬಿಯನ್ ದೇಶಗಳಲ್ಲಿ 20–20 ಕ್ರಿಕೆಟ್‌ನ ಆಕರ್ಷಣೆ ಹೆಚ್ಚುತ್ತಾ ಹೋಯಿತು. ಸಿಡಬ್ಲ್ಯುಐ ಸಹ 20–20 ಪಂದ್ಯಗಳಿಗೆ ಆದ್ಯತೆ ನೀಡಿತು. ಅಂತರರಾಷ್ಟ್ರೀಯ ಮಟ್ಟದ 20–20 ಪಂದ್ಯಾವಳಿಗಳಲ್ಲಿ, ಐಸಿಸಿಯ 20–20 ವಿಶ್ವಕಪ್‌ನಲ್ಲಿ ವೆಸ್ಟ್ ಇಂಡೀಸ್ ಕ್ರಿಕೆಟ್ ತಂಡ ಉತ್ತಮ ಸಾಧನೆ ತೋರಿತು. ಎರಡು ಬಾರಿ 20–20 ವಿಶ್ವಕಪ್ ಅನ್ನು ವೆಸ್ಟ್ ಇಂಡೀಸ್ ತನ್ನ ಮುಡಿಗೇರಿಸಿಕೊಂಡಿತ್ತು. ಆದರೆ, ಇದರ ಮಧ್ಯೆ ಏಕದಿನ ಕ್ರಿಕೆಟ್ ಮತ್ತು ಟೆಸ್ಟ್ ಕ್ರಿಕೆಟ್ ಸೊರಗಿತು. ಏಕದಿನ ಕ್ರಿಕೆಟ್ ಮತ್ತು ಟೆಸ್ಟ್ ರ‍್ಯಾಂಕಿಂಗ್‌ನಲ್ಲಿ ವೆಸ್ಟ್ ಇಂಡೀಸ್‌ನ ಸ್ಥಾನ ಕುಸಿಯುತ್ತಲೇ ಹೋಯಿತು. ಏಕದಿನ ಕ್ರಿಕೆಟ್‌ನಿಂದ ವೆಸ್ಟ್ ಇಂಡೀಸ್ ಎಷ್ಟು ದೂರ ಸರಿಯಿತೆಂದರೆ, ಈಚಿನ ವರ್ಷಗಳಲ್ಲಿ ವಿಶ್ವದ ಪ್ರಮುಖ ಏಕದಿನ ಕ್ರಿಕೆಟ್ ತಂಡಗಳ ಜತೆಗೆ ವೆಸ್ಟ್ ಇಂಡೀಸ್ ತಂಡವು ಒಂದೇ ಒಂದು ಪಂದ್ಯವನ್ನೂ ಆಡಿಲ್ಲ. ವಿಶ್ವಕಪ್‌ಗೆ ಕೆಲವೇ ತಿಂಗಳುಗಳಿವೆ ಎನ್ನುವಾಗ ಹಲವು ಬದಲಾವಣೆಗೆ ಸಿಡಬ್ಲ್ಯುಐ ಮುಂದಾಯಿತು. ಇದೇ ಫೆಬ್ರುವರಿಯಲ್ಲಿ ನಾಯಕನನ್ನು ಬದಲಿಸಿತು. ಮೇ ತಿಂಗಳಿನಲ್ಲಿ ಕೋಚ್ ಅನ್ನು ಬದಲಿಸಿತು. ಇಂತಹ ಸಿದ್ಧತೆಯೊಂದಿಗೆ ವಿಶ್ವಕಪ್ ಅರ್ಹತಾ ಪಂದ್ಯಾವಳಿಗೆ ವೆಸ್ಟ್ ಇಂಡೀಸ್ ಹೋಗಿತ್ತು.

ಈ ತಂಡದಲ್ಲಿ ಏಕದಿನ ಕ್ರಿಕೆಟ್‌ನ ಅನುಭವಿ ಆಟಗಾರರೇ ಇರಲಿಲ್ಲ. ಅನುಭವಿ ಆಟಗಾರರಲ್ಲಿ ಬಹತೇಕರು ಸಿಪಿಎಲ್ ತಂಡಗಳ ತರಬೇತಿ ಪಂದ್ಯಗಳಲ್ಲಿ ಆಡುತ್ತಿದ್ದರು. ಇನ್ನೂ ಕೆಲವರು ತಮ್ಮ ಸಿಪಿಎಲ್ ಸಿದ್ಧತೆಗೆ ಸಮಯಾವಕಾಶ ದೊರೆಯುವುದಿಲ್ಲ ಎಂದು ಹೇಳಿದರು. ಮತ್ತೂ ಕೆಲವರು ತಾವು ಪ್ರತಿನಿಧಿಸುವ ದೇಶಗಳ ಕ್ಲಬ್ ಕ್ರಿಕೆಟ್‌ನಲ್ಲಿ ವ್ಯಸ್ತರಾಗಿದ್ದರು. ಇಂತಹ ತಂಡವು, ಮೊದಲ ಮೂರೂ ಪಂದ್ಯಗಳಲ್ಲಿ ಸೋಲುಕಂಡಿತು ಮತ್ತು ಅರ್ಹತೆ ಪಡೆಯುವಲ್ಲಿ ವಿಫಲವಾಯಿತು. ಈ ಎಲ್ಲಾ ಸಮಸ್ಯೆಗಳನ್ನು ಪರಿಹರಿಸದಿದ್ದರೆ ಏಕದಿನ ಕ್ರಿಕೆಟ್‌ನಲ್ಲಿ ವೆಸ್ಟ್ ಇಂಡೀಸ್ ಪಾರಮ್ಯ ಸಾಧಿಸುವುದು ಕನಸಿನ ಮಾತೇ ಸರಿ ಎಂದು ಹೇಳಿದ್ದಾರೆ ತಂಡದ ಮಾಜಿ ಆಟಗಾರ ಇಯಾನ್ ಬಿಷಪ್.

‘ಮಂಡಳಿಯದ್ದೇ ಸಮಸ್ಯೆ’

‘ಈ ಕೂಡಲೇ ವೆಸ್ಟ್ ಇಂಡೀಸ್ ಕ್ರಿಕೆಟ್ ಮಂಡಳಿಯನ್ನು (ಡಬ್ಲ್ಯುಐಸಿಬಿ) ವಿಸರ್ಜಿಸಿ, ಮಧ್ಯಂತರ ಮಂಡಳಿಯನ್ನು ಸ್ಥಾಪಿಸಿ’.

‘ಡಬ್ಲ್ಯುಐಸಿಬಿ ಆಡಳಿತವು ಪಾರದರ್ಶಕವಾಗಿ, ಜವಾಬ್ದಾರಿಯುತವಾಗಿ ಇಲ್ಲ. ಜೊತೆಗೆ, ಆಧುನಿಕ ಕ್ರಿಕೆಟ್ ವಾತಾವರಣಕ್ಕೆ ಪೂರಕವಾಗಿ ಈ ಮಂಡಳಿ ಕೆಲಸ ಮಾಡುತ್ತಿಲ್ಲ. ಆದ್ದರಿಂದ ಡಬ್ಲ್ಯುಐಸಿಬಿ ಅನ್ನು ವಿಸರ್ಜಿಸುವುದು ಮೂಲಭೂತವಾಗಿ ಆಗಬೇಕಿರುವ ಬದಲಾವಣೆ’.



ಕೆರೀಬಿಯನ್ ದೇಶಗಳ ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ಕ್ರೀಡಾ ಒಕ್ಕೂಟವಾದ ‘ಕ್ಯಾರಿಕಾಮ್’, 2015ರಲ್ಲಿ ನೀಡಿದ್ದ ವರದಿಯಲ್ಲಿ ಮಾಡಿದ್ದ ಶಿಫಾರಸುಗಳು. ಮಂಡಳಿಯ ಆಡಳಿತ ಮತ್ತು ಆಡಳಿತಾತ್ಮಕ ವ್ಯವಸ್ಥೆಯ ಕುರಿತು ಅಧ್ಯಯನ ನಡೆಸಿ ವರದಿ ನೀಡುವಂತೆ ವೆಸ್ಟ್ ಇಂಡೀಸ್ ಸದಸ್ಯ ರಾಷ್ಟ್ರಗಳ ಪ್ರಧಾನಿಗಳ ಸಮಿತಿಯು ಈ ಒಕ್ಕೂಟಕ್ಕೆ ಸೂಚಿಸಿತ್ತು.

ಕ್ಯಾರಿಕಾಮ್ ತನ್ನ ವರದಿ ನೀಡುವುದಕ್ಕೂ ಮೊದಲ ಕೆಲವು ವರ್ಷಗಳಲ್ಲಿ ವೆಸ್ಟ್ ಇಂಡೀಸ್ ಕ್ರಿಕೆಟ್‌ನಲ್ಲಿ ಹಲವು ಪ್ರಮುಖ ವಿದ್ಯಮಾನಗಳು ನಡೆದಿದ್ದವು. ತಂಡದ ಪ್ರಮುಖ ಆಟಗಾರರು, ಕ್ರಿಕೆಟ್‌ನ ದಂತಕಥೆ ಎನ್ನಲಾಗುವ ವೆಸ್ಟ್ ಇಂಡೀಸ್‌ನ ಹಿರಿಯ ಆಟಗಾರರು ಮಂಡಳಿಯ ಆಡಳಿತದ ಕುರಿತು, ದೇಶದಲ್ಲಿನ ಕ್ರಿಕೆಟ್ ಸ್ಥಿತಿಗತಿಗಳ ಕುರಿತು ಹಲವು ತೀಕ್ಷ್ಣ ಪ್ರತಿಕ್ರಿಯೆಗಳನ್ನು ನೀಡಿದ್ದರು.

‘ಹಲವು ದಶಕಗಳ ಕಾಲ ಶ್ರಮವಹಿಸಿ ವೆಸ್ಟ್ ಇಂಡೀಸ್ ಕ್ರಿಕೆಟ್‌ಗೆ ಗೌರವ ತಂದುಕೊಟ್ಟಿದ್ದೆವು. ಆದರೆ, ಸೂಕ್ತ ಆಡಳಿತ ಇಲ್ಲದ ಕಾರಣ ಕ್ರಿಕೆಟ್ ತಂಡವು ಸತತವಾಗಿ ಸೋಲುಣ್ಣುತ್ತಿದೆ. ಇದು ಬೇಸರದ ಸಂಗತಿ. ಆದ್ದರಿಂದ, ಮಂಡಳಿಯ ಆಡಳಿತವು ಸರಿ ಹೋಗಬೇಕು. ಅದಕ್ಕಾಗಿ ಪಿ.ಜೆ. ಪ್ಯಾಟರ್‌ಸನ್ ಅವರು ನೀಡಿದ ವರದಿಯ (2007) ಶಿಫಾರಸುಗಳನ್ನು ಜಾರಿಗೊಳಿಸಿ’ ಎಂದು ಹಲವು ಹಿರಿಯ ಕ್ರಿಕೆಟ್ ಆಟಗಾರರು ಹಲವು ವರ್ಷಗಳಿಂದ ಒತ್ತಾಯಿಸುತ್ತಿದ್ದಾರೆ. ಆಟಗಾರರೊಂದಿಗೆ ಮಂಡಳಿಯು ವರ್ತಿಸುವ ರೀತಿ, ಪಂದ್ಯಾವಳಿಗಳಿಗೆ ಆಟಗಾರರ ಪಟ್ಟಿಯನ್ನು ಅಂತಿಮಗೊಳಿಸುವಲ್ಲಿ ಅನುಸರಿಸಲಾಗುತ್ತಿರುವ ಮಾನದಂಡ, ಆಟಗಾರರನ್ನು ಗೌರವದಿಂದ ನಡೆಸಿಕೊಳ್ಳದಿರುವುದು, ಸಂಬಳ ನೀಡುವಲ್ಲಿನ ಸಮಸ್ಯೆ ಹೀಗೆ ಹಲವಾರು ಸಮಸ್ಯೆಗಳ ಕಾರಣದಿಂದ ವೆಸ್ಟ್ ಇಂಡೀಸ್ ಆಟಗಾರರು ಕೆರೀಬಿಯನ್ ಕ್ರಿಕೆಟ್ ಲೀಗ್‌ನಲ್ಲಿ ಭಾಗವಹಿಸಬೇಕಾಗಿ ಬರುತ್ತಿದೆ ಎನ್ನುವ ವಾದವೂ ಇದೆ. ಈ ಹಲವಾರು ಸಮಸ್ಯೆಗಳಿಗೆ ಸುಮಾರು ಎರಡು ದಶಕಗಳ ಇತಿಹಾಸವೂ ಇದೆ.

ಈ ಎಲ್ಲ ಸಮಸ್ಯೆಗಳ ಮೂಲ ಖುದ್ದು ಮಂಡಳಿಯೇ ಎನ್ನುವುದು ‘ಕ್ಯಾರಿಕಾಮ್’ನ ದೃಢ ಅಭಿಪ್ರಾಯ. ಮಂಡಳಿಯ ಕಾರ್ಯವಿಧಾನವೇ ಇದಕ್ಕೆ ಪ್ರಮುಖ ಕಾರಣ. ಹಾಗಾದರೆ, ಕ್ಯಾರಿಕಾಮ್‌ನ ವರದಿಯಲ್ಲೇನಿದೆ?

- ಮಂಡಳಿಯಲ್ಲಿ ಆರು ಪ್ರಾದೇಶಿಕ ಮಂಡಳಿಗಳು, ಹಿರಿಯ ಆಟಗಾರರ ಸಂಸ್ಥೆ, ಸರ್ಕಾರಗಳು ಹೀಗೆ ನಾನಾ ಭಾಗೀದಾರರು ಇದ್ದಾರೆ. ಆದರೆ, ಇಡೀ ಮಂಡಳಿಯು ಪ್ರಾಯೋಜಕರಿಗೆ ಮಾತ್ರವೇ ಜವಾಬ್ದಾರವಾಗಿದೆ
- ಮಹಿಳೆ ಹಾಗೂ ಪುರುಷರ ಕ್ರಿಕೆಟ್ ಕುರಿತು ಮಂಡಳಿಗೆ ದೂರಗಾಮಿ ದೃಷ್ಟಿಕೋನವೇ ಇಲ್ಲ. ಕ್ರಿಕೆಟ್ ಅಕಾಡೆಮಿಗಳು, ಕೆರೀಬಿಯನ್ ದೇಶಗಳ ಶಾಲೆಗಳಲ್ಲಿ ಕ್ರಿಕೆಟ್ ಆಡುವುದರ ಕುರಿತು, ಕ್ರೀಡಾ ಮನೋವಿಜ್ಞಾನಿಗಳು, ತಜ್ಞ ಕೋಚ್‌ಗಳನ್ನು ಬಳಸಿಕೊಳ್ಳುವ ಕುರಿತು ಯಾವುದೇ ಯೋಜನೆ ಇಲ್ಲ

ಆಧುನಿಕ ಕ್ರಿಕೆಟ್‌ನ ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಸತ್ಯಗಳನ್ನು ಮನಗಾಣಲು ಮಂಡಳಿಯ ಆಡಳಿತ ವ್ಯವಸ್ಥೆಯು ಪೂರಕವಾಗಿಲ್ಲ. ಅರಾಜಕ ಹಾಗೂ ಅನುತ್ಪಾದಕ ಆಡಳಿತ ವ್ಯವಸ್ಥೆಯು ವೆಸ್ಟ್ ಇಂಡೀಸ್ ಕ್ರಿಕೆಟ್ ಅನ್ನು ಇನ್ನಷ್ಟು ಬಡವಾಗುವಂತೆ ಮಾಡಿದೆ. ಮಂಡಳಿಯ ಕಾರ್ಯನಿರ್ವಾಹಕ, ವ್ಯವಸ್ಥಾಪಕ ಮತ್ತು ಆಡಳಿತಾತ್ಮಕ ವ್ಯವಸ್ಥೆಯ ಕಾರ್ಯವೈಖರಿ ಸಮರ್ಥವಾಗಿಲ್ಲ. ಆದ್ದರಿಂದಲೇ ವೆಸ್ಟ್ ಇಂಡೀಸ್ ಕ್ರಿಕೆಟ್ ಸತತ ಸೋಲಿನಿಂದ ಬಳಲುತ್ತಿದೆ ಎನ್ನುವುದು ಕ್ಯಾರಿಕಾಮ್ ಅಭಿಪ್ರಾಯವಾಗಿತ್ತು. ಇದೂವರೆಗೂ ಕ್ಯಾರಿಕಾಮ್‌ನ ಶಿಫಾರಸುಗಳನ್ನಾಗಲಿ, ಪಿ.ಜೆ. ಪ್ಯಾಟರ್‌ಸನ್ ಅವರ ವರದಿಯ ಶಿಫಾರಸುಗಳನ್ನಾಗಲಿ ಮಂಡಳಿಯು ಪೂರ್ಣಪ್ರಮಾಣದಲ್ಲಿ ಜಾರಿಗೆ ತಂದಿಲ್ಲ.

ಆಧಾರ: ಎಎಫ್‌ಪಿ, ರಾಯಿಟರ್ಸ್, ಪಿಟಿಐ, ಕ್ಯಾರಿಕಾಮ್ ವರದಿ, ಪಿ.ಜೆ.ಪ್ಯಾಟರ್‌ಸನ್ ಸಮಿತಿ ವರದಿ



‘ತೋತಾಪುರಿ- 2’ ಚಿತ್ರದಲ್ಲಿ ಡಾಲಿ ಧನಂಜಯ್

ಜಗ್ಗೇಶ್, ಡಾಲಿ ಧನಂಜಯ್ ನಟನೆಯ ‘ತೋತಾಪುರಿ–2’ ಚಿತ್ರದ ಮೊದಲ ಪೋಸ್ಟರ್ ಬಿಡುಗಡೆಗೊಂಡಿದೆ. ‘ತೋತಾಪುರಿ’ ಚಿತ್ರದಲ್ಲಿ ವಿಶೇಷ ಪಾತ್ರದಲ್ಲಿ ಕಾಣಿಸಿಕೊಂಡಿದ್ದ ಧನಂಜಯ್, ಈ ಚಿತ್ರದಲ್ಲಿ ಪೂರ್ಣ ಪ್ರಮಾಣದ ನಾಯಕರಾಗಿರುತ್ತಾರೆ.

‘ಜಗತ್ತೇ ಒಂದು ಮನೆ, ನಾವೆಲ್ಲ ಒಂದೇ ಸೂರಿನಡಿ ಬದುಕುತ್ತಿರುವವರು ಎನ್ನುವ ಭಾವೈಕ್ಯದ ಸಂದೇಶ ಸಾರುವ ಚಿತ್ರದ ಎರಡನೇ ಭಾಗವೇ ನಿಜವಾದ ಸಿನಿಮಾ’ ಎಂದು ನಟ ಜಗ್ಗೇಶ್ ಈ ಹಿಂದೆ ಹೇಳಿದ್ದರು.

ವಿಜಯಪ್ರಸಾದ್ ನಿರ್ದೇಶನದ ಚಿತ್ರದಲ್ಲಿ ನವರಸ ನಾಯಕ ಜಗ್ಗೇಶ್, ಅದಿತಿ ಪ್ರಭುದೇವ ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ. ಶಿವಲಿಂಗ ಖ್ಯಾತಿಯ ನಿರ್ಮಾಪಕ ಕೆ.ಎ.ಸುರೇಶ್ ಬಂಡವಾಳ ಹೂಡಿದ್ದಾರೆ.


‘ಮೊದಲ ಭಾಗಕ್ಕಿಂತ ಹೆಚ್ಚಿನ ನಿರೀಕ್ಷೆಯನ್ನು ಹುಟ್ಟುಹಾಕಿದೆ. ಡಾಲಿ ಅಭಿಮಾನಿಗಳಿಗಂತೂ ಹಬ್ಬ. ಚಿತ್ರದ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ನಡೆಯುತ್ತಿದ್ದು, ಸದ್ಯದಲ್ಲೇ ಬಿಡುಗಡೆ ದಿನಾಂಕ ಘೋಷಿಸುತ್ತೇವೆ’ ಎಂದು ಚಿತ್ರದ ನಿರ್ಮಾಪಕ ಕೆ.ಎ.ಸುರೇಶ್ ಹೇಳಿದ್ದಾರೆ.

ದತ್ತಣ್ಣ, ಸುಮನ ರಂಗನಾಥ್, ಅದಿತಿ ಪ್ರಭುದೇವ, ವೀಣಾ ಸುಂದರ್ ಮೊದಲಾದವರು ಚಿತ್ರದಲ್ಲಿದ್ದಾರೆ. ❖

‘ವಜ್ರಮುನಿ’ಯಾದ ಕೋಮಲ್

ಸೆನ್ಸೇಷನಲ್ ಸ್ಟಾರ್ ಕೋಮಲ್ ‘ಯಲಾಕುನ್ನಿ’ ಎನ್ನುತ್ತಾ ‘ವಜ್ರಮುನಿ’ಯಾಗಿ ತೆರೆಗೆ ಬರಲು ಸಜ್ಜಾಗುತ್ತಿದ್ದಾರೆ. ಸೌಭಾಗ್ಯ ಸಿನಿಮಾಸ್ ಲಾಂಛನದಲ್ಲಿ ಮಹೇಶ್ ಗೌಡ ಅವರು ನಿರ್ಮಿಸುತ್ತಿರುವ ಹಾಗೂ ಎನ್. ಆರ್. ಪ್ರದೀಪ್ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶಿಸುತ್ತಿರುವ ‘ಯಲಾಕುನ್ನಿ’ ಚಿತ್ರದ ಫಸ್ಟ್ ಲುಕ್ ಬಿಡುಗಡೆಯಾಗಿದೆ.

ನಟ ಕೋಮಲ್ ಕುಮಾರ್ ಅವರ ಜನ್ಮದಿನದಂದೇ ಈ ಲುಕ್ ಬಿಡುಗಡೆಯಾಗಿದ್ದು, ಕೋಮಲ್ ಅವರು ನಟ ದಿವಂಗತ ವಜ್ರಮುನಿ ಅವರ ಗೆಟಪ್‌ನಲ್ಲಿ ಕಾಣಿಸಿಕೊಂಡಿದ್ದಾರೆ. ‘ಯಲಾಕುನ್ನಿ’ ಚಿತ್ರದಲ್ಲಿ ಕೋಮಲ್ ಅವರು ಬಹುಭಾಗ ‘ವಜ್ರಮುನಿ’ ಅವರ ಗೆಟಪ್‌ನಲ್ಲೇ ಕಾಣಿಸಿಕೊಳ್ಳಲಿದ್ದಾರೆ.



‘ಮೇರಾ ನಾಮ್ ವಜ್ರಮುನಿ’ ಎಂಬ ಅಡಿಬರಹ ಹಾಗೂ ‘ನರಕ ತುಂಬಿ ಮರಳಿ ಬಂದ ರಾಮನ ಗುಣದ ರಾವಣ’ ಎಂಬ ಬರಹ ಪೋಸ್ಟರ್‌ನಲ್ಲಿದ್ದು, ಇದು ಚಿತ್ರದ ಬಗ್ಗೆ ಕುತೂಹಲ ಹೆಚ್ಚಿಸಿದೆ. ನವರಸ ನಾಯಕ ಜಗ್ಗೇಶ್ ಅವರ ಮಗ ಯತಿರಾಜ್ ಮತ್ತು ವಜ್ರಮುನಿ ಅವರ ಮೊಮ್ಮಗ ಆಕರ್ಶ್ ಕೂಡ ಈ ಚಿತ್ರದಲ್ಲಿ ಅಭಿನಯಿಸುತ್ತಿದ್ದಾರೆ ಎಂದು ಚಿತ್ರತಂಡ ಮಾಹಿತಿ ನೀಡಿದೆ. ❖

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

✗ **ಮುಸ್ಲಿಂ** ವ್ಯಕ್ತಿಗಳು ಹುಂಡಿಯೊಂದನ್ನು ತೆಗೆದು, ಅದರಲ್ಲಿರುವ ಹಣವನ್ನು ಚೀಲದಲ್ಲಿ ತುಂಬಿಕೊಂಡು, ಮಸೀದಿಯೊಂದರ ಪ್ರಾಂಗಣದಲ್ಲಿ ಸುರಿಯುತ್ತಿರುವ ಹಾಗೂ ಮಕ್ಕಳೂ ಸೇರಿದಂತೆ ಹಲವರು ಹಾಗೆ ಸುರಿದ ಹಣವನ್ನು ಎಣಿಸುತ್ತಿರುವ ವಿಡಿಯೊವೊಂದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ‘ನಮ್ಮ ಹಿಂದೂಗಳು ಶಿರಡಿ ಸಾಯಿಬಾಬಾನಿಗೆ ಹಾಕಿದ ಹಣ ಎಲ್ಲಿಗೆ ಹೋಗುತ್ತೆ ಅಂತಾ ನೋಡಿ. ಇನ್ನಾದರೂ ಹಿಂದೂಗಳು ಎಚ್ಚೆತ್ತುಕೊಳ್ಳಿ’ ಹಾಗೂ ‘ಅಯೋಧ್ಯೆಯಲ್ಲಿ ನಿರ್ಮಿಸಲಾಗುತ್ತಿರುವ ರಾಮ ಮಂದಿರಕ್ಕೆ ಶಿರಡಿ ದೇವಸ್ಥಾನವು ದೇಣಿಗೆ ನೀಡುತ್ತಿಲ್ಲ’ ಎಂಬಂಥ ವಿವರಣೆಯನ್ನೂ ಈ ವಿಡಿಯೊಗಳಿಗೆ ನೀಡಲಾಗಿದೆ. ಆದರೆ, ಈ ವಿಡಿಯೊವನ್ನು ತಪ್ಪು ಅರ್ಥ ಬರುವಂತೆ ಬಳಸಿಕೊಳ್ಳಲಾಗುತ್ತಿದೆ.



✓ **ಬಾಂಗ್ಲಾದೇಶದ** ಕಿಶೋರಿಗಂಜ್ ನಗರದ ಮಸೀದಿಯೊಂದರಲ್ಲಿ ವ್ಯಕ್ತಿಗಳು ಹುಂಡಿಯನ್ನು ತೆಗೆಯುತ್ತಿರುವ ದೃಶ್ಯಗಳಿವು. ಈ ವಿಡಿಯೊವನ್ನು ಬಾಂಗ್ಲಾದೇಶದ ವ್ಯಕ್ತಿಯೊಬ್ಬರು 2023ರ ಮೇ 6ರಂದು ಮೊದಲು ಹಂಚಿಕೊಂಡಿದ್ದಾರೆ. ‘ಜಾಗೊ ನ್ಯೂಸ್’ ಎನ್ನುವ ಬಾಂಗ್ಲಾ ವಾಹಿನಿಯೊಂದು ಇದೇ ವಿಡಿಯೊ ಕುರಿತು ‘ಮಸೀದಿ ಹುಂಡಿ ಎಣಿಕೆ’ ಎನ್ನುವ ವರದಿಯೊಂದನ್ನು ಮೇ 6ರಂದೇ ಪ್ರಕಟಿಸಿದೆ. ಇನ್ನು ಹಲವು ಸುದ್ದಿ ವಾಹಿನಿಗಳೂ ಈ ವರದಿ ಪ್ರಕಟಿಸಿವೆ ಎಂದು ‘ಬೂಂ’ ಫ್ಯಾಕ್ಟ್‌ಚೆಕ್ ವರದಿ ಮಾಡಿದೆ. ಈ ಪ್ರಕಾರ, ಈ ವಿಡಿಯೊ ಸಾಯಿಬಾಬಾ ಮಂದಿರದ ಹುಂಡಿಯದ್ದಲ್ಲ ಎಂಬುದು ಸಾಬೀತಾಗಿದೆ. ಆದರೆ ಆ ವಿಡಿಯೊವನ್ನು ಬಳಸಿಕೊಂಡು ಸುಳ್ಳು ಸುದ್ದಿ ಸೃಷ್ಟಿಸಲಾಗಿದೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಬುಧವಾರ ಜುಲೈ 5, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ಗ್ರೀಷ್ಮ ಋತು ತಿಥಿ: ಆಷಾಢ ಕೃಷ್ಣ ದ್ವಿತೀಯ ಗಂ. 10-03, ನಕ್ಷತ್ರ: ಉತ್ತರಾಷಾಢ ಗಂ. 05-40 ನಂತರ ಶ್ರವಣ ಗಂ. 26-56 ಯೋಗ: ವೈಧೃತಿ ಗಂ. 07-47 ನಂತರ ವಿಷ್ಕಂಭ ಗಂ. 27-48 ಕರಣ: ಗರ ಗಂ. 10-03, ಮಿಥುನ ಮಾಸದ 20 ನೇ ದಿನ, ಮಳೆನಕ್ಷತ್ರ: ಆರ್ದ್ರಾ 4.
ರಾಹುಕಾಲ : ಬೆಳಿಗ್ಗೆ 12-00 - 01-30, ಸೂರ್ಯೋದಯ : 06-12 ಸೂರ್ಯಾಸ್ತ : 06-58
ಮುಸ್ಲಿಂ ದಿನಾಂಕ : 16 ಜುಲ್‌ಹಿಜಾ
ಅದೃಷ್ಟ ಸಂಖ್ಯೆ : 6, 3

ಮೇಷ: ಪಾಲಿಗೆ ಬಂದದ್ದನ್ನು ಸಂತೋಷದಿಂದ ಸ್ವೀಕರಿಸಿದಲ್ಲಿ ನಿಮ್ಮ ಅಸ್ತಿತ್ವವು ಮತ್ತು ನೆಮ್ಮದಿಯು ಉಳಿದುಕೊಳ್ಳುವುದು. ನೆಮ್ಮದಿಯ ವಿಷಯವೇನೆಂದರೆ ಧನಾಗಮದಲ್ಲಿ ಚಿಂತೆ ಇರದು. ಕಂಕಣ ಬಲದ ಸಾಧ್ಯತೆ ಇದೆ.

ವೃಶ್ಚಿಕ: ನಾಳೆಯ ನಿಮ್ಮ ಯೋಜನೆಗಳ ಪೂರೈಕೆಗೆ ಸಾಕಷ್ಟು ಸಮಯ ದೊರಕುವಂತೆ ಯೋಜನೆಗಳನ್ನು ಹಾಕಿಕೊಳ್ಳುವುದು ಉತ್ತಮ. ಸೃಜನಶೀಲತೆಯನ್ನು ಪ್ರದರ್ಶಿಸಲು ಬೇಕಾದಷ್ಟು ಅವಕಾಶಗಳು ಒದಗಿ ಬರುವುವು.

ಮಿಥುನ: ಸಂದರ್ಭಕ್ಕನುಗುಣವಾಗಿ ವರ್ತಿಸುವ ತೀರ್ಮಾನ ಅನಿವಾರ್ಯವಾಗುವುದು ಮತ್ತು ಸರಿಯಾಗುವುದು. ದೀರ್ಘಕಾಲಿಕ ಕೆಲಸಗಳು ನಿಧಾನವಾಗಿ ಸಾಗಲಿವೆ. ಶ್ರೀ ಆಂಜನೇಯನ ದರ್ಶನದಿಂದ ಎಲ್ಲಾ ಕಾರ್ಯ ನೆರವೇರುವುದು.

ಕರ್ಕಾಟಕ: ಕಾರ್ಯದೊತ್ತಡದಲ್ಲಿ ಇಂದು ಮನೆಯ ವಿಚಾರಗಳತ್ತ ಗಮನಹರಿಸುವುದು ಮುಖ್ಯವಾಗುವುದು. ಖಾಸಗಿ ಸಂಸ್ಥೆಗಳ ಉದ್ಯೋಗಸ್ಥರಿಗೆ ಉನ್ನತ ಸ್ಥಾನಮಾನ ಪ್ರಾಪ್ತಿಯಾಗಲಿದೆ. ಜೀವನದ ಬಗ್ಗೆ ನಿರುತ್ಸಾಹವನ್ನು ತಾಳದಿರಿ.

ಸಿಂಹ: ಸೂಕ್ಷ್ಮ ವಿಚಾರಗಳಲ್ಲಿ ನಿರ್ಧಾರ ಕೈಗೊಳ್ಳುವಾಗ ಎಚ್ಚರವಹಿಸುವುದು ಉತ್ತಮ. ಶಿಶುವಿನ ಜನನದಿಂದ ಸಂಸಾರದಲ್ಲಿ ಸಂತೋಷ ತುಂಬಿರುತ್ತದೆ. ನೆರೆ-ಹೊರೆಯವರೊಂದಿಗಿನ ಸಂಬಂಧ ಉತ್ತಮಗೊಳ್ಳುವುದು.

ಕನ್ಯಾ: ಆರ್ಥಿಕ ಸ್ಥಿತಿ ಇನ್ನಷ್ಟು ಉತ್ತಮಗೊಳಿಸಿಕೊಳ್ಳುವಂಥಹ ಅವಕಾಶಗಳು ಬರಲಿದೆ. ಬಾಕಿ ಉಳಿದ ಕೆಲಸ ಪೂರ್ತಿಗೊಳಿಸಲು ಈ ದಿನ ಪ್ರಶಸ್ತವಾಗಿದೆ. ಈ ದಿನದ ಕೆಲ ಸಮಯವನ್ನು ಮನರಂಜನೆಗಾಗಿ ಮೀಸಲಿಡಿ.

ತುಲಾ: ಉದ್ಯೋಗ ನಿಮಿತ್ತ ವಿದೇಶ ಪ್ರಯಾಣದ ಸಾಧ್ಯತೆ ಇರುವುದು. ವೃತ್ತಿಯಲ್ಲಿ ಸಮಸ್ಯೆಗಳು ಎದುರಾಗುವ ಪ್ರಸಂಗ ಬಂದರೂ ಧೈರ್ಯದಿಂದ ಎದುರಿಸುವ ಹೋರಾಟವನ್ನು ಮಾಡಿ. ಉತ್ತೇಜನಕಾರಿ ಪ್ರತಿಕ್ರಿಯೆ ಸಿಗಲಿದೆ.

ವೃಶ್ಚಿಕ: ಮಿತ್ರಜನರಿಂದ ಮನಸ್ಸಿಗೆ ನೋವಾಗುವಂಥ ಕೆಲವು ಮಾತುಗಳನ್ನು ಕೇಳಬೇಕಾಗುವುದು. ವೃತ್ತಿ ಬದಲಾವಣೆಯ ಆಲೋಚನೆಯಿಂದ ಯಾವುದೇ ಸಮಸ್ಯೆ ನಿವಾರಣೆ ಆಗುವುದಿಲ್ಲ. ಕಪ್ಪು ಶುಭ ತರುವುದು.

ಧನು: ಸಂಶೋಧಕರರಿಗೆ ಅಧ್ಯಯನಕ್ಕೆ ಅನುಕೂಲಕರವಾದ ಪುಸ್ತಕ ದೊರೆತು ಅನುಕೂಲವುಂಟಾಗುವುದು. ನಿಮ್ಮ ಮೇಲಿದ್ದ ಸಾಲದ ಹೊರೆಯು ಕಡಿಮೆಯಾಗಲಿದೆ. ಖರ್ಚು ವೆಚ್ಚಗಳ ಮೇಲೆ ಬಿಗಿ ಹಿಡಿತ ಸಾಧಿಸಬೇಕಾಗುತ್ತದೆ.

ಮಕರ: ಆಹಾರ ಪದಾರ್ಥ, ಉಕ್ಕು (ಕಬ್ಬಿಣ) ಮುಂತಾದ ಗೃಹ ಬಳಕೆ ಸಾಮಾನುಗಳ ವರ್ತಕರಿಗೆ ದಿನದ ಪೂರ್ವದಲ್ಲಿ ಅಧಿಕ ಲಾಭವಾಗುವುದು. ಈ ದಿನ ಕೆಲಸ ಕಾರ್ಯಗಳಲ್ಲಿ ನಿಮ್ಮ ಪ್ರಯತ್ನಕ್ಕೆ ತಕ್ಕ ಫಲ ದೊರೆಯುತ್ತದೆ.

ಕುಂಭ: ಜೀವನ ಕ್ರಮದಲ್ಲಿ ಬದಲಾವಣೆಗಳನ್ನು ಮಾಡಿಕೊಳ್ಳಬೇಕಾದ ಅನಿವಾರ್ಯತೆ ನಿಮಗಿದೆ. ಸಮಾಜದಲ್ಲಿ ಹೆಸರು ಸಂಪಾದಿಸಲು ಪೂರಕವಾದ ವಾತಾವರಣ ಮೂಡಿ ಬರಲಿದೆ. ತೆಗೆದುಕೊಳ್ಳುವ ನಿರ್ಧಾರ ಸರಿ ಇರುತ್ತದೆ.

ಮೀನ: ಮೇಲಧಿಕಾರಿಗಳ ಅಥವಾ ಹಿರಿಯರಲ್ಲಿ ಮುಖ್ಯವಾದ ವಿಚಾರ ಮಾತನಾಡುವಾಗ ಪರಿಸ್ಥಿತಿಯನ್ನು ತಪ್ಪಾಗಿ ಅರ್ಥೈಸದೆ ಮನದ ಭಾವನೆಯನ್ನು ಸ್ಪಷ್ಟವಾಗಿ ತೆರೆದಿಡಿ. ಆಲೋಚನೆಗಳು ಇತರರ ಮೆಚ್ಚುಗೆಗೆ ಪಾತ್ರವಾಗಲಿದೆ.

ಬೆರಗಿನ ಬೆಳಕು

ಗುರುರಾಜ ಕರಜಗಿ



ಅವಶ್ಯವಾದ ಕೋರಿಕೆ

ಆರಲೆನ್ನಯ ಹೃದಯ ಕರಣಗಳ ಕಾವುಗಳು |
ಸೇರಲೆನ್ನಯ ಜೀವ ವಿಶ್ವಜೀವನದಲಿ ||
ಧಾರುಣಿಯ ಮಡಿಲೆನ್ನಕೊಳಲಿ; ಜಗ ಮರೆತಿರಲಿ |
ಹಾರಯಿಸು ನೀನಿಂತು – ಮಂಕುತಿಮ್ಮ || **920**|

|**ಪದ-ಅರ್ಥ:** ಆರಲೆನ್ನಯ = ಆರಲಿ + ಎನ್ನಯ, ಕಾವುಗಳು = ಬಿಸಿ, ತೀವ್ರತೆಗಳು, ಸೇರಲೆನ್ನಯ = -ಸೇರಲಿ + ಎನ್ನಯ, ಮಡಿಲೆನ್ನಕೊಳಲಿ = ಮಡಿಲು + ಎನ್ನ + ಕೊಳಲಿ, ಹಾರಯಿಸು = ಅಪೇಕ್ಷಿಸು, ಬೇಡಿಕೋ, ನೀನಿಂತು = ನೀನು + ಇಂತು.

ವಾಚ್ಯಾರ್ಥ: ನನ್ನ ಹೃದಯದ, ಕರಣಗಳ ತೀವ್ರತೆಗಳು ಆರಲಿ. ನನ್ನ ಜೀವ ವಿಶ್ವಜೀವನದಲ್ಲಿ ಸೇರಿ ಹೋಗಲಿ. ಭೂಮಿಯ ಮಡಿಲು ನನ್ನನ್ನು ಸೇರಿಸಿಕೊಳ್ಳಲಿ. ಜಗತ್ತು ನನ್ನನ್ನು ಮರೆಯಲಿ. ನೀನು ಹೀಗೆ ಅಪೇಕ್ಷಿಸು.


ವಿವರಣೆ: ಜೀವಕ್ಕೆ ನೂರೆಂಟು ಅಪೇಕ್ಷೆಗಳು. ಮಾನವ ಶರೀರವನ್ನು ಪ್ರವೇಶಿಸಿದ ಜೀವಕ್ಕೆ ಮೊದಲು ಬೇಕಾದದ್ದು ತನ್ನ ಹೊಸ ಇಂದ್ರಿಯಗಳ ಮೂಲಕ ಲಭಿಸಬಹುದಾದ ಸುಖ. ಕೆಲಕಾಲದ ಮೇಲೆ ಆ ಸವಿ ಅಭ್ಯಾಸವಾಗಿ ಏಕತಾನತೆ ಮೂಡುತ್ತದೆ. ನಂತರ ಜೀವ- ಸಿರಿ, ಕೀರ್ತಿ, ಅಧಿಕಾರಗಳಿಗಾಗಿ ಹಾತೊರೆದು ಪ್ರಯತ್ನಿಸಿ ಒದ್ದಾಡುತ್ತದೆ. ಇಲ್ಲಿ ಸ್ಪರ್ಧೆ, ಗಂಡಾಂತರಗಳು ಹೆಚ್ಚು. ಆದ್ದರಿಂದ ಯಶಸ್ಸಿನ ತೃಪ್ತಿಯೂ ಹೆಚ್ಚು. ಕೊನೆಗೆ ಅದರಲ್ಲಿಯೂ ಹೊಸತನ ಕಳೆದು ಹೋಗಿ, ಅದೇ ಹಾರ, ಅದೇ ಶಾಲು, ಅದೇ ಹೊಗಳಿಕೆಯ ಮಾತುಗಳು ಸಾಕು ಎನ್ನಿಸುತ್ತವೆ.ಜೀವಕ್ಕೆ ಈಗ ಹೊಸ ನಿಗೂಢತೆ, ಇನ್ನೂ ಆಳವಾದ ತೃಪ್ತಿ ಬೇಕು ಎನ್ನಿಸುತ್ತದೆ. ಸಮಾಜಸೇವೆ, ಏಕಾಂತ, ಧ್ಯಾನ ಇವು ಕೆಲಕಾಲ ಈ ಅವಶ್ಯಕತೆಯನ್ನು ಪೂರೈಸುತ್ತವೆ. ಆದರೆ ಇತಿಹಾಸದ ಅಪಸವ್ಯಗಳು, ಅಸಂಗತ ವ್ಯಂಗ್ಯವಿಡಂಬನೆಗಳು, ಮನಸ್ಸನ್ನು ಗಾಸಿ ಮಾಡಿ, ನನ್ನಿಂದ ಏನೂ ಸಾಧನೆಯಾಗಲಿಲ್ಲ ಎನ್ನಿಸಿ,ನಿಂತಲ್ಲೇ ಗಿರಕಿ ಹೊಡೆಯುತ್ತಿರುವ ಅನುಭವಕ್ಕೆ ನಮ್ಮನ್ನು ಈಡುಮಾಡುತ್ತವೆ. ಇದಕ್ಕೂ ಮುಂದೆ ಜೀವಕ್ಕೆ ತೃಪ್ತಿ ಕೊಡುವುದು ಎಂದರೆ ಅಗಮ್ಯ, ಅಗ್ರಾಹ್ಯ ಅನಂತತೆ, ಚಿರಂತನತೆ ಮಾತ್ರ. ಇದರ ಸಾಕ್ಷಾತ್ಕಾರವು ಜೀವದ ಎಲ್ಲ ಅನುಭವಗಳನ್ನು - ಕಾಲದ ಅನುಭವವನ್ನು ಸಹ, ಉಜ್ವಲತೆಯನ್ನಾಗಿ ಪರಿವರ್ತಿಸುತ್ತದೆ. ಮಂಜು ಮುಸುಕಿದ ದಾರಿ ಸವೆದು, ಹೊಂಬಿಸಿಲಿನಲ್ಲಿ ಮಿಂದ ಶಿಖರವನ್ನೇರಿ ಕೆಳಗಿರುವ ಮೋಡದ ಸೌಂದರ್ಯವನ್ನು ನೋಡಿದ ಆನಂದ ಉಂಟಾಗುತ್ತದೆ. ಅದು, ಆವಿಯ ಗುಳ್ಳೆ ಕುದಿಕುದಿದು ನೀರಿನ ಮೇಲ್ಮೈ ಹತ್ತಿರ ಬಂದು ವಾತಾವರಣದೊಂದಿಗೆ ಒಡೆದು ಒಂದಾಗಲು ಸಿದ್ಧವಾದಂತಿದೆ. ಪ್ರತಿಯೊಂದು ಜೀವಕ್ಕೂ ಈ ಹಂತ ಬಂದೇ ಬರುತ್ತದೆ. ಆಗ ಭೌತಿಕ ಆಕರ್ಷಣೆಗಳು, ಮರ್ಯಾದೆಗಳು ಬೇಡ ಎನ್ನಿಸುತ್ತವೆ. ಕಗ್ಗದ ಮಾತು, ಈ ಸ್ಥಿತಿಯ ಮನುಷ್ಯನ ಕೋರಿಕೆ. ನನ್ನ ಹೃದಯದ, ಇಂದ್ರಿಯಗಳ ಕಾವು, ತೀವ್ರತೆ ಆರಿಹೋಗಲಿ. ಅವುಗಳಿಂದ ಆಗಬೇಕಾದದ್ದು ಏನೂ ಇಲ್ಲ. ನನ್ನ ಜೀವ ವಿಶೇಷತೆಯನ್ನು ಕಳೆದುಕೊಂಡು ವಿಶ್ವಜೀವನದಲ್ಲಿ ಒಂದಾಗಿ ಹೋಗಲಿ. ನನ್ನನ್ನು ಪೋಷಿಸಿದ ಭೂಮಿಯಲ್ಲಿ ನನ್ನ ದೇಹ ಕರಗಿ ಹೋಗಲಿ. ಜಗತ್ತು ನನ್ನನ್ನು ಮರೆತುಬಿಡಲಿ. ಆ ಹಂತದಲ್ಲಿ, ಇದು ನಮ್ಮ ಕೋರಿಕೆ, ಬೇಡಿಕೆಯಾಗಬೇಕು ಎನ್ನುತ್ತದೆ ಕಗ್ಗ.

ಪದಬಂಧ 5370

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ದೇವರಿಗೆ ಮಾಡಿಸುವ ಮಂಗಳಸ್ನಾನ (4)
3.ಭಾರವನ್ನು ಹೊಂದಿರುವ ತಳಹದಿ (4)
5.ದಿನದೊಳಗೇ ಕಾಣಿಸಿರುವ ಮಂತ್ರಿ (3)
7.ವನದ ಕೊನೆಗೆ ಮಾಡಿದ ಹೋಮ (3)
9.ಮರದಲ್ಲಿರುವ ನವಿಲು (3)
10.ಮಣ ಭಾರ ಹೊತ್ತಿರುವ ನಲ್ಲ (3)
11.ದುಃಖ ಅಥವಾ ಅಳಲು (3)
15.ಮರೀಚಿಕೆ ಇಲ್ಲದೆ (4)
16.ಕೊನೆಗೆ ವಿಕ್ರಯಿಸಿದಾಗ ಅಸಂಬದ್ಧತೆ ಕಂಡಿತಲ್ಲಾ! (4)

ಮೇಲಿಂದ ಕೆಳಕ್ಕೆ
1.ಆದಿಯಿಲ್ಲದದು ಇದು (3)
2.ಹಸುವಿನ ಮರಿ (2)
3.ಸಹಕಾರದ ವಿರುದ್ಧ ಪದ (5)
4.ಮನೋರಥದಲ್ಲಿರುವ ತೇರು (2)
6.ಸಂಗೀತ ಕೃತಿಗಳನ್ನು ರಚಿಸುವವನು (5)
8.ಒಳ್ಳೇತನದ ಸೋಗಿನಲ್ಲಿ ವಂಚನೆ ಮಾಡುವವನು (5)
9.ಸಾಯುವ ಸಮಯವಿದು (5)
12.ಗುಟುರು ಹಾಕುತ್ತಿರುವ ಗಂಡುಕುರಿ (3)
13.ಕಾಡು ಪ್ರಾಣಿ ಉಲ್ಟಾ ನಿಂತಿದೆ (2)
14.ಕೊಡು ಕೊಡು ಎನ್ನುತ್ತಿರುವ ಅಜ್ಜ (2)



5369ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮಿಟಕಲಾಡಿ
4.ಹಂಬಲ 5.ರಜತ 6.ಕರಡಿ
8.ಜನ 9.ಸುಮ
10.ಕನಸು 14.ಭಿಕ್ಷುಕ
15.ಪರೋಕ್ಷ 16.ಏಕವಚನ

ಮೇಲಿಂದ ಕೆಳಕ್ಕೆ:
1.ಮಿಸುನಿ 2.ಕರತಾಡನ
3.ಡಿರಜ 4.ಹಂತಕ
7.ರಧುಮ 8.ಜತನ
9.ಸುರಿಕಗೀಐ
11.ಸುಭಿಕ್ಷ 12.ತೆಕಐ
13.ಸಂತಾನ

ಸುಡೊಕು 5756

	1				5	4		9
4		7	6				5	
	6				8	1		
	2				7			6
5		1		6			2	
			5				1	7
	3	9				6		
6			8		4		3	
		4		3		2		5

5755 ಸುಡೊಕು

3	4	9	1	5	8	2	7	6
2	5	6	4	9	7	8	1	3
1	7	8	3	6	2	4	5	9
5	3	7	2	4	6	9	8	1
8	9	1	7	3	5	6	2	4
4	6	2	8	1	9	7	3	5
6	8	4	5	2	3	1	9	7
7	1	3	9	8	4	5	6	2
9	2	5	6	7	1	3	4	8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಮೆಟಾ ಪ್ಲಾಟ್‌ಫಾರ್ಮ್ಸ್‌ನಿಂದ ಹೊಸ ಸಾಮಾಜಿಕ ಜಾಲತಾಣ ಆರಂಭ

ಟ್ವಿಟರ್‌ಗೆ ಎದುರಾಗಿ 'ಥ್ರೆಡ್ಸ್'

ಲಂಡನ್ (ರಾಯಿಟರ್ಸ್): ಮೆಟಾ ಪ್ಲಾಟ್‌ಫಾರ್ಮ್ಸ್ ಕಂಪನಿಯು ಟ್ವಿಟರ್‌ಗೆ ಸ್ಪರ್ಧೆ ಒಡ್ಡಬಲ್ಲ, 'ಥ್ರೆಡ್ಸ್' ಹೆಸರಿನ ಹೊಸ ಮೈಕ್ರೊಬ್ಲಾಗಿಂಗ್ ಆ್ಯಪ್ ಆರಂಭಿಸಲು ಮುಂದಾಗಿದೆ.

ಟ್ವಿಟರ್ ಬಳಕೆದಾರರು ದಿನಕ್ಕೆ ಇಂತಿಷ್ಟು ಟ್ವೀಟ್‌ಗಳನ್ನು ಮಾತ್ರ ನೋಡಬಹುದು ಎಂಬ ಮಿತಿ ಹೇರಿದ ನಂತರದಲ್ಲಿ ಕಂಪನಿಯ ಮುಖ್ಯಸ್ಥ ಎಲಾನ್ ಮಸ್ಕ್ ಅವರು ವ್ಯಾಪಕ ಟೀಕೆ ಎದುರಿಸುತ್ತಿದ್ದಾರೆ.

ಜನಪ್ರಿಯ ಸಾಮಾಜಿಕ ಜಾಲತಾಣ ಫೇಸ್‌ಬುಕ್‌ನ ಮಾಲೀಕತ್ವ ಹೊಂದಿರುವ ಮೆಟಾ ಕಂಪನಿಯು ಥ್ರೆಡ್ಸ್ ಆ್ಯಪ್‌ಅನ್ನು ಗುರುವಾರ ಬಿಡುಗಡೆ ಮಾಡುವ ನಿರೀಕ್ಷೆ ಇದೆ. ಮೆಟಾ ಕಂಪನಿಗೇ ಸೇರಿರುವ ಇನ್ನೊಂದು ಸಾಮಾಜಿಕ ಜಾಲತಾಣ ಇನ್‌ಸ್ಟಾಗ್ರಾಂನಲ್ಲಿರುವ ಹಿಂಬಾಲಕರನ್ನು ಥ್ರೆಡ್ಸ್ ಆ್ಯಪ್‌ನಲ್ಲಿಯೂ ಉಳಿಸಿಕೊಳ್ಳಲು ಅವಕಾಶ ಇರಲಿದೆ.

ಅಲ್ಲದೆ, ಬಳಕೆದಾರರು ಇನ್‌ಸ್ಟಾಗ್ರಾಂನಲ್ಲಿ ತಾವು ಹೊಂದಿರುವ ಬಳಕೆದಾರರ ಹೆಸರನ್ನೇ (ಯೂಸರ್‌ನೇಮ್) ಥ್ರೆಡ್ಸ್‌ನಲ್ಲಿಯೂ ಉಳಿಸಿಕೊಳ್ಳಬಹುದು.



ಮಸ್ಕ್ ಅವರು 2022ರಲ್ಲಿ ಟ್ವಿಟರ್ ಕಂಪನಿಯನ್ನು ಖರೀದಿಸಿದರು. ಇದಾದ ನಂತರದಲ್ಲಿ ಟ್ವಿಟರ್ ಕಂಪನಿಯು ಹಲವು ಬಗೆಯ ವಿವಾದಗಳಿಗೆ ಈಡಾಗಿದೆ. ಟ್ವಿಟರ್ ಕಂಪನಿಯನ್ನು ಮಸ್ಕ್ ಅವರು ಸ್ವಾಧೀನಕ್ಕೆ ತೆಗೆದುಕೊಂಡ ನಂತರದಲ್ಲಿ, ಅದರ ಪ್ರತಿಸ್ಪರ್ಧಿಗಳಾದ ಮಾಸ್ಟೊಡನ್ ಮತ್ತು ಬ್ಲೂಸ್ಕೈ ಬಳಕೆದಾರರ ಸಂಖ್ಯೆಯು ಹೆಚ್ಚಾಗಿದೆ. ಆದರೂ ಇವು ಟ್ವಿಟರ್‌ಗೆ ಸವಾಲು ಒಡ್ಡುವಂತೆ ಬೆಳೆದಿಲ್ಲ.

ಆದರೆ ಇನ್‌ಸ್ಟಾಗ್ರಾಂ ಈಗಾಗಲೇ ಕೋಟ್ಯಂತರ ಮಂದಿ ಬಳಕೆದಾರರನ್ನು ಹೊಂದಿದೆ. ಅಲ್ಲದೆ, ಬೇರೆ ಸಾಮಾಜಿಕ ಜಾಲತಾಣಗಳಲ್ಲಿ ಜನಪ್ರಿಯತೆ ಪಡೆದ ಸೌಲಭ್ಯಗಳನ್ನು ತನ್ನಲ್ಲಿಯೂ ನೀಡುವ ಪರಿಪಾಠವನ್ನು ಇನ್‌ಸ್ಟಾಗ್ರಾಂ ಬೆಳೆಸಿಕೊಂಡಿದೆ.

ಜಿಆರ್‌ಟಿ ಜುವೆಲರ್ಸ್: ಆಷಾಢದ ಕೊಡುಗೆ

ಬೆಂಗಳೂರು: ಆಷಾಢ ಮಾಸದ ಪ್ರಯುಕ್ತ ಜಿಆರ್‌ಟಿ ಜುವೆಲರ್ಸ್ ಕಂಪನಿಯು ಗ್ರಾಹಕರಿಗೆ ಹೊಸ ಕೊಡುಗೆಗಳನ್ನು ಘೋಷಿಸಿದೆ. ಆಷಾಢ ಮಾಸದಲ್ಲಿ ತನ್ನಲ್ಲಿ ಖರೀದಿಸುವ ಪ್ರತಿ ಉತ್ಪನ್ನದ ಜೊತೆ ಉಡುಗೊರೆ ನೀಡಲಾಗುತ್ತದೆ ಎಂದು ಕಂಪನಿ ತಿಳಿಸಿದೆ.

ಖರೀದಿಸುವ ಉತ್ಪನ್ನದ ಮೌಲ್ಯ ಹೆಚ್ಚಿದ್ದಷ್ಟೂ ಉಡುಗೊರೆಯ ಮೌಲ್ಯವು ಹೆಚ್ಚಿರುತ್ತದೆ. ಅಲ್ಲದೆ, ಹಳೆಯ ಚಿನ್ನಾಭರಣ ವಿನಿಮಯ ಮಾಡಿಕೊಳ್ಳುವ ಗ್ರಾಹಕರಿಗೆ ಪ್ರತಿ ಗ್ರಾಂಗೆ ಹೆಚ್ಚುವರಿಯಾಗಿ ₹50 ಸಿಗುತ್ತದೆ ಎಂದು ಪ್ರಕಟಣೆ ಹೇಳಿದೆ.

ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19322
ಇಂದಿನ ಅಂತ್ಯ	19389
▲	66
ದಿನದ ಗರಿಷ್ಠ	19434

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹570
12 ಮೊಟ್ಟೆಗೆ	₹75
ಮೈಸೂರು	
100 ಮೊಟ್ಟೆಗೆ	₹570

ಕೊಬ್ಬರಿ ಧಾರಣೆ


ಅರಸೀಕೆರೆ	₹7500-8025
ತುಮಕೂರು (ಇತರ)	₹3600-4050

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹151.50
ಆರ್‌ಎಸ್‌ಎಸ್-5	₹146
ಗುಡ್ ಲಾಟ್	₹128

(ಪ್ರತಿ ಕೆ.ಜಿಗೆ)

ಷೇರುಪೇಟೆ ವಹಿವಾಟು



ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಕೆ.ಜಿ)	₹222-385
ದ್ವಿತಳಿ (ಕೆ.ಜಿ)	₹255-536

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1,700-2,000
ಮಧ್ಯಮ	₹1,300-1,500
ಸಣ್ಣ	₹800-1,200

ಭದ್ರತಾ ಮಂಡಳಿಯಲ್ಲಿ ಭಾರತಕ್ಕೆ ಬೇಕು ಪ್ರಾತಿನಿಧ್ಯ: ಬ್ರಿಟನ್

ವಿಶ್ವಸಂಸ್ಥೆ (ಪಿಟಿಐ): ಭಾರತ, ಬ್ರೆಜಿಲ್, ಜರ್ಮನಿ ಮತ್ತು ಜಪಾನ್ ಹಾಗೂ ಆಫ್ರಿಕಾ ದೇಶಗಳ ಪ್ರಾತಿನಿಧ್ಯಕ್ಕಾಗಿ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಕಾಯಂ ಸದಸ್ಯ ಸ್ಥಾನಗಳನ್ನು ಹೆಚ್ಚಿಸುವಂತೆ ಬ್ರಿಟನ್ ಕರೆ ನೀಡಿದ್ದು, ಭದ್ರತಾ ಮಂಡಳಿಯ ಸುಧಾರಣೆಗೆ ಇದು ಸಕಾಲವೆಂದು ಒತ್ತಿಹೇಳಿದೆ.

ವಿಶ್ವಸಂಸ್ಥೆಯಲ್ಲಿನ ಬ್ರಿಟನ್ ಕಾಯಂ ಪ್ರತಿನಿಧಿ ಮತ್ತು ಭದ್ರತಾ ಮಂಡಳಿಯ ಜುಲೈ ತಿಂಗಳ ಅಧ್ಯಕ್ಷತೆ ವಹಿಸಿರುವ ರಾಯಭಾರಿ ಬಾರ್ಬರಾ ವುಡ್‌ವರ್ಡ್ ಅವರು, ಭದ್ರತಾ ಮಂಡಳಿಯ ಜುಲೈ ತಿಂಗಳ ಕಾರ್ಯಕ್ರಮಗಳ ಕುರಿತು ವರದಿಗಾರರಿಗೆ ಮಾಹಿತಿ ನೀಡುವಾಗ ಈ ಹೇಳಿಕೆ ನೀಡಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	300-350
ನಡುಗೋಲು	450-500
ರಾಶಿ	500-550
ರಾಶಿ ಉತ್ತಮ	750-800
ಜರಡಿ	1000 - 1050
ಹೆರಕಿದ್ದು	1200-1300
ಹಸಿರು ಸಾಧಾರಣ	800-900
ಹಸಿರು ಉತ್ತಮ	1000-1100
ಹಸಿರು ಅತಿ ಉತ್ತಮ	1600-1650
ಕಾಳು ಮೆಣಸು	480
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-41500
ಹಳತು	48000-50500
ಸಾಗರ	
ಬಿಳಿಗೋಟು	29009-33109
ಚಾಲಿ	37099-38449
ಕೋಕ	29899-36089
ಕೆಂಪುಗೋಟು	33899-37899
ರಾಶಿ	41599-54509
ಸಿಪ್ಪೆಗೋಟು	11012-21899
ಶಿವಮೊಗ್ಗ	
ಗೊರಬಲು	20209-43399
ರಾಶಿ	38191-56006
ಸಿದ್ದಾಪುರ	
ಬಿಳಿಗೋಟು	31508-33899
ಚಾಲಿ	36899-39109
ಕೋಕ	27899-33689
ಹಳೆಚಾಲಿ	38690-38690
ಕೆಂಪುಗೋಟು	31889-34269
ರಾಶಿ	45009-52049
ತಟ್ಟಿಬೆಟ್ಟೆ	40089-46109
ಶಿರಸಿ	
ಬೆಟ್ಟೆ	40096-47299
ಬಿಳಿಗೋಟು	24309-34169
ಚಾಲಿ	36098-39888
ಕೆಂಪುಗೋಟು	29601-37699
ರಾಶಿ	43679-51119
ಯಲ್ಲಾಪುರ	
ಬಿಳಿಗೋಟು	23212-34624
ಚಾಲಿ	33899-39369
ಕೋಕ	18899-33760
ಕೆಂಪುಗೋಟು	28829-37009
ರಾಶಿ	43190-53815
ತಟ್ಟಿಬೆಟ್ಟೆ	40899-47699

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	14400	14300	14600	160.50ಸೆಂಟ್ಸ್
ಎಸಿ	7280	7200	7400	
ಆರ್‌ಪಿ	10000	10400	10600	ಲಂಡನ್
ಆರ್‌ಸಿ	5950	228	6050	2531 ಡಾಲರ್ಸ್



ಕೆನರಾ ಬ್ಯಾಂಕ್ ಎಂ.ಡಿ. ಮತ್ತು ಸಿಇಒ ಕೆ. ಸತ್ಯನಾರಾಯಣ ರಾಜು (ಬಲದಿಂದ ಎರಡನೆಯವರು) ಅವರು ₹1,370 ಕೋಟಿ ಡಿವಿಡೆಂಡ್ ಮೊತ್ತದ ಚೆಕ್‌ಅನ್ನು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಹಸ್ತಾಂತರಿಸಿದರು. ಬ್ಯಾಂಕ್‌ನ ಕಾರ್ಯನಿರ್ವಾಹಕ ನಿರ್ದೇಶಕರಾದ ದೇವಶಿಷ್ ಮುಖರ್ಜಿ, ಅಶೋಕ್ ಚಂದ್ರ, ಹರದೀಪ್ ಸಿಂಗ್ ಅಹ್ಲುವಾಲಿಯಾ ಹಾಗೂ ಬ್ಯಾಂಕ್‌ನ ಹಿರಿಯ ಅಧಿಕಾರಿ ಭವೇಂದ್ರ ಕುಮಾರ್ ಇದ್ದರು.

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಸುರೇಂದ್ರ ಕುಮಾರ್, ತುಮಕೂರು

- **ಪ್ರಶ್ನೆ:** ನಾನು ಖಾಸಗಿ ಕಂಪನಿಯೊಂದರಲ್ಲಿ ಉದ್ಯೋಗ ಮಾಡಿ 2021ರ ನವೆಂಬರ್‌ನಲ್ಲಿ ನಿವೃತ್ತಿಯಾದೆ. ನನ್ನ ಪಿ.ಎಫ್. ಖಾತೆಯಲ್ಲಿನ ಹಣವನ್ನು ಇನ್ನೂ ಹಿಂಪಡೆದಿಲ್ಲ. ಅಲ್ಲಿ ಬಡ್ಡಿ ಸೇರಿ ₹50 ಲಕ್ಷದವರೆಗೆ ಸಿಗುವ ನಿರೀಕ್ಷೆ ಇದೆ. ಈ ಬಡ್ಡಿಗೆ ತೆರಿಗೆ ಕಟ್ಟಬೇಕೇ? ಅಸಲು ಮೊತ್ತಕ್ಕೆ (ಕಂಪನಿ ಹಾಗೂ ನನ್ನ ವೇತನದ ಪಾಲು) ತೆರಿಗೆಯಿಂದ ವಿನಾಯಿತಿ ಇದೆಯೆಂದು ತಿಳಿದುಕೊಂಡಿದ್ದೇನೆ. ಈ ಬಗೆಗಿನ ಗೊಂದಲ ಪರಿಹರಿಸಿ.

ಉತ್ತರ: ನೀವು ಉದ್ಯೋಗದಿಂದ ನಿವೃತ್ತರಾಗಿದ್ದೀರಿ. ನಿವೃತ್ತಿಯ 20 ತಿಂಗಳ ನಂತರ ನೀವು ಪಿ.ಎಫ್. ಖಾತೆಯಿಂದ ದೊಡ್ಡ ಮೊತ್ತವನ್ನು ಹಿಂಪಡೆಯುವ ನಿರ್ಧಾರ ಕೈಗೊಂಡಿದ್ದೀರಿ. ನಿವೃತ್ತಿಯ ನಂತರ ನೀವು ಪಡೆಯುವ ಪಿ.ಎಫ್. ಮೊತ್ತವು ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 10(12) ಅನ್ವಯ ತೆರಿಗೆಯಿಂದ ಸಂಪೂರ್ಣ ವಿನಾಯಿತಿ ಹೊಂದಿದೆ. ಇದು ಕಂಪನಿಯ ಪಾಲಿನ ಮೊತ್ತ ಇರಬಹುದು ಅಥವಾ ನಿಮ್ಮದೇ ವೇತನದಿಂದ ಕಡಿತಗೊಂಡ ಮೊತ್ತ ಇರಬಹುದು.

ಇಲ್ಲಿ ಗಮನಿಸಬೇಕಾದ ಒಂದು ಅಂಶವೆಂದರೆ, ಆದಾಯ ತೆರಿಗೆ ಕಾಯ್ದೆಯ ಅಡಿ ವಿನಾಯಿತಿ ಸಿಗಬೇಕಾದರೆ, ಉದ್ಯೋಗಿಯು ನಿರಂತರವಾಗಿ ಐದು ವರ್ಷ ಸೇವೆಯಲ್ಲಿದ್ದಿರಬೇಕು. ಈ ನಿರಂತರ ಸೇವಾ ಅವಧಿಯನ್ನು ಲೆಕ್ಕ ಹಾಕುವಾಗ, ಹಿಂದೆ ಉದ್ಯೋಗ ಮಾಡುತ್ತಿದ್ದ ಕಂಪನಿಯು ಇಪಿಎಫ್ ಪಾವತಿಸುತ್ತಿದ್ದರೆ ಆ ಸೇವಾ ಅವಧಿಯನ್ನೂ ಪರಿಗಣಿಸಲಾಗುತ್ತದೆ. ಹಾಗೂ ಆ ಮೊತ್ತವು ಪ್ರಸ್ತುತ ಕಂಪನಿ ಪಾವತಿಸುವ ಮೊತ್ತಕ್ಕೆ ವರ್ಗಾವಣೆಗೊಂಡಿರಬೇಕು. ಒಂದು ವೇಳೆ, ಈ ಷರತ್ತು ಪೂರೈಸದಿದ್ದಲ್ಲಿ, ಪಿ.ಎಫ್. ಅಧಿಕಾರಿಗಳು ಶೇ 10ರ ದರದಲ್ಲಿ ತೆರಿಗೆ ಕಡಿತ ಮಾಡಬಹುದು. ನೀವು ನವೆಂಬರ್ 2021ರಲ್ಲಿ ನಿವೃತ್ತಿ ಹೊಂದಿರುವ ಬಗ್ಗೆ ತಿಳಿಸಿರುತ್ತೀರಿ. ಆದರೆ, ಉದ್ಯೋಗಕ್ಕೆ ಸೇರಿದ ಮಾಹಿತಿ ನೀಡಿಲ್ಲ. ನೀವು ಬಹಳ ದೀರ್ಘ ಅವಧಿಗೆ ವೃತ್ತಿ ನಿಭಾಯಿಸಿ, ಈ ಮೊತ್ತ ಗಳಿಸಿರುತ್ತೀರಿ ಎಂದು ಭಾವಿಸುವೆ. ಹೀಗಾಗಿ ನಿಮಗೆ ಸಂಪೂರ್ಣ ವಿನಾಯಿತಿ ಸಿಗುತ್ತದೆ.

ಇನ್ನು ಬಡ್ಡಿಯ ಬಗ್ಗೆ ತಿಳಿದುಕೊಳ್ಳುವುದಾದರೆ; ನಿಮ್ಮ ಇಪಿಎಫ್ ಖಾತೆಯಲ್ಲಿ ಗಳಿಸಿದ ಬಡ್ಡಿಯೂ ತೆರಿಗೆಯಿಂದ ಮುಕ್ತವಾಗಿದೆ. ಅಂತಹ ಬಡ್ಡಿದರ ವಾರ್ಷಿಕವಾಗಿ ಶೇ 9.50ರೊಳಗೆ ಇರಬೇಕು. ಹೆಚ್ಚಿನ ಸಂದರ್ಭಗಳಲ್ಲಿ ಪಿ.ಎಫ್. ಸಂಘಟನೆಯ ನೀಡುವ ಬಡ್ಡಿ ದರ ಇದಕ್ಕಿಂತ ಕಡಿಮೆಯೇ ಆಗಿರುತ್ತದೆ. ಆರ್ಥಿಕ ವರ್ಷ 2021-22ನೇ ಸಾಲಿನಿಂದ ಉದ್ಯೋಗಿಯು ಮಾಡುವ ₹2.50 ಲಕ್ಷಕ್ಕೂ ಮಿಕ್ಕ ಮೊತ್ತದ ಪಿ.ಎಫ್ ದೇಣಿಗೆಗೆ ಸಿಗುವ ಬಡ್ಡಿಯು ತೆರಿಗೆ ವಿನಾಯಿತಿಗೆ ಒಳಪಡುವುದಿಲ್ಲ. ನಿಮ್ಮ ವಿಚಾರದಲ್ಲಿ ಕೊನೆಯ ಕೆಲವು ತಿಂಗಳು ಮಾಡಿರುವ ಠೇವಣಿ ಈ ಮೊತ್ತಕ್ಕಿಂತ ಕಡಿಮೆ ಇರಬಹುದು ಎಂದು ಭಾವಿಸುವೆ. ನಿಮಗೆ ಸಂಪೂರ್ಣ ಬಡ್ಡಿ ಮೊತ್ತಕ್ಕೆ ತೆರಿಗೆ ಇರಲಾರದು.

ಕ್ಷೇಮಾ ವಿ ರಾವ್, ಸಹಕಾರ ನಗರ, ಬೆಂಗಳೂರು

- **ಪ್ರಶ್ನೆ:** ನನ್ನ ಪತಿಯ ಹೆಸರಲ್ಲಿದ್ದ ಕೆಲವು ಷೇರುಗಳನ್ನು ನನ್ನ ಹೆಸರಿಗೆ ವರ್ಗಾವಣೆ ಮಾಡುವ ಬಗ್ಗೆ ತುಸು ಮಾಹಿತಿ ಬೇಕಿತ್ತು. ಈ ವರ್ಗಾವಣೆಗೆ ತೆರಿಗೆ ಇದೆಯೇ? ನಾನು ಅಗತ್ಯ ದಾಖಲೆಗಳನ್ನು ಷೇರು ವರ್ಗಾವಣೆ ಏಜೆಂಟರಿಗೆ ಕೊಟ್ಟು ಒಂದೆರಡು ತಿಂಗಳಾದವು. ಪ್ರತ್ಯುತ್ತರ ಬಂದಿಲ್ಲ. ಈ ಬಗ್ಗೆ ಮುಂದೇನು ಮಾಡಬೇಕು? ಎಲ್ಲಿ ದೂರು?

ಉತ್ತರ: ಕಂಪನಿಗಳ ಷೇರುಗಳನ್ನು ವರ್ಗಾಯಿಸಬಹುದು. ವರ್ಗಾವಣೆ ಎಂಬುದು ಸಹಜವಾಗಿ ಮಾಡುವ ಮಾರಾಟ, ಸಮೀಪದ ಬಂಧುಗಳಿಗೆ ಕೊಡುವ ಉಡುಗೊರೆ ಅಥವಾ ಹೂಡಿಕೆದಾರನ ಮರಣದ ಕಾರಣ ಉತ್ತರಾಧಿಕಾರಿಗಳಿಗೆ ಆಗುವ ವರ್ಗಾವಣೆ ಆಗಿರಬಹುದು. ವರ್ಗಾವಣೆಗೆ ಅಗತ್ಯವಾದ ದಾಖಲೆಗಳನ್ನು ಅರ್ಜಿಯೊಂದಿಗೆ ನಿಮ್ಮ ಷೇರು ಬ್ರೋಕರ್ ಮೂಲಕ ಸಲ್ಲಿಸಬೇಕು. ನೀವು ಈಗಾಗಲೇ ಈ ಪ್ರಕ್ರಿಯೆ ಪೂರೈಸಿದ್ದೀರಿ.

ನಿಮ್ಮ ಕೋರಿಕೆಯನ್ನು 30 ದಿನಗಳೊಳಗೆ ಮಾನ್ಯ ಮಾಡಿಲ್ಲ ಎಂಬುದು ಖಂಡಿತವಾಗಿದ್ದರೆ, ಈ ಬಗ್ಗೆ ಮೊದಲಾಗಿ ನಿಮ್ಮ ಬ್ರೋಕರ್ ಕಂಪನಿಯ ಸಂಬಂಧಿತ ವಿಭಾಗಕ್ಕೆ ಇ-ಮೇಲ್ ಮೂಲಕ ತಿಳಿಸಿ. ಈ ಬಗ್ಗೆ ಮಾಹಿತಿಯನ್ನು ನೀವು ಷೇರು ಹೊಂದಿರುವ ಕಂಪನಿಯ ಹೂಡಿಕೆದಾರರ ಉಸ್ತುವಾರಿ ವಿಭಾಗಕ್ಕೆ ಕೂಡ ಇ-ಮೇಲ್ ಬರೆದು ತಿಳಿಸಬಹುದು. ಇಂತಹ ಸಮಸ್ಯೆಗೆ ಅವರೂ ಸೂಕ್ತವಾಗಿ ಸ್ಪಂದಿಸುತ್ತಾರೆ. ಈ ಎಲ್ಲ ವಿಚಾರಕ್ಕೂ ಮೊದಲು ಅಗತ್ಯ ದಾಖಲೆಗಳನ್ನು ನೀಡಿರುವ ಬಗ್ಗೆ ಖಚಿತಪಡಿಸಿಕೊಳ್ಳಿ. ಮುಂದೆಯೂ ನಿಮ್ಮ ಸಮಸ್ಯೆಗೆ ಪರಿಹಾರ ಸಿಗದಿದ್ದರೆ, ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯ (ಸೆಬಿ) ಷೇರುದಾರರ ದೂರು ವಿಭಾಗಕ್ಕೂ ನೀವು ಬರೆಯಬಹುದು. ಆದರೆ, ಮೊದಲ ಹಂತದಲ್ಲಿ, ಮೇಲೆ ಉಲ್ಲೇಖಿಸಿರುವ ಬಗೆಗಳಲ್ಲಿ ಪ್ರಯತ್ನಿಸಿದರೂ ನಿಮ್ಮ ಸಮಸ್ಯೆಗೆ ಪರಿಹಾರ ಸಿಕ್ಕಿಲ್ಲ ಎಂಬ ಬಗ್ಗೆ ದಾಖಲೆ ಇರಲಿ. ಈ ಸಂಬಂಧವಾಗಿ, ಕಂಪನಿಗೆ ಹಾಗೂ ಸಂಬಂಧಿತ ಅಧಿಕಾರಿಗಳಿಗೆ ದಂಡ ವಿಧಿಸುವ ಅವಕಾಶ ಕಂಪನಿ ಕಾಯ್ದೆಯಲ್ಲಿ ಇದೆ.

ಷೇರು ವರ್ಗಾವಣೆಗೆ ತೆರಿಗೆ ಇದೆಯೇ ಎಂಬ ಪ್ರಶ್ನೆ ಕೇಳಿದ್ದೀರಿ. ನಿಮ್ಮ ವಿಷಯದಲ್ಲಿ ಷೇರುಗಳು ಒಬ್ಬರ ಹೆಸರಿನಿಂದ ಇನ್ನೊಬ್ಬರ ಹೆಸರಿಗೆ ವರ್ಗಾವಣೆಯಾಗುತ್ತಿರುವುದು ನಿಜವಾದರೂ, ಯಾವುದೇ ಖರೀದಿ ಮತ್ತು ಮಾರಾಟ ವಹಿವಾಟು ಇಲ್ಲದ ಕಾರಣ ಯಾವುದೇ ಬಂಡವಾಳ ವೃದ್ಧಿ ತೆರಿಗೆ ಇರುವುದಿಲ್ಲ. ನೀವು ಕಾನೂನಿನ ಪ್ರಕ್ರಿಯೆಯ ಅಡಿ ವರ್ಗಾವಣೆ ಮೂಲಕ ಷೇರು ಗಳಿಸುತ್ತಿದ್ದೀರಿ. ನೀವು ಮುಂದೆ ಅವನ್ನು ಮಾರಾಟ ಮಾಡಿದಾಗ, ಹಿಂದೆ ಯಾವ ಬೆಲೆಗೆ ನಿಮ್ಮ ಪತಿ ಆ ಷೇರುಗಳನ್ನು ಖರೀದಿಸಿದ್ದರೋ ಅದೇ ಮೊತ್ತವನ್ನು ನೀವು ಅಸಲು ಮೌಲ್ಯವೆಂದು ಪರಿಗಣಿಸಬೇಕು ಹಾಗೂ ಅವರು ಖರೀದಿಸಿದ ದಿನದಿಂದಲೇ ನಿಮ್ಮ ಹೂಡಿಕೆಯ ಅವಧಿಯನ್ನು ಲೆಕ್ಕಹಾಕಲಾಗುತ್ತದೆ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001 ಇ–ಮೇಲ್: businessdesk@prajavani.co.in

ದುಲೀಪ್ ಟ್ರೋಫಿ ಕ್ರಿಕೆಟ್: ಇಂದಿನಿಂದ ದಕ್ಷಿಣ–ಉತ್ತರ ಹಣಾಹಣಿ

ಮಯಂಕ್, ವಾಷಿಂಗ್ಟನ್ ಮೇಲೆ ಚಿತ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತ ಕ್ರಿಕೆಟ್ ತಂಡದಲ್ಲಿ ಅವಕಾಶ ಗಿಟ್ಟಿಸುವ ತವಕದಲ್ಲಿರುವ ಅನುಭವಿ ಮತ್ತು ಯುವ ಆಟಗಾರರು ಉದ್ಯಾನನಗರಿಯಲ್ಲಿ ಬುಧವಾರದಿಂದ ಆರಂಭವಾಗಲಿರುವ ದುಲೀಪ್ ಟ್ರೋಫಿ ನಾಲ್ಕರ ಘಟ್ಟದಲ್ಲಿ ತಮ್ಮ ಸಾಮರ್ಥ್ಯವನ್ನು ಪಣಕ್ಕೊಡ್ಡಲು ಸನ್ನದ್ಧರಾಗಿದ್ದಾರೆ.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಹನುಮವಿಹಾರಿ ನಾಯಕತ್ವದ ದಕ್ಷಿಣ ವಲಯ ಮತ್ತು ಜಯಂತ್ ಯಾದವ್ ಮುಂದಾಳತ್ವದ ಉತ್ತರ ವಲಯ ತಂಡಗಳು ಮುಖಾಮುಖಿಯಾಗಲಿವೆ. ದಕ್ಷಿಣ ವಲಯ ತಂಡದಲ್ಲಿ ಕರ್ನಾಟಕದ ಮಯಂಕ್ ಅಗರವಾಲ್, ಆರ್. ಸಮರ್ಥ್, ವೇಗಿಗಳಾದ ವಿದ್ವತ್ ಕಾವೇರಪ್ಪ, ವೈಶಾಖ ವಿಜಯಕುಮಾರ್ ಕಣಕ್ಕಿಳಿಯಲಿದ್ದಾರೆ. ಹನುಮ ಮತ್ತು ಮಯಂಕ್ ರಾಷ್ಟ್ರೀಯ ತಂಡಕ್ಕೆ ಮರಳುವ ಗುರಿಯಿಟ್ಟುಕೊಂಡಿದ್ದಾರೆ. ಕಳೆದ ರಣಜಿ ಋತುವಿನಲ್ಲಿ ಮಿಂಚಿದ್ದ ವಿದ್ವತ್ ಮತ್ತು ವೈಶಾಖ ಕೂಡ ಆಯ್ಕೆಗಾರರ ಗಮನ ಸೆಳೆಯುವ ಛಲದಲ್ಲಿದ್ದಾರೆ.

ಇತ್ತೀಚೆಗೆ ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯಲ್ಲಿ ಮಿಂಚಿದ್ದ ಬ್ಯಾಟರ್‌ಗಳಾದ ತಿಲಕ್ ವರ್ಮಾ ಮತ್ತು ಸಾಯಿಸುದರ್ಶನ್ ಕೂಡ ಕೆಂಪು ಚೆಂಡಿನ ಕ್ರಿಕೆಟ್‌ನಲ್ಲಿ ತಮ್ಮ ತೋಳ್ಬಲ ಮೆರೆಯಲು ಸಿದ್ಧವಾಗಿದ್ದಾರೆ.

ತಂಡದಲ್ಲಿರುವ ಆಲ್‌ರೌಂಡರ್ ವಾಷಿಂಗ್ಟನ್ ಸುಂದರ್ ಅವರಿಗೆ ಈ ಪಂದ್ಯವು 'ಫಿಟ್‌ನೆಸ್ ಪರೀಕ್ಷೆ'ಯ ವೇದಿಕೆಯೂ ಆಗಲಿದೆ. ಕಳೆದ ಐಪಿಎಲ್ ಟೂರ್ನಿಯ ಆರಂಭಿಕ ಹಂತದಲ್ಲಿಯೇ ಸ್ನಾಯುಸೆಳೆತದ ಗಾಯ ಅನುಭವಿಸಿದ್ದ ಅವರು ದೀರ್ಘಕಾಲದಿಂದ ಕ್ರಿಕೆಟ್‌ನಿಂದ ಹೊರಗಿದ್ದರು.



ಮಯಂಕ್ ಅಗರವಾಲ್

ಚೇತರಿಸಿಕೊಂಡ ನಂತರ ಅವರು ಈಚೆಗೆ ತಮಿಳುನಾಡು ಪ್ರೀಮಿಯರ್ ಲೀಗ್‌ನಲ್ಲಿ ಆಡಿದ್ದಾರೆ.

ಮುಂಬರುವ ಏಷ್ಯಾಕಪ್ ಮತ್ತು ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ಆಡುವ ಭಾರತ ತಂಡದಲ್ಲಿ ಸ್ಥಾನ ಗಳಿಸಲು ವಾಷಿಂಗ್ಟನ್‌ಗೆ ಇದು ಸೂಕ್ತ ಸಮಯ. 23 ವರ್ಷದ ಆಲ್‌ರೌಂಡರ್ ವಾಷಿಂಗ್ಟನ್ ನಾಲ್ಕು ಟೆಸ್ಟ್, 16 ಏಕದಿನ ಮತ್ತು 35 ಟಿ20 ಪಂದ್ಯಗಳನ್ನು ಆಡಿರುವ ಅನುಭವಿ.

ಹೋದ ಸಲ ಫೈನಲ್ ಪ್ರವೇಶಿಸಿದ್ದ ದಕ್ಷಿಣ ವಲಯ ತಂಡವು ಈ ಬಾರಿ ನಾಲ್ಕರ ಘಟ್ಟಕ್ಕೆ ನೇರ ಪ್ರವೇಶ ಪಡೆದಿದೆ.

ತಂಡಗಳು: ದಕ್ಷಿಣ ವಲಯ: ಹನುಮವಿಹಾರಿ (ನಾಯಕ), ಮಯಂಕ್ ಅಗರವಾಲ್, ಆರ್. ಸಮರ್ಥ್, ವಿದ್ವತ್ ಕಾವೇರಪ್ಪ, ವೈಶಾಖ ವಿಜಯಕುಮಾರ್, ರಿಕಿ ಭುಯ್, ರವಿಶ್ರೀನಿವಾಸನ್ ಸಾಯಿಕಿಶೋರ್, ಸಚಿನ್ ಬೇಬಿ, ಎನ್. ಜಗದೀಶನ್ (ವಿಕೆಟ್‌ಕೀಪರ್), ದರ್ಶನ್ ಮಿಸಾಲ್, ಸಾಯಿ ಸುದರ್ಶನ್, ಕೆ.ವಿ. ಶಶಿಕಾಂತ್, ತಿಲಕ್ ವರ್ಮಾ, ಪ್ರದೋಷ್ ಪಾಲ್, ವಾಷಿಂಗ್ಟನ್.

ಉತ್ತರ ವಲಯ: ಜಯಂತ್ ಯಾದವ್ (ನಾಯಕ), ಧ್ರುವ ಶೋರೆ, ಪ್ರಶಾಂತ್ ಚೋಪ್ರಾ, ಅಂಕಿತ್ ಕಲ್ಸಿ, ಪ್ರಭಸಿಮ್ರನ್ ಸಿಂಗ್ (ವಿಕೆಟ್‌ಕೀಪರ್), ಅಂಕಿತ್ ಕುಮಾರ್, ನಿಶಾಂತ್ ಸಿಂಧು, ಪುಲ್ಕಿತ್ ನಾರಂಗ್, ಹರ್ಷಿತ್ ರಾಣಾ, ಸಿದ್ಧಾರ್ಥ್ ಕೌಲ್, ಬಲ್ತೇಜ್ ಸಿಂಗ್, ಮನದೀಪ್ ಸಿಂಗ್, ಮನನ್ ವೊಹ್ರಾ, ಅಬಿದ್ ಮುಷ್ತಾಕ್, ವೈಭವ್ ಅರೋರಾ, ಹಿಮಾಂಶು ರಾಣಾ.

ಪಂದ್ಯ ಆರಂಭ: ಬೆಳಿಗ್ಗೆ 9.30ರಿಂದ

ಪೂಜಾರ ಆಕರ್ಷಣೆ

ವೆಸ್ಟ್ ಇಂಡೀಸ್ ಟೆಸ್ಟ್ ಸರಣಿಗೆ ತೆರಳುತ್ತಿರುವ ಭಾರತ ತಂಡದಲ್ಲಿ ಸ್ಥಾನ ಪಡೆಯದ ಕಾರಣಕ್ಕೆ ಚರ್ಚೆಗೆ ಗ್ರಾಸವಾಗಿರುವ ಚೇತೇಶ್ವರ್ ಪೂಜಾರ್ ಮತ್ತು ಸರ್ಫರಾಜ್ ಖಾನ್ ದುಲೀಪ್ ಟ್ರೋಫಿಯಲ್ಲಿ ತಮ್ಮ ಸಾಮರ್ಥ್ಯ ಮೆರೆಯುವ ಛಲದಲ್ಲಿದ್ದಾರೆ.

ನಗರ ಹೊರವಲಯದಲ್ಲಿರುವ ಆಲೂರಿನ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ನಡೆಯಲಿರುವ ಟೂರ್ನಿಯ ಮೊದಲ ಸೆಮಿಫೈನಲ್‌ನಲ್ಲಿ ಕೇಂದ್ರ ವಲಯ ಹಾಗೂ ಪಶ್ಚಿಮ ವಲಯ ತಂಡಗಳು ಮುಖಾಮುಖಿಯಾಗಲಿವೆ. ಸೌರಾಷ್ಟ್ರದ ಪೂಜಾರ, ಮುಂಬೈ ತಂಡದ ಸರ್ಫರಾಜ್, ಪೃಥ್ವಿ ಶಾ ಮತ್ತು ಸೂರ್ಯಕುಮಾರ್ ಯಾದವ್ ಪಶ್ಚಿಮ ವಲಯ ತಂಡದಲ್ಲಿದ್ದಾರೆ.

ನೆರವಿನ ನಿರೀಕ್ಷೆಯಲ್ಲಿ ಕುಬ್ಜ ಕ್ರೀಡಾಪಟು

ಪ್ರಜಾವಾಣಿ ವಾರ್ತೆ

ಅರಕಲಗೂಡು (ಹಾಸನ): ಜರ್ಮನಿಯಲ್ಲಿ ಜುಲೈ 28ರಿಂದ ಆಗಸ್ಟ್ 5ರವರೆಗೆ ನಡೆಯುವ ಕುಬ್ಜರ ಒಲಿಂಪಿಕ್ಸ್‌ಗೆ ಆಯ್ಕೆಯಾಗಿರುವ ತಾಲ್ಲೂಕಿನ ಕೆ.ಆರ್.ಶಾಂತಕುಮಾರ್ ಆರ್ಥಿಕ ನೆರವಿನ ನಿರೀಕ್ಷೆಯಲ್ಲಿದ್ದಾರೆ.

100 ಮೀ. ಮತ್ತು 50 ಮೀ. ಓಟದ ಸ್ಪರ್ಧೆಯಲ್ಲಿ ಪಾಲ್ಗೊಳ್ಳುತ್ತಿದ್ದು, ಅವಕಾಶ ದೊರಕಿದರೆ ಬೊಸಿಯಾ (ಚೆಂಡಾಟ) ಕ್ರೀಡೆಯಲ್ಲಿ ಭಾಗವಹಿಸುವ ಆಸಕ್ತಿಯೂ ಅವರಿಗಿದೆ. ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಜುಲೈ 1ರಿಂದ ಆರಂಭವಾಗಿರುವ ತರಬೇತಿಯಲ್ಲಿ ಪಾಲ್ಗೊಂಡಿದ್ದಾರೆ.

'ಕ್ರೀಡಾಕೂಟದಲ್ಲಿ ಪಾಲ್ಗೊಳ್ಳಲು ₹2.5 ಲಕ್ಷ ವೆಚ್ಚವಾಗುತ್ತಿದೆ. ಸರ್ಕಾರದಿಂದಲೂ ನೆರವು ದೊರೆತಿಲ್ಲ. ₹1 ಲಕ್ಷ ಸಾಲ ಮಾಡಿ ಪ್ರವೇಶಧನ ಪಾವತಿಸಿದ್ದೇನೆ. ಉಳಿದ ಹಣವನ್ನು ಹೊಂದಿಸಲು ಮತ್ತೆ ಸಾಲದ ಮೊರೆ ಹೋಗಬೇಕಾಗಿದೆ' ಎಂದು ಅವರು 'ಪ್ರಜಾವಾಣಿ'ಗೆ ತಿಳಿಸಿದರು.



ಕೆ.ಆರ್ ಶಾಂತಕುಮಾರ್

'2017ರಲ್ಲಿ ಕೆನಡಾದಲ್ಲಿ ನಡೆದಿದ್ದ ಕ್ರೀಡಾಕೂಟದ 100 ಮೀ. ಓಟದ ಸ್ಪರ್ಧೆಯಲ್ಲಿ ಚಿನ್ನದ ಪದಕ ಪಡೆದಿದ್ದೆ. ಆಗ ₹2 ಲಕ್ಷ ಸಾಲಕ್ಕಾಗಿ ಪತ್ನಿಯ ಆಭರಣಗಳನ್ನು ಅಡವಿಟ್ಟಿದ್ದು, ಬಿಡಿಸಿಕೊಳ್ಳಲು ಸಾಧ್ಯವಾಗಿಲ್ಲ. ಸರ್ಕಾರ ಪ್ರೋತ್ಸಾಹಧನ ನೀಡುವುದಾಗಿ ಹೇಳಿದ್ದರೂ, ಈವರೆಗೆ ನೀಡಿಲ್ಲ' ಎಂದು ಅಳಲು ತೋಡಿಕೊಂಡರು.

ಕುಬ್ಜರ ಒಲಿಂಪಿಕ್ಸ್‌ಗೆ ತೆರಳಲಿರುವ ಭಾರತ ತಂಡದಲ್ಲಿ ಕರ್ನಾಟಕದ ಎಂಟು ಸ್ಪರ್ಧಿಗಳು ಸೇರಿದಂತೆ ಒಟ್ಟು 24 ಮಂದಿ ಇದ್ದಾರೆ. ತಂಡವು ಜುಲೈ 25 ರಂದು ಜರ್ಮನಿಯ ಕೊಲೋನ್ ನಗರಕ್ಕೆ ಪ್ರಯಾಣಿಸಲಿದೆ. ಅಲ್ಲಿನ ಜರ್ಮನಿ ಕ್ರೀಡಾ ವಿಶ್ವವಿದ್ಯಾಲಯದಲ್ಲಿ ಸ್ಪರ್ಧೆಗಳು ಆಯೋಜನೆಯಾಗಿವೆ.

ಶಾಂತಕುಮಾರ್ ಅವರ ಸಂಪರ್ಕ ಸಂಖ್ಯೆ: 9901238902.

ಮನವಿ ಸಲ್ಲಿಸಿದ್ದೇವೆ: ಕುಬ್ಜರ ಒಲಿಂಪಿಕ್ಸ್‌ಗೆ ಆಯ್ಕೆಯಾಗಿರುವ ಕರ್ನಾಟಕದ ಅಥ್ಲೀಟ್‌ಗಳ ಪ್ರಯಾಣಕ್ಕೆ ಧನಸಹಾಯ ನೀಡುವಂತೆ ಮುಖ್ಯಮಂತ್ರಿಗೆ ಮನವಿ ಮಾಡಿದ್ದೇವೆ ಎಂದು ಕರ್ನಾಟಕ ರಾಜ್ಯ ಅಂಗವಿಕಲರ ಕ್ರೀಡಾ ಸಂಸ್ಥೆ ಪ್ರಧಾನ ಕಾರ್ಯದರ್ಶಿ ಎಂ.ಆರ್.ಮಹೇಶ್ ಗೌಡ ತಿಳಿಸಿದರು.

'ಬೇರೆ ಕೆಲವು ರಾಜ್ಯಗಳ ಕ್ರೀಡಾಪಟುಗಳಿಗೆ ಈ ಕೂಟದಲ್ಲಿ ಪಾಲ್ಗೊಳ್ಳಲು ಅಲ್ಲಿನ ಸರ್ಕಾರ ಆರ್ಥಿಕ ನೆರವು ನೀಡಿದೆ. ನೆರವು ನೀಡುವಂತೆ ರಾಜ್ಯ ಸರ್ಕಾರಕ್ಕೂ ಕೋರಲಾಗಿದೆ' ಎಂದರು.

ಏಷ್ಯನ್ ಯೂತ್ ಟಿಟಿ: ಯಶಸ್ವಿನಿ ಆಯ್ಕೆ

ನವದೆಹಲಿ (ಪಿಟಿಐ): ಕರ್ನಾಟಕದ ಯಶಸ್ವಿನಿ ಘೋರ್ಪಡೆ ಅವರನ್ನು ಏಷ್ಯನ್ ಯೂತ್ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ ಆಡಲಿರುವ ಭಾರತ ಬಾಲಕಿಯರ ತಂಡಕ್ಕೆ ಆಯ್ಕೆ ಮಾಡಲಾಗಿದೆ.

ಜುಲೈ 17 ರಿಂದ 22ರವರೆಗೆ ಕತಾರ್ ದೇಶದ ದೋಹಾದಲ್ಲಿ ಟೂರ್ನಿ ನಡೆಯಲಿದೆ.

ತಂಡಗಳು: ಬಾಲಕರು: ಅಂಕುರ್ ಭಟ್ಟಾಚಾರ್ಯಜಿ, ದಿವ್ಯನ್ ಶ್ರೀವಾಸ್ತವ, ಜಶ್ ಮೋದಿ, ಪಿ.ಬಿ. ಅಭಿನಂದ್, ಸಾರ್ಥ್ ಮಿಶ್ರಾ, ಪುನಿತ್ ಬಿಸ್ವಾಸ್, ಪ್ರಿಯಾನುಜ್ ಭಟ್ಟಾಚಾರ್ಯ

ಬಾಲಕಿಯರು: ಯಶಸ್ವಿನಿ ಘೋರ್ಪಡೆ, ಸುಹಾನಾ ಸೈನಿ, ಜೆನಿಫರ್ ವರ್ಗಿಸ್, ತನೀಷಾ ಕೊಟೆಚಾ, ಅವಿಶಾ ಕರ್ಮಾಕರ್, ಸಯಾನಿಕಾ ಮಜಿ, ಸಯಾಲಿ ವಾಣಿ. ಕೋಚ್: ಅನಿಂದಿತಾ ಚಕ್ರವರ್ತಿ, ಜೈ ಮೋಡಕ್, ಆರ್. ರಾಜೇಶ್. ನೆರವು ಸಿಬ್ಬಂದಿ: ಹಿಮಾಂಶು ಮತ್ತು ಅಮನದೀಪ್

ಕಿಯಾ: ಹೊಸ ಸೆಲ್ಟೋಸ್ ಬಿಡುಗಡೆ

• ಇ.ಎಸ್. ಸುಧೀಂದ್ರ ಪ್ರಸಾದ್

ನವದೆಹಲಿ: ಹಲವು ಹೊಸ ಸೌಲಭ್ಯಗಳನ್ನು ಹೊಂದಿರುವ ನೂತನ 'ಸೆಲ್ಟೋಸ್' ಕಾರನ್ನು ಕಿಯಾ ಕಂಪನಿಯು ಮಂಗಳವಾರ ಇಲ್ಲಿ ಬಿಡುಗಡೆ ಮಾಡಿತು. ಕಿಯಾ ಇಂಡಿಯಾದ ವ್ಯವಸ್ಥಾಪಕ ನಿರ್ದೇಶಕ ಹಾಗೂ ಸಿಇಒ ಟೀ ಜಿನ್ ಪಾರ್ಕ್ ಅವರು ಕಾರನ್ನು ಅನಾವರಣಗೊಳಿಸಿದರು.

'ಹೊಸ ಸೆಲ್ಟೋಸ್‌ನಲ್ಲಿ ಕಾರು ಚಾಲನೆಯ ಆಧುನಿಕ ತಂತ್ರಜ್ಞಾನ ವ್ಯವಸ್ಥೆಯ (ಎಡಿಎಎಸ್) 2ನೇ ಹಂತವನ್ನು ಅಳವಡಿಸಲಾಗಿದೆ. ಸದ್ಯ ಇರುವ ಮಾರುಕಟ್ಟೆ ಪಾಲನ್ನು ಶೇ 10ರಷ್ಟು ಹೆಚ್ಚಿಸಲು ಯೋಜನೆ ರೂಪಿಸಲಾಗಿದೆ' ಎಂದು ಪಾರ್ಕ್ ತಿಳಿಸಿದರು.

'ಮೂರು ರಾಡಾರ್ ಹಾಗೂ ಒಂದು ಕ್ಯಾಮೆರಾ ಹೊಂದಿರುವ ಈ ಕಾರು 32 ಸುರಕ್ಷಾ ಸೌಲಭ್ಯಗಳನ್ನು ಹೊಂದಿದೆ. ಡಿಕ್ಕಿ ತಡೆಯಲು ಹಾಗೂ ರಸ್ತೆಯಲ್ಲಿ ಪಥ ಕಾಯ್ದುಕೊಳ್ಳಲು ಇವು ನೆರವಾಗಲಿವೆ' ಎಂದು ಕಂಪನಿಯ ಮಾರುಕಟ್ಟೆ ಮುಖ್ಯಸ್ಥ ಹರ್ದೀಪ್ ಸಿಂಗ್ ಬ್ರಾರ್ ಹೇಳಿದರು.



ನವದೆಹಲಿಯಲ್ಲಿ ನಡೆದ ಕಿಯಾ ಇಂಡಿಯಾದ ಹೊಸ ಮಾದರಿಯ ಸೆಲ್ಟೋಸ್ ಕಾರು ಬಿಡುಗಡೆ ಸಮಾರಂಭದಲ್ಲಿ ಕಂಪನಿಯ ಸಿಇಒ ಟೀ ಜಿನ್ ಪಾರ್ಕ್, ಹಿರಿಯ ಅಧಿಕಾರಿ ಮಿಯಾಂಗ್ ಸಿಕ್ ಸೋಮ್ ಹಾಗೂ ಮಾರುಕಟ್ಟೆ ಮುಖ್ಯಸ್ಥ ಹರ್ದೀಪ್ ಸಿಂಗ್ ಬ್ರಾರ್ ಇದ್ದಾರೆ.

'1.5 ಲೀಟರ್‌ನ ಪೆಟ್ರೋಲ್ ಎಂಜಿನ್ 'ಜಿಡಿಐ'ಅನ್ನು ಇದು ಹೊಂದಿದೆ. ಎಲೆಕ್ಟ್ರಿಕ್ ಪಾರ್ಕಿಂಗ್ ಬ್ರೇಕ್, ಕಾರಿನ ಹಿಂದೆ ಹಾಗೂ ಮುಂದೆ ಎಲ್‌ಇಡಿ ಕನೆಕ್ಟೆಡ್ ದೀಪಗಳು ಕಾರಿನ ಸೌಂದರ್ಯ ಮತ್ತು ಸೌಕರ್ಯ ಹೆಚ್ಚಿಸಿವೆ' ಎಂದರು.

'ಜುಲೈ 14ರಂದು ಮಧ್ಯರಾತ್ರಿ 12ರಿಂದ ಮರುದಿನ ರಾತ್ರಿ 11.59ರವರೆಗೆ ಹೊಸ ಮಾದರಿಯ ಸೆಲ್ಟೋಸ್ ಬುಕ್ ಮಾಡಬಹುದು. ಈಗಿನ ಕಿಯಾ ಗ್ರಾಹಕರಲ್ಲಿರುವ ಕಿಯಾ ಆ್ಯಪ್ ಅಥವಾ kia.com ಮೂಲಕ ಈಗಿನ ಗ್ರಾಹಕರ ನೆರವಿನೊಂದಿಗೆ ಹೊಸ ಗ್ರಾಹಕರು ಹೊಸ ಸೆಲ್ಟೋಸ್ ಕಾಯ್ದಿರಿಸಬಹುದು. ನೂತನ ಕಾರಿನ ಬೆಲೆಯನ್ನು ಶೀಘ್ರ ತಿಳಿಸಲಾಗುವುದು' ಎಂದು ಬ್ರಾರ್ ಅವರು ಹೇಳಿದರು.

(ಕಂಪನಿಯ ಆಹ್ವಾನದ ಮೇರೆಗೆ ಪ್ರತಿನಿಧಿ ನವದೆಹಲಿಗೆ ತೆರಳಿದ್ದರು)

ಬ್ಯೂಟಿ ಪಾರ್ಲರ್‌ಗಳನ್ನು ಮುಚ್ಚಲು ಆದೇಶ

ಕಾಬೂಲ್ (ಎಎಫ್‌ಪಿ): ದೇಶದಾದ್ಯಂತ ಇರುವ ಬ್ಯೂಟಿ ಪಾರ್ಲರ್‌ಗಳನ್ನು ಒಂದು ತಿಂಗಳೊಳಗೆ ಮುಚ್ಚುವಂತೆ ಅಫ್ಗಾನಿಸ್ತಾನದ ತಾಲಿಬಾನ್ ಅಧಿಕಾರಿಗಳು ಆದೇಶ ಹೊರಡಿಸಿದ್ದಾರೆ ಎಂದು ಉಪಸಚಿವಾಲಯ ಮಂಗಳವಾರ ದೃಢಪಡಿಸಿದೆ. ಇದರಿಂದ ಮಹಿಳೆಯರಿಗೆ ಸಾರ್ವಜನಿಕ ಜೀವನದ ಜೊತೆ ಇದ್ದ ಮತ್ತೊಂದು ಸಂಪರ್ಕವನ್ನೂ ಕಡಿದಂತಾಗಿದೆ.

'ತಮ್ಮ ಬಳಿ ಇರುವ ಎಲ್ಲಾ ಉತ್ಪನ್ನಗಳನ್ನು ಖಾಲಿ ಮಾಡಿಕೊಳ್ಳಲು ಪಾರ್ಲರ್‌ನವರಿಗೆ ಒಂದು ತಿಂಗಳ ಕಾಲಾವಕಾಶ ನೀಡಲಾಗಿದೆ. ಇದರಿಂದ ಆ ಮಹಿಳೆಯರಿಗೂ ನಷ್ಟ ಆಗುವುದಿಲ್ಲ. ಎಲ್ಲಾ ಪಾರ್ಲರ್‌ಗಳು ಮುಚ್ಚಿದ ನಂತರ ಮಾಧ್ಯಮದೊಂದಿಗೆ ಇದರ ಕಾರಣ ಹಂಚಿಕೊಳ್ಳುತ್ತೇವೆ' ಎಂದು ಸಚಿವಾಲಯದ ವಕ್ತಾರ ಮೊಹಮ್ಮದ್ ಸಾದೇಕ್ ಅಕಿಫ್ ಮುಹಾಜಿರ್ ಹೇಳಿದ್ದಾರೆ. ಅಮೆರಿಕ ನೇತೃತ್ವದ ಪಡೆಗಳು ದೇಶವನ್ನು ಆಕ್ರಮಿಸಿಕೊಂಡ ಬಳಿಕ ಕಾಬೂಲ್ ಮತ್ತು ಇತರ ನಗರಗಳಲ್ಲಿ ಬ್ಯೂಟಿ ಪಾರ್ಲರ್‌ಗಳು ಅಣಬೆಗಳಂತೆ ಹುಟ್ಟಿಕೊಂಡಿದ್ದವು.

ರಾಜತಾಂತ್ರಿಕರ ಭದ್ರತೆಗೆ ಕ್ರಮ: ಕೆನಡಾ

ಟೊರಂಟೊ (ಪಿಟಿಐ): ಖಾಲಿಸ್ತಾನ ಪರ ಗುಂಪುಗಳು ಭಾರತದ ರಾಜತಾಂತ್ರಿಕರ ಭಾವಚಿತ್ರವಿರುವ ಪೋಸ್ಟರ್‌ಗಳನ್ನು ಆನ್‌ಲೈನ್‌ನಲ್ಲಿ ಹಂಚಿಕೊಂಡಿರುವುದು ಸ್ವೀಕಾರಾರ್ಹವಲ್ಲ ಎಂದಿರುವ ಕೆನಡಾ, ಭಾರತದ ಅಧಿಕಾರಿಗಳ ಸುರಕ್ಷತೆಗೆ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದೆ.

'ವಿಯೆನ್ನಾ ಸಮಾವೇಶದ ಒಪ್ಪಂದದ ಪ್ರಕಾರ ರಾಜತಾಂತ್ರಿಕರ ಸುರಕ್ಷತೆಯ ವಿಚಾರವನ್ನು ನಾವು ಗಂಭೀರವಾಗಿ ಪರಿಗಣಿಸಿದ್ದೇವೆ' ಎಂದು ಕೆನಡಾದ ವಿದೇಶಾಂಗ ಸಚಿವೆ ಮೆಲಾನಿ ಜೋಲಿ ಅವರು ಮಂಗಳವಾರ ಟ್ವೀಟ್ ಮಾಡಿದ್ದಾರೆ.

ಕೆನಡಾವು ಭಾರತದ ಅಧಿಕಾರಿಗಳ ಜೊತೆಗೆ ನಿಕಟ ಸಂಪರ್ಕದಲ್ಲಿದೆ. ಕೆಲವರ ಕಾರ್ಯವನ್ನು ಇಡೀ ದೇಶಕ್ಕೆ ಅನ್ವಯಿಸಬೇಡಿ ಎಂದೂ ಹೇಳಿದ್ದಾರೆ.

ಕೆನಡಾ, ಬ್ರಿಟನ್ ಮತ್ತು ಅಮೆರಿಕದಂತಹ ರಾಷ್ಟ್ರಗಳು ಖಾಲಿಸ್ತಾನ ಸಿದ್ಧಾಂತದವರಿಗೆ ತಮ್ಮ ದೇಶದಲ್ಲಿ ನೆಲೆ ಒದಗಿಸಬಾರದು ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರು ನೀಡಿರುವ ಹೇಳಿಕೆಗೆ ಪ್ರತಿಕ್ರಿಯಿಸಿ ಮೆಲಾನಿ ಅವರು ಈ ಟ್ವೀಟ್ ಮಾಡಿದ್ದಾರೆ.

ಜುಲೈ 8 ರಂದು ಕೆನಡಾದಲ್ಲಿ ರ‍್ಯಾಲಿ ನಡೆಸಲು ಸಿದ್ಧತೆ ನಡೆಸಿರುವ ಖಾಲಿಸ್ತಾನ ಪರ ಸಂಘಟನೆಗಳು ಅದರ ಅಂಗವಾಗಿ ಭಾರತದ ರಾಜತಾಂತ್ರಿಕರ ಭಾವಚಿತ್ರಗಳಿರುವ ಪೋಸ್ಟರ್‌ಗಳನ್ನು ಆನ್‌ಲೈನ್‌ನಲ್ಲಿ ಹಂಚಿಕೊಂಡಿದ್ದವು.

ಕೆನಡಾ ಹೈಕಮಿಷನರ್‌ಗೆ ಸಮನ್ಸ್: ಕೆನಡಾದಲ್ಲಿ ಖಾಲಿಸ್ತಾನ ಪರ ಚಟುವಟಿಕೆಗಳು ಹೆಚ್ಚುತ್ತಿರುವ ಕಾರಣ ಅಲ್ಲಿನ ಹೈಕಮಿಷನರ್‌ಗೆ ಭಾರತ ಸಮನ್ಸ್ ನೀಡಿ, ಪ್ರತಿಭಟನೆ ದಾಖಲಿಸಿದೆ.

ಭಾರತದ ರಾಜತಾಂತ್ರಿಕರನ್ನು ಒಳಗೊಂಡಿರುವ ಪೋಸ್ಟರ್ ಅನ್ನು ಖಾಲಿಸ್ತಾನ ಪರ ಗುಂಪುಗಳು ಬಿಡುಗಡೆಗೊಳಿಸಿರುವ ಕಾರಣಕ್ಕೆ ವಿದೇಶಾಂಗ ಸಚಿವಾಲಯವು ಸೋಮವಾರ ಸಮನ್ಸ್ ನೀಡಿದೆ ಎಂದು ಮೂಲಗಳು ತಿಳಿಸಿವೆ.

ಭಾರತೀಯ ಕಾನ್ಸುಲೇಟ್ ಕಚೇರಿ ಮೇಲೆ ದಾಳಿ

ನ್ಯೂಯಾರ್ಕ್ (ಪಿಟಿಐ): ಅಮೆರಿಕದ ಸ್ಯಾನ್‌ಫ್ರಾನ್ಸಿಸ್ಕೊದಲ್ಲಿಯ ಭಾರತೀಯ ಕಾನ್ಸುಲೇಟ್ ಕಚೇರಿ ಮೇಲೆ ಖಾಲಿಸ್ತಾನಿ ಬೆಂಬಲಿಗರು ಭಾನುವಾರ ದಾಳಿ ನಡೆಸಿ, ಬೆಂಕಿ ಇಡಲು ಯತ್ನಿಸಿದ್ದಾರೆ. ಈ ಪ್ರಯತ್ನವನ್ನು ಅಮೆರಿಕ ಬಲವಾಗಿ ಖಂಡಿಸಿದೆ.

ಸ್ಯಾನ್‌ಫ್ರಾನ್ಸಿಸ್ಕೊ ಇಲಾಖೆಯು ಕೂಡಲೇ ಬೆಂಕಿಯನ್ನು ನಂದಿಸಿದೆ. ಘಟನೆಯಲ್ಲಿ ಯಾರೂ ಗಾಯಗೊಂಡಿಲ್ಲ ಎಂದು ಹೇಳಲಾಗಿದೆ. ಖಾಲಿಸ್ತಾನಿ ಬೆಂಬಲಿಗರು ಈ ಕಚೇರಿ ಮೇಲೆ ತಿಂಗಳೊಳಗೆ ಎರಡನೇ ಬಾರಿ ನಡೆಸಿದ ದಾಳಿ ಇದಾಗಿದೆ.

ಈ ಕೃತ್ಯಕ್ಕೆ ಸಂಬಂಧಿಸಿದ ವಿಡಿಯೊವೊಂದನ್ನು ಖಾಲಿಸ್ತಾನಿ ಬೆಂಬಲಿಗರು ಜುಲೈ 2ರಂದು ಟ್ವಿಟರ್‌ನಲ್ಲಿ ಪೋಸ್ಟ್ ಮಾಡಿದ್ದಾರೆ. 'ಹಿಂಸೆಯು ಹಿಂಸೆಗೇ ಜನ್ಮ ನೀಡುತ್ತದೆ' ಎಂಬ ಬರಹವನ್ನು ವಿಡಿಯೊದಲ್ಲಿ ಪ್ರದರ್ಶಿಸಲಾಗಿದೆ. ಈ ಘಟನೆಗೆ ಸಂಬಂಧಿಸಿ ಅಮೆರಿಕದ ವಿದೇಶಾಂಗ ಇಲಾಖೆ ವಕ್ತಾರರು ಪ್ರತಿಕ್ರಿಯಿಸಿದ್ದಾರೆ.

'ಭಾರತೀಯ ಕಾನ್ಸುಲೇಟ್ ಕಚೇರಿಗೆ ಬೆಂಕಿ ಇಡುವ ಪ್ರಯತ್ನವನ್ನು ಅಮೆರಿಕ ಬಲವಾಗಿ ಖಂಡಿಸುತ್ತದೆ. ರಾಯಭಾರ ಕಚೇರಿಗಳ ಮೇಲೆ ಮತ್ತು ವಿದೇಶಗಳ ರಾಯಭಾರಿಗಳ ಮೇಲೆ ನಡೆಯುವ ದಾಳಿಯನ್ನು ಅಮೆರಿಕವು 'ಕ್ರಿಮಿನಲ್ ಅಪರಾಧ' ಎಂದು ಪರಿಗಣಿಸುತ್ತದೆ' ಎಂದು ಅವರು ಟ್ವೀಟ್ ಮಾಡಿದ್ದಾರೆ.

ಇಂಡಿಯನ್ ವರ್ಲ್ಡ್ ಫೋರಂ ಖಂಡನೆ

ವಿದೇಶಗಳಲ್ಲಿಯ ಭಾರತೀಯ ರಾಯಭಾರ ಕಚೇರಿಗಳು ಮತ್ತು ಸಮುದಾಯದ ಸದಸ್ಯರನ್ನು ಗುರಿಯಾಗಿಸಿಕೊಂಡು ಖಾಲಿಸ್ತಾನಿ ಬೆಂಬಲಿಗರೂ ಸೇರಿ ಭಾರತ ವಿರೋಧಿ ಪಡೆಗಳು ನಡೆಸುತ್ತಿರುವ ದಾಳಿ ಯತ್ನವನ್ನು ಇಂಡಿಯನ್ ವರ್ಲ್ಡ್ ಫೋರಂ(ಐಡಬ್ಲ್ಯುಎಫ್) ಮಂಗಳವಾರ ಖಂಡಿಸಿದೆ.

'ಕೆನಡಾ, ಬ್ರಿಟನ್, ಅಮೆರಿಕದಲ್ಲಿಯ ಭಾರತೀಯ ರಾಯಭಾರಿಗಳಿಗೆ ಖಾಲಿಸ್ತಾನಿ ಮೂಲಭೂತವಾದಿಗಳು ಬೆದರಿಕೆ ಒಡ್ಡುತ್ತಿದ್ದಾರೆ ಎಂದು ಐಡಬ್ಲ್ಯುಎಫ್ ಪ್ರಕಟಣೆಯಲ್ಲಿ ಆರೋಪಿಸಿದೆ.

ಖಾಲಿಸ್ತಾನಿಗಳು ಸೇರಿ ಭಾರತ ವಿರೋಧಿ ಪಡೆಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಮತ್ತು ಭಾರತೀಯ ಸಮುದಾಯಕ್ಕೆ ರಕ್ಷಣೆ ನೀಡುವಂತೆ ಮೂರು ದೇಶಗಳಿಗೆ ಮನವಿ ಮಾಡಿದೆ.

'ತೋಶಖಾನಾ ಪ್ರಕರಣ ಸ್ವೀಕಾರಾರ್ಹವಲ್ಲ'

ಇಸ್ಲಾಮಾಬಾದ್ (ಪಿಟಿಐ): 'ಪಾಕಿಸ್ತಾನ್ ತೆಹ್ರೀಕ್–ಇ– ಇನ್ಸಾಫ್ (ಪಿಟಿಐ) ಪಕ್ಷದ ಮುಖ್ಯಸ್ಥ ಇಮ್ರಾನ್ ಖಾನ್ ಅವರ ವಿರುದ್ಧದ ತೋಶಖಾನಾ ಪ್ರಕರಣವು ಸ್ವೀಕಾರಾರ್ಹವಲ್ಲ' ಎಂದು ಇಸ್ಲಾಮಾಬಾದ್ ಹೈಕೋರ್ಟ್ (ಐಎಚ್‌ಸಿ) ಮಂಗಳವಾರ ಘೋಷಿಸಿದೆ.

ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಹುಮಾಯೂನ್ ದಿಲಾವಾರ್ ಅವರು ಇಮ್ರಾನ್ ಖಾನ್ ವಿರುದ್ಧ ಮೇ 10ರಂದು ತೋಶಖಾನಾ ಪ್ರಕರಣದಲ್ಲಿ ದೋಷಾರೋಪಣೆ ಮಾಡಿದ್ದರು.

ಇದನ್ನು ಪ್ರಶ್ನಿಸಿ ಇಮ್ರಾನ್, ಇಸ್ಲಾಮಾಬಾದ್ ಹೈಕೋರ್ಟ್‌ಗೆ ಮನವಿ ಸಲ್ಲಿಸಿದ್ದರು. ಇಲ್ಲಿ ಜೂನ್ 8ರವರೆಗೆ ಪ್ರಕರಣದ ಕ್ರಿಮಿನಲ್ ವಿಚಾರಣೆಯನ್ನು ತಡೆಹಿಡಿಯಲಾಗಿತ್ತು. ಬಳಿಕ ಜೂನ್ 23ರಂದ ವಿಚಾರಣೆ ಆರಂಭಿಸಿದ್ದ ನ್ಯಾಯಮೂರ್ತಿ ಆಮೆರ್ ಅವರು ಅರ್ಜಿಯ ಮೇಲಿನ ತೀರ್ಪನ್ನು ಕಾಯ್ದಿರಿಸಿದ್ದರು.

'ಇಸ್ಲಾಮಾಬಾದ್ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಅಮಿರ್ ಫಾರೂಕ್, ಮಂಗಳವಾರ ತೋಶಖಾನಾ ಪ್ರಕರಣವು ಸ್ವೀಕಾರಾರ್ಹವಲ್ಲ ಎಂದು ಘೋಷಿಸಿದ್ದಾರೆ' ಎಂದು ಎಆರ್‌ವೈ ನ್ಯೂಸ್ ವರದಿ ಮಾಡಿದೆ. ಸುಳ್ಳು ಹೇಳಿಕೆಗಳು ಮತ್ತು ತಪ್ಪು ಘೋಷಣೆಗಳಿಗಾಗಿ ಇಮ್ರಾನ್ ಖಾನ್ ಅವರನ್ನು ಚುನಾವಣಾ ಆಯೋಗವು ಅನರ್ಹಗೊಳಿಸಿತ್ತು. ಅಷ್ಟೇ ಅಲ್ಲ ತೋಶಖಾನಾ ಪ್ರಕರಣವು ರಾಷ್ಟ್ರ ರಾಜಕಾರಣದಲ್ಲಿ ಪ್ರಮುಖ ವಿಷಯವಾಗಿ ಚರ್ಚೆಗೊಳಗಾಗಿತ್ತು.

ಗುಂಡಿನ ದಾಳಿ: ಐವರ ಹತ್ಯೆ

ಫಿಲಡೆಲ್ಫಿಯ (ಅಮೆರಿಕ) (ಎಪಿ): ಬುಲೆಟ್ ಪ್ರೂಫ್ ಜಾಕೆಟ್ ಧರಿಸಿದ್ದ ವ್ಯಕ್ತಿಯೊಬ್ಬ ಸೋಮವಾರ ರಾತ್ರಿ ಇಲ್ಲಿನ ಬೀದಿಗಳಲ್ಲಿ ಗುಂಡಿನ ದಾಳಿ ನಡೆಸಿದ್ದು, ಘಟನೆಯಲ್ಲಿ ಐವರು ಮೃತಪಟ್ಟು, ಇಬ್ಬರು ಯುವಕರು ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಘಟನೆ ಬೆನ್ನಲ್ಲೇ ಆರೋಪಿಗಾಗಿ ಪೊಲೀಸರು ಶೋಧ ನಡೆಸಿ, ಕೊನೆಗೂ ಬಂಧಿಸಿದ್ದಾರೆ.

ಭಾರತದ ಮುಡಿಗೆ ಸ್ಯಾಫ್ ಕಿರೀಟ

ಫುಟ್‌ಬಾಲ್: ಕುವೈತ್ ವಿರುದ್ಧ ಪೆನಾಲ್ಟಿ ಶೂಟೌಟ್‌ನಲ್ಲಿ ರೋಚಕ ಜಯ ಸಾಧಿಸಿದ ಚೆಟ್ರಿ ಬಳಗ

• ಗಿರೀಶ ದೊಡ್ಡಮನಿ



ಸ್ಯಾಫ್ ಫುಟ್‌ಬಾಲ್ ಚಾಂಪಿಯನ್‌ಷಿಪ್ ಗೆದ್ದುಕೊಂಡ ಭಾರತ ತಂಡದ ಆಟಗಾರರು ಸಂಭ್ರಮಿಸಿದರು –ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ.

ಬೆಂಗಳೂರು: ಮಂಗಳವಾರ ರಾತ್ರಿಯ ಚಳಿಗಾಳಿಗೂ ಬಿಸಿ ಏರುವಂತೆ ಮಾಡಿದ ಸ್ಯಾಫ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ಫೈನಲ್ ಪಂದ್ಯದಲ್ಲಿ ಜಯಭೇರಿ ಬಾರಿಸಿದ ಭಾರತ, ಒಂಬತ್ತನೇ ಸಲ ಪ್ರಶಸ್ತಿ ಗೆದ್ದುಕೊಂಡಿತು.

ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಪಂದ್ಯದ 120 ನಿಮಿಷಗಳ ಅವಧಿಯಲ್ಲಿ ಜಿದ್ದಾಜಿದ್ದಿಯ ಹೋರಾಟ ನಡೆಸಿದ ಉಭಯ ತಂಡಗಳು 1–1ರ ಸಮಬಲ ಸಾಧಿಸಿದವು. ಇದರಿಂದಾಗಿ ಪೆನಾಲ್ಟಿ ಶೂಟೌಟ್‌ನಲ್ಲಿ ಫಲಿತಾಂಶ ನಿರ್ಧರಿಸಲಾಯಿತು.

ಈ ಸುತ್ತು ಕೂಡ ಉಭಯ ತಂಡಗಳ ಗೋಲ್‌ಕೀಪರ್‌ಗಳಿಗೆ ಅಗ್ನಿಪರೀಕ್ಷೆಯೊಡ್ಡಿತು. ಆದರೆ ಕೊನೆಗೂ ಭಾರತದ ಗೋಲ್‌ಕೀಪರ್ ಗುರುಪ್ರೀತ್ ಸಿಂಗ್ ಸಂಧು ತಾವು ಅಗ್ರಮಾನ್ಯ ಎಂಬುದನ್ನು ಸಾಬೀತುಪಡಿಸಿದವರು. ಇದರಿಂದಾಗಿ ಆತಿಥೇಯ ತಂಡವು 5–4ರಿಂದ ಕುವೈತ್ ವಿರುದ್ಧ ಜಯ ಸಾಧಿಸಿತು.

ಪಂದ್ಯದುದ್ದಕ್ಕೂ ವಂದೇ ಮಾತರಂ, ಮಾ ತುಝೆ ಸಲಾಂ ಗೀತೆಗಳನ್ನು ಹಾಡುತ್ತ, ಚೆಟ್ರಿ..ಚೆಟ್ರಿ.. ಎಂದು ನಿರಂತರವಾಗಿ ಕೂಗುತ್ತ ಚಪ್ಪಾಳೆ ತಟ್ಟಿದ ಅಭಿಮಾನಿಗಳನ್ನು ಭಾರತ ತಂಡದ ಆಟಗಾರರು ನಿರಾಶೆಗೊಳಿಸಲಿಲ್ಲ. ಕುವೈತ್ ಬಳಗದ ಕಠಿಣ ಪೈಪೋಟಿ ಮತ್ತು ಒರಟಾಟ ಎರಡನ್ನೂ ಮೀರಿ ನಿಂತರು.

ಶೂಟೌಟ್‌ನಲ್ಲಿ ಭಾರತದ ನಾಯಕ ಸುನಿಲ್ ಚೆಟ್ರಿ, ಸಂದೇಶ್ ಜಿಂಗನ್, ಲಲ್ಲಿಯಾನ್‌ಜುವಾಲಾ ಚಾಂಗ್ಟೆ, ಸುಭಾಶಿಶ್ ಬೋಸ್ ಮತ್ತು ಮಹೇಶ್ ಸಿಂಗ್ ಗೋಲು ಗಳಿಸುವಲ್ಲಿ ಯಶಸ್ವಿಯಾದರು. ಉದಾಂತ್ ಸಿಂಗ್ ವಿಫಲರಾದರು. ಕುವೈತ್ ಪರವಾಗಿ ಅಲೊತೈಬಿ, ಅಲ್ ದೆಫಿರಿ, ಅಲ್ ಖಲೀದಿ ಮತ್ತು ಹಜಿಯಾ ಗೋಲು ಗಳಿಸಿದರು. ಕುವೈತ್‌ನ ಅಬ್ದುಲ್ಲಾ ವಿಫಲರಾದರು.

ಪೆನಾಲ್ಟಿ ಶೂಟೌಟ್‌ನ ಮೊದಲ ಐದು ಅವಕಾಶಗಳಲ್ಲಿ ಉಭಯ ತಂಡಗಳು 4–4ರಿಂದ ಸಮಬಲ ಸಾಧಿಸಿದ್ದವು. ಆರನೇ ಅವಕಾಶದಲ್ಲಿ (ಸಡನ್ ಡೆತ್) ಭಾರತದ ಮಹೇಶ್ ಗೋಲು ಹೊಡೆದರು. ನಂತರ ಸಮಬಲ ಮುಂದುವರಿಸುವ ಕುವೈತ್ ನಾಯಕ ಹಜಿಯಾ ಅವರ ಪ್ರಯತ್ನಕ್ಕೆ ಗೋಲ್‌ಕೀಪರ್ ಗುರುಪ್ರೀತ್ ಅಡ್ಡಿಯಾದರು. ಪ್ರೇಕ್ಷಕರ ಬಳಗದಲ್ಲಿ ಸಂತಸ ಮುಗಿಲುಮುಟ್ಟಿತು. ತ್ರಿವರ್ಣ ಧ್ವಜ ನಲಿಯಿತು.

ಸ್ಯಾಫ್‌ನಲ್ಲಿ ಭಾರತದ ಸಾಧನೆ	
ಚಾಂಪಿಯನ್ ಆದ ವರ್ಷ (9 ಬಾರಿ)	1993, 1997, 1999, 2005, 2009, 2011, 2015, 2021, 2023
ರನ್ನರ್ ಅಪ್ (4)	1995, 2008, 2013, 2018
ಮೂರನೇ ಸ್ಥಾನ	2003

ಸಮಬಲ ತಂದ ಚಾಂಗ್ಟೆ: ಆರಂಭದಿಂದಲೂ ಎರಡೂ ತಂಡಗಳ ಆಟಗಾರರು ಆಕ್ರಮಣಕಾರಿ ಶೈಲಿ ಮತ್ತು ವೇಗಕ್ಕೆ ಒತ್ತು ನೀಡಿದರು. ಈ ಸೆಣಸಾಟದಲ್ಲಿ ಮೊದಲು ಮೇಲುಗೈ ಸಾಧಿಸಿದ್ದು ಕುವೈತ್ ತಂಡ. 14ನೇ ನಿಮಿಷದಲ್ಲಿ ಕುವೈತ್‌ನ ಅಬಿಬ್ ಅಲ್ ಖಲೈದಿ ಕಾಲ್ಚಳಕ ಮೆರೆದರು. ಆತಿಥೇಯ ಬಳಗದ ರಕ್ಷಣಾ ಪಡೆಯನ್ನು ದಾಟುವುದರ ಜೊತೆಗೆ ಗೋಲ್‌ಕೀಪರ್ ಗುರುಪ್ರೀತ್ ಸಿಂಗ್ ಸಂಧು ಅವರನ್ನೂ ವಂಚಿಸಿದರು. ಇದರೊಂದಿಗೆ ತಮ್ಮ ತಂಡಕ್ಕೆ 1–0 ಯಿಂದ ಮುನ್ನಡೆ ಒದಗಿಸಿಕೊಟ್ಟರು.

ಆದರೆ 38ನೇ ನಿಮಿಷದಲ್ಲಿ ಭಾರತದ ಪಾಳೆಯದಲ್ಲಿ ಸಂತಸದ ನಗು ಮೂಡಿತು. ಪ್ರೇಕ್ಷಕರ ಗ್ಯಾಲರಿಯಲ್ಲಿ ವಿದ್ಯುತ್ ಸಂಚಲನವಾಯಿತು. ಅದಕ್ಕೆ ಕಾರಣರಾಗಿದ್ದು ಚಾಂಗ್ಟೆ. ಕುವೈತ್‌ನ ಅಲ್ ದೆಫಿರಿ ಅವರ ಪಾಸ್ ಕೊಡುವ ಪ್ರಯತ್ನ ವಿಫಲಗೊಳಿಸಿದ ಭಾರತದ ಆಶಿಖ್ ಅವರು ಸಹಲ್‌ಗೆ ಪಾಸ್ ಕೊಟ್ಟರು. ಚುರುಕಾಗಿ ಪ್ರತಿಕ್ರಿಯಿಸಿದ ಸಹಲ್ ಅವರಿಂದ ಪಾಸ್ ಪಡೆದ ನಾಯಕ ಚೆಟ್ರಿಯವರು ಚಾಂಗ್ಟೆ ಯತ್ತ ಕ್ರಾಸ್ ಮಾಡಿದರು. ಚಾಂಗ್ಟೆ ಚೆಂಡನ್ನು ಗುರಿ ಮುಟ್ಟಿಸಿದರು.

ಸೀನಿಯರ್ ಈಜು: ಮಿಂಚಿದ ಋತುಜಾ ಖಾಡೆ

ಸುವನಾ ರಾಷ್ಟ್ರೀಯ ದಾಖಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಸುವನಾ ಸಿ. ಭಾಸ್ಕರ್, ಹೈದರಾಬಾದ್‌ನಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಸೀನಿಯರ್ ಈಜು ಚಾಂಪಿಯನ್‌ಷಿಪ್‌ನ ಮೂರನೇ ದಿನವಾದ ಮಂಗಳವಾರ ಮಹಿಳೆಯರ 50 ಮೀ. ಬ್ಯಾಕ್‌ಸ್ಟ್ರೋಕ್‌ನಲ್ಲಿ ನೂತನ ರಾಷ್ಟ್ರೀಯ ದಾಖಲೆಯೊಡನೆ ಚಿನ್ನ ಗೆದ್ದುಕೊಂಡರು.

ಗಚ್ಚಿಬೌಲಿ ಕ್ರೀಡಾಂಗಣದ ಈಜು ಕೊಳದಲ್ಲಿ ನಡೆಯುತ್ತಿರುವ ಈ ಚಾಂಪಿಯನ್‌ಷಿಪ್‌ನಲ್ಲಿ ಸುವನಾ 29.63 ಸೆಕೆಂಡುಗಳಲ್ಲಿ ಮೊದಲಿಗರಾಗಿ ಗುರಿ ಮುಟ್ಟಿದರು. ಈ ಹಿಂದಿನ ದಾಖಲೆಯ ಒಡತಿಯಾಗಿದ್ದ (2022ರಲ್ಲಿ 29.79 ಸೆ., ಗುವಾಹಟಿ) ಮಾನಾ ಪಟೇಲ್ ಎರಡನೇ ಸ್ಥಾನ ಪಡೆದರು. ಗುಜರಾತ್‌ನ ಮಾನಾ ಕೂಡ ತಮ್ಮ ಹಿಂದಿನ ದಾಖಲೆಯನ್ನು ಉತ್ತಮಪಡಿಸಿ 29.71 ಸೆ.ಗಳಲ್ಲಿ ಸ್ಪರ್ಧೆ ಪೂರೈಸಿದರು. ಕರ್ನಾಟಕದ ರಿಧಿಮಾ ವೀರೇಂದ್ರ ಕುಮಾರ್ (30.53 ಸೆ.) ಕಂಚಿನ ಪದಕ ಪಡೆದರು.

ಈ ಚಿನ್ನದ ಜೊತೆ ಮಂಗಳವಾರ ಕರ್ನಾಟಕದ ಈಜುಪಟುಗಳು ಒಂದು ಬೆಳ್ಳಿ, ಮೂರು ಕಂಚಿನ ಪದಕಗಳನ್ನು ಗೆದ್ದುಕೊಂಡರು.


ಸುವನಾ ಸಿ.ಭಾಸ್ಕರ್

ಮಹಿಳೆಯರ 50 ಮೀ. ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ಮಹಾರಾಷ್ಟ್ರದ ಋತುಜಾ ಖಾಡೆ 26.47 ಸೆ.ಗಳಲ್ಲಿ ಗುರಿತಲುಪಿ 20 ವರ್ಷ ಹಳೆಯ ದಾಖಲೆ ಮುರಿದು ಚಿನ್ನದ ಪದಕ ಜಯಿಸಿದರು. ಕರ್ನಾಟಕದ ಶಿಖಾ ಟಂಡನ್ 2003ರಲ್ಲಿ (ಕೋಲ್ಕತ್ತ) ಈ ದೂರವನ್ನು 26.61 ಸೆ.ಗಳಲ್ಲಿ ಈಜಿದ್ದರು. ಮಹಾರಾಷ್ಟ್ರದವರೇ ಆದ ಅನನ್ಯಾ ನಾಯಕ್ (26.64 ಸೆ.) ಎರಡನೇ ಸ್ಥಾನ ಪಡೆದರೆ, ಕರ್ನಾಟಕದ ನೀನಾ ವೆಂಕಟೇಶ್ (26.73 ಸೆ.) ಕಂಚಿನ ಪದಕ ಪಡೆದರು.

200 ಮೀ. ಬಟರ್‌ಫ್ಲೈ ಸ್ಪರ್ಧೆಯಲ್ಲಿ ಕರ್ನಾಟಕದ ಸುಹಾಸಿನಿ ಘೋಷ್ 2ನಿ.26.94 ಸೆ.ಗಳಲ್ಲಿ ಗುರಿಮುಟ್ಟಿ ಕಂಚಿನ ಪದಕ ಪಡೆದರು. ಈ ಸ್ಪರ್ಧೆಯಲ್ಲಿ ರೈಲ್ವೆ ತಂಡದ ಆಸ್ತಾ ಚೌಧರಿ (2ನಿ.22.63 ಸೆ.) ಮೊದಲಿಗರಾದರು.

ಮಹಿಳೆಯರ 4x400 ಮೀ. ಮೆಡ್ಲೆ ರಿಲೆ ಸ್ಪರ್ಧೆಯಲ್ಲಿ ಕರ್ನಾಟಕ ತಂಡ (ರಿಧಿಮಾ, ಮಾನವಿ ವರ್ಮಾ, ನೀನಾ, ಶಾಲಿನಿ ಆರ್.ದೀಕ್ಷಿತ್) ಎರಡನೇ ಸ್ಥಾನ ಪಡೆಯಿತು. ಮಹಾರಾಷ್ಟ್ರ ತಂಡ 4ನಿ.23.65 ಸೆ.ಗಳಲ್ಲಿ ದೂರ ಕ್ರಮಿಸಿದರೆ, ಕರ್ನಾಟಕ ತಂಡ 4ನಿ.27.80 ಸೆ.ಗಳನ್ನು ತೆಗೆದುಕೊಂಡಿತು.

ವೀರಧವಳ್ ಪ್ರಥಮ: ಪುರುಷರ 50 ಮೀ. ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ಅನುಭವಿ ವೀರಧವಳ್ ಖಾಡೆ (ಕಾಲ: 22.82 ಸೆ.) ಚಿನ್ನ ಜಯಿಸಿದರು. ಮಹಾರಾಷ್ಟ್ರದ ಮಿಹಿರ್ ಅಂಬ್ರೆ (22.96 ಸೆ) ಅವರು ಬೆಳ್ಳಿ ಮತ್ತು ಸರ್ವಿಸಸ್‌ನ ಎ.ಎಸ್. ಆನಂದ್ (23.30 ಸೆ.) ಕಂಚು ಗೆದ್ದರು.

ರ‍್ಯಾಂಕಿಂಗ್: 15ನೇ ಸ್ಥಾನಕ್ಕಿಳಿದ ಸಿಂಧು

ನವದೆಹಲಿ (ಪಿಟಿಐ): ಭಾರತದ ಪಿ.ವಿ.ಸಿಂಧು ಅವರು ಮಂಗಳವಾರ ಪ್ರಕಟವಾದ ಬಿಡಬ್ಲ್ಯುಎಫ್ ವಿಶ್ವ ಬ್ಯಾಡ್ಮಿಂಟನ್ ರ‍್ಯಾಂಕಿಂಗ್ ಪಟ್ಟಿಯುಲ್ಲಿ 15ನೇ ಸ್ಥಾನಕ್ಕೆ ಇಳಿದಿದ್ದಾರೆ.

ಸಿಂಧು ಏಪ್ರಿಲ್‌ನಲ್ಲಿ ಮೊದಲ ಬಾರಿ 'ಟಾಪ್ ಟೆನ್'ನಿಂದ ಹೊರಬಿದ್ದಿದ್ದರು. 27 ವರ್ಷದ ಸಿಂಧು ಈ ವರ್ಷ ಉತ್ತಮ ಲಯದಲ್ಲಿ ಇಲ್ಲ. ಕಳೆದ ವರ್ಷ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಚಿನ್ನದ ಪದಕ ಗೆದ್ದುಕೊಂಡ ನಂತರ ಅವರು ಪಾದದ ಗಾಯದಿಂದ ಬಳಲಿದ್ದರು. ಚೇತರಿಕೆಯ ನಂತರ ಪ್ರಶಸ್ತಿ ಗೆದ್ದುಕೊಂಡಿಲ್ಲ.

ಈ ಋತುವಿನಲ್ಲಿ ಮ್ಯಾಡ್ರಿಡ್ ಸ್ಪೇನ್ ಮಾಸ್ಟರ್ಸ್ ಸೂಪರ್ 300 ಟೂರ್ನಿಯ ಫೈನಲ್ ತಲುಪಿದ್ದರು. ಮಲೇಷ್ಯಾ ಮಾಸ್ಟರ್ಸ್ ಸೂಪರ್ 500 ಟೂರ್ನಿಯಲ್ಲಿ ಸೆಮಿಫೈನಲ್ ತಲುಪಿದ್ದರು.

ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಪುರುಷರ ಡಬಲ್ಸ್ ವಿಶ್ವ ರ‍್ಯಾಂಕಿಂಗ್‌ನಲ್ಲಿ ಮೂರನೇ ಸ್ಥಾನಕ್ಕೇರಿದ್ದಾರೆ.

ಸಿಂಗಲ್ಸ್‌ನಲ್ಲಿ ಎಚ್.ಎಸ್. ಪ್ರಣಯ್ ಭಾರತೀಯ ಆಟಗಾರರ ಪೈಕಿ ಉತ್ತಮ ರ‍್ಯಾಂಕಿಂಗ್ ಹೊಂದಿದ್ದು ಎಂಟನೇ ಸ್ಥಾನದಲ್ಲಿದ್ದಾರೆ.

ಎಮರ್ಜಿಂಗ್ ಏಷ್ಯಾ ಕಪ್: ಭಾರತ 'ಎ' ತಂಡಕ್ಕೆ ನಿಕಿನ್

ನವದೆಹಲಿ (ಪಿಟಿಐ): ಕರ್ನಾಟಕ ರಣಜಿ ತಂಡದ ಬ್ಯಾಟರ್ ನಿಕಿನ್ ಜೋಸ್ ಅವರು ಶ್ರೀಲಂಕಾದಲ್ಲಿ ಇದೇ 13 ರಿಂದ 23ರ ವರೆಗೆ ನಡೆಯಲಿರುವ ಎಮರ್ಜಿಂಗ್ ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಗೆ ಭಾರತ 'ಎ' ತಂಡದಲ್ಲಿ ಸ್ಥಾನ ಪಡೆದಿದ್ದಾರೆ.

23 ವರ್ಷದೊಳಗಿನ ಆಟಗಾರರನ್ನು ಒಳಗೊಂಡ ಭಾರತ ತಂಡವನ್ನು ಮಂಗಳವಾರ ಪ್ರಕಟಿಸಲಾಗಿದ್ದು. ದೆಹಲಿಯ ಯಶ್ ಧುಲ್ ಅವರು ನಾಯಕತ್ವದ ಹೊಣೆ ನಿಭಾಯಿಸಲಿದ್ದಾರೆ. ಪಂಜಾಬ್ ರಣಜಿ ತಂಡದ ನಾಯಕ ಅಭಿಷೇಕ್ ಶರ್ಮಾ ಅವರು ಉಪನಾಯಕ ಆಗಿರುವರು.

ಭಾರತ ತಂಡವು 'ಬಿ' ಗುಂಪಿನಲ್ಲಿ ಸ್ಥಾನ ಪಡೆದಿದೆ. ನೇಪಾಳ, ಯುಎಇ 'ಎ' ಮತ್ತು ಪಾಕಿಸ್ತಾನ 'ಎ' ತಂಡಗಳು ಇದೇ ಗುಂಪಿನಲ್ಲಿವೆ. ಆತಿಥೇಯ ಶ್ರೀಲಂಕಾ 'ಎ', ಬಾಂಗ್ಲಾದೇಶ 'ಎ', ಅಫ್ಗಾನಿಸ್ತಾನ 'ಎ' ಮತ್ತು ಒಮಾನ್ 'ಎ' ತಂಡಗಳು 'ಎ' ಗುಂಪಿನಲ್ಲಿವೆ. ನೇಪಾಳವು ತನ್ನ ಸೀನಿಯರ್ ತಂಡವನ್ನೇ ಕಣಕ್ಕಿಳಿಸಲಿದೆ.

ಪ್ರತಿ ಗುಂಪಿನಲ್ಲಿ ಮೊದಲ ಎರಡು ಸ್ಥಾನಗಳನ್ನು ಪಡೆಯುವ ತಂಡಗಳು ಸೆಮಿಫೈನಲ್ ಪ್ರವೇಶಿಸಲಿವೆ. ಫೈನಲ್ ಪಂದ್ಯ ಜುಲೈ 23 ರಂದು ನಡೆಯಲಿದೆ.



ನಿಕಿನ್ ಜೋಸ್

ಭಾರತ 'ಎ' ತಂಡ: ಯಶ್ ಧುಲ್ (ನಾಯಕ), ಅಭಿಷೇಕ್ ಶರ್ಮಾ (ಉಪನಾಯಕ), ಸಾಯಿ ಸುದರ್ಶನ್, ನಿಕಿನ್ ಜೋಸ್, ಪ್ರದೋಶ್ ರಂಜನ್ ಪಾಲ್, ರಿಯಾನ್ ಪರಾಗ್, ನಿಶಾಂತ್ ಸಿಂಧು, ಪ್ರಭಸಿಮ್ರನ್ ಸಿಂಗ್, ಧ್ರುವ್ ಜುರೆಲ್, ಮಾನವ್ ಸುಥಾರ್, ಯುಜರಾಜ್‌ಸಿಂಹ ಡೋಡಿಯಾ, ಹರ್ಷಿತ್ ರಾಣಾ, ಆಕಾಶ್ ಸಿಂಗ್, ನಿತೀಶ್ ಕುಮಾರ್ ರೆಡ್ಡಿ, ರಾಜವರ್ಧನ್ ಹಂಗರ್‌ಗೇಕರ್.

ಹೆಚ್ಚುವರಿ ಆಟಗಾರರು: ಹರ್ಷ್ ದುಬೆ, ನೇಹಲ್ ವಧೇರಾ, ಸ್ನೆಲ್ ಪಟೇಲ್, ಮೋಹಿತ್ ರೆಡಕರ್

ಆಯ್ಕೆ ಸಮಿತಿ ಅಧ್ಯಕ್ಷರಾಗಿ ಅಗರ್ಕರ್

ನವದೆಹಲಿ (ಪಿಟಿಐ): ಮಾಜಿ ಮಧ್ಯಮ ವೇಗದ ಬೌಲರ್ ಅಜಿತ್ ಅಗರ್ಕರ್ ಅವರನ್ನು ಭಾರತ ಕ್ರಿಕೆಟ್ ತಂಡದ ಆಯ್ಕೆ ಸಮಿತಿ ಅಧ್ಯಕ್ಷರನ್ನಾಗಿ ಮಂಗಳವಾರ ನೇಮಕ ಮಾಡಲಾಗಿದೆ.

ಕ್ರಿಕೆಟ್ ಸಲಹಾ ಸಮಿತಿ (ಸಿಎಸಿ) ಶಿಫಾರಸಿನ ಮೇರೆಗೆ ಅವರ ನೇಮಕ ಮಾಡಲಾಗಿದೆ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಕಾರ್ಯದರ್ಶಿ ಜಯ್ ಶಾ ಪ್ರಕಟಿಸಿದರು.

ಸುಲಕ್ಷಣಾ ನಾಯಕ್, ಅಶೋಕ್ ಮಲ್ಹೋತ್ರಾ ಮತ್ತು ಜತಿನ್ ಪರಾಂಜಪೆ ಅವರಿದ್ದ ಸಮಿತಿ ಒಬ್ಬ ಆಯ್ಕೆಗಾರ ಸ್ಥಾನಕ್ಕೆ ಅರ್ಜಿಗಳನ್ನು ಪರಿಶೀಲಿಸಿ ಸಂದರ್ಶನ ನಡೆಸಿತು. ನಂತರ ಸರ್ವಾನುಮತದಿಂದ ಅಗರ್ಕರ್ ಅವರ ನೇಮಕ ಪ್ರಕಟಿಸಿತು ಎಂದು ಶಾ ಮಾಧ್ಯಮ ಹೇಳಿಕೆಯಲ್ಲಿ ತಿಳಿಸಿದ್ದಾರೆ. ನಂತರ ಅವರನ್ನು ಆಯ್ಕೆ ಸಮಿತಿ ಅಧ್ಯಕ್ಷ ಸ್ಥಾನಕ್ಕೂ ಶಿಫಾರಸು ಮಾಡಿತು.


ಅಜಿತ್ ಅಗರ್ಕರ್

ಅಗರ್ಕರ್ 191 ಏಕದಿನ ಪಂದ್ಯಗಳನ್ನು ಆಡಿದ್ದಾರೆ. 26 ಟೆಸ್ಟ್‌ಗಳಲ್ಲಿ ಮತ್ತು ನಾಲ್ಕು ಟಿ–20 ಪಂದ್ಯಗಳಲ್ಲೂ ಭಾರತ ತಂಡ ಪ್ರತಿನಿಧಿಸಿದ್ದಾರೆ. ಅವರು 1999, 2003 2007ರ ಏಕದಿನ ವಿಶ್ವಕಪ್‌ನಲ್ಲಿ ಪಾಲ್ಗೊಂಡ ಭಾರತ ತಂಡದಲ್ಲಿ ಆಡಿದ್ದರು. ಲಾರ್ಡ್ಸ್‌ನಲ್ಲಿ ನಡೆದ ಟೆಸ್ಟ್ ಪಂದ್ಯವೊಂದರಲ್ಲಿ ಶತಕ ಹೊಡೆದಿರುವುದು ವಿಶೇಷ.

ಆಯ್ಕೆ ಸಮಿತಿ ಅಧ್ಯಕ್ಷರಾಗಿ ಅಗರ್ಕರ್ ಈ ಹಿಂದಿನವರಿಗಿಂತ ಹೆಚ್ಚಿನ ಸಂಭಾವನೆ ಪಡೆಯಲಿದ್ದಾರೆ. ಅವರು ₹ 1ಕೋಟಿ ಪಡೆಯಲಿದ್ದಾರೆ. ಉಳಿದ ಆಯ್ಕೆಗಾರರು ₹ 90 ಲಕ್ಷ ಪಡೆಯಲಿದ್ದಾರೆ.


ಅಲ್ಕರಾಜ್‌ಗೆ ಸುಲಭ ಗೆಲುವು

ವಿಂಬಲ್ಡನ್ (ಎಪಿ): ಮೂರನೇ ಬಾರಿ ವಿಂಬಲ್ಡನ್‌ನಲ್ಲಿ ಆಡುತ್ತಿರುವ ಕಾರ್ಲೋಸ್ ಅಲ್ಕರಾಜ್ ಮಂಗಳವಾರ ನಡೆದ ಮೊದಲ ಸುತ್ತಿನ ಪಂದ್ಯದಲ್ಲಿ ನೇರ ಸೆಟ್‌ಗಳ ಜಯಗಳಿಸುವ ಮೂಲಕ ತಾವು ನೆಚ್ಚಿನ ಸ್ಪರ್ಧಿ ಎಂಬ ಸಂದೇಶ ರವಾನಿಸಿದರು.

ಅಗ್ರ ಶ್ರೇಯಾಂಕ ಪಡೆದಿರುವ ಸ್ಪೇನ್‌ನ ಆಟಗಾರ ಅಲ್ಕರಾಜ್ 6–0, 6–2, 7–5 ರಿಂದ ಜೆರೆಮಿ ಚಾರ್ಡಿ ಅವರನ್ನು ಸೋಲಿಸಿದರು. 36 ವರ್ಷದ ಜೆರೆಮಿ ಅವರು 14ನೇ ಬಾರಿ ಇಲ್ಲಿ ಆಡಿದ್ದಾರೆ.

ದಾಖಲೆ ಎಂಟನೇ ಬಾರಿ ವಿಂಬಲ್ಡನ್ ಗೆಲ್ಲುವ ನೊವಾಕ್ ಜೊಕೊವಿಚ್ ಅವರ ಕನಸಿಗೆ ಅಡ್ಡಿಯಾಗುವ ಸಾಮರ್ಥ್ಯ ಅಲ್ಕರಾಜ್ ಅವರಿಗೆ ಮಾತ್ರ ಎಂದು ಹೇಳಲಾಗುತ್ತಿದೆ. ಈ ಹಿಂದಿನ ಪ್ರಯತ್ನಗಳಲ್ಲಿ ಸ್ಪೇನ್‌ನ ಆಟಗಾರ ನಾಲ್ಕನೇ ಸುತ್ತನ್ನು ದಾಟಿಲ್ಲ.

ಬ್ರಿಟನ್‌ನ ಆ್ಯಂಡಿ ಮರೆ 6–3, 6–0, 6–1 ರಲ್ಲಿ ತಮ್ಮದೇ ದೇಶದ ರ‍್ಯಾನ್ ಪೆನ್ನೆಸ್ಟನ್ ಅವರನ್ನು ನೇರ ಸೆಟ್‌ಗಳಿಂದ ಮಣಿಸಿದರು.


ಅಲ್ಕರಾಜ್ –ಎಎಫ್‌ಪಿ ಚಿತ್ರ

ಎಲೆನಾ ರಿಬಾಕಿನಾ ಸೆಂಟರ್‌ಕೋರ್ಟ್‌ನಲ್ಲಿ ನಡೆದ ಪಂದ್ಯದಲ್ಲಿ ಶೆಲ್ಬಿ ರೋಜರ್ಸ್ ಅವರನ್ನು 4–6, 6–1, 6–2 ರಿಂದ ಸೋಲಿಸಿದರು.

ಕಳೆದ ವರ್ಷದ ರನ್ನರ್ ಅಪ್, ಟ್ಯುನೀಷಿಯಾದ ಆನ್ಸ್ ಜಬೇರ್ 6–3 6–3 ರಿಂದ ಶ್ರೇಯಾಂಕರಹಿತ ಆಟಗಾರ್ತಿ ಪೋಲೆಂಡ್‌ನ ಮೆಗ್ದಲಿನಾ ಫ್ರೆಚ್ ಮೇಲೆ ಜಯಗಳಿಸಿ ಎರಡನೇ ಸುತ್ತು ತಲುಪಿದರು.

ಮನಿಷಾ ಎಐಎಫ್‌ಎಫ್ 'ವರ್ಷದ ಮಹಿಳಾ ಆಟಗಾರ್ತಿ'

ಚಾಂಗ್ಟೆಗೆ 'ವರ್ಷದ ಆಟಗಾರ ಗೌರವ'

ಬೆಂಗಳೂರು (ಪಿಟಿಐ): ಭಾರತ ತಂಡದ ವಿಂಗರ್ ಲಲ್ಲಿಯಾನ್‌ಜುವಾಲಾ ಚಾಂಗ್ಟೆ ಅವರು ಐಎಸ್‌ಎಲ್ ಮತ್ತು ರಾಷ್ಟ್ರೀಯ ತಂಡದ ಪರ ನೀಡಿದ ಸ್ಫೂರ್ತಿಯುತ ಪ್ರದರ್ಶನಕ್ಕಾಗಿ ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ ಮಂಗಳವಾರ ಪ್ರಕಟಿಸಿದ 'ವರ್ಷದ ಆಟಗಾರ' ಗೌರವಕ್ಕೆ ಪಾತ್ರರಾಗಿದ್ದಾರೆ.

ಮುಂಬೈ ಸಿಟಿ ಎಫ್‌ಸಿ ತಂಡವನ್ನು ಪ್ರತಿನಿಧಿಸುವ 26 ವರ್ಷದ ಚಾಂಗ್ಟೆ ಅವರು ಈ ವರ್ಷ 12 ಪಂದ್ಯಗಳಲ್ಲಿ ಭಾರತ ತಂಡಕ್ಕೆ ಆಡಿದ್ದರು. ಅವರು ಈ ಪ್ರತಿಷ್ಠಿತ ಪ್ರಶಸ್ತಿ ಪೈಪೋಟಿಯಲ್ಲಿ ರಾಷ್ಟ್ರೀಯ ತಂಡದ ಸಹ ಆಟಗಾರರಾದ ನಂದಕುಮಾರ್ ಶೇಖರ್ ಮತ್ತು ನವೊರೆಮ್ ಮಹೇಶ್ ಸಿಂಗ್ ಅವರನ್ನು ಹಿಂದಕ್ಕೆ ಹಾಕಿದ್ದಾರೆ. ಕಳೆದ ಋತುವಿನಲ್ಲಿ ಮುಂಬೈ ಸಿಟಿ ಪರ 22 ಪಂದ್ಯಗಳನ್ನು ಆಡಿದ್ದು 10 ಗೋಲುಗಳನ್ನು ಗಳಿಸಿದ್ದಾರೆ. ಆರು ಗೋಲುಗಳಿಗೆ ನೆರವಾಗಿದ್ದಾರೆ.

ಕಳೆದ ಋತುವಿನಲ್ಲಿ ಡುರಾಂಡ್ ಕಪ್ ಟೂರ್ನಿಯಲ್ಲಿ ಏಳು ಪಂದ್ಯಗಳನ್ನಾಡಿ ಏಳು ಗೋಲುಗಳನ್ನು ಗಳಿಸಿದ್ದರು.

ಎಐಎಫ್‌ಎಫ್ ವರ್ಷದ ಮಹಿಳಾ ಆಟಗಾರ್ತಿ ಗೌರಕ್ಕೆ ಮನಿಷಾ ಕಲ್ಯಾಣ್ ಆಯ್ಕೆಯಾಗಿದ್ದಾರೆ. ಸಂಸ್ಥೆಯ ವಾರ್ಷಿಕ ಮಹಾಸಭೆಯ ನಂತರ ಈ ಆಯ್ಕೆ ನಡೆಯಿತು. ಅವರು ಪ್ರಶಸ್ತಿ ಪೈಪೋಟಿಯಲ್ಲಿ ದಲಿಮಾ ಛಿಬ್ಬರ್ ಮತ್ತು ನಗಾಂಬಮ್ ಸ್ವೀಟಿ ದೇವಿ ಅವರನ್ನು ಹಿಂದೆಹಾಕಿದರು.


ಚಾಂಗ್ಟೆ


ಮನಿಷಾ ಕಲ್ಯಾಣ್

ಪುರುಷರ ವಿಭಾಗದ ವರ್ಷದ ಕೋಚ್ ಪ್ರಶಸ್ತಿಗೆ ಭಾರತ ತಂಡದ ಮಾಜಿ ಆಟಗಾರ ಕ್ಲಿಫರ್ಡ್ ಮಿರಾಂಡಾ ಆಯ್ಕೆಯಾಗಿದ್ದಾರೆ.

ಪ್ರಿಯಾ ಪರತಿ ವಳಪ್ಪಿಲ್ ಅವರು 'ವರ್ಷದ ಮಹಿಳಾ ಕೋಚ್' ಗೌರವ ದೊರೆತಿದೆ. ಭಾರತ ತಂಡದ ಆಟಗಾರ್ತಿಯಾಗಿದ್ದ ಪ್ರಿಯಾ, ಪ್ರಸ್ತುತ ಭಾರತ ಮಹಿಳಾ 17 ವರ್ಷದೊಳಗಿನವರ ತಂಡದ ಮುಖ್ಯ ಕೋಚ್ ಆಗಿದ್ದಾರೆ.

ಮಹಿಳಾ ಹಾಕಿ ತಂಡಕ್ಕೆ ಸವಿತಾ ನಾಯಕಿ

ನವದೆಹಲಿ (ಪಿಟಿಐ): ಜುಲೈ 16 ರಿಂದ ಆರಂಭವಾಗುವ ಯುರೋಪ್ ಪ್ರವಾಸಕ್ಕೆ 20 ಮಂದಿಯ ರಾಷ್ಟ್ರೀಯ ಮಹಿಳಾ ತಂಡವನ್ನು ಹಾಕಿ ಇಂಡಿಯಾ ಮಂಗಳವಾರ ಪ್ರಕಟಿಸಿದೆ. ಪ್ರವಾಸದಲ್ಲಿ ಭಾರತವು ಜರ್ಮನಿಯಲ್ಲಿ ಟೆಸ್ಟ್ ಪಂದ್ಯಗಳನ್ನು ಆಡಲಿದೆ. ನಂತರ ಸ್ಪೇನ್‌ನಲ್ಲಿ ನಾಲ್ಕು ರಾಷ್ಟ್ರಗಳ ಟೂರ್ನಿಯಲ್ಲಿ ಆಡಲಿದೆ.

ಚೀನಾದ ಹಾಂಗ್‌ಝೌನಲ್ಲಿ ಸೆಪ್ಟೆಂಬರ್‌ನಲ್ಲಿ ನಡೆಯಲಿರುವ ಏಷ್ಯನ್ ಗೇಮ್ಸ್‌ಗೆ ಸಿದ್ಧತೆಯ ಭಾಗವಾಗಿ ಈ ಪ್ರವಾಸವನ್ನು ಹಮ್ಮಿಕೊಳ್ಳಲಾಗಿದೆ.

ತಂಡ ಇಂತಿದೆ: ಗೋಲ್‌ಕೀಪರ್ಸ್: ಸವಿತಾ (ನಾಯಕಿ), ಬಿಚುದೇವಿ ಖರಿಬಮ್. ಡಿಫೆಂಡರ್ಸ್: ದೀಪ್ ಗ್ರೇಸ್ ಎಕ್ಕಾ (ಉಪ ನಾಯಕಿ), ನಿಕ್ಕಿ ಪ್ರಧಾನ್, ಇಶಿಕಾ ಚೌಧರಿ, ಉದಿತಾ, ಸುಶೀಲಾ ಚಾನು ಪುಕ್ರಾಂಬಮ್. ಮಿಡ್‌ಫೀಲ್ಡರ್ಸ್: ನಿಶಾ, ಮೋನಿಕಾ, ಸಲಿಮಾ ಟೆಟೆ, ನೇಹಾ, ನವನೀತ್ ಕೌರ್, ಸೋನಿಕಾ, ಬಲಜೀತ್ ಕೌರ್, ವೈಷ್ಣವಿ ವಿಠ್ಠಲ್ ಫಾಲ್ಕೆ, ಜ್ಯೋತಿ ಚೆಟ್ರಿ. ಫಾರ್ವರ್ಡ್ಸ್: ಲಾಲ್‌ರೆಮ್ ಸಿಯಾಮಿ, ವಂದನಾ ಕಟಾರಿಯಾ, ಸಂಗೀತಾ ಕುಮಾರಿ ಮತ್ತು ದೀಪಿಕಾ

ಜಿಂಬಾಬ್ವೆ ಕನಸು ಭಗ್ನಗೊಳಿಸಿದ ಸ್ಕಾಟ್ಲೆಂಡ್

ಹರಾರೆ (ಎಎಫ್‌ಪಿ): ಮೈಕೆಲ್ ಲೀಸ್ಕ್ (48, 33ಕ್ಕೆ2) ಅವರ ಆಲ್‌ರೌಂಡ್ ಆಟದ ನೆರವಿನಿಂದ ಸ್ಕಾಟ್ಲೆಂಡ್ ತಂಡ ವಿಶ್ವಕಪ್ ಅರ್ಹತಾ ಟೂರ್ನಿಯ ಸೂಪರ್ ಸಿಕ್ಸ್ ಹಂತದ ಮತ್ತೊಂದು ಅಚ್ಚರಿಯ ಫಲಿತಾಂಶದಲ್ಲಿ ಅತಿಥೇಯ ಜಿಂಬಾಬ್ವೆ ತಂಡಕ್ಕೆ 31 ರನ್‌ಗಳಿಂದ ಸೋಲುಣಿಸಿತು. ಈ ಆಘಾತದಿಂದ ವಿಶ್ವಕಪ್‌ನಲ್ಲಿ ಆಡುವ ಜಿಂಬಾಬ್ವೆ ತಂಡದ ಆಸೆ ನುಚ್ಚುನೂರಾಯಿತು.

ಅರ್ಹತಾ ಟೂರ್ನಿಯಿಂದ ವಿಶ್ವಕಪ್‌ನಲ್ಲಿ ಆಡುವ ಎರಡನೇ ತಂಡ ಯಾವುದು ಎಂಬುದು ಗುರುವಾರ ಸ್ಕಾಟ್ಲೆಂಡ್ ಮತ್ತು ನೆದರ್ಲೆಂಡ್ಸ್ ನಡುವಣ ಅಂತಿಮ ಪಂದ್ಯದಲ್ಲಿ ನಿರ್ಧಾರ ಆಗಲಿದೆ. ಸ್ಕಾಟ್ಲೆಂಡ್ ವಿರುದ್ಧ ಗೆದ್ದಲ್ಲಿ ಎರಡನೇ ತಂಡವಾಗಿ ವಿಶ್ವಕಪ್‌ಗೆ ಅರ್ಹತೆ ಪಡೆಯುವ ಸುವರ್ಣಾವಕಾಶ ಜಿಂಬಾಬ್ವೆಗೆ ಒಲಿಯುತಿತ್ತು. ಆದರೆ ಅಗ್ರ ಬ್ಯಾಟರ್‌ಗಳು ವಿಫಲವಾಗಿ ತಂಡ ದಂಡ ತೆತ್ತಿತು.

ಶ್ರೀಲಂಕಾ, ಭಾನುವಾರ ನಡೆದ ಪಂದ್ಯದಲ್ಲಿ ಜಿಂಬಾಬ್ವೆ ತಂಡವನ್ನು ಸೋಲಿಸಿ, ವಿಶ್ವಕಪ್‌ನಲ್ಲಿ ಆಡುವ ಮೊದಲ ತಂಡವಾಗಿ ಅರ್ಹತೆ ಸಂಪಾದಿಸಿತ್ತು.

ಬ್ಯಾಟ್ ಮಾಡಲು ಕಳುಹಿಸಲ್ಪಟ್ಟ ಸ್ಕಾಟ್ಲೆಂಡ್ 50 ಓವರುಗಳಲ್ಲಿ 8 ವಿಕೆಟ್‌ಗೆ 234 ರನ್ ಗಳಿಸಿತು. ಮೈಕೆಲ್ ಲೀಸ್ಕ್ 34 ಎಸೆತಗಳಲ್ಲಿ 48 ರನ್ ಚಚ್ಚಿದ್ದರಿಂದ ತಂಡ 200ರ ಗೌರವಾರ್ಹ ಮೊತ್ತ ಗಳಿಸಲು ಸಾಧ್ಯವಾಯಿತು. ಎಂಟನೇ ಕ್ರಮಾಂಕದಲ್ಲಿ ಆಡಲಿಳಿದ ಅವರು ಮಾರ್ಕ್ ವಾಟ್ (ಔಟಾಗದೇ 21) ಜೊತೆ ಎಂಟನೇ ವಿಕೆಟ್‌ಗೆ ಉಪಯುಕ್ತ 46 ರನ್ ಸೇರಿಸಿದ್ದರು. ಇದಕ್ಕೆ ಮೊದಲು ಮ್ಯಾಥ್ಯೂ ಕ್ರಾಸ್ (38), ಬ್ರಾಂಡನ್ ಮೆಕ್‌ಮುಲೆನ್ (34) ಮತ್ತು ಜಾರ್ಜ್ ಮುನ್ಸಿ (31) ಉಪಯುಕ್ತ ಆಟವಾಡಿದ್ದರು. ಆತಿಥೇಯರ ಕಡೆ ಸೀನ್ ವಿಲಿಯಮ್ಸ್ 41 ರನ್ನಿಗೆ 3 ವಿಕೆಟ್ ಪಡೆದರು.

ಈ ಮೊತ್ತ ಬೆನ್ನತ್ತಿದ ಜಿಂಬಾಬ್ವೆ ಆರಂಭದಲ್ಲೇ ತೊಂದರೆಗೆ ಸಿಲುಕಿ 37 ರನ್ನಿಗೆ 4 ವಿಕೆಟ್ ಕಳೆದುಕೊಂಡಿತು. ವೆಸ್ಲಿ ಮಧೆವಿಯರ್ (40) ಮತ್ತು ಸಿಕಂದರ್ ರಝಾ (34) ಪ್ರತಿಹೋರಾಟ ತೋರಿದರು. ನಂತರ ಮಧ್ಯಮ ಕ್ರಮಾಂಕದ ಆಟಗಾರ ರಯಾನ್ ಬರ್ಲ್ ಅವರು 84 ಎಸೆತಗಳಲ್ಲಿ 83 ರನ್ ಹೊಡೆದರು.